ರಚಿತವಾಗುವ ಒಕ್ಕೂಟವು ಭಾರತದ ಸ್ವಯಂಕ್ಷೇತ್ರ ಸಾರ್ವಭೌಮ ಪ್ರಜಾರಾಜ್ಯವೆಂದು ಘೋಷಿಲ್ಪಡುವದು. ಈ ಘಟನೆಯಂತೆ ಭಾರತದ ಒಕ್ಕೂಟದಲ್ಲಿರುವ ಎಲ್ಲ ಘಟಿಂಗಳೂ ಸೇರ್ಪಡೆಯಾಗುವವು. ಒಕ್ಕೂಟದಲ್ಲಿ ಸೇರಲಿಚ್ಛಿಸುವ, ಅಥವಾ ಯಾವದಾದರೊಂದು ರೀತಿಯ ಒಡಂಬಡಿಕೆಯನ್ನು ಮಾಡಿಕೊಂಡು ಸೇರಲಿಚ್ಛಿಸುವ ಸಂಸ್ಥಾನಗಳನ್ನು ಸೇರಿಸಿಕೊಳ್ಳಲು ವಿಧಿಸೂಚಿಸಲಾಗಿದೆ.

ಆಗಾಗ್ಗೆ ಕಾಯಿದೆಗಳನ್ನು ಪಾಸು ಮಾಡಿ ಕೇಂದ್ರ ಪಾರ್ಲಿಮೆಂಟು ಹೊಸ ಪ್ರದೇಶಗಳನ್ನು ಒಕ್ಕೂಟದಲ್ಲಿ ಸೇರಿಸಿಕೊಳ್ಳಬಹುದು.

ಎಲ್ಲ ಪ್ರಾಂತಗಳ ಶಾಸನ ಸಭೆಗಳ ಹಾಗೂ ಸಂಸ್ಥಾನಗಳ ಶಾಸನ ಸಭೆಗಳ ಸಮ್ಮತಿಯಿಂದ ಕೇಂದ್ರ ಪಾರ್ಲಿಮೆಂಟ್ ಕಾಯಿದೆಯ ಮುಖಾಂತರ ಕೆಳಗಿನ ವಿಚಾರಗಳನ್ನು ನಿರ್ಧರಿಸಬಹುದು.

(೧) ನೂತನ ಘಟಕದ ನಿರ್ಮಾಣ, (೨) ಯಾವದೇ ಘಟಕದ ಕ್ಷೇತ್ರ ವಿಸ್ತಾರ, (೩) ಯಾವದೇ ಘಟಕದ ಕ್ಷೇತ್ರವನ್ನು ಕಡಿಮೆ ಮಾಡುವದು, (೪) ಯಾವದೇ ಘಟಕದ ಗಡಿ ಬದಲಾವಣೆ.

ಗವರ್ನರರ ಪ್ರಾಂತಗಳು

ಮುಂಬಯಿ, ಮದ್ರಾಸ್, ಪಶ್ಚಿಮ ಬಂಗಾಲ, ಸಂಯುಕ್ತ ಪ್ರಾಂತ, ಬಿಹಾರ, ಪೂರ್ವಪಂಜಾಬ್, ಮಧ್ಯಪ್ರಾಂತ, ವರ್ಹಾಡ, ಅಸಾಮ ಮತ್ತು ಒಡಿಸಾ.

ಚೀಫ್ ಕಮಿಷನರರ ಪ್ರಾಂತಗಳು.

ದಿಲ್ಲಿ, ಅಜಮೀರ್–ಮೇವಾಡ, ಕೊಡಗು, ಅಂಡಮಾನ್ ಮತ್ತು ನಿಕೋಬಾರ ನಡುಗಡ್ಡೆ, ಪಂಕಪಿಪ್ಲೋಡ.

ಸಂಸ್ಥಾನಗಳು.

ಪ್ರತ್ಯೇಕವಾದ ಒಂದೇ ಸಂಸ್ಥಾನ ಇಲ್ಲವೆ ಸಂಸ್ಥಾನಗಳ ಗುಂಪುಗಳು.

ಗವರ್ನರರ ಮತ್ತು ಚೀಫ್ ಕಮಿಷನರರ ಪ್ರಾಂತಗಳು ಭಾರತದ ಒಕ್ಕೂಟದ ಅಧಿಕಾರದಲ್ಲಿರುವವು. ಸಂಸ್ಥಾನಗಳ ವಿಚಾರದಲ್ಲಿ ಪರಿಸ್ಥಿತಿನುಗುಣವಾಗಿ ವಿಚಾರ ಮಾಡಿ ಒಂದು ವ್ಯವಸ್ಥೆಯನ್ನು ಮಾಡಬೇಕಾಗುವದು.

ಭಾರತ ರಾಜ್ಯಘಟನೆ.

ಅದರಲ್ಲಿರುವ ಮುಖ್ಯಾಂಶಗಳು.

ಭಾಗ ೨.

ನಾಗರಿಕ ಹಕ್ಕು.

ಈ ಘಟನೆಯು ಪ್ರಾರಂಭವಾಗುವ ದಿನಕ್ಕೆ ಆದಂ ಗಡಿ ಪ್ರದೇಶದಲ್ಲಿ ೫ ವರ್ಷಗಳಿಗಿಂತ ಹೆಚ್ಚಿಗೆ ಕಾಲ ವಾಸವಾಗಿದ್ದವರಿಗೆ–

ಭಾರತದಲ್ಲಿ ಹುಟ್ಟಿದವನಿಗೆ ಅಥವಾ ಅವನ ತಂದೆ ತಾಯಿಗಳು ಭಾರತದಲ್ಲಿ ಹುಟ್ಟಿದ್ದರೆ–

ಒಕ್ಕೂಟವು ಅಸ್ತಿತ್ವದಲ್ಲಿ ಬಂದ ನಂತರ–

ಒಕ್ಕೂಟದ ಘಟನೆಯು ಅಮಲಿನಲ್ಲಿ ಬಂದ ನಂತರ ಅದರ ಗಡಿಯಲ್ಲಿ ಹುಟ್ಟಿದ ಪ್ರತಿಯೊಬ್ಬನಿಗೆ–

ಒಕ್ಕೂಟದ ಕಾಯಿದೆಗನುಸರಿಸಿ ನಾಗರಿಕ ಹಕ್ಕುಗಳನ್ನು ದೊರಕಿಸಿಕೊಂಡವನಿಗೆ–

ಹುಟ್ಟುವ ಕಾಲದಲ್ಲಿ ಅವನ ತಂದೆ ತಾಯಿಗಳಲ್ಲಿ ಯಾರಾದರೊಬ್ಬರು ಭಾರತದ ಒಕ್ಕೂಟದ ನಾಗರಿಕರಾಗಿದ್ದಲ್ಲಿ ಅವನಿಗೆ–ಒಕ್ಕೂಟದ ನಾಗರಿಕ ಹಕ್ಕು ಬಾಧ್ಯತೆಗಳು ದೊರೆಯುವವು.

ಒಕ್ಕೂಟದ ಪರಿಷ್ಕಾಧಿಕಾರ.

ಒಕ್ಕೂಟದ ಪರಿಷ್ಕಾಧಿಕಾರವು ಅಧ್ಯಕ್ಷ (ರಾಷ್ಟ್ರಪತಿ)ನಿಗಿರತಕ್ಕದ್ದು. ಅಧ್ಯಕ್ಷನನ್ನು ಕೆಳಗಿನ ನಿಧಾನದಿಂದ ಆರಿಸತಕ್ಕದ್ದು.

(೧) ಕೆಷೇರಿಸ್ಸಿನ ಪಾರ್ಲಿಮೆಂಟಿನ ಎರಡೂ ಸಭೆಗಳ ಸದಸ್ಯರು.

(೨) ಎಲ್ಲ ಘಟಕಗಳ ಶಾಸನ ಸಭೆಯ ಸದಸ್ಯರು, ಅಲ್ಲಿ ಎರಡೂ ಸಭೆಗಳಿದ್ದರೆ ಕೆಳಗಿನ ಸಭೆಯ ಸದಸ್ಯರು ಮಾತ್ರ ಮತದಾನ ಮಾಡಿ ಅಧ್ಯಕ್ಷರನ್ನು ಆರಿಸತಕ್ಕದ್ದು.

ಅಧ್ಯಕ್ಷನ ಅವಧಿಯು ೫ ವರ್ಷಗಳ ವರೆಗೆ ಮಾತ್ರವಿರುವದು.

ಅಧ್ಯಕ್ಷನು ಈ ಅವಧಿಯಲ್ಲಿ ರಾಜೀನಾಮೆಕೊಡಬಹುದು.

ಇಲ್ಲವೆ ಸದಸ್ಯರಲ್ಲಿ ೨/೩ ಕ್ಕಿಂತ ಹೆಚ್ಚಿನ ಜನರು ತಮ್ಮ ಮತದಾನದಿಂದ ಅವನನ್ನು ತೆಗೆದುಹಾಕಬಹುದು.

ಒಮ್ಮೆ ಅಧ್ಯಕ್ಷನಾದವನು ಎರಡನೆಯ ಸಲದ ಅಧ್ಯಕ್ಷಪದದ ಆಯ್ಕೆಗೆ ಕೇವಲ ಒಂದು ಸಲ ಮಾತ್ರ ನಿಲ್ಲಬಹುದು.

ಒಕ್ಕೂಟದ ಪ್ರತಿಯೊಬ್ಬ ನಾಗರಿಕನೂ ೩೫ ವರ್ಷ ವಯಸ್ಸಾಗಿದ್ದಲ್ಲಿ, ಪ್ರಜಾಮಂಡಲದ ಸಭೆಗೆ ಆರಿಸಿ ಬರುವ ಹಕ್ಕನ್ನು ಪಡೆದವನಾಗಿದ್ದಲ್ಲಿ ಅಧ್ಯಕ್ಷ ಚುನಾವಣೆಗೆ ನಿಲ್ಲಬಹುದು.

ಅಧ್ಯಕ್ಷನಾಗುವವನು ಒಕ್ಕೂಟ ಪಾರ್ಲಿಮೆಂಟಿನ ಎರಡೂ ಸಭೆಗಳಲ್ಲಿ ಸದಸ್ಯನಾಗಿರತಕ್ಕದ್ದು. ಈ ಸದಸ್ಯನಾವನಾದರೂ ಅಧ್ಯಕ್ಷನಾಗಿ ಆರಿಸಲ್ಪಟ್ಟಲ್ಲಿ ಅವನ ಸದಸ್ಯತ್ವವು ಇಲ್ಲದಂತಾಗುವದು.

ಅಧ್ಯಕ್ಷನು ಇನ್ನಾವ ಅಧಿಕಾರಸ್ಥನನ್ನೂ ನಿಯಮಿಸಕೂಡದು.

ಪಾರ್ಲಿಮೆಂಟಿನ ಎರಡೂ ಸಭೆಗಳು ಸಂಯುಕ್ತವಾಗಿ ಸೇರಿ ಉಪಾಧ್ಯಕ್ಷನನ್ನು ಗುಪ್ತ ಮತದಾನದಿಂದ ಆರಿಸಬೇಕು.

ಅಧ್ಯಕ್ಷನ ಅಧಿಕಾರ.

(೧) ಒಕ್ಕೂಟದ ಸಂರಕ್ಷಣೆಯ ಸರ್ವಾಧಿಕಾರ

(೨) ಕ್ರಿಮಿನಲ್ ಅಪರಾಧಕ್ಕಾಗಿ ಶಿಕ್ಷೆಸಲ್ಪಟ್ಟವರಿಗೆ ಮಾಫಿ ಮಾಡುವ ಅಧಿಕಾರ. ಈ ಅಧಿಕಾರವು ಇತರ ಅಧಿಕಾರಿಗಳಿಗೆ ಕಾಯಿದೆಯನ್ವಯ ದೊರೆಯಬಹುದು.

ಕೇಂದ್ರ ಸರಕಾರದ ಕಾರ್ಯನಿರ್ವಾಹಕ ಚಟುವಟಿಕೆಗಳನ್ನು ಅಧ್ಯಕ್ಷರ ಹೆಸರಿನಲ್ಲಿಯೇ ನಡೆಸಬೇಕು. ಅಧ್ಯಕ್ಷನ ಸಹಾಯಕ್ಕಾಗಿ ಮತ್ತು ಸಲಹೆಗಾಗಿ ಒಂದು ಮಂತ್ರಿ ಮಂಡಲವಿರುವದು.

ಕೇಂದ್ರ ಕಾರ್ಯಕಾರಿ ಮಂಡಳದಲ್ಲಿ ಏಳು ಭಾಗಗಳಿವೆ. (೧) ರಾಜ್ಯಘಟನೆಯ ನಿಯುಕ್ತ ಅಧ್ಯಕ್ಷ (೨) ಮೇಲ್ಮನೆ ಮತ್ತು ಪ್ರಜಾಸಭೆಗಳುಳ್ಳ ಕೇಂದ್ರ ಪಾರ್ಲಿಮೆಂಟು. (೩) ಅಧ್ಯಕ್ಷನ ಅಧಿಕಾರಗಳು (೪) ಕೇಂದ್ರ ನ್ಯಾಯಾಲಯ (೫) ಸಂಯುಕ್ತ ರಾಜ್ಯಘಟನೆಯ ಲೆಕ್ಕಪತ್ರಗಳಿಗೆ (೬) ನೌಕರಿಗಳು (೭) ಆಯೋಗಗಳು.

ಸಂಯುಕ್ತ ರಾಜ್ಯಘಟನೆಯ ಎಲ್ಲ ವೈಧಿಕ ಅಧಿಕಾರಗಳು ಕೇಂದ್ರಪಾರ್ಲಿಮೆಂಟಿಗಿರುವವು. ಅಧ್ಯಕ್ಷ ಮತ್ತು ರಾಷ್ಟ್ರೀಯ ಸಭೆಗಳು ಕೂಡಿ ಪಾರ್ಲಿಮೆಂಟಾಗುವದು. ಕೌನ್ಸಿಲ್ ಆಫ್ ಸ್ಟೇಟ್ ಮತ್ತು ಪ್ರಜಾ ಸಭೆಗಳು ರಾಷ್ಟ್ರೀಯ ಸಭೆಯಲ್ಲಿರುವವು.

ಅಧ್ಯಕ್ಷರು ವಿದ್ಯಾಲಯಗಳ ಹಾಗೂ ವೈಜ್ಞಾನಿಕ ಸಂಸ್ಥೆಗಳ ಸಲಹೆಯ ಮೇರೆಗೆ ನೇಮಿಸುವ ೧೦ ಕ್ಕೆ ಮಿರದಷ್ಟು ಸದಸ್ಯರು ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿರುವರು. ಮೊದಲನೆಯ ೫೦ ಲಕ್ಷ ಕ್ಕೊಬ್ಬನಂತೆ, ಆ ನಂತರದ ೭೦ ಲಕ್ಷಕ್ಕೊಬ್ಬನಂತೆ ಪ್ರತಿನಿಧಿಗಳ ಸಂಖ್ಯೆ ಇರುವದು. ಈ ಸಂಖ್ಯೆಯೂ ಕಾಲಕ್ಕೂ ೨೦ ಕ್ಕೆ ಮಿಕ್ಕ ಬಾರದು.

ಪ್ರಜಾ ಸಭೆಯಲ್ಲಿ ಸಂಯುಕ್ತ ರಾಜ್ಯಘಟನೆಯಲ್ಲಿರುವ ಪ್ರದೇಶದ ಪ್ರತಿನಿಧಿಗಳಿರುವರು. ಇವರನ್ನು ಪ್ರತಿ ೧೦ ಲಕ್ಷ ಜನಸಂಖ್ಯೆಗೆ ಒಬ್ಬನಿಗೆ ಕಡಿಮೆಯಿಲ್ಲದಂತೆ ಪ್ರತಿ ೫೦ ಲಕ್ಷ ಜನಸಂಖ್ಯೆಗೆ ಒಬ್ಬನಿಗೆ ಹೆಚ್ಚಾಗದಂತೆ ಆರಿಸಲಾಗುವದು.

ಕೌನ್ಸಿಲ್ ಆಫ್ ಸ್ಟೇಟ್ ಶಾಶ್ವತವಾದದ್ದಿದ್ದು ಅದನ್ನು ವಿಸರ್ಜಿಸಲಾಗುವದಿಲ್ಲ. ಆದರೆ ಸುಮಾರು ೩ ರಷ್ಟು ಪ್ರತಿನಿಧಿಗಳು ಎರಡು ವರ್ಷಕ್ಕೊಮ್ಮೆ ತಮ್ಮ ಸ್ಥಳಗಳನ್ನು ತೆರವು ಮಾಡುವರು.

ಪ್ರಜಾ ಸಭೆಯು ನಾಲ್ಕು ವರ್ಷಗಳ ವರೆಗೆ ಅಸ್ತಿತ್ವದಲ್ಲಿರುವದು. ಅದಕ್ಕೂ ಮೊದಲು ಅದು ವಿಸರ್ಜಿಸಲ್ಪಡಲೂಬಹುದು. ಅಧ್ಯಕ್ಷರು ಅವಸರದ ಸಮಯದಲ್ಲಿ ಅದಕ್ಕೆ ೧ ವರ್ಷದ ವರೆಗೆ ಜೀವದಾನ ಮಾಡಬಹುದು.

ಈಗಿನ ಜನಸಂಖ್ಯೆಯು ಲೆಕ್ಕಕ್ಕನುಸರಿಸಿ ಮೇಲ್ಮನೆಯಲ್ಲಿ ೨೦೦ ಮತ್ತು ಪ್ರಜಾ ಸಭೆಯಲ್ಲಿ ೩೦೦ ರಿಂದ ೪೦೦ ಜನ ಸದಸ್ಯರಿರಬಹುದಾಗಿದೆ.

ಹಣಕಾಸಿನ ಮೊತ್ತುವಳಿಗಳ ವಿಚಾರವನ್ನು ಬಿಟ್ಟು ಈ ಎರಡೂ ಮನೆಗಳಿಗೆ ಸಮಾನ ಅಧಿಕಾರವಿದೆ. ಯಾವುದೊಂದು ವಿಚಾರದಲ್ಲಿ ಬಿಕ್ಕಟ್ಟು ಪ್ರಾಪ್ತವಾದರೆ ಎರಡೂ ಸಭೆಗಳ ಸಂಯುಕ್ತ ಅಧಿವೇಶನದಲ್ಲಿ ಬಿಡಿಸಬೇಕು.

ಪಾರ್ಲಿಮೆಂಟು ಕೂಡದಿರುವಾಗ ಅಧ್ಯಕ್ಷರು ಆರ್ಡಿನೆನ್ಸ್ ಹೊರಡಿಸಬಹುದು. ಆದರೆ ಅದನ್ನು ಕೇಂದ್ರ ಪಾರ್ಲಿಮೆಂಟಿನ ಮುಂದಿಡಬೇಕಾಗುವದು. ಪಾರ್ಲಿಮೆಂಟ್ ಪ್ರಾರಂಭವಾದ ನಂತರ ಆರ್ಡಿನೆನ್ಸ್ ಅಸ್ತಿತ್ವದಲ್ಲಿರಲಾರದು.

'ಜೈ ಹಿಂದ್'

WARDEN MARCHES AHEAD.

ANOTHER YEAR OF RECORD BUSINESS.

Youngest working on Surplus of Funds of Progress of the past three years:

Business	1944.	1945.	1946.
Introduced: Rs.	1,20,57,513.	1,56,19,295.	2,04,53,277
Completed: Rs.	1,04,77,346.	1,32,87,529.	1,72,12,480

WARDEN INSURANCE CO., Ltd.

H. O. BOMAY.

ORGANISATION ALL OVER INDIA, CEYLON & EAST AFRICA.

Wide scope for energetic young men as Agents, Special Agents and paid Organisers under our new Expansion Scheme

For particulars apply to:
P. C. Karambaya,
Brach Secretary.

Branch Office for Mysore State & Coorg:
142, Gandhinagar,
BANGALORE CITY.

ವಾರ್ಡನ್ ಇನ್‌ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಹೆಡ್ ಆಫೀಸ್:—ಬೊಂಬಾಯಿ)

ಮೈಸೂರು ಮತ್ತು ಕೊಡಗು ಶಾಖೆ:

142 ಗಾಂಧಿ ನಗರ, ಬೆಂಗಳೂರು ಸಿಟಿ.

ನಮ್ಮ ಮುಂದಾಳು ಯಾರು?

ಲೇಖಕ:—ಮಿಸೆಸ್ ಎನ್. ರೂಬಿ, ಮಡಿಕೇರಿ.

"ಬೆಳ್ಳಗಿರುವುದೆಲ್ಲ ಹಾಲಲ್ಲ,—ಮುಂ ನಡೆಯುವವರೆಲ್ಲ ಮುಂದಾಳುಗಳಲ್ಲ"

"ಸಭೆಗೊಬ್ಬ ಸಭಾಧಿಪತಿ, ಹಿನ್ನುಡಿ ಗೊಂದು ಮುನ್ನುಡಿ, ದಿನಕೊಬ್ಬ ದಿನವ ನಿತಿ; ಪ್ರಜೆಗಳಿಗೆಲ್ಲ ಪ್ರಜಾಪತಿಯೊಬ್ಬ," ಹಾಗೆಯೇ ದೇಶಕ್ಕೆ ಮುಂದಾಳುಗಳು. ಈ ಮುಂದಾಳುಗಳು ಮುನ್ನಡೆಯುವ ದಾರಿಯು ಸೀದಾ ಇದ್ದು, ಗುರಿಯು ನೇ ರಾಗಿರಬೇಕಲ್ಲದೆ, ಹಿಂಬಾಲಕರ ಅಭಿ ಮತ ಪಡೆದು ಹೆತ್ತರೆದು, ಸೂಕ್ಷ್ಮ, ಸುಲ ಭ ಮತ್ತು ಯಾವ ಆತಂಕವೂ ಇಲ್ಲದೆ ಬ ಹುದೇಗೆನೆ ತಲಪಬಹುದಾದ ದಾರಿಯ ವುದೆಂಬುದನ್ನರಿತು, ತಾನೂ ದಾರಿ ನಡೆ ಯುತ್ತಾ, ಹಿಂಬಾಲಕರನ್ನೂ ಗುರಿಗೆ ಕರೆ ದೊಯ್ಯುವುದು ಮುಂದಾಳುಗಳ ಲಕ್ಷಣ ಮತ್ತು ಕರ್ತವ್ಯ. ಆಲ್ಲದೆ ಪುಟಕ್ಕಿಟ್ಟ ಚಿ ನ್ನದಂತೆ ಪರಮ ಪರಿಶುದ್ಧನಾಗಿಯೂ-ಸ್ವಾರ್ಥತೆ, ಅಹಂಭಾವ, ಪರಪೀಡನೆ, ಪ ರನಿಂದೆ, ದೂಷಣೆಗಳ ರಹಿತನಾಗಿ ಅಧಿ ಕಾರಲಾಲಸೆ, ಅಧಿಕಾರ ಪಿಪಾಸೆಗಳನ್ನು ವರ್ಜಿಸಿದವನಾಗಿ, ದೂರದೃಷ್ಟಿಯುಳ್ಳವ ನಾಗಿ ಇದ್ದು, ನಿಷ್ಪಕ್ಷಪಾತಿಯೂಗಿರುವು ದೇ ನಿಜವಾದ ಮುಖಂಡನ ಲಕ್ಷಣ. ಈ ಯೋಗ್ಯತೆ ಇಲ್ಲದ ಸ್ವಕಲ್ಪಿತ ಮುಂ ದಾಳುಗಳು ಮೆರವಣಿಗೆಯ ಮುಂದೆ ನ ಡೆಯುವ ವಾದ್ಯಗಾರರಂತಿರುವರು!

ಈ ಸ್ಥಿತಪ್ರಜ್ಞ ಮುಂದಾಳಿನ ಲಕ್ಷ ಣಕ್ಕೆ ಕೊಡಗು ದೇಶದ ಮುಖಂಡರೆಂದೆಂ ಬ ಭಾವನಾ ಸಾಮ್ರಾಜ್ಯದಲ್ಲಿರುವ ಮುಂ ದಾಳುಗಳನ್ನು ಒರಹಚ್ಚಿ ನೋಡಿದರೆ ಆಗುವ ಅನುಭವವು ಸನುದ್ದದ ನೀರಿ ನೊಳಗೆ ಕಣ್ಣುಗಳನ್ನು ತೆರೆದಂತಾಗುವುದ ಲ್ಲವೇ? ನಮ್ಮ ನಿಜವಾದ ಮುಖಂಡರು ಯಾರು? ಯಾರನ್ನು 'ಜೈ' ಎಂದು ಜ ಯ ಜಯ ಸಿನಾದ ಮಾಡಿದರೆ ಸಾರ್ವಜ ನಿಕಂಗೆ ಶುಭಾಶಯವಾಗುವುದು? ರಾ ಷ್ಟ್ರೀಯ ಪತಾಕೆಯನ್ನೇರಿಸಲು, ಧ್ವಜ ಸ್ತಂಭವ ಸಾಮಿಪ್ಯಯಾರಿಗಿರುವುದು? ಕಳ್ಳಕಾಕರನ್ನೂ, ಡಾಕೂ, ಗೂಂಡಾರ ನ್ನೂ ಜನಾವಣೆ, ಅಧಿಕಾರಗಳ ಕಾಲಕ್ಕೆ ಮೇಲೆತ್ತಿ ಸಂಧಿಸಾಧಿಸುವವರ ಮುಖಂಡ ತ್ವದಿಂದ ಯಾರಿಗೆ ಹಿತವಾಗುವದು? ಭಕ್ಷಿ ಯಿಂದಲೂ, ರಾಷ್ಟ್ರೀಯ ಪ್ರೇಮದಿಂದ ಲೂ ಜೈಲಿನ ರಕ್ಷಸಿಗೆ ತಮ್ಮ ಕೈನೆತ್ತರನ್ನಿ ತ್ತ,ಆ ವೀರ, ಶೂರ, ಧೀರ ಶಿಖಾಮಣಿ, ಕ್ಷೇತ್ರಕಾಗಿ ಮುಖಂಡರು ಈಗೆಲ್ಲಿ? ಯಾರ ಅಮೃತವಾಣಿಗಳು ಹಿಂದೊಮ್ಮೆ ತೊಟ್ಟ ಲ ಶಿಶು ವನ್ನೂ ಕೊದಲ್ಲುಡಿಯಿಂದ ಗಾಂಧೀಕೀ ಜೈ ಎಂದು ಹೇಳಿಸಿ ದುವೋ ಅಂಥಾ ಮುಂದಾಳುಗಳು ಈಗೆ ಲ್ಲಿ? ಅಡಸ್ಮೋ ವಿಷಯಿಧ್ರಿಗಳು ಶಾಲಾ ಕಿಟಿಕಿಗಳ ಸಲಾಕೆಗಳಿಂದ ಬೆಕ್ಕಿನಂತೆ ನು ಸಿದು, ಹುಲಿಯಂತೆ ಆರ್ಭಟಿಸಿ ಸರ್ವ ಬಾಲ ಬಾಲಕಿಯರೊಡಗೂಡಿ ಎೇ ಗಂ ಟಲೆಡೆದರೂ ಹಿಂಗದೆ ಸಿಂಹನಾದ ಯಾ ರಿಗಾಗಿ ಮಾಡಿದರು? ಅಂಥವರ ವಾಣಿ ಗಳು 'ಫೋಲೋ ಭಾರತ ಮಾತಾಕೀ ಜೈ!' ಅನ್ನುವಾಗ ದಿಕ್ಕೆಟ್ಟ ಬೈನೆ ಮುಂಗ ಳು ಒಣಗಿದವು. ಚೆಲ್ಲಿದ ಸಾರಾಯಿಯ ನ್ನು ಒಣಗಿದ ನೆಲವೇ ಕುಡಿಯದಾಯಿ ತು. ಬಾಡಿದ ಆರಳಿ ಗಿಡಗಳು ಚಿಗುರಿದು ವು. ಬಡ ಚರಕಾವ ಎಳೇ ನೂಲೇ ಖಾರ ತಂತ್ರಜ್ಞಕ್ಕೆ ಯಮಪಾಶದಂತಾಗುತ್ತಾ ಬರುತ್ತಿರಲು, ಈಗೇನಾಯಿತು?

ಹಳೇ ನೀರನ್ನು ಹೊಸ ನೀರು ಕೂ ಡಿಕೊಂಡು, ಆವೆರೆದೂ ಸಮುದ್ರದಲ್ಲಿ ಕ ಲೆತು ಉಪ್ಪಾದಂತೆ, ನಿನ್ನೆಯ ಮಳೆಗೆದ್ದ ಜಾಗಟೆಯಂತೆ ದೇಶದ ಭಕ್ತರು 'ಕುರಿ ಯು ಕೊಗಲನ್ನು ಹೊದ್ದುಕೊಂದಿರುವ ತೋಳದ' ಸ್ನೇಹದಲ್ಲಿ ನಿಲೀನರಾಗಿ 'ಅ ಚ್ಛಾ ನ' ವೆಂಬ ಪ್ರವಾಹದ ಲ್ಲಿ ಕೊಚ್ಚಿಹೋಗಿ, 'ಅಧಿಕಾರಲಾಲಸೆ' ಎಂಬ ಸಾಗರವನ್ನು ಸೇರಿ, 'ದೇಶದ್ರೋ ಹ' ಎನ್ನುವ ಉಪ್ಪಾದರು! ಬಡಜನರ 'ನಮ್ಮವರು' ಎಂದೆನಿಸಿಕೊಂಡವರು ಪೇ ವನ್ಮೃತರಾದರಲ್ಲನೇ? ಅಥವಾ 'ಮೃತಪ ಟ್ಟಿಸ್ಲಿ ನಾನಿದ್ದೇನೆ,' ಅನ್ನುವವರಾರೂ ಯಾರಿದ್ದಾರೆ? ಯಾರ ಬದಲು ಯಾರೋ 'ನಾನಿದ್ದೇನೆ' ಎಂದು ಹೇಳಬಹುದಾದರೆ ನಿ ಮ್ಮ ಸತ್ಯ ಸರೀಕ್ಷೆ ಮಾಡ ಬಯಸುವೆವು ಈ ವರೆಗಿನ ಭಯಾನಕ ಹೋರಾಟದಲ್ಲಿ ನಿಮ್ಮ ಪಾತ್ರವೇನಿತ್ತು? ಕಪಟನಾಟಕ ಸೂತ್ರಧಾರಿಯೇ? ಪ್ರೇಮಮಯ ನಟವರ ನೋ? ನಟರ ದಾಸನೊದಾಸನೋ? ಪ ರದೆಯನ್ನೆಳೆಯುವವನೋ? ಈ ಪೃಥ್ವಿ ಯೂಪ್ಪದಾದರೊಂದು ಪಾತ್ರ ನಿಮ್ಮದಾಗಿ ದ್ದರೆ, ನಿಮ್ಮನ್ನು ದಿಟ್ಟಿಗೆ ಕಳುಹಿಸಿದ್ದ ಯಾ ರು? (೧) ಸಾರ್ವಜನಿಕರೋ (೨) 'ಹನಿಮೂನರೋ?' ಸಾರ್ವಜನಿಕರಾದರೆ ಮಂಜೂರು ಮಾಡ ಲ್ಪಟ್ಟ ಹಯಿನಾದ ಕಾರ್ಯಕ್ರಮ ಯಾರ ಲ್ಲಿದೆ? ಸ್ವಾವಲಂಬನಾಚರಿ ಪರಪ್ರಾ ತದ ಪತ್ರಿಕೆಗಳಲ್ಲಿ 'ಕೊಡಗಿನ ಸ್ಥಿತಿ ಹಾ ಗೆ, ಹೀಗೆ' ಎಂದು ನನ್ನನ್ನು ನೀವು ತೆಗೆ ಳಲು ಕಾರಣವೇನು? 'ಹನಿಮೂನ್' ಆದರೆ, 'ರೋಮ್ ನಗರವು ಧಗಧಗಿಸಿ, ಧ ಳ್ಳುರಿಯುತ್ತಿರಲು ನೀರೋ ಪಿಟೀಲು ಬಾ ರಿಸುತ್ತಿದ್ದಂತೆ, ನೀವು ವಿಹರಿಸುವ ಸನು ಯವೇ ಇದು?

ಕಿಗ್ಗಟ್ಟು ನಾಡಿನಲ್ಲಿ ಹೈಕ್ಕೂ ಲೊಂದನ್ನು ಸ್ಥಾಪಿಸುವಾಗ ಬಿಳೀ ಟೊ ಪ್ಪಿ ಅಲ್ಲಿ ನುಸಿದುಕೊಂಡಿತ್ತು; ಕೊಡಗಿ ನಲ್ಲಿ ಕಾಲೇಜೊಂದಾಗ ಬೇಕೆನ್ನಲು ಅಲ್ಲಿ ಯೂ ಖಾರ್ಟೆ ಪಂಗಡವಾಗದೇ ಇರಲಿಲ್ಲ; ಕಾಂಗ್ರೆಸ್ ಕಮಿಟಿಯೊಂದಕ್ಕೆ 'ಎಡ್ ಹಾಕ್' ನಾಮಕರಣವಾಯಿತು. 'ನಾ ರಬಾಯಿ ನಯಿಪಕ್ ಸಕ್ಕರೆ ಬಾಯಿ ತಿಂ ಬರ್' ಅಂದಂತೆ, ಅಧಿಕಾರ ಬರುವ ಈ ಸ ಮಯದಲ್ಲಿ 'ಇನ್‌ಫ್ಲೈರೆಕ್ಟ್ ಎಕ್ಷನ್' ಮಂ ತ್ರ ಪಿಸಪಿಸ ಗುಸಗುಸ, ರೀತಿ ನಡೆಯುವ ದಾಗಿಕಂದು ಬರುವುದರಿಂದ ಹುಲಿಕರಡಿ ಗಳೆರಡು ಜಗಳಿವಾಡಲು ಗುಳ್ಳೇನರಿಯು ರಾಜ್ಯಭಾರ ಸರಾಗವಾಗಿ ನಡೆಸಿದಂತೆ, ರಾಜ್ಯವಾಳುವನೇ ಆಳುತ್ತಿರಲಿ, ನಿಮಗೆ ನಮ್ಮ ಬೆಂಬಲವಿರಲಿಕ್ಕೇ ಇಲ್ಲವೆಂದು ಜ ನ ಸಾಮಾನ್ಯರು ನಿರಾಕರಿಯಿಂದ ನುಡಿ ಯುತ್ತಿರುವುದು ಳೇಳಬರುತ್ತಿದೆ. ಇನ್ನಾ ದರೂ ಮುಂದಾಳುಗಳೆನ್ನುವವರ ಕಣ್ಣಾ ತೆರೆಯುವುದೇ?

ಒಂದು ಕಠಿನ ಪ್ರಶ್ನೆ.

ಲೇಖಕ:—ಸುಶೀಲಾನಾಯರ್.

ಎಷ್ಟು ಕೆರಳಿಸಿದರೂ ಪ್ರಕ್ಷುಬ್ಧರಾಗ ಬಾರದೆಂಬುದರ ವ್ಯಾಮುಖ್ಯವನ್ನು ಗಾಂ ಧೀಜಿಯು ಹಿಂದೀಯರಿಗೆ ಹೇಳುತ್ತ ಬಂ ದಿದ್ದಾರೆ ಖಾಕಿಸ್ತಾನದ ಧೋರಣ ಎಂ ಥದೆಂ ಇಲ್ಲಿ, ಭಾರತವು ಇಂದು ಹಿಂದು, ಮುಸ್ಲಿಂ, ಸಿಕ್ಖು, ಪಾರಸಿಕ, ಕ್ರಿ ಸ್ತೀಯ ಮತ್ತು ಇತರರ ಮನೆ ನಾಡಾಗಿ ಯೇ ಉಳಿದೀತು, ಉಳಿಯ ಬೇಕಾಗಿದೆ. ಭಾರತವು ತಮ್ಮ ತಾಯ್ನಾಡೆಂದು ತಿಳಿದ ಎಲ್ಲರೂ ಸರಿಸಮಾನ ಹಕ್ಕುಭಾಧ್ಯತೆಗಳು ಳ್ಳ ಭಾರತೀಯರು ಮೊತೆಗೆ ಮೊತ್ತು, ನಿಜಕ್ಕೆ ಏಟು—ಎಂಬುದನ್ನು ಗಾಂಧೀಜಿ ಯೆಂದೂ ಒಪ್ಪಲಾರರು, ಅದರಲ್ಲೂ ಒಂ ದೇ ಏಟಿಗೆ ಪ್ರತಿಯಾಗಿ ನೂರೇಟು ಕೊಡುವು ದನ್ನು ಎಂದೆಂದಿಗೂ ಅಂಗೀಕರಿಸಲಾರರು. ಇವನ್ನು ಗಾಂಧೀಜಿಯು ಎತ್ತಾ ಯದಿಂದ ಹೇಳಿದ್ದಿರುವುದು ಆ ನೇಕ ಹಿಂದೂಗಳ ಮನಸಿಗೆ ನೋವನ್ನುಂಟುಮಾಡಿದೆ. ಕೆಲವರು ಅ ದಕ್ಕಾಗಿ ಅವರನ್ನು ಎಂಬಿಯೂ ನಿಂದಿಸಿ ದ್ದಾರೆ. ಹಂತ್ತಿ ಕೆಲವರು ಏ ಾಲಿಯ ಕ್ಕ ನದೆಯಿರೆಂದು ಗಾಂಧೀಜಿಯನ್ನು ಮೆ ಚ್ಚಿಸಿ ಪ್ರತಿಕ್ರಿಯಿಸಿಕೊಂಡಿದ್ದಾರೆ. ಆದರೆ ಗಾಂಧೀಜಿಯು ಹೇಳಿದ್ದನ್ನು ನಂಬುವ ಮತ್ತು ಅದರಂತೆ ನಡೆಯಲಿಚ್ಛಿಸುವ ಹಲ ವು ಮಂದಿಯಿದ್ದಾರೆಂಬುದೂ ನಿಜ ಅಂ ತಹ ಒಬ್ಬ ಗೆಳೆಯರು ಮೊನ್ನೆ ಗಾಂಧೀಜಿ ಯ ಹತ್ತಿರ ಬಂದು ತಮ್ಮ ತೊಂದರೆಗಳ ನ್ನು ವಿವರಿಸಿದರು "ಮುಸ್ಲಿಮರನ್ನು ನಂಬಬಾರದೆಂದು ಕಾಂಗ್ರೆಸ್ ಸರಕಾರಗಳಿ ಗೆ ಎಚ್ಚರಿಕೆ ಕೊಡಲಾಗಿದೆ. ಮುಸ್ಲಿಮ ರು ಪ್ರೋಹಿಂಗಳಾಗಿಯೂ ಪಂಚಮ ದಲ ದವರಾಗಿಯೂ ಕೆಲಸ ಮಾಡಬಹುದು. ಖಾಕಿಸ್ತಾನವನ್ನು ನಿಜವಸ್ತುವನ್ನಾಗಿ ಮಾಡಿದ್ದಕ್ಕೆ ಖಾಕಿಸ್ತಾನೇತರ ಪ್ರದೇಶದ ಮುಸ್ಲಿಮರ ತ್ಯಾಗವನ್ನೂ ಪ್ರಯತ್ನವ ನ್ನೂ ಜಿನ್ನಾ ಸಾಹೇಬರು ಕೊಂಡಾಡಿ ದ್ದಾರೆ. ಕೆಲವು ಮುಸ್ಲಿಂ ಲೀಗ್ ಅನು ಯಾಯಿಗಳಂತೂ ಆಂಗಹೀನ ಖಾಕಿಸ್ತಾ ನದಿಂದ ತಾವು ತೃಪ್ತರಾಗಿಲ್ಲನೆಂದು ಜನ ಜನಿತವಾಗಿ ಹೇಳುತ್ತಿದ್ದಾರೆ. ಅವರ ಕ ಣ್ಣಾನ್ನಗಳು ಡಿಲ್ಲಿ, ಆಗ್ರಾ, ಅಜಮೀರ ಮ ತ್ತು ಅಲಿಗಢಗಳ ಮೇಲಿವೆ. ಕೆಲವರಂ ತೂ ಇಡಿಯ ಹಿಂದೂಸ್ತಾನದ ಮೇಲೆ ಆ ಧಿಪತ್ಯ ಸ್ಥಾಪಿಸುವ ಕನಸನ್ನು ಕಂಡವರು. ಅದೊಂದು ಸಣ್ಣಲ ಸ್ವಪ್ನವಾದರೂ ಹಿಂ ದೂಸ್ಥಾನದಲ್ಲಿಯ ಮುಸಲ್ಮಾನರು ತಮ್ಮ ಲ್ಕ್ಯಪ್ರಭಾನಗಳನ್ನು ಆ ನನಸನ್ನು ನನ ಸ ಗಿಸುವ ಬಗ್ಗೆ ಉಪಯೋಗಿಸುವುದಿಲ್ಲ ಹೇಬುದಕ್ಕೆ ಸಾಕ್ಷಿಯೇನಿದೆ?'

ಮೇಲಿನ ಪ್ರಶ್ನೆಗಳಿಗೆ ಗಾಂಧೀಜಿಯಂ ಉತ್ತರವು ಸ್ಪಷ್ಟವೂ ನಿಶ್ಚಯಾತ್ಮಕವೂ ಆ ಗಿತ್ತು. "ಧರ್ಮದ ತಕ್ಕಡಿಯ ಮೇಲೆ ಕಾಂಗ್ರೆಸ್ ಸರಕಾರಗಳು ಒಬ್ಬರಿಂದೊಬ್ಬ ರನ್ನು ಳೆದ ಮಾಡಲಾರದಾಗಿವೆ. ನ ನ್ನ ಜೇಷ್ಠ ಪುತ್ರನು ಪದೇ ಪದೇ ನನ್ನ ಬ ಳಿಗೆ ಬಂದು ತಾನು ಇನ್ನು ನುಂದೆ ಒಳ್ಳೆ ಯನಾಗುವೆನೆಂದೂ ಮದ್ಯವನ್ನು ಮುಟ್ಟುವುದಿಲ್ಲವೆಂದೂ ಹೇಳುತ್ತಾನೆ. ನಾ ನು ಅವನಿಗೆ—ನಾನು ನಿನ್ನನ್ನು ನಂಬಿದ ದ್ದರೂ ನಿನಗೊಂದು ಅವಕಾಶ ಕೊಡು ತ್ತೇನೆ ಎಂದು ಹೇಳುತ್ತೇನೆ. ಅವನು ಇಂದಿನವರೆಗೆ ತನ್ನ ಮಾತಿನಂತೆ ನಡೆದು ಕೊಳ್ಳಲು ಶಕ್ಯನಾಗಿಲ್ಲ. ಆದರೂ ಅವ ನು ಮತ್ತೆ ಬಂದರೆ ನಾನು ಅವನನ್ನು ಓ ಡಿಸುವುದಿಲ್ಲ ಮತ್ತು ಅವನು ತನ್ನ ಮಾತ ನ್ನು ನಡೆಸುವನೆಂದು ಪುನಃ ಅವನು ನನ್ನ ನ್ನು ನಂಬಿಸಲು ವಾಪಾಸು ಬರುವ ವರೆ ಗೆ ನಾನು ಭರವಸೆಯಿಡುತ್ತೇನೆ. ನಾವು ಹಾಗೇ ಮುಸ್ಲಿಮರನ್ನು ನಂಬಬೇಕು ಮತ್ತು ಅದೇ ಕಾಲದಲ್ಲಿ ಜಾಗೃತರಾಗಿರ ಬೇಕು."

"ನಮ್ಮ ಮನಸ್ಸಿನಲ್ಲಿ ಸಂಶಯವಿದ್ದ ರೆ ಅದು ನಮ್ಮ ಕಾರ್ಯಗಳಲ್ಲಿ ಪಡಿಮೂಡುವದಲ್ಲವೆ? ಎಂದು ಗೆಳೆಯರು ಮತ್ತೆ ಪ್ರಶ್ನಿಸಿದರು.

"ಇಲ್ಲ" ಎಂದರು ಗಾಂಧೀಜಿ. "ಸಂ ಶಯದ ಆಧಾರದ ಮೇಲೆ ಯಾವ ಕಾ ರ್ಯವನ್ನೂ ಮಾಡಬಾರದು. ಬ್ರಿಟಿಷ ರತ್ತ ನೋಡಿರಿ. ಭಾರತಕ್ಕೆ ಅವರೆಷ್ಟು ಯಾನ ಮಾಡಿದ್ದಾರೆ! ನಾನು ಸಂಶಯ ದಿಂದ ಸಂಪೂರ್ಣ ಮುಕ್ತನೆಂದು ಹೇಳ ಲಾರೆ ಎಂಬದನ್ನು ಒಪ್ಪಿಕೊಳ್ಳುತ್ತೇನೆ. ಆ ವರು ಸಂಪೂರ್ಣ ಪರಿವರ್ತನೆ ಹೊಂದಬ ಹುದೇ? ಎಂದು ಸಂಶಯಪಡುತ್ತೇನೆ.

WANTED.

SUB DISTRIBUTORS for Coorg PROVINCE for TRY English RADIOS and other Products of Messrs-Television Radio Industries, London and RELIANCE BUTTER. Interested parties may interview undersigned.

MANAGING DIRECTOR,
Ranah Commercial Corporation, Ltd.,
2-2 C/o. Cauvery Mahal, Mercara.

INDIAN INDEPENDANCE DAY CELEBRATION.

AUGUST 15TH, 1947.

APPEAL TO ALL CO-OPERATORS OF COORG.

The Board of Directors of the Coorg Provincial Co-operative Bank Ltd., has resolved at their recent meeting that the 50,000 co-operators of Coorg should exhibit their profound joy on the transfer of power from His Majesty's Government to the Indian Dominion, which is a first step for the ultimate realisation of complete independance, in a very fitting manner at all the Union and other convenient centres. Co-operative organisations, all the world over including India, in a miniature from are "a Government of the People, for the people and by the people", which will whole-heartedly welcome the idea of the formation of the Dominion of India, where the common man will have a greater voice in the adminstration of the government.

The following programme is suggested for all the centres including Mercara.

A Central Committee consisting of all the Directors of the Provincial Bank, Federation and the Registrar of Co-operative Societies will call for a meeting of the Co-operators at Mercara on 15-8-1947 to which leading citizens and Co-operators should be invited.

On the same day Dewan Bahadur K. Chengappa, C. I. E., Chief Commissioner of Coorg, has kindly consented to lay the foundation stone of the new building at Mercara at 12-30 P. M. All are cordially invited to attend.

PROGRAMME.

1. *Procession of Co operators with student-members of school co-operative stores.*
2. *Prayer.*
3. *Hoisting the National and Co-operative flags.*
4. *Reading the objective resolution of the Consambly in Kannada.*
5. *Resolution wishing the Indian Dominion Government God-speed*
6. *Speeches on Hindi, spinning and removal of untouchability etc.*

The Presidents of all Unions are requested to arrange for meetings and supply of flags with the assistance of the Supervisors. The District Supervisor will arrange to supply the required number of flags to the Marketing Societies for sale at reasonable prices.

ಭಾರತೀಯ ಸ್ವಾತಂತ್ರ್ಯ ದಿನಾಚರಣೆ

ಆಗಸ್ಟ್ ೧೫—೮—೧೯೪೭.

ಕೊಡಗಿನ ಎಲ್ಲಾ ಸಹಕಾರಿಗಳಿಗೆ ವಿನಂತಿ.

ಪೂರ್ಣ ಸ್ವತಂತ್ರ್ಯದ ಪವಿತ್ರ ಬೆಂಬಿಳಿಗೆ ತಲುಪುವ ಪ್ರಥಮ ಪೆಜ್ಜೆಯಾಗಿ ಬ್ರಿಟಿಷ್ ಸಾರ್ವಭೌಮ ಸರಕಾರವು ಸಾಮ್ರಾಜ್ಯಂತರ್ಗತ ಭಾರತಕ್ಕೆ ಅಧಿಕಾರ ಪಹಿಂ ಕೊಡುವ ಮಹೂರ್ತದಲ್ಲಿ ಕೊಡಗಿನ 50,000 ಸಹಕಾರಿಗಳು ತಮ್ಮ ಹೃತ್ಪೂರ್ವಕ ಸಂತೋಷವನ್ನು ಈ ಸಂದರ್ಭಕ್ಕೆ ಯೋಗ್ಯವೆನ್ನುವಂತೆ ಸ್ಥಳೀಯ ಸಹಕಾರ ಕೂಟದಲ್ಲಿ, ಸಾಧ್ಯವಾದ ಮತ್ತಿತರ ಕೇಂದ್ರಗಳಲ್ಲಿ ಸಭೆ ಸೇರಿ ಮಕ್ಕ ಮಾವಬೇಕೆಂದು ಕೊಡಗು ಪ್ರಾಂತೀಯ ಸಹಕಾರ ಬ್ಯಾಂಕಿನ ಡೈರೆಕ್ಟರುಗಳು ತಮ್ಮ ಕಳೆದ ವಿಜ್ಞಾಪನೆಯಲ್ಲಿ ತಿರ್ಮಾನಿಸಿರುವರು. ಜಗತ್ತಿನಲ್ಲಿ ಸರಕಾರ ಸಂಸ್ಥೆಗಳು ಸೂಕ್ಷ್ಮ ರೂಪದಲ್ಲಿ "ಜನತೆಯೆ, ಜನತೆಗಾಗಿ ಜನತೆಯಿಂದ ನಡೆಸಲ್ಪಡುವ ಸರಕಾರ" ಎಂತಿರುವದರಿಂದ ಸರಕಾರವ ಅಡಳಿತದಲ್ಲಿ ಸಾಮಾನ್ಯ ಮನುಷ್ಯನು ಹೆಚ್ಚಿನ ಮಾಲುಗೊಳ್ಳಲು ಅನುವಾದ ಸಾಮ್ರಾಜ್ಯಂತರ್ಗತ ಸ್ವರಾಜ್ಯವನ್ನು ಭಾರತಕ್ಕೆ ಕೂಡುವ ಅಭಿಪ್ರಾಯವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವವು.

ಮಡಿಕೇರಿಯನ್ನೊಳಗೊಂಡ ಎಲ್ಲಾ ಕೇಂದ್ರಗಳಿಗೂ ಈ ಕೆಳಗಿನ ಕಾರ್ಯಕ್ರಮಗಳನ್ನು ಸೂಚಿಸಲಾಗಿದೆ.

ಬ್ಯಾಂಕಿನ ಮತ್ತು ಸಹಕಾರಿ ಫೆಡರೇಶನಿನ ಎಲ್ಲಾ ಡೈರೆಕ್ಟರುಗಳಿಂದ ಮತ್ತು ಸಹಕಾರಿ ಸಂಘಗಳ ರಿಜಿಸ್ಟ್ರಾರವರಿಂದ ಕೂಡಿದ ಒಂದು ಕೇಂದ್ರ ಸಮಿತಿಯು ತಾ. ೧೫—೮—೪೭ರಲ್ಲಿ ಸಹಕಾರಿಗಳ ಸಭೆಯನ್ನು ಮಡಿಕೇರಿಯಲ್ಲಿ ಕರೆದು ಇದಕ್ಕೆ ಪ್ರಾನುಮ್ಯ ಇತರ ಸಹಕಾರಿಗಳನ್ನು ಮತ್ತು ನಾಗರೀಕರನ್ನು ಆಮ್ವಾನಿಸುವುದು.

ಅದೇ ದಿನ ಮಧ್ಯಾನ್ನ ೧೨-೩೦ ಗಂಟೆಗೆ ಕೊಡಗಿನ ಚೀಫ್ ಕಮಿಷನರಾದ ದಿವಾನ್‌ಬಹದೂರ್ ಕೆ. ಚಂಗಪ್ಪ ಸಿ. ಐ. ಇ. ಇವರು ಮಡಿಕೇರಿಯಲ್ಲಿ ಬ್ಯಾಂಕಿನ ಹೊಸ ಕಟ್ಟಡದ ಆಸ್ತಿ ಭಾರವನ್ನು ಹಾಕಲು ಏರ್ಪಡಿಯಿಟ್ಟು ಒಪ್ಪಿರುವರೆ. ಎಲ್ಲರೂ ಬಂದು ಭಾಗಿಗಳಾಗಬೇಕೆಂದು ಕೋರಿಕೆ.

ಕಾರ್ಯಕ್ರಮ.

೧. ಸ್ಕೂಲ್ ಸಹಕಾರ ಸ್ಟೋರುಗಳ ವಿದ್ಯಾರ್ಥಿ ಸದಸ್ಯರೊಡಗೂಡಿ ಸಹಕಾರಿಗಳ ಮೆರವಣಿಗೆ.
೨. ಪ್ರಾರ್ಥನೆ
೩. ರಾಷ್ಟ್ರೀಯ ಮತ್ತು ಸಹಕಾರ ಧ್ವಜಾರೋಹಣ.
೪. ರಾಜ್ಯಪೂರ್ಣತಾ ಸಭೆಯ ಮೂಲಭೂತ ಹಕ್ಕಿನ ಠರಾವನ್ನು ಕನ್ನಡದಲ್ಲಿ ಓದುವದು
೫. ಹಿಂದೀ ಸರಕಾರಕ್ಕೆ ಶುಭ ಬಯಸುವ ಠರಾವು.
೬. ಹಿಂದೀ ಪ್ರಚಾರ, ನೂಲುವದು, ಅಸ್ಪೃಶ್ಯತಾ ನಿವಾರಣೆ ಮೊದಲಾದ ವಿಚಾರಗಳಲ್ಲಿ ಭಾಷಣಗಳು.

ಎಲ್ಲಾ ಸಹಕಾರ ಕೂಟಗಳ ಪ್ರೆಸಿಡೆಂಟರುಗಳು ಸಭೆಗಳನ್ನು ಏರ್ಪಡಿಸಿ ಸಹಕಾರ ಸಂಘಗಳ ಸುಪರ್‌ವೈಜರವರ ಸಹಾಯದಿಂದ ರಾಷ್ಟ್ರೀಯ ಧ್ವಜಗಳನ್ನು ಸರಬರಾಯಿ ಮಾಡಬೇಕೆಂದು ಕೇಳಿಕೊಳ್ಳಲಾಗಿದೆ. ಜಿಲ್ಲಾ ಸುಪರ್‌ವೈಜರರು ಅವಶ್ಯವಿರುವಷ್ಟು ರಾಷ್ಟ್ರೀಯ ಧ್ವಜಗಳನ್ನು ಸೂರ್ಕೆಟಿಂಗ್ ಸಂಘಗಳ ಮೂಲಕ ಸೂರಾಟಕ್ಕೆ ಯೋಗ್ಯ ಬೆಲೆಯಲ್ಲಿ ಒದಗಿಸುವರು.

ಕೆ. ಪಿ. ಅಪ್ಪಯ್ಯ,
ಪ್ರೆಸಿಡೆಂಟ್.
ಕೊಡಗು ಪ್ರಾಂತೀಯ ಸಹಕಾರ ಬ್ಯಾಂಕು, ಲಿಮಿಟೆಡ್.

ಮಡಿಕೇರಿ.
೨೮-೭-೪೭.

ನಾನು ಲಾರ್ಡ್ ಮೌಂಟ್‌ಬ್ಯಾಟನ್ನರನ್ನು ನಂಬುತ್ತೇನೆ. ಜಗತ್ತು ನಂಬದೆ ನಡೆಯಲಾರದು. ತಾವು ಬಾಳುವ ರಾಜ್ಯಕ್ಕೆ ತಾವು ಭಕ್ತಿಭಾವದಿಂದ ನಡೆದುಕೊಳ್ಳಬೇಕೆಂದು ಅಲ್ಪಸಂಖ್ಯಾಕರು ಮನಗಾಣಬೇಕು. ಅವರು ಅಯೋಗ್ಯರೆಂದು ಕಂಡುಬಂದರೆ ಸರಕಾರವು ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳಬಲ್ಲದು. ಆದರೆ ನಾವು ಮೊದಲು ಅವರ ಬಗ್ಗೆ ಪೂರ್ವ ಸಿದ್ಧ ಅಭಿಪ್ರಾಯಗಳನ್ನಿಟ್ಟುಕೊಳ್ಳಬಾರದು. ನಾವು ಬರುವ ಮುನ್ನ ಸಾಯಬೇಕೆ?

"ಅಪಾಯವ ಪಿರಿದ್ದ ಹೋರಾಡಲು, ಹೇಗೇ ಆಗಲಿ, ನಾವು ಅನಿಯೋಗಿರ ಬೇಕು" ಎಂದು ಮತ್ತೆಬ್ಬಗೆಯರು ಒತ್ತಿ ಹೇಳಿದರು.

"ಹೌದು" ಎಂದರು ಗಾಂಧೀಜಿ. ನಿಜವಾದ ತಪ್ಪುಗಳಿಂದು ನಮ್ಮಲ್ಲಿ ರಕ್ತ ಗತವಾಗಿರುವ ದೌರ್ಬಲ್ಯಗಳನ್ನು ಬುಚ್ಚಿಟ್ಟಿ ಮೂಡುವುದರಲ್ಲಿದೆ-ನಮ್ಮ ಸ್ವಾರ್ಥ ಮತ್ತು ಅನೈಕ್ಯಗಳನ್ನು ನಾವು ಸೋಗುವುದಲ್ಲಿದೆ" 'ಪ್ರಜಾಮತ'

ಬಾತ್ಮಿ.

ಬೆಚ್ಚಿಸಿ ನುಟ್ಟಿ ಭತ್ಯೆ.

ಸೋಮವಾರಪೇಟೆ ತಿಯರ್ ಎರಿಮೆಂಟರಿ ಶಾಲೆ ಸರಕಾರಿಯವರಿಂದ ಪಡೆದಿತ್ತು. ಆದರೆ ಕೆಳತರಗತಿಗಳಿಗೆ ಪಾಠಮಾಡುವ ಉಪಾಧ್ಯಾಯರಿಗೆ ಸಂಬಳ ನೀಡಿದ್ದೆವೆಂದು ವಿಠಲಯ ಅಧಿಕಾರಿಗಳು ಕೂಡಿಕ್ಕಾರಂತೆ. ಇವರ ಸಂಬಳದ ಪರ ೭೫೦,೧೦ ರೂಪಾಯಿಗಳು. ಇವರಲ್ಲಿ ೭ ಮತ್ತು 9 ಇದ್ದವನ್ನು ಇತ್ತೀಚೆಗೆ 9 ಮತ್ತು 12 ಮಾಡಿದ್ದಾರಂತೆ. ಒಂದೇ ಶಾಲೆಯಲ್ಲಿ ಹಿಂದೇ ತರಹ ಕೆಲಸ ಮಾಡುವವರಿಗೆ ಈ ರೀತಿಯ ವ್ಯತ್ಯಾಸವೇಕೆ?

ಅಧಿಕಾರಿಗಳ ಮನಸ್ಸನ್ನು ಅರಿಸಲು ಕಳೆದ ನವೆಂಬರ್ 1 ರಂದು ಉಪಾಧ್ಯಾಯರು ಪುಟ್ಟಲ್ಲ ಕೊಡಲಿಲ್ಲ. ನೋಟ್ಸ್ ಮಾಡಿಕೊಳ್ಳಲು ಅಭ್ಯಸ್ಥರ ಹೃದಯವನ್ನು ಅರಿಯುವುದು ಅಸಾಧ್ಯವಾಗಿತ್ತು. ಇನ್ನು ಹೆಚ್ಚು ಕಾಲವು ಸರಕಾರಕ್ಕೆ ಮನವಿ ಮಾಡಿಕೊಳ್ಳಲು 11 ಮತ್ತು 18 ರೂ. ಪುಟ್ಟಿಸಿಕೊಳ್ಳಲು ಕೊಡಲು ಹುಕುಂ ಮಾಡಿದರೆಂದು ಗಾಂಧಿ ಸೇವಾಶ್ರಮದ ಅಧ್ಯಕ್ಷರು ಕೊಡಗಿನಲ್ಲಿ ನಮಗೆ ಪತ್ರಿಕೆಯೊಂದಕ್ಕೆ ತಿಳಿಸಿದ್ದಾರಂತೆ. ಬೂರು ಬೇಲಿಯಾಕಿ ಒಬ್ಬರಿಗೆ ಒಂದೂ ಧೈರ್ಯವಿಲ್ಲದ ಸೆಲಸ ಮಾಡುವ ಉಪಾಧ್ಯಾಯರಿಗೆ ಸರಕಾರವು ಹೆಚ್ಚಿನ ಸಂಬಳ ಕೊಡುವುದೆಂದು ಹೇಳಲು ಏನು ಆಧಾರವಿದೆ? ನೂರಕ್ಕೆ ಎಷ್ಟು ಮಂದಿ ಉಪಾಧ್ಯಾಯರು ಕೆಲಸ ಮಾಡುತ್ತಿರುವರು? ಈ ಉದ್ಯೋಗದ ಮೇಲೆ ಯಾರಾದರೂ ಕಣ್ಣಿಟ್ಟಿದ್ದಾರೆಯೇ?

ಮಂತ್ರಾಸಿಸಲ್ಪಟ್ಟ ದರ್ಜೆ ಪರೀಕ್ಷೆಯಲ್ಲಿ ಕೊಡುವ ಶಾಲೆಯವರು ಸರಿಯಾದ ಗಮನ ಕೊಡದಲ್ಲಿ ತುಟ್ಟಿಭತ್ಯೆ ಕೊಡಿಸಬೇಕಂತೆ. ಆದರೆ ಕೊಡಗಿನಲ್ಲೋ? ಮುನ್ಸಾರ ಜಿಲ್ಲಾ ಜಿಲ್ಲಾ ಜೋಡಣೆ ಉಪಾಧ್ಯಾಯ ಎಂಬಿಗೆ ಇತ್ತೀಚೆಗೆ ತುಟ್ಟಿ ಒತ್ತಿ ಸಿಕ್ಕಿತು. ಆದರೆ ಕಾನ್ವೆಂಟ್, ಸೆಂಟ್ ಪೈಟರ್ಸ್ ಹೈಸ್ಕೂಲ್ ಶಾಲೆ ವೀರರಾಜಪೇಟೆಯ ಸೇಂಟ್ ಎನ್ನುವಂತೆಯೂ ಉಪಾಧ್ಯಾಯರುಗಳಿಗೆ ತುಟ್ಟಿಭತ್ಯೆಯೇ ಇದು ಏಕೆಗೆ ಸಿ

ರುವುದಿಲ್ಲವಂತೆ! ಇದು ನಿಜವೇ? ಆ ಕಾರಿಗಳು ಇವರ ವಿಷಯ ಏನು ಕೊಂ ಡೆ ತೆಗೆಸುಕೊಳ್ಳುವಂತಿಲ್ಲವೇ?

'ಹಿತಚಿಂತಕ.'

ಕಾಫಿತೋಟಿಪ ನೆರಳು ಮರ ಕೊಲ್ಲುವ ವಿಧಿ.

ಕಾಫಿತೋಟಗಳ ನೆರಳು ಮರಗಳನ್ನು ಹಾಳುವ ಔಷಧಿಯಿಂದ ಸುತ್ತುವು ಲಿನ ಜನರ ದನಕರುಗಳಿಗೆ ವಿಪರೀತ ತೊಂದರೆಯಾಗುತ್ತಿದೆ ಅನಸ್ನು ಈ ಮು ನಿಗಾಲದಲ್ಲೇ ಹಾತುನದರಿಂದ ಹಲಸಿನ ಕಾಯಿಯ ಈ ಸಮಯದಲ್ಲಿ ಕಾವಲುಗಾ ರನಿದ್ದರೂ ತಪ್ಪಿಸಿಕೊಂದು ಓಡಾಡುವ ಸ ನಗಳು ತೋಟದುಗ್ಗಿ ಅಲ್ಲಿ ಈ ವಿಷನಿಶ್ರಿತ ಹುಣ್ಣು ಮೊದಲಾದುವನ್ನು ತಿಂದು ಸಾ ಯುತ್ತಿವೆ. ಪ್ರತಿ ವರ್ಷ ಸಾವಿರಗಟ್ಟಿ ರೂಪಾಯಿಯ ದನಕರುಗಳು ಬಡ ರೈತನ ಪಾಲಿಗೆ ನಾಶವಾಗುತ್ತಿವೆ. ಆರಿಪ್ಪತ್ತಲೆ ಯ ಆಂಗಳ ದುಂಡಿಮೆಯ ಫಲವಾಗಿ ಬ ರುವ ಉತ್ಪತ್ತಿಯಿಂದ ಸುಖಲೋಲುಪ ರಾಗಿ, ತಿಂಗಳಿಗೊಂದರಂತೆ ಕಾರುಬದಲಾ ಯಿಸುವ ಈ ತೋಟಗಾರರಿಗೆ ಬಡ ರೈತನ ಒಂದು ದನ ಸ್ವಲ್ಪ ಅಪರಿಂದ ಆತನಿಗಾ ಗುವ ದುಃಖದ ಸರಿವೆ ಹೇಗಾಗಬೇಕು? ಜೂನ್ ಜುಲೈ ತಿಂಗಳಲ್ಲಿ ಔಷಧಿ ಹಾಕು ವ ಬದಲು ಏಪ್ರಿಲ್ ಮೇ ತಿಂಗಳುಗಳಲ್ಲಿ ಹಾಕಿ ಎಂದೊಂದರೆ ರೈತನ ದನಗಳಿಗೆ ಉಪಕಾರಮಾಡಿದಂತಾಗುತ್ತಿತ್ತು. ತೋ ಟಗಾರರೂ, ಸರ್ಕಾರವೂ ಈ ವಿಚಾರವ ನ್ನು ಗಮನಿಸುವರೇ?

'ಮನನೊಂದವ.'

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಇಂಡಿಯಾನವ ಬ್ಯಾಂಚಿನ ಸೆಕ್ರೆಟರಿಗಳು

ದಿ ಬೋಂಬೆ ಲೈಫ್ ಅಷ್ಯೂರೆನ್ಸ್ ಕಂ. ಲಿಮಿಟೆಡ್.

30 ಪಾರ್ಕ್ ರೋಡ್, ಪೊ. ಬಾ. ನಂ. 337, ಮದ್ರಾಸು 2.

ಬೋಂಬೆ ಲೈಫ್ ಬಿಲ್ಡಿಂಗ್, ಪೊ. ಬಾ. ನಂ. 1, ಉಡುಪಿ.

(ಟೆಲಿಫೋನ್ ನಂ. 8398)

ಇತರ ಆಫೀಸುಗಳು: ಬೆಂಗಳೂರು, ತಿರುಚಂದರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮಹಲ್ಲ, ಬೊಂಬಾಯಿ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ರಿಜಿಸ್ಟರ್ಡ್ ಆಫೀಸ್ ಆಫ್ ಸಹಕಾರಿ ಸೊಸೈಟೀಸ್ (1924ನೇ ಸ್ಥಾಪಿತವಾಗಿದೆ.

ವಸೂಲಾದ ಶೇರು ಮೊತ್ತಂಗಳು ರೂ. 1,33,740. ಜಮಾ ಬಂದ ಶೇಷ ಖಾತೆ 3,30,203-1-5, ವಸೂಲಾಗದ ಶೇರುಮೊತ್ತ 2,36,454-0-3, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 3,01,32ಒ-1-3-3.

ಈ ಬ್ಯಾಂಕಿನಿಂದ ಸಹಕಾರ ಸಂಸ್ಥಗಳಿಗೇನೇ ಬೆಜ್ಜಾಗಿ ಸಾಲ ಕೊಡುವುದ ಲ್ಲದೆ, ಡಿಪಾಜಿಟ್ದಾರರಿಗೆ ಒಂದು ದಿವಾಜಿಟ್ಟು ಉಳಿದ ಮೇಲೆ 90% ಕೊಡಲಾ ಗುತ್ತೆ. ಸರಾಸರಿ ರಾಜಮಂಡಿಯನ್ನು ರೂ. 1-1-46ರಿಂದ ಜೊಂದಿಕೊಳ್ಳಲಾ ಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಕೇಳಿದ 0-8-0 ದರದ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸುಲಭ ಕೊಡಲಾಗುವುದು. ವರ್ತಮಾನಗಳನ್ನು ರಿಜಿಸ್ಟರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಏಜೆಂಟ್.

ಎಂಪ್ಲೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ವಿಷಯಗಳು.	ಒಟ್ಟು ಆದಾಯ	....	1,07,09,000 ರೂಪಾಯಿ
	ಚಾಲ್ತಿಯಲ್ಲಿರುವ ವಿಮೆ	....	17,74,52,000 ,,
	ಆಸ್ತಿ	....	6,67,60,000 ,,
	ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು	....	8,83,62,000 ,,

ಆಂಗ್ಲ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ ಆರ್ಡರ್‌ಗಳನ್ನು ಸ್ವಾಗತಿಸಿದೆ.

ಕೃಷ್ಣಾ ಕಛೇರಿ: ಎಂಪ್ಲೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೋಂಬೇ.

Edited Printed and Published by P. I. Bellappa at 'Kodagu' Press, Mercara, for 'Kodagu' Ltd.

= ವಾರ್ತಾ ವರದಿ =

ಸಿಕ್ಕರ ಬಳವಳ.

ಅಖಿಲ ಪಂಜಾಬು ಸಿಕ್ಕರ ಸಮ್ಮೇಳನವು ನಂತಾನ ಸಾಹೆಬ್ ಎಂಬಲ್ಲಿ ನಡೆಯುವ ಸಿದ್ದತೆಯಾಗಿತ್ತು. ಪಂಜಾಬ್ ಸರಕಾರವು ಈ ಸಮ್ಮೇಳನವನ್ನು ನಿಷೇಧಿಸಿ ಪ್ರತಿಬಂಧಕಾಜ್ಞೆ ಹೊರಡಿಸಿತ್ತು. ಆದರೆ ಸಿಕ್ಕರು ಈ ಆಜ್ಞೆಯನ್ನು ಮೀರಿದು ಸಮ್ಮೇಳನೆ ನಡೆಸಿದರು. ಪಂಜಾಬ್ ಸರಕಾರವು ದಾರಿಯಲ್ಲಿ ಪೋಲೀಸ್ ಮತ್ತು ಸೈನ್ಯಗಳನ್ನಿಟ್ಟು ವಿಂಟಿಂಗಿಗೆ ಜನರು ಬಾರದಂತೆ ಪ್ರತಿಬಂಧಿಸುವ ಏರ್ಪಾಡು ಮಾಡಿತ್ತು. ಸಿಕ್ಕರು ಈ ಆಜ್ಞೆಯನ್ನು ಮೀರಿದು ಸಭೆ ಸೇರಿದರು. ಇವರನ್ನು ತಡೆಯಲು ದಸ್ತಗಿರಿಗಳಾದಲ್ಲದೆ ಇವರ ಮೇಲೆ ಹಲವೆಡೆ ಗುಂಡುಹಾರಿಸಲಾಯಿತು. ಆದರೂ ಜಗ್ಗದೆ ಹೆತ್ತುಸಾವಿರದ ವರೆಗೆ ಸಿಕ್ಕರು ಸಭೆಸೇರಿ ತಮ್ಮ ಸಮ್ಮೇಳನವನ್ನು ಯಶಸ್ವಿಯಾಗಿ ಜರಗಿಸಿದರು. ಈ ಪ್ರದೇಶದಲ್ಲಿ ಕರ್ಫ್ಯೂ ಆಜ್ಞೆ ಜಾರಿಗೆ ತಂದಿರುವದಲ್ಲದೆ ಪ್ರತಿಬಂಧಕಾಜ್ಞೆ ಉಲ್ಲಂಘಿಸಿದವರ ದಸ್ತಗಿರಿ ನಡೆಯುತ್ತಿದೆ.

ತಿರುವಾಂಕೂರು ದಿವಾನರಿಗೆ ಜೂರಿ ಇರಿತ.

ತಿರುವಾಂಕೂರು ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿಯವರು ಸಂಗೀತ ಸಭೆಯೊಂದರಿಂದ ಹೊರಗೆ ಬರುತ್ತಿದ್ದಾಗ ಯಾರೋ ಅವರ ಮೇಲೆ ಕೈಮಾಡಿದೆ ಎಂದೂ, ಅವರ ಖಾಸಗಿ ಕಾರ್ಯದರ್ಶಿಯು ಪ್ರಥಮ ಪೆಟ್ಟನ್ನು ತಪ್ಪಿದರೆಂದೂ, ಆತನನ್ನು ನೂಕಿ ಕೂಲೆಗಾರನು ಸಿ. ಪಿ. ಯವರ ಮೇಲೆ ಕೈಮಾಡಿದರೆಂದೂ ಇವರಿಂದ ಸಿ. ಪಿ. ಯವರಿಗೆ ಮುಖದಲ್ಲಿ ಮತ್ತಿತರ ಕಡೆಗಳಲ್ಲಿ ಜಖಂಗಳಾದವೆಂದೂ ಇದೇ ಸಮಯದಲ್ಲಿ ಇಲೆಕ್ಟ್ರಿಕ್ ದೀಪ ಆರಿಹೋದ ಕಾರಣ ಕೊಲೆಗಡುಕನು ಜನರೊಳಗುಗ್ಗಿ ಮಾಯವಾದನೆಂದೂ ತಿಳಿದು ಬಂದಿದೆ. ಸಿ. ಪಿ. ಯವರು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವರು. ಇದರ ಫಲವಾಗಿ ತಿರುವಾಂಕೂರು ಸ್ಟೇಟ್ ಕಾಂಗ್ರೆಸ್ಸಿನ ಅಧ್ಯಕ್ಷರು ಮತ್ತಿತರ ಹಲವರನ್ನು ದಸ್ತಗಿರಿ ಮಾಡಲಾಗಿದೆ. ಕೈಮಾಡಿದನನ್ನ ದಸ್ತಗಿರಿಗೆ ಯೋಗ್ಯ ಸಲಹೆ ಕೊಡುವವರೆಗೆ ಹೆತ್ತುಸಾವಿರ ರೂಪಾಯಿಗಳ ಬಹುಮಾನವನ್ನು ಕೊಡುವದಾಗಿ ತಿರುವಾಂಕೂರು ಸರಕಾರವು ಸಾರಿದೆ. ಆಗಸ್ಟ್ ತಿಂಗಳು ಒಂದರೊಳಗೆ ಆತನ ದಸ್ತಗಿರಿ ಮಾಡಿಸಿದರೆ ಈ ಬಹುಮಾನದ ಎರಡರಷ್ಟು ಕೊಡಲಾಗುವದೆಂದೂ ಸಾರಲಾಗಿದೆ!

ಕಮ್ಯೂನಿಷ್ಟ್ ಪಕ್ಷದಲ್ಲಿ ಒಡಕು?

ಭಾರತೀಯ ಕಮ್ಯೂನಿಷ್ಟ್ ಪಕ್ಷದಲ್ಲಿ ಒಡಕಿನ ಚಿಹ್ನೆಗಳು ತೋರಿಬರುತ್ತಿವೆ ಪಾಕಿಸ್ತಾನದಲ್ಲಿ ತೇಜ್‌ಸಿಂಗ್ ಸ್ವತಂತ್ರ ಎಂಬವರು ಪ್ರತ್ಯೇಕ ಪಾರ್ಟಿಯೊಂದನ್ನು ರಚಿಸಿದ್ದಾರೆ. ಈ ಪಾರ್ಟಿಗೂ ಅಖಿಲ ಭಾರತ ಕಮ್ಯೂನಿಷ್ಟ್ ಪಾರ್ಟಿಗೂ ಸಂಬಂಧವಿಲ್ಲವೆಂದು ತಾ ೪ ಸಚಿವ ಶ್ರೀ ಪಿ. ಸಿ. ಜೋಶಿಯವರು ಒಂದು ಹೇಳಿಕೆಯಲ್ಲಿ ಸಾರಿದ್ದಾರೆ. ಈ ಮಧ್ಯೆ ಸಿಂಧ್ ಮತ್ತು ಬಲೂಚಿಸ್ತಾನಗಳಿಗೆ ಪ್ರತ್ಯೇಕ ಪ್ರತ್ಯೇಕ ಕಮ್ಯೂನಿಷ್ಟ್ ಪಕ್ಷಗಳು ಆಗಲಿವೆ. ಅಲ್ಲಿಯ ಕಮ್ಯೂನಿಷ್ಟ್ ತತ್ವವಾದಿಗಳು ಈ ಮಾರ್ಗದಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಅಖಿಲ ಭಾರತ ಕಮ್ಯೂನಿಷ್ಟ್ ಪಕ್ಷವೊಡನೆ ತಾವು ಸಂಪರ್ಕವಿಟ್ಟುಕೊಳ್ಳುವದಿಲ್ಲವೆಂದು ನಿರ್ಧರಿಸಿದ್ದಾರೆ.

ಇಂಡೋನೇಶಿಯಾ ಕದನ.

ಡಕಾಯಿತ ಡಚ್ಚರು ಇಂಡೋನೇಶಿಯಾದವರ ಮೇಲೆ ಸಾರಿರುವ ಯುದ್ಧವು ಭೀಕರ ರೀತಿಯಿಂದ ನಡೆದಿದೆ. ಡಚ್ಚರು ಈ ಯುದ್ಧದಲ್ಲಿ ವಿಮಾನಗಳನ್ನೂ ಆಧುನಿಕ ಯುದ್ಧಸಾಮಿತ್ಯಗಳನ್ನೂ ಉಪಯೋಗಿಸುತ್ತಿರುವರು. ಡಚ್ಚರಿಗೆ ಹಿನ್ನೆಲೆಯಿಂದ ಬ್ರಿಟಿಷ್, ಅಮೇರಿಕಾಗಳು ಸಹಾಯ ಮಾಡುತ್ತಿರುವವೆಂದು ವಾರ್ತೆ ಬಂದಿದೆ. ಇಂಡೋನೇಶಿಯವು ನಿರ್ಬಲ ದೇಶ. ಅದರಲ್ಲಿ ಶತ್ರುಗಳನ್ನು ಎದುರಿಸುವ ಚೈತನ್ಯವಿಲ್ಲ. ಆದರೂ ಈ ವರೆಗೆ ದೇಶ ಭಕ್ತಿಯಿಂದ ಹೋರಾಡುತ್ತಿದೆ. ಸಹಸ್ರಾರು ಜನರು ಸಾಯುತ್ತಿದ್ದಾರೆ. ಇಂಡೋನೇಶಿಯಾದ ಪೂಜ್ಯ ಮುಖ್ಯಮಂತ್ರಿ ಶಾರೀರರು ಜಗತ್ತಿನ ಸಹಾಯಕ್ಕೆ ಮೊರೆಯಿಟ್ಟಿದ್ದಾರೆ. ಪಂಡಿತ ಜವಾಹರರು ಡಚ್ಚರ ನೀತಿಯನ್ನೂ ಪ್ರಮುಖ ವಿದ್ರೋಹಿಗಳ ಬಿಡಾಸೀನ್ಯವನ್ನೂ ಟೀಕಿಸಿ ಇಂಡೋನೇಶಿಯಾದ ಯುದ್ಧ ನಿಲ್ಲಿಸುವ ಎಚ್ಚರಿಕೆ ಕೊಟ್ಟಿದ್ದಾರೆ. ಭಾರತವು ಸಾಧ್ಯವಾದ ವಸ್ತು, ಧನ, ಜನ ಸಹಾಯವನ್ನು ಇಂಡೋನೇಶಿಯನರಿಗೆ ಕೊಡಲಿರುವದು. ಮುಂಬರುವ ಜಗತ್ಕಿನ ರಾಷ್ಟ್ರಗಳ ಸಭೆಯಲ್ಲಿ ಇಂಡೋನೇಶಿಯಾದಲ್ಲಿಯ ಡಚ್ಚರ ದಬ್ಬಾಳಿಕೆಯನ್ನು ಖಂಡಿಸಿ ಇಂಡೋನೇಶಿಯನರ ಹಿತರಕ್ಷಣೆ ಮಾಡಲು ಭಾರತದ ಪ್ರತಿನಿಧಿ ಮಂಡಳಿಯೊಂದನ್ನು ನೆಹರೂಗಳು ಕಳುಹಿಸಲಿರುವರು. ಏನ್ಯಾದ ವಿದ್ಯಮಾನಗಳಲ್ಲಿ ವಿದೇಶಿಯರು ಈ ರೀತಿ ದಬ್ಬಾಳಿಕೆಯಿಂದ ಕೈಹಾಕುವದನ್ನು ನೆಹರುಗಳು ಖಂಡಿಸಿದ್ದಾರೆ. ಇದು ಜಗತ್ತಿನ ಹಲವು ರಾಷ್ಟ್ರಗಳನ್ನು ಎಚ್ಚರಿಸಿದೆ. ಇಂಡೋನೇಶಿಯನರು ಅಲ್ಲಿಯ ಸ್ವಾಮುಖ್ಯಸಿಗರ ಮೈದಾನನ್ನು ವಶಪಡಿಸಿಕೊಂಡಿರುವರು. ಯುದ್ಧವು ಭಯಂಕರವಾಗಿ ಸಾಗಿದೆ.

ನೌಖಾಲಿಗೆ ೨೬ಫೆಬ್ರವರಿಯಲ್ಲಿಯೇ ಬರುವುದಾಗಿ ಗಾಂಧೀಜಿ.

ತಾವು ನೌಖಾಲಿಗೆ ಆದಷ್ಟು ೨೬ಫೆಬ್ರವರಿಯಲ್ಲಿ ಬರುವುದಾಗಿ ಗಾಂಧೀಜಿ ಬಂಗಾಳ ನಿಮ್ನ ವರ್ಗದ ನಾಯಕರೊಬ್ಬರಿಗೆ ಬರೆದಿದ್ದಾರೆ. ಅವರು ಆಗಸ್ಟ್ ತಾ. ೩ ಯಂದಿರಲ್ಲಿ ನೌಖಾಲಿಗೆ ಹೋಗುವರು.

Reg. No. B. 1550.
'KODAGU' MERCARA. (Coorg).

ಕೊಡಗು

ಸಂಪಾದಕರು—ಪಿ. ಬಿ. ಪೂಣಚ್ಚನವರು] [ವಾರ್ಷಿಕ ಬೆಲೆ ರೂ 4-8-0

ಸಂಪುಟ ೬೬] ತಾರೀಖು ೨೬-೨-೧೯೨೮ ಬೆಳೆ ಪಲ್ಗುಣ ೧೫ [ಸಂಚಿಕೆ ೨೧೦

ಸಂಯೋಜನಾವಾದಿಗಳಿಗೆ ಸವಾಲು.

ಲೇಖಕರು:—'ರುದ್ರವೀಣೆ' ಕೊಡಗು.

ನಾನು ತಾರೀಖು ೨೬-೨-೨೮ ರಲ್ಲಿ 'ಕೊಡಗಿನ ಭವಿಷ್ಯವೆಂಬ ವಿಚಿತ್ರಕಥೆಯನ್ನು ಇದೇ ಪತ್ರಿಕೆಯಲ್ಲಿ ಬರೆದ ಲೇಖನ'ವನ್ನು ಒಕ್ಕಲು 'ಮಾರದವೀಣೆ'ದ. ಪ್ರಾರಂಭದಲ್ಲೇ ಅಂತ್ಯವಾಗಿ ಅಕ್ಷರಗಳಲ್ಲಿ ಸಂಯೋಜನಾವಾದಿಗಳ ಪರಿಚಯವನ್ನು ನೋಡಿದರೆ ಅವರಿಗೆ ಉತ್ತರ ಕೊಡುವ ಬೇತನವಿಲ್ಲವೆನ್ನಬೇಕಾಗುತ್ತದೆ. ಇದ್ದಕ್ಕಿಂದ ಧೋರಣ ವಿಸ್ಮೃಂಧಾ ವಿಚಾರಗಳಲ್ಲಿ ಚಿತ್ತೈದಲಿಂದ ನಲಿದಾಡುತ್ತಿರುವ ಈ ಜನರನ್ನು ಪೇರನಾಗಿ ಕೆಲವು ಪ್ರಶ್ನೆ ಕೇಳಬೇಕೆನಿಸಿದೆ. ಈ ಲೇಖನ ಬರೆಯುವುದಾಗಿದೆ. ಆದಕ್ಕೆ ಮೊದಲು 'ಮರದ ವೀಣೆಯು ಏಕಾಗಿ ಇಂಥಿರುವ ಮಾತು ಬರೆಯಬೇಕಾಗಿದೆ 'ರುದ್ರವೀಣೆ' ಕೈಯಲ್ಲಿ ಪತ್ರಿಕೆ ಬಂದಾಗ ಅದರಲ್ಲಿ 'ಮರದ ವೀಣೆ' ಎಂಬ ಒಣ ತರ್ಕವಲ್ಲಿ 'ಮರದ ವೀಣೆ' ಎಂಬ ಮಿಸ್ಮನವಾಗಿ ವಿಚಾರ ಕಾರಣವೇ ವಿನಹ, ಮುಂದಿನ ಮಾರದ ಲೇಖನವಲ್ಲಿ? 'ರುದ್ರವೀಣೆ'ಯ ಸ್ವರ ಬೀಸುವಾಗಲೆಂದೆ ದವೀಣೆ' ಬೆಚ್ಚಿಬಿದ್ದದ್ದು ಅಚ್ಚರಿಯಾಯಿತು. 'ರುದ್ರವೀಣೆ' ಭಯಂಕರ ಗಾನವೆ! ಅಲ್ಲ. 'ಮರದ ವೀಣೆ'ಯ ಮಾತ್ರು ಅಪಸ್ವರ ಹಾಡಿಕ್ಕಿರುವ ಸಂಯೋಜನಾವಾದಿಗಳ ಅಂತಿಮ ಸಂಗ್ರಾಮ ಸ್ಥಿತಿಯ ಸೂಚನೆ!

ಪೈಕೋರ್ಟು, ಫ್ರೆಂಚ್ ಶಾಲೆಗಳು ದೇಶದ ಭವಿಷ್ಯ ನಿರ್ಮಾಣ ಕಾರ್ಯಕ್ಕೆ ಕಾರಣವಾದ ಮೂಲಭೂತ ಸ್ತಂಭಗಳಲ್ಲ. ದೇಶದ ಆಡಳಿತ, ವಿದ್ಯಾಭ್ಯಾಸ, ಮೊದಲಾದುವೆಲ್ಲವೂ ತರಗುಟ್ಟಿರುವ ಕದಂಬಿಯಂಥಿರುವ ವಸ್ತುಗಳಾದ್ದರಿಂದ ಇಂದಿನ ಈ ಹೊಳ್ಳು ವರ್ಣಾಶ್ರಮಗಳನ್ನು, ಅವುಗಳಿಗೆ ಮಿಚಾರಗಾಗುವ ಹಣವನ್ನು ನೆನೆದುಕೊಂಡು ಕೊಡಗಿನ ಭವಿಷ್ಯದ ವಿಚಾರಕ್ಕೆ ಇವುಗಳನ್ನು ಒಡ್ಡಲೇಕೆ? ವರ್ಧಾ ಶಿಕ್ಷಣದ ಹೆಸರು ಕೆಡುವಂತೆ ಮಾಡಿಬಿಡಲಿ. ಅದರ ಶ್ರಮದ ಶಿಕ್ಷಣವನ್ನು ಅಲ್ಲಂ ತೀಗಳವರೆಗಾದರೂ ನಡೆದ ಅನುಭವ 'ರುದ್ರವೀಣೆ'ಗೆ ಇದೆ ವರ್ಧಾ ಶಿಕ್ಷಣ ಬಂದರೆ ದೇಶದಲ್ಲಿ ಫ್ರೌಢ್ಯವಿದ್ಯಾಲಯಗಳೆಲ್ಲವೂ ಎಂಬ ಮೂಢ ನಂಬಿಕೆಯನ್ನು ಇನ್ನಾದರೂ ಬಿಡಬೇಕು. ಕೇವಲ ನಾಲ್ಕಕ್ಷರ ಕಲಿಯುವದರೊಂದಿಗೆ ಹೊಟ್ಟೆ ತುಂಬಿಕೊಳ್ಳುವ ಒಂದು ಉದ್ಯಮದ ಪರಿಚಯವೇ ವರ್ಧಾ ಶಿಕ್ಷಣವಲ್ಲ. ವಿಜ್ಞಾನ ಶಾಸ್ತ್ರ, ಸಾಹಿತ್ಯ, ಮೊದಲಾದುವುಗಳ ಬೆಳವಣಿಗೆಗೆ ಬೇರೆ ವಿಧಾನವು ಇದೆ. ನೈಜ ಶಿಕ್ಷಣ ಬಗ್ಗೆ ಅಲೋಚನೆ ಬೇರೆಯ ವಿಷಯವಾದ್ದರಿಂದ ಅದನ್ನು ವಿವರಿಸುವುದಕ್ಕೆ ಪ್ರಯತ್ನ ಮಾಡಲಿಲ್ಲ. ಪ್ರಕೃತ ವಿಷಯಕ್ಕೆ ಬರೋಣ.

ಇಂದಿನ ಬಾಲಕರ ಭವಿಷ್ಯ ಜೀವನವನ್ನು ಸಂಯೋಜನಾವಾದಿಗಳು ಹೇಗೆ ಪೂರ್ಣಗೊಳಿಸುತ್ತಾರೆ? ಈ ವಿಚಾರದಲ್ಲಿ ಇವರು ಸ್ವತ್ಸ್ಯಾಲ್ಲಿನ ಪ್ರಾಂತೀಯರಿಗಿಂತ ವಿಶೇಷವಾಗಿ, ಸಂಸ್ಕೃತಿಯಲ್ಲಿ, ಸೌಕರ್ಯದಲ್ಲಿ, ಶಾಲೇ ದರ್ಜೆಯಲ್ಲಿ ಇಲ್ಲಿರುವ ಬಿನ್ನತೆಗಳು ಬಿನೆ. ಇವರಲ್ಲಿ ಹೆಚ್ಚಾಗಿ ಸರ್ಕಾರಿ ಉದ್ಯೋಗಸ್ಥರೇ ವಿನಃ ಪಟ್ಟಿ ಳುರುಷ 'ಮರದ ವೀಣೆ'ಗೆ ಇವರು ಮೂಲ ಬೆಂಬಲಿಗರಾಗಿದ್ದಾರೆ? ಮುಂದೆ ಈ ಪ್ರಶ್ನೆಗಳಿಗೆ ಉತ್ತರವಿಲ್ಲದೆ ಹೋದರೆ ಸಂಯೋಜನಾವಾದಿಗಳು ಸಂಪೂರ್ಣ ಅಧಿಕಾರಿಗಳ ನೇಮಕವಾಗಬಹುದೆ? ಹಾಗಾಗಿ ಎಷ್ಟು ಜನರಿಗೆ ಉದ್ಯೋಗ ದೊರಯಬಹುದು? ಸಂಯೋಜನೆಯಾದರೆ ಕೊಡಗಿನಲ್ಲಿ ಎಷ್ಟು ಸರಕಾರಿ ಅಧಿಕಾರಿಗಳ ನೇಮಕವಾಗಬಹುದು? ಹಾಗೆಂದು

ಕೊ ಡ ಗು

ತಾ. ೮-೮-೧೯೪೭ ನೇ ಶುಕ್ರವಾರ

ಸ್ವಾತಂತ್ರ್ಯ ದಿನಾಚರಣೆಯ ಮಹತ್ವ.

ಆಗಸ್ಟ್ ೧೫ ನೇ ತಾರೀಕು ಪಟ್ಟದ ದಿನ. ದೀರ್ಘಕಾಲದ ಹೋರಾಟದ ನಂತರ, ಬಹು ಕಷ್ಟ, ನಷ್ಟ, ತ್ಯಾಗಗಳ ನಂತರ, ಪೂರ್ಣ ಸ್ವಾತಂತ್ರ್ಯವನ್ನೆದ್ದಿದ್ದರೂ ಅಂಶತಃವಾದರೂ ಜವಾಬ್ದಾರಿ ಈ ದಿನ ಬರಲಿದೆ. ಈ ದಿನದಿಂದ ಸ್ವಾತಂತ್ರ್ಯ ವೇದಿಕೆಯು ಪಟ್ಟಿಲುಗಳನ್ನು ಏರುತ್ತಾ, ಪೂರ್ಣ ಸ್ವಾತಂತ್ರ್ಯದ ಗುರಿಯನ್ನು ಭಾರತವು ಶೀಘ್ರ ಮುಟ್ಟುವದಿದೆ. ಆಗಸ್ಟ್ ೧೫ ನೇ ದಿನ ಚರಿತ್ರಾರ್ಹ ದಿನವಾದರೂ ಆ ದಿನಕ್ಕೆ ಒಂದು ರೀತಿಯ ಮೋಡ ಕವಿದಂತಿದೆ. ಹಿಂದೂಸ್ಥಾನವನ್ನು ಇಬ್ಭಾಗ ಮಾಡಿದುದು ಪ್ರತಿಯೊಬ್ಬರ ಹೃದಯವನ್ನು ಬೇಧಿಸಿರುವದೊಂದು. ಕೋಮು ವಾರು ರಾಜಕೀಯದ ಹೆಸರಿನಿಂದ ಇನ್ನೂ ನಡೆಯುತ್ತಿರುವ ಹತ್ಯಾಕಾಂಡ ಇನ್ನೊಂದು. ಈ ಕಷ್ಟ ನೋಡಲಿಗಳು ಸ್ವಾತಂತ್ರ್ಯ ಭಾನುವಿನ ಉದಯದ ದಿವ್ಯ ಪ್ರಭೆಗೆ ತಮ್ಮ ಕಪ್ಪು ಛಾಯೆಗಳನ್ನು ಒಡ್ಡುತ್ತಿವೆ ಆದರೂ ಆ ದಿನವನ್ನು ವಿಶಾಲ ರೀತಿಯಿಂದ, ವಿಜೃಂಭಣೆಯಿಂದ ಆಚರಿಸುವದು ಅಗತ್ಯ. ಬ್ರಿಟಿಷರು ಅಧಿಕಾರ ಕ್ಕಾಗಿನೂಡಿ ಜೋಗುವರೆಂಬ ಮಾತು ಪ್ರತಿ ಹಳ್ಳಿಗೆ, ಪ್ರತಿ ಮನೆಗೆ ಮುಟ್ಟಬೇಕು. ಭಾರತದ ನೂತನ ರಾಷ್ಟ್ರಧ್ವಜವು ಬ್ರಿಟಿಷ್ 'ಯೂನಿಯನ್ ಜಾಕ್' ನೊಡನೆ ಹೋರಾಡಿ ವಿಜಯಿಯಾಗಿದೆ. ಭಾರತೀಯರ ಆತ್ಮ ಆಕಾಂಕ್ಷೆಗಳ ದ್ಯೋತಕವಾದ ಈ ಧ್ವಜವು ಎಲ್ಲೆಡೆಯಲ್ಲೂ ಹಾರಾಡುವಂತೆ ಮಾಡಬೇಕು. ಈ ದಿನಾಚರಣೆಯಿಂದ ಪ್ರತಿಯೊಬ್ಬನಲ್ಲಿಯೂ ತಾನಿನ್ನು ಸ್ವತಂತ್ರದೇಶದ ನಾಗರೀಕನೆಂಬ ಭಾವನೆ ಮೆಟ್ಟಿಬಂತೆ ಮಾಡಬೇಕು.

ಆಗಸ್ಟ್ ೧೫ ದಿವಂಗತ ಮಹದೇವ ದೇಸಾಯಿಯವರ ಪುಣ್ಯತಿಥಿಯೂ ಆಗಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದ, ಅಧ್ಯಾತ್ಮಿಕ ಶಕ್ತಿಯಿಂದ ಮೂಡ ವರ್ಗಣದ ಹಿತಸಾಧಿಸಲು ತಪೋನಿರತರಾದ ಪುಣ್ಯಪುರುಷ ಅರವಿಂದ ಘೋಷರ ಜಯಂತಿ ದಿನವೂ ಇದಾಗಿದೆ. ಹಿಂದೂಸ್ಥಾನದಲ್ಲಿ ಮೂಲೆಮೂಲೆಗಳಲ್ಲಿ, ಜಗತ್ತಿನಲ್ಲಿ ನಾವೊಂದು ಹೊಸ ಯುಗವನ್ನು ಪ್ರಾರಂಭಿಸಿ ದ್ದೇವೆಂಬ ಅರಿವಿನಿಂದ ಈ ದಿನ ಆಚರಿಸಲ್ಪಡಬೇಕು.

ಈ ದಿನಾಚರಣೆಯಲ್ಲಿ ಜಾತಿ, ಮತಗಳ, ಅಧಿಕಾರ ದರ್ಪಗಳ ಬೇಧವಿಲ್ಲದೆ ಎಲ್ಲರೂ ಭಾಗಿಗಳಾಗಬೇಕು. ಈ ವರೆಗಿದ್ದ ಈ ಭಾವನೆಗಳ ಸಮಾಧಿಯಾಗಿ ನಾವೆಲ್ಲರೂ ಭಾರತೀಯ ಮಕ್ಕಳು, ಸಹೋದರರೆಂಬ ಭಾವನೆಯಿಂದ ಸಹಕರಿಸಿ ಆಚರಿಸಬೇಕು. ಈ ಹಾರಿಕೆ ಮುಸ್ಲಿಂ ಲೀಗಿನ ನಾಯಕರುಗಳು ಈ ದಿನಾಚರಣೆಯಲ್ಲಿ ಲೀಗಿನವರು ಕಾಂಗ್ರೆಸ್ಸು, ಮತ್ತಿತರ ಹಿಂದುಗಳೊಡನೆ ಸಹಕರಿಸಿ ಈ ದಿನವನ್ನು ಆಚರಿಸಬೇಕೆಂದು ಪ್ರಕಟಣೆ ಹೊರ ಡಿಸಿದ್ದಾರೆ. ಬೆಂಗಳೂರು, ಕೊಡಗು ಪ್ರಾಂತೀಕ ಮುಸ್ಲಿಂ ಲೀಗಿನ ಪ್ರೆಸಿಡೆಂಟರೂ ಈ ರೀತಿಯ ಅಪೀಲು ಮಾಡಿದ್ದಾರೆ ಇದು ಶುಭ ಚಿಹ್ನೆ. ಹಿಂದಿನ ಕಹಿ ವಿಷಯಗಳೆಲ್ಲವನ್ನೂ ಮರೆತು ಹೊಸ ಜೀವನವನ್ನು ಪ್ರಾರಂಭಿಸುವ ಮಹತ್ವದ ದಿನ ಆಗಸ್ಟ್ ೧೫.

ತಾರೀಕು ೧೫ಕ್ಕೆ ನಮ್ಮ ಜವಾಬ್ದಾರಿ ಮುಗಿದಂತಾಗಲಿಲ್ಲ. ಸ್ವಾತಂತ್ರ್ಯ ಸೂರ್ಯನ ಉದಯದೊಂದಿಗೆ ನಮ್ಮೆಲ್ಲರ ಮೇಲೆ ಅಗಾಧ ಜವಾಬ್ದಾರಿಗಳು ಬರಲಿವೆ. ಹೊಟ್ಟೆಗೆ ತುತ್ತು ಅನ್ನವಿಲ್ಲದೆ, ಮೈಗೆ ಸರಿಯಾದ ಉಡಿಪೆಯಿಲ್ಲದ ಜನರಿಗೆ ಆವರ ಸ್ಥಿತಿ ಸುಧಾರಿಸುವ ವಿನಹ ಸ್ವಾತಂತ್ರ್ಯವು ಅರ್ಥಹೀನವಾಗಿದೆ. ಆವರ ಬಾಗಿಲಿಗೆ ಸ್ವಾತಂತ್ರ್ಯವು ಇಷ್ಟೆ, ಬಟ್ಟೆಗಳ ರೂಪಿಸಿಸ್ಥಿಯೇ ಹೋಗಬೇಕು. ಹಿಂದುಳಿದ ನರು, ಅಲ್ಪ ಸಕ್ಷೇಯರು ಎಂಬವರಿಗೂ ಸರಿಯಾದ ಪುರಸ್ಕಾರ, ಭರವಸೆಗಳಲ್ಲಿದ್ದರೆ ಸ್ವಾತಂತ್ರ್ಯವನ್ನ ಸ್ವಾತಂತ್ರ್ಯವೆನಿಸದು. ಸರ್ವರಿಗೂ ಸಮಾನರೀತಿಯಿಂದ, ಸರ್ವ ಅನುಕೂಲತೆಗಳಿಂದ ಬದುಕಿ ಬಾಳುವ ಮೂಲಸಿದ್ಧವಾದ ಹಕ್ಕು ಸ್ವಯಸ್ಸು ಕಾರ್ಯರೂಪವಲ್ಲಿ ಬರುವನರಿಗೆ ಸ್ವರಾಜ್ಯ ಫಲಕಾರಿಯಲ್ಲ. ಈ ಮಹಾಯಜ್ಞಾಚಾರ್ಯರಿನಮ್ಮೆಲ್ಲರ ಮೇಲಿದೆ. ಸಹಸ್ರಾರು ವರ್ಷಗಳಿಂದ ಬಂದಿರುವ ಮೂಢ ಸಂಪ್ರದಾಯಗಳ ಚಿಪ್ಪನ್ನು ಒಡೆದು ಅವುಗಳ ಬಂಧನದಲ್ಲಿ ಪರತಪಿಸುತ್ತಿರುವವರ ಬಿಡುಗಡೆ ಮಾಡಬೇಕು. ಅಜ್ಞಾನ ವಿಚಾರಗಳ ಹೆಸರಿನಲ್ಲಿ ನಡೆಯುತ್ತಿರುವ ಕ್ರೂರ ಪದ್ಧತಿಗಳನ್ನು ಉಚ್ಚಾಟಿಸಿಬೇಕು ಸೋಗಿನಿಂದ ಸಾಗುತ್ತಿರುವ ದಬ್ಬಾಳಿಕೆಗಳನ್ನು ನಿರ್ನಾಮಗೊಳಿಸಿ ಸಮೂಹಾಧಿಕಾರವೆ, ಸಮಾಜವೆಂಬ ಶವದ ಸಮಸ್ಯೆಯ ಸಮೂಜವನ್ನು ರೂಪಿಸಬೇಕು.

ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗುವರು. ಇದರಿಂದ ಭಾರತೀಯರ ಹೋರಾಟ ಮುಗಿಯಲಾರದು. ಆ ಘನಕಾರ್ಯವನ್ನು ಸಮರ್ಥವಾಗಿ ನಡೆಯುವಂತೆ ಮಾಡಲು ಕಾರ್ಯಪ್ರವೃತ್ತರಾಗಬೇಕು. ಆ ಕಾರ್ಯಕ್ಕೆ ಸಮರ್ಥ ನಾಯಕರ ಆಯ್ಕೆ ಮಾಡಬೇಕು. ಆಗಲೇ ಸ್ವಾತಂತ್ರ್ಯ ಫಲ ಸಿದ್ಧಿಸುವದು.

ಮತದಾನ.

ಬ್ರಿಗೇಡಿಯರ್ ಕೊಡಂದೇರ ಕಾರ್ಯಪ್ಪನವರನ್ನು ಮೇಜರ್ ಜನರಲಾಗಿ ನೇಮಿಸಿರುವದಾಗಿ ವಾರ್ತೆ.

ಯುದ್ಧೋತ್ತರ ಪುನರ್ವಚನಾ ಅಭಿಸಿನ ಗುಪ್ತಸ್ಥಾನದಲ್ಲಿದ್ದ ಶ್ರೀ ರೂಪ್ ಸಿಂಗರು ತಾ ೫-೮-೪೭ ರಲ್ಲಿ ಶಿವಾಧೀನರಾದರು.

ಮಂಡಿಪೇಯಲ್ಲಿ ಈ ವಾರ ಮಳೆ ಬಹಳ ಕಡಿಮೆ ಆಗಿದೆ. ಒಟ್ಟು ೪೮ ಸೆಂಟು ಆಗಿದೆ. ಕೊಡಗಿನ ಹಲವು ಭಾಗಗಳಲ್ಲಿ ಪ್ರಮುಖ್ಯವಾಗಿ ದಕ್ಷಿಣ ಕೊಡಗಿನಲ್ಲಿ ಮಳೆಯಿಲ್ಲದೆ ಭೂಮಿ ಪಾಳಾಬಿಡುವ ಭಯವಿದೆ.

ತಾರೀಕು ೩೧-೭-೪೭ನೇ ಗುರುವಾರ ಸಾಯಂಕಾಲ ೭ ಗಂಟೆಗೆ ಕಾವೇರಿ ಆಶ್ರಮದಲ್ಲಿ 'ಕರ್ನಾಟಕ ಸ್ಟಾರ್' ಚಿತ್ರದ ಪ್ರಥಮ ಪ್ರದರ್ಶನವನ್ನು ಸಂಗೀತ ಕಛೇರಿ ನಡೆಯಿತು.

ಹರಿಕಥಾ ವಿದ್ವಾನ್ ಶ್ರೀ ಬಿ ಕೆ ಗೋಪಾಲದಾಸರು ತಾರೀಕು ೩-೮-೪೭ ನೇ ರವಿವಾರ ಸಂಜೆ ಮುನ್ಸಿಪಲ್ ಹಾಲಿನಲ್ಲಿ ಬಹು ಸ್ವಾರಸ್ಯವಾಗಿ ಹರಿಕಥೆಯೊಂದನ್ನು ಮಾಡಿದರು.

ಕೊಡಗಿನ ಭವಿಷ್ಯಕ್ಕಿನ ತೀರ್ಮಾನದ ವಿಷಯ ರಾಜ್ಯಪುನರ್ನಾ ಸಮಿತಿಯ ಸದಸ್ಯರುಗಳಿಗೆ ಸೂಚಿತ ಕೊಡಲು ಕೂರ್ಗಗನ್ನು ಪ್ರತ್ಯೇಕಿಸಿಟ್ಟುಕೊಳ್ಳಬೇಕೆಂಬ ಅಭಿಪ್ರಾಯವಿರುವ ಶ್ರೀ. ಪಿ. ಸಿ ಜೆಳ್ಳಪ್ಪ ಮತ್ತು ತಿಕೆ ಪಿ ಕರುಂಬಯ್ಯ ಇವರುಗಳೂ ಕೊಡಗನ್ನು ಬೆಂಬಿ ವ್ಯಾಂತಕ್ಕೆ ಸೇರಿಸಬೇಕೆನ್ನುವ ಶ್ರೀಗಳಾದ ಎನ್ ಸೋಮಣ್ಣ, ಕೆ. ಮಲ್ಲಪ್ಪ, ಎನ್. ಎಸ್ ರಾಮಮೂರ್ತಿ, ಮತ್ತು ಬಿ. ಎ ಚೆಳ್ಳಪ್ಪ ಇವರುಗಳು ದೆಲ್ಲಿಗೆ ಹೋಗಿದ್ದಮೂ ವಾಪಾಸು ಬಂದಿರುವರು.

ಜೇಫ್ ಕಮಿಷನರ ವ್ಯಾಂತಗಳಿಗೆ ಯಾವ ರೀತಿಯ ಸುಧಾರಣೆಗಳನ್ನು ಕೊಡಬೇಕೆಂಬ ವಿಷಯ ಪರಿಶೀಲಿಸಿ ಸಿಕ್ಕೆಂಟರು ತಿಂಗಳು ಅವ್ಯೆರಿನೊಳಗೆ ವರದಿ ಮಾಡಲು ಏಳು ಜನರಿಂದ ಕೂಡಿದ ಸಮಿತಿಯೊಂದನ್ನು ರಾಜ್ಯಪುನರ್ನಾ ಸಮಿತಿಯು ನೇಮಿಸಿದೆಯೆಂದು ತಿಳಿಯಬರುತ್ತದೆ.

ಕೊಡಗು ಮತ್ತು ಬೆಂಗಳೂರಿನ ಮುಸ್ಲಿಮರ ಮುಂದಿನ ಹಿತರಕ್ಷಣೆಯ ವಿಷಯದಲ್ಲಿ ಕೊಡಗು ಬೆಂಗಳೂರು ಪ್ರಾಂತೀಕ ಮುಸ್ಲಿಂ ಲೀಗಿನ ಪ್ರೆಸಿಡೆಂಟರಾದ ಶ್ರೀ ಮಂಝೂರ್ ಖಾನರೂ, ಶ್ರೀ ಹುಸೇನ್ ಖಾನ್‌ರವರೂ ದೆಲ್ಲಿಗೆ ಹೋಗಿ ಲೀಗ್ ಮುಂದಾಳುಗಳನ್ನು ಕಂಡು ಬಂದಿರುವರು.

ನೆಹರೂರವರ ಮಂತ್ರಿ ಮಂಡಲ.

ಪಂಡಿತ ಜವಾಹರ್‌ಲಾಲ್ ನೆಹರೂರವರು ಅಡ್ವೊ ಜಾಯ್ ವೌಂಟ್ ಬ್ಯಾಟನ್‌ರವರಿಗೆ ಒಪ್ಪಿ ಮಂತ್ರಿ ಮಂಡಳದ ಮಂತ್ರಿಗಳ ಹೆಸರನ್ನೊಳಗೊಂಡ ಕಟ್ಟಳೆಯ ಪಟ್ಟಿಯನ್ನು ಒಪ್ಪಿಸಿದರೆಂದು ವರದಿಯಾಗಿದೆ. ನೆಹರೂರವರು ಒಪ್ಪಿಸಿದ ಆ ಪಟ್ಟಿಯಲ್ಲಿ ಈ ಕೆಳಗೆ ಕಂಡವರ ಹೆಸರುಗಳಿವೆಯೆಂದೂ ಗೊತ್ತಾಗಿದೆ:-

೧ ಪಂಡಿತ ಜವಾಹರ್‌ಲಾಲ್ ನೆಹರೂ—ಪ್ರಧಾನಾಮಾತ್ಯ; ವಿದೇಶಾಂಗ ಮತ್ತು ಕಾಮನ್ ವೆಲ್ತ್ ರಿಲೇಷನ್ಸ್.

೨ ಸರ್ದಾರ್ ವಲ್ಲಭಭಾಯಿ ಪಟೇಲ್—ಒಳಾಡಳಿತ ಮಂತ್ರಿ, ಇನಾರ್ಮೇಷನ್, ಬ್ರಾಡ್‌ಕಾಸ್ಟಿಂಗ್ ಮತ್ತು ಸಂಸ್ಥಾನಿಕ ಇಲಾಖೆ.

೩. ಡಾ. ರಾಜೇಂದ್ರ ಪ್ರಸಾದ್—ಆಹಾರ ಮತ್ತು ವ್ಯವಸಾಯ ಮಂತ್ರಿ.

೪. ಮೌಲಾನಾ ಅಬುಲ್ ಕಲಾಂ ಆಜಾದ್—ವಿದ್ಯಾ ಮಂತ್ರಿ.

೫. ರಾಜಕುಮಾರಿ ಅಮೃತ ಕೌರ್—ಆರೋಗ್ಯ ಖಾತಾ ಮಂತ್ರಿ.

೬ ಸರ್ದಾರ್ ಬಲದೇವ ಸಿಂಗ್—ರಕ್ಷಣಾ ಮಂತ್ರಿ.

೭ ಡಾ. ಜಾನ್ ಮಥಾಯ್—ಸಾರಿಗೆ ಸೌಲಭ್ಯ ವ್ಯವಸ್ಥಾ ಮಂತ್ರಿ.

೮ ಅಲಾಮ್ ರಾಫಿ ಅಹ್ಮದ್ ಕಿದ್ವಾಯಿ—ವ್ಯವಸಾಯ ವ್ಯವಸ್ಥಾ ಮಂತ್ರಿ.

೯. ಸರ್. ಆರ್. ಕೆ. ಷಣ್ಮುಗಂ ಚೆಟ್ಟಿ—ಹಣಕಾಸಿನ ಮಂತ್ರಿ

೧೦. ಡಾ. ರಾಜೇಂದ್ರಪ್ರಸಾದ್ ಮುಖರ್ಜಿ—ಖನಿಜ ಮತ್ತು ವಿದ್ಯುತ್ ವ್ಯವಸ್ಥಾ ಮಂತ್ರಿ

೧೧ ಶ್ರೀ ಜಗಜೀವನ್‌ರಾಂ—ಕಾರ್ಮಿಕ ಮಂತ್ರಿ.

೧೨. ಡಾ. ಬಿ. ಆರ್. ಅಂಬೇಡ್ಕರ್—ನ್ಯಾಯಾಂಗ ಮಂತ್ರಿ.

೧೩. ಶ್ರೀ ಸಿ. ಹೆಚ್. ಭಾಭಾ—ಕೈಗಾರಿಕಾ ಮತ್ತು ಮೇಲ್ವಿಚಾರಣಾ ಮಂತ್ರಿ.

೧೪ ಶ್ರೀ ಎನ್. ವಿ ಗಾಡ್ಗಿಲ್—ವಾಣಿಜ್ಯ ಮಂತ್ರಿ.

ವಿನಂತಿ.

ಈ ಆಗಸ್ಟ್ ತಾರೀಕು ೧೫ ದಿನ "ಸ್ವಾತಂತ್ರ್ಯದಿನ"ವಾಗಿದೆ; ಈ ಸಂದರ್ಭದಲ್ಲಿ ಕೊಡಗಿನ ಮುಸ್ಲಿಮರು ಕಾಂಗ್ರೆಸ್ ಮತ್ತಿತರ ಪ್ರಾಂತೀಕ ಸಂಸ್ಥೆಗಳೊಡನೆ ಹೃತ್ಪೂರ್ವಕವಾಗಿ ಸಹಕರಿಸಿ ಆದಿನವನ್ನು ತಕ್ಕ ಗೌರವ ಮತ್ತು ಭಕ್ತಿಯಿಂದ ಆಚರಿಸಬೇಕಾಗಿ ಈ ಮೂಲಕ ವಿನಂತಿ ಮಾಡುತ್ತೇನೆ.

ಅಬ್ದುಲ್ ಮಯ್ಯೀದ್ ಖಾನ್,
ಪ್ರೆಸಿಡೆಂಟ್,
ಬೆಂಗಳೂರು-ಕೊಡಗು ಪ್ರಾಂತೀಕ,
ಮುಸ್ಲಿಂಲೀಗು.

ಸೊಪ್ಪು ಮತ್ತು ಕಾಯಿ ಪಲ್ಯಗಳು.

ಸೊಪ್ಪು ಮತ್ತು ಕಾಯಿಪಲ್ಯಗಳು ನಮ್ಮ ಆಹಾರದ ಪದಾರ್ಥಗಳಲ್ಲಿ ಮುಖ್ಯವಾದ ಪದಾರ್ಥಗಳು. ಇವುಗಳು ಕೆಲವು ದೇಹಕ್ಕೆ ಉಗ್ರವಾಸ ಲವಣವನ್ನು ಕೊಟ್ಟರೆ, ಮತ್ತೆ ಕೆಲವು ಅನ್ನ ಸತ್ವಗಳನ್ನು, ಮತ್ತೆ ಕೆಲವು ಲೋಹ ಲವಣಗಳನ್ನೂ ಸರಬರಾಯಿ ಮಾಡುತ್ತವೆ. ಆದ್ದರಿಂದ ಸೊಪ್ಪು ಮತ್ತು ಕಾಯಿಪಲ್ಯಗಳು ನಮ್ಮ ದೇಹಕ್ಕೆ ತುಂಬ 'ಸಹಕಾರಿ' ಆಹಾರವಾಗಿವೆ.

2 ಕಾಯಿಪಲ್ಯಗಳಲ್ಲಿ ನೂರು ವಿಧವಿದೆಯೆಂದು ಹೇಳಬಹುದು. ಬೇರು ಗಡ್ಡೆಗಳು. ಬಾಳೆಗಡ್ಡೆ, ಗೆಣಸು, ಮೂಲಂಗಿ, ಕ್ಯಾರೆಟ್ ಮತ್ತು ಹೀರುಗಡ್ಡೆ ಜಾತಿಗೆ ಸೇರಿದವು.

3 ಎರಡನೆಯದು ಬೆಸುರು ಸೊಪ್ಪು ಗಳು.

4 ತೊಂಡಲಿಯಂಥವು ಬದನೆ, ಬೆಂ, ಕಾಯಿ, ಗೌಳಿ ಮೆಣಸಿನಕಾಯಿ ಮೊದಲಾದವು.

5 ಬೀಜ ಗಿಡ್ಡೆಗಳಲ್ಲಿಗುವುದು ಮುಳ್ಳುಹಂದಿ ಗೆಣಸು. ಕಾಯಿದ ಹಿಸ್ಸಿ ಬಳ್ಳಿ ಅಪ್ಪಳ್ಳಾಗಿ ಗಿಡಗಳ ಮೇಲೆ ಹಬ್ಬುವ ಮಾಲಗಿಡ ಬೆಳ್ಳುಳ್ಳಿ ಎಲೆಗಳು ಮೊದಲಾದವು.

6 ಮೂರು ಸಿಪ್ಪೆಗಳಲ್ಲಿ ಸುತ್ತಿರುವ ಕಾಯಿಪಲ್ಯಗಳು. ಇವುಗಳಲ್ಲಿ ಬಹಳ ಎಚ್ಚರಿಕೆಯಿಂದ ಆರಿಸಿ ಕೊಳ್ಳಬೇಕು. ಕೆಲವು ಕಾಯಿಪಲ್ಯಗಳಲ್ಲಿ ಸಿಪ್ಪೆಯ ಕೆಳಗೆ ಹುಳುಗಳು ಮನೆ ಮಾಡಿರುತ್ತವೆ. ಇಂಥ ಕಾಯಿಪಲ್ಯಗಳನ್ನು ಬೆಳಕಿಗೆ ಹಿಡಿದು ನೋಡಿ ಕೊಳ್ಳಬೇಕು. ಕೆಲವು ಕಾಯಿಪಲ್ಯಗಳನ್ನು ಬೇಯಿಸಿದ ಮೇಲೆ ಸಿಪ್ಪೆ ತೆಗೆಯಬೇಕಾಗುತ್ತದೆ. ಇಂಥವುಗಳನ್ನು ಬೇಯಿಸಿ ಸಿಪ್ಪೆ ತೆಗೆದು ಉಪಯೋಗಿಸಿದರೆ ಒಳ್ಳೆಯದು. ಆದರೆ ಇವರು ಸಮಾಜದಿಂದ ಕೆಲವೊತ್ತಿನ ಮಟ್ಟಿಗಾದರೂ ದೂರವಾಗಿರಬೇಕು.

7 ಸಣ್ಣವು ತುಂಬಾ ಬಲಿಯದ ಬಾರದು. ಎಳೆಯ ಬೀಜಸಿದಾಗ ಬಲ್ಲವರು ಎಳೆಯವನ್ನೇ ಉಪಯೋಗಿಸುತ್ತಾರೆ. ಸೊಪ್ಪಿನ ಬೇಗನೆ ಬೇಯಿಸುವುದಕ್ಕಾಗಿ ಸೋಡ ಪುಡಿಯನ್ನು ಸೇರಿಸಿದರೂ ಅದನ್ನು ಹಾಕುತ್ತಾರೆ. ಇದನ್ನು ಒಪ್ಪಲಾಗಿ ಸೌಖ್ಯ ದಾಯಕವಾದ ಸೋಡವನ್ನು ಸಾರಿದರೆ ಅದನ್ನು ಸಿಪ್ಪೆಯ ಬೇಯಿಸುವಾಗ ಹಾಕಿ ಬೇಯಿಸಿದ ನೀರನ್ನು ಚೆಲ್ಲಿ ಬಿಡಬೇಕು. ಹಸಿರು ಸೊಪ್ಪನ್ನು ಕತ್ತರಿಸುವ ಮೊದಲು ಚೆನ್ನಾಗಿ ತೊಳೆದು ಉಪಯೋಗಿಸಬೇಕು. ಸೊಪ್ಪಿನ ಕಡಿದ ಸೇವನೆಯಿಂದ ಅನೇಕ ಖಾಯಿಲೆಗಳು ಗುಣವಾಗುತ್ತವೆ. ಇವುಗಳಲ್ಲಿ ಮುಖ್ಯವಾದುವು ಹೃದಯ ಸಂಬಂಧ ಖಾಯಿಲೆಗಳು, ಸಕ್ಕರೆ ಮೂತ್ರ ಮತ್ತು ರಕ್ತದ ಒತ್ತಡದ ಖಾಯಿಲೆ. ಸೊಪ್ಪುಗಳಲ್ಲಿ ಮುಖ್ಯವಾಗಿ ಕ್ಯಾಲೆಜ್, ಲೆಟ್ಯೂಸ್, ಕಾಲಿಫ್ಲವರ್, ಕೀರೆಸೊಪ್ಪು ಮುಂತಾದುವುಗಳು. ಕುಂಬಳದ ಸೊಪ್ಪಿನಲ್ಲಿ ಕುಂಬಾ ಕ್ಯಾಲ್ಸಿಯಂ ಇರುವುದರಿಂದ ಇದನ್ನು ಚೆನ್ನಾಗಿ ಉಪಯೋಗಿಸಿದರೆ ದೇಹಕ್ಕೆ ಪುಷ್ಟಿ ಯೋಜನವುಂಟು.

8 ಬದನೆ, ಕುಂಬಳ, ಸೌತೆ, ಹೆಂಡೆ ಮುಂತಾದ ಕಾಯಿಪಲ್ಯಗಳಲ್ಲಿಯೂ 'ಎ' ಮತ್ತು 'ಬಿ' ಜನ್ನ ಸತ್ವಗಳೂ, ಲೋಹ, ಲವಣಾಂಶಗಳು ಇವೆ. ಸೌತೆಕಾಯಿಸಲ್ಲಿ ಕ್ಯಾಲ್ಸಿಯಂ ಜಾಸ್ತಿ ಇದೆ. ಮತ್ತು ಇದು ಬೇರೆ ಪದಾರ್ಥಗಳ ಜೀರ್ಣಕ್ಕೆ ಸಹಾಯಮಾಡುತ್ತದೆ.

9. ಒಬ್ಬ ಮನುಷ್ಯನ ಆಹಾರದಲ್ಲಿ ಪ್ರತಿದಿನ 6 ಔನ್ಸ್ ಗೆಡ್ಡೆಗೆಣಸುಗಳು, 4 ಔನ್ಸ್ ಹಸುರು ಸೊಪ್ಪುಗಳೂ ಇದ್ದೇ ಇರಬೇಕು.

10. ಕಾಯಿಪಲ್ಯಗಳನ್ನು ಬಹಳ ಎಚ್ಚರದಿಂದ ಬೇಯಿಸಬೇಕು. ಅವುಗಳ ಮೇಲಿನ ಸಿಪ್ಪೆಯನ್ನೂ ದಪ್ಪನಾಗಿ ಸೀಳಿ ತೆಗೆಯಕೂಡದು. ಏಕೆಂದರೆ ಮುಖ್ಯವಾದ ಅನ್ನ ಸತ್ವಗಳೂ, ಲೋಹ ಲವಣಗಳೂ ಆ ಸಿಪ್ಪೆಗೆ ಬಹಳ ಹತ್ತಿರದಲ್ಲಿ ಇರುತ್ತವೆ. ಬೇಯಿಸುವಾಗ ಮುಚ್ಚಿದ ಪಾತ್ರೆಗಳನ್ನು ಉಪಯೋಗಿಸಿದರೆ, ಜೀವ ಸತ್ವಗಳು ಗಾಳಿಗೆ ತಾಗಲಿ ನಷ್ಟವಾಗುವುದಿಲ್ಲ.

11 ನಮ್ಮ ಕೊಡಗು ಪೈರದಲ್ಲಿ ಸಾಮಾನ್ಯವಾಗಿ ದೊರಕುವ ಕಾಯಿಪಲ್ಯಗಳನ್ನೂ ಮತ್ತು ಅವರಲ್ಲಿರುವ ನೀರು, ಪ್ರೋಟೀನ್, ಕೂಬ್ಬು, ಸಕ್ಕರೆ ಸಿಪ್ಪೆ, ಜೀವಸತ್ವ ಮತ್ತು ಲೋಹ ಲವಣಗಳನ್ನು ಕೆಳಗಿನ ಪಟ್ಟಿಯಲ್ಲಿ ತೋರಿಸಿದೆ.

ಜೀವಸತ್ವಗಳ ಚಿಪ್ಪೆ:-1 ಎಂದರೆ ಇದೆ, 2-ಸ್ವಲ್ಪ ಇದೆ, 3-ಜಾಸ್ತಿ ಇದೆ, 4-ಬಹಳ ಜಾಸ್ತಿ ಇದೆ.

ನೀರು, ಸಿಪ್ಪೆ, ಪ್ರೋಟೀನ್, ಕೂಬ್ಬು, ಸಕ್ಕರೆ ಸಿಪ್ಪೆ ಮುಂತಾದುವುಗಳನ್ನು ಶೇಕಡಾ ಪ್ರಮಾಣದಲ್ಲಿ ತೋರಿಸಿದೆ.

ಕಾಯಿಪಲ್ಯಗಳ ಹೆಸರು	ನೀರು	ಪ್ರೋಟೀನ್	ಕೂಬ್ಬು	ಸಕ್ಕರೆ ಸಿಪ್ಪೆ	ಲವಣಾಂಶ	ಜೀವಸತ್ವಗಳು A	B	C	D
ಕ್ಯಾಬೇಜ್	85.8	4.9	0.5	5.7	3.1	1	2	1	–
ಬೀಟ್ ರೂಟ್	87.1	3.9	0.5	7.5	1.4	Tr	–	–	–
ಕ್ಯಾರೆಟ್	90.2	1.8	0.1	6.3	0.6	4	2	3	–
ಹೀರೆಕಾಯಿ	86.3	0.1	1.0	10.0	1.4	1		–	–
ಮೂಲಂಗಿ	93	1.2	0.1	4.0	0.23	2	–	3	–
ಬಾಳೆಕಾಯಿ ಸೊಪ್ಪೆ	87.9	3.3	0.6	6.5	1.7	4	–	4	–
ಸೌತೆ	93.0	4.6	0.6	8.0	1.6	3	–	–	–
ಪಪ್ಪಾಯಿ	91.7	1.0	0.1	1.0	1.5	4	2	3	–
ಬೂದುಗುಂಬಳ	92.9	2.1	0.3	3.0	1.2	3	2	1	–
ಪಿಲ್ಲೆಕಾಯಿ	83.8	1.7	0.1	13.6	0.8	Tr	2	2	–
ಕ್ಯಾಬೇಜು	86.0	0.9	0.1	0.7	1.1	4	3	1	–
ನಾರಿಲ್	86.8	1.2	0.1	11.6	0.4	Tr	1	2	–
ಆಲೂಗಡ್ಡೆ	71.7	1.6	0.1	22.9	0.6	1	2	3	–
ಮೂಲಂಗಿ	94.4	0.7	0.1	4.2	0.6	Tr	1	1	–
ಗೆಣಸು	66.5	1.2	0.3	31.0	1.0	2	3	4	–
ಸಿಹಿಗೆಣಸು	69.9	1.4	0.1	27.0	1.6	2	2	Tr	–
ಬೂದಿಕುಂಬಳ	96.0	0.4	0.1	1.2	0.3	Tr	Tr	Tr	–
ಹಾಗಲಕಾಯಿ	92.1	1.6	0.2	1.2	0.8	1	1	2	–
ಬದನೆಕಾಯಿ	91.5	1.3	0.3	6.4	0.5	Tr	1	1	–
ಬಿಳಿಯಾಲಿ ಬಿಟ್ಟು	82.4	4.5	0.1	10.0	1.0	1	2	2	–
ಕಾಲಿಫ್ಲವರ್	89.4	3.5	0.4	5.3	1.4	1	3	2	–
ಹೀರೆಕಾಯಿ	96.1	0.4	0.1	2.8	0.3	Tr	1	Tr	–
ನುಗ್ಗೆಕಾಯಿ	86.9	2.5	0.1	3.7	2.0	2	–	3	–
ಪಲಿನಕಾಯಿ	84.0	2.6	0.3	9.4	0.9	2	–	Tr	–
ಬೆಂಡೆಕಾಯಿ	88.0	2.2	0.2	7.7	0.7	Tr	1	1	–
ಸೀಕುಬಾಜ	94.1	0.5	0.3	4.4	0.7	4	1	1	–
ಮಾವಿನಕಾಯಿ	90.0	0.7	0.1	8.8	0.4	2	–	Tr	–
ನೆಲ್ಲಿಕಾಯಿ	81.2	0.5	0.1	14.1	0.7	–	–	4	–
ಬಾಳೆಕಾಯಿ	83.2	1.4	0.2	14.7	0.5	1	4	4	–
ಬಾಳೆದಿಂಡು	88.3	0.5	0.1	9.7	0.6	–	–	–	–
ಟೊಮೇಟೊಕಾಯಿ	92.8	1.0	0.1	4.5	0.7	4	3	4	–

ವೈದ್ಯ ಇಲಾಖೆ.

ಜಗತ್ತನ್ನು ಬೆರಗು ಗೊಳಿಸುವ ವ್ಯಕ್ತಿಗಳು.

"ಗಾಂಧಿ ಮತ್ತು ಲೆನಿನರೊಳಗೆ ತುಲನ ವೈತ್ಯಾಸವಿರುವುದಾದರೂ ಅವರಿಬ್ಬರು ಇಪ್ಪತ್ತನೇ ಶತಮಾನದ ಜಗತ್ತಿನಲ್ಲಿ ಅಸಾಧಾರಣ ಪ್ರಬಲತೆಯ ವ್ಯಕ್ತಿಗಳಾಗಿರುವರೆನ್ನಬಹುದು" ಹೀಗೆಂದು ಪಾರ್ಲಿಮೆಂಟ್ ಸದಸ್ಯರಾದ ಮಿ ರಿಚರ್ಡ್ಸ್ ಸೊರೆನ್ಸನ್‌ರವರು ಒಂದು ಲೇಖನದಲ್ಲಿ ಲೆನಿನ್ ಮತ್ತು ಗಾಂಧೀಜಿಯ ಸಂದರ್ಶನದ ವಿವರವನ್ನು ವರ್ಣಿಸಿದ್ದಾರೆ. ಅವರು ಹೀಗೆ ಬರೆದಿರುವರು

"ನೋಹನ ದಾಸ್ ಕರಮ್ ಚಂದ್ ಗಾಂಧಿಯವರು ಲೆನಿನರಿಗಿಂತ ಹೆಚ್ಚು ವಿಚಿತ್ರತೆಯವರು." ಪಾರ್ಲಿಮೆಂಟರಿ ಶಿಷ್ಟಮಂಡಳವು ಭಾರತಕ್ಕೆ ಹೋದಾಗ ಅದರಲ್ಲಿ ಮಿ. ಸೊರೆನ್ಸನ್‌ರೂ ಒಬ್ಬರಾಗಿದ್ದರು. "ನಾನೆರಡು ಸಲ ಗಾಂಧಿಯನ್ನು ಕಂಡಿದ್ದೆ. ಆಗನವರು ಯರವ್ಡಾ ಸಿನಲ್ಲಿದ್ದರು. ಅವರಿರುವ ಭವನದೆದುರು ಸಂದರ್ಶನಾರ್ಥಿಗಳು ಯಾವಾಗಲೂ ಕಿಕ್ಕಿರಿದು ನೆರೆಯುತ್ತಿದ್ದರು. ಅವರ ವ್ಯಾಖ್ಯಾನಗೆಂಡೂ ಸಾವಿರಗಟ್ಟಲೆಯಲ್ಲಿ ಜನರು ಸೇರುತ್ತಾರೆ.

"ಮಹಾತ್ಮಾರೊಡನೆ ನಾವು ಅರ್ಧ ಗಂಟ್ಟುಕಾಲವಾದರೂ ಕುಳಿತಿದ್ದೆವು-ಅವರು ಒಂದು ಬಿಳಿ ಹಾಸಿಗೆಯ ಮೇಲೆ ಕುಳಿತಿದ್ದರು. ಅವರು ಕೀಣವಾಗಿಯೂ ವಿನೀತರೂ ಆಗಿರುವರು. ಕ್ಷಣದಲ್ಲಿ ಗಂಭೀರತೆಯನ್ನು ತಾಳುತ್ತಿದ್ದರು. ಅವರ ಜೀವನವನ್ನು ಅವರು ಜರ್ಜರಿಸುವ ವಿಷಯದ ಸಂಬಂಧವಾಗಿಯೂ ಭವ್ಯನಾಗಿಯೂ ನಿರ್ಧಾರಯುಕ್ತನಾಗಿಯೂ ಕೆಲಸ ಗೈಯುವಂತೆ ನಮಗೆ ಸ್ಪಷ್ಟ ಭಾಸವಾಗುತ್ತದೆ."

"ಕೆಲವು ಸಲ ಅವರ ಹೇಳಿಕೆಗಳು ಪರಸ್ಪರ ವಿರೋಧ ಅಭಿವ್ಯಾಯವುಳ್ಳವುಗಳಾಗಿಯೂ ವರ್ತಿಸುತ್ತವೆಂದಾಗಿಯೂ ಅಭಿವ್ಯಾಯವಾಗುತ್ತದೆ. ನಮ್ಮ ತಪ್ಪನ್ನು ತಿದ್ದಬೇಕೆಂದೂ ಅವರು ಹೇಳಿಕೊಳ್ಳುತ್ತಿರುತ್ತಾರೆ. ಅವರ ನುಡಿ ಮತ್ತು ನಡಗಳಲ್ಲಿಯೂ ಹಲವು ಸಲ ವಿರೋಧಾಭಾಸಗಳು ತೋರುತ್ತವೆ. ಆದರೆ ನವೆ ನುಡಿಗನೆಲ್ಲವನ್ನೂ ನಮ್ಮ ಆತ್ಮರಕ್ಷಣೆಯಲ್ಲಿ ಸಂಯೋಜಿಸಿಕೊಳ್ಳುವ ಅಳವಿಬ್ಬರವೂ ಅವರಲ್ಲಿದೆ. ಸಮಸ್ಯೆಗಳನ್ನು ನೈತಿಕ ಮತ್ತು ಮಾತೀಯ ದಾಸ್ತ್ರಾ ಸೂತ್ರಗಳಿಗನುಸಾರವಾಗಿ ವಿನ ವಿಸುವ ಅವರ ವಿಧಾನ ರಾಜಕೀಯ ಮುತ್ಸದ್ದಿಗಳಿಗೆ ಹಲವು ಸಲ ಅರ್ಥವಾಗುವುದಿಲ್ಲ."

"ವೈಷ್ಣವ ಸಂಯೆಗಳಂದಲೇ ಕಾರ್ಯ ನಿರ್ವಹಿಸುವವರಿಗೆ ಅವರ ಪದ್ಧತಿಗಳು ತುಡಿಗಾಗುವವು. ಅವರ ನಿಷ್ಕಪಟ ಮನೋದ್ಗಾರದಿಂದ ಹೊರಟ 'ಭಾರತ ಬಿಟ್ಟು ತೊಲಗಿರಿ' ಘೋಷಣೆಯು (ಕ್ವಿಟ್ ಇಂಡಿಯಾ) ಅರ್ಥ ವಿವರಣೆಯು ನಿವರ್ಗನ ನೋಡಿರಿ."

"ಇಬ್ಬರಲ್ಲಿ ಎರಡನೆ ಅರ್ಥವಿಲ್ಲ. ತಮ್ಮ ದೇಶ ಬಾಂಧವರಿಗೆ ವೈಸಮ್ಯ ರಹಿತವಾದ ಸತ್ಯ ಅಹಿಂಸೆಯನ್ನಾಚರಿಸಿರಿ ಎನ್ನುವಾಗ ಅವರು ಶುದ್ಧ ಕಾತ್ವಿಕ ರೀತಿಯಲ್ಲೇ ನುಡಿಯುತ್ತಾರೆ."

'ಬ್ರಿಟಿಷರ ಕಣ್ಣಿಗೆ ಗಾಂಧಿಯವರು ಎಂದು ಚಿತ್ರ ರಹಸ್ಯದ ವ್ಯಕ್ತಿಯಾಗಿ ತೋರಬಹುದು. ಆದರೆ ಏಲಿಯೆವಧಿ ನಾರತೀಯರ ಹೃದಯದಲ್ಲಿ ಅವರು ತಮ್ಮ ದುರ್ದೆಶೆಯ ವಿಮೋಚನೆ ಮಾಡುವ ಅಂತೀತಿಕ ವ್ಯಕ್ತಿಗಳಾಗಿರುವರೆಂಬುದು ಏಸ್ಸಂಡೇಹದ ಮಾತು. ಜನತೆಗೆ ಅವರು ಕೇವಲ ಒಬ್ಬ ರಾಜಕೀಯ ನಾಯಕರು ಮಾತ್ರವಲ್ಲ; ಪೂಜನೀಯರಾದ ಮಹಾತ್ಮರೂ ಆಗಿರುವರು. ಅವರ ಕತ್ತಗಳ ಕಡೆ ಇಡೆ ಆಡಿಸ್ಟಿದ್ದರೂ ಜನತೋದ್ಧಾರದ ಅವರ ಶ್ರದ್ಧೆ ನಿರ್ಧಾರಗಳು ಅಖಂಡವಾದುವುಗಳು. ಅದೆಂತಹ ಸಂಕಷ್ಟಮಯ ಕಾಲದಲ್ಲೂ ಅವರು ತಮ್ಮ ಮಾನಸಿಕ ದೃಢತೆಯಿಂದ ಕದಲುವವರಲ್ಲ.

'ಅವರು ಆಡಂಬರಕ್ಕಾಗಿ ತಮ್ಮ ನಿವಾಸದ ಸುತ್ತಲೂ ಸ್ವಯಂ ಸೇವಕರನ್ನಿಟ್ಟುಕೊಳ್ಳುವರೆಂದು ಕೆಲವರು ಅವರ ಮೇಲೆ ಆರೋಪ ಹೋರಿಸುತ್ತಾರೆ. ಅವರಂಥ ವಿಶಾಲ ಚಟುವಟಿಕೆಯ ವ್ಯಕ್ತಿಗಳ ವ್ಯವಹಾರವನ್ನು ಸುಗಮವಾಗಿ ನಡೆಯಬೇಕಾದರೆ ಸ್ವಲ್ಪವಾದರೂ ಇಂತಹ ಏರ್ಪಾಡು ಆತ್ಮಾವಶ್ಯಕವೆಂಬುದನ್ನು ಮರೆಯಬಾರದು. 'ಸ್ವ. ಮಿ.'

ಚಾತ್ರಿ.

ಕೊಡೆಗಿನ ರಾಜಕೀಯ.

ಕೊಡಗಿನ ಮುಂದಿನ ರಾಜಕೀಯದ ವಿಚಾರದಲ್ಲಿ, ಕೊಡಗಿನ ಅಡಳಿತ ವಿಷಯದಲ್ಲಿ ಯಾರಿಗೆಲ್ಲೋ ತಲೆನೋವು ಹತ್ತಿದಂತೆ ಕಾಣುತ್ತದೆ.

ಮುಂದೆ ಬರಲಿರುವ ರಿಯಾಯಿತಿಯ ಜಿಲ್ಲೆಯಳಗಳು, ಕೆಲವರ ತಲೆಗೆ ಮೊತ್ತ ಹತ್ತಿಕೊಂಡಿದೆಯೊಗಿ ಕಂಡುಬರುತ್ತದೆ. ಬ್ರಿಟಿಷರು ನಾಳೆ ಬಿಟ್ಟುಹೋಗುತ್ತಾರೆ ನಾವಿದ್ದು ನನ್ನ ನಿನ್ನ ಅಧಿಕಾರವೆಂದು ಕೆಲವರು ಪೈಪೋಟಿ ಮಾಡುತ್ತಿದ್ದಾರೆ. ಈ ತಮ್ಮ ಸ್ವಾರ್ಥಸಾಧನೆಗಾಗಿ ನಾನಾ ಪ್ರಕಾರ ನಡೆಯುತ್ತಿದೆ. ಕೊಡಗನ್ನು ಪ್ರತ್ಯೇಕವಿಟ್ಟು ಅಧಿಕಾರ ನಡೆಸಿಕೊಂಡು ಹೋಗಲಿಕ್ಕೆ ಸಾಧ್ಯವಿಲ್ಲ. ಅದುದರಿಂದ ನನ್ನು ದೇಶವನ್ನು ಬೇರೆ ಪ್ರಾಂತ್ಯಕ್ಕೆ ಸೇರಿಸಬೇಕೆಂಬ ಚಳವಳಿ ಕೆಲವರದು. ಆದರೆ ಈಗ 100 ವರ್ಷಗಳ ಮೇಲೆ ಬ್ರಿಟಿಷರು ಹೇಗೆ ನಡೆಯಿಸಿಕೊಂಡು ಹೋದರು. ಮಧ್ಯಸರಕಾರದಿಂದ ಎಷ್ಟು ಹೆಚ್ಚಿಗೆ ಹಣವನ್ನು ತಂದಿದ್ದಾರೆ, ಇಲ್ಲವೇ ನಮ್ಮ ದೇಶದ ಎಷ್ಟು ಹಣ ಇಂಡಿಯಾ ಸರಕಾರಕ್ಕೆ ಉಳುವರಿಯಾಗಿ ಹೋಗಿದೆ? ಅದನ್ನು ಇವರು ಪರಿಶೀಲಿಸಿ ನೋಡಿರುವರೇ? ಎಂಡನೆ ನಮ್ಮ ಸರಕಾರವನ್ನು ಈ ರೀತಿಯಲ್ಲೇ ಇಟ್ಟುಕೊಳ್ಳಬೇಕೋ-ಅದನ್ನು ಬೈಗುಳಕೆ ಇಲ್ಲವೇ ಇನ್ನು ಇತರ ವಿಷಯದಲ್ಲಿ ನುಂದರಿಸಬೇಕೊ? ಪ್ರ ಹಾಗಾದರೆ ಬೇರೆ ಪ್ರಾಂತ್ಯಗಳಿಗೆ ಸೇರಿಸಿದರೆ ಕೊಡಗಿನ ಸ್ಥಾನ ಯಾವುದು? ಬರೇ ಒಂದು ತಾಲೋಕಿನಹ್ಹು! ಆಗ ನಮಗೆ ಸಿಕ್ಕುವ ರಿಯಾಯಿತಿ ಒಂದು ತಾಲೋಕಿನ ಪ್ಟಲ್ಲವೇ? ಅಂದ ಪಕ್ಷ ನಮ್ಮ ಈಗಿನ ಸ್ಥಿತಿ ಒಳ್ಳೆಯದಲ್ಲವೇ? ಒಂದು ತಾಲೋಕಿನ ಸ್ಥಿತಿಯಾದರೆ ಬೇರೆ ಪ್ರಾಂತ್ಯಗಳು ನಮ್ಮ ಈಗಿನ ತರಗತಿಗೆ ಬರಬೇಕಾದರೆ ಎಷ್ಟು ವರ್ಷ ಬೇಕು?

ಮುಂದೆ ಹೋಗುವ ನನ್ನು ಯುವಕರಿಗೆ ವಿದ್ಯಕ್ಕೂ ಮತ್ತು ಉದ್ಯೋಗಕ್ಕೂ ಪ್ರಾಂತ್ಯವಾರು ಪ್ರಶ್ನೆ ಬಂದರೆ-ಸ್ಥಳವೆಲ್ಲಿ? ಈಗ ನಮ್ಮ ಆಲೋಚನೆ ಒಬ್ಬೊಬ್ಬ ಉದ್ಯೋಗಸ್ಥರ ಮುಖನೋಡುವದೋ ಅಲ್ಲ ಇಡೀ ನಿವಾಸಿಗಳ ಉಪಯೋಗವೋ-ಎಂದು ಆಲೋಚಿಸಶಕ್ಯದ್ದು. ನನ್ನು ಪುಟ್ಟ ದೇಶವನಂತಾದರೂ ನಾವು ವಿಲಿಟಿಯಲ್ಲಿಯೂ ಬೇರೆ ಯಾವ ಉದ್ಯೋಗದಲ್ಲಿಯೂ ಹಿಂದಿದ್ದೇವೇನು? ಇಲ್ಲ ಆಗ ಮಧ್ಯ ಸರಕಾರದವರ ಸಹಾಯದಿಂದ ನಮ್ಮ ವಿದ್ಯೆಗೂ ಉದ್ಯೋಗಕ್ಕೂ ಯೋಗ್ಯ ಮಾರ್ಗ ದೊರೆಯುವಂತೆ ನೋಡಲಾಗುವುದಿಲ್ಲವೇ?

ಇನ್ನೊಂದು ಪ್ರಶ್ನೆ-ಸರಕಾರವನ್ನು ನಡೆಸಲಿಕ್ಕೆ ಹಣವಿಲ್ಲವಂತೆ! ಯಾರು ಹೇಳಿದ್ದು-ಹಣವಿಲ್ಲವೆಂತ? ಕಾಂಗ್ರೆಸಿನವರೆ ಹಣವಿಲ್ಲವೆಂದು ಅಂದ ಮೇಲೆ ಕಾಂಗ್ರೆಸಿನವರ ಗುರಿಯೇನು? ಶೈತರನ್ನು ಮೂಲೆಗೊತ್ತಿ ದೊಡ್ಡ ದೊಡ್ಡ ಸಂಬಳವನ್ನು ತೆಗೆಯಬೇಕಂತಲೋ? ಕೊಡಗು ಕಾಂಗ್ರೆಸಿನ ಕೆಲವರು ಆಚರಣೆ ನೋಡಿದರೆ ಅವರು ನಮಹಾತ್ಮಾಗಾಂಧಿಯವರ ಅನುಯಾಯಿಗಳಲ್ಲವೆಂದು ಗೊಕ್ಕಾಗುತ್ತದೆ. ಗ್ರಾಮೋಭಿವೃದ್ಧಿ-ಅಲ್ಲಿಂದ ನಗರ ಅಭಿವೃದ್ಧಿ ಎಲ್ಲರೂ ಸರಿಸಮಸರಕಾರಿಗಳಿರಬೇಕು. ಬಡತನವನ್ನು ಹೋಗಲಾಡಿಸಬೇಕು. ದೇಶವು ಮುಂದೆ ಬರಬೇಕೆಂದು ಆಲೋಚಿಸಿದರೆ ಈ ತರದ ಮಾತುಗಳನ್ನಾಡುವದಿಲ್ಲ. ಸರಕಾರದ ಉತ್ಪತ್ತಿಯನ್ನು ಹೆಚ್ಚಿಸಲು ಬೇರೆ ಎಷ್ಟೋ ಬಾಬುಗಳಿವೆ. ಸಂಯೋಜನವಾದಿಗಳು ವಿಚಾರಿಸಿರುವದಿಲ್ಲ.

ಆದುದರಿಂದ ಬ್ರಿಟಿಷರ ಅಳಿಕೆ ದುಂದುಗಾರಿಕೆ ಯೆಂದು ಹೇಳುವವರು ಹೀಗೆ ಹೇಳುವದು ನ್ಯಾಯವಿಲ್ಲ. ಅವರ ದುಂದುಗಾರಿತೆಯಲ್ಲೇ-ಈಗಿನ ಉತ್ಪತ್ತಿ ಸಾಕಾದರೆ-ನಮ್ಮ ದೇಶವನ್ನು ನಾವೇ ಆಳಿಕ್ಕೆ ಹೊಣ ಸಾಲದು ಅಂದರೆ-ನಮ್ಮ ಗುರಿ ಎಲ್ಲಿದೆ? ಆದುದರಿಂದ ನಾನು ನಿಮ್ಮನ್ನೆಲ್ಲಾ ಅತಿವಿನಯದಿಂದ ಕೇಳಿಕೊಳ್ಳುವ ದೇನೆಂದರೆ-ನಿಮಗೆ ಕೆಲಸ ಮಾಡಲು ಸಾಧ್ಯವಿಲ್ಲದಿದ್ದರೆ ನಮ್ಮ ಸ್ವಂತ ಸರಕಾರ ಬಂದ ಮೇಲೆ ಕೆಲಸ ಮಾಡಲಿಕ್ಕೆ ಸಾಧ್ಯವಿರುವವರಿಗೆ 10 ವರ್ಷ ಬಿಡಿ. ಯೋಗ್ಯ ರೀತಿಯ ಆಡಳಿತ ನಡೆಯದಿದ್ದರೆ ಮುಂದೆ ಬೇರೆ ಪ್ರಾಂತ್ಯಕ್ಕೆ ಸೇರಬಹುದು.

ನಮ್ಮ ಗಜಬೆಡ್ಡ ಉದ್ಯೋಗಸ್ಥರಿಗೆ ವರ್ಗ ಇಲ್ಲ. ಅವರ ಇಷ್ಟ ಬಂದ ಹಾಗೆ ನಡೆದುಕೊಳ್ಳುತ್ತಾರೆ. ಎಂದು ದೂರು ಹೇಳುವವರು ಒಂದು ಮಾತು ತಿಳಿಯಬೇಕು. ಇನ್ನು ಬರುವ ಸಂಕಾರವು ಈಗಿನ ಆಂಗ್ಲೇಯ ತಾಬೆದಾರಿಯದಲ್ಲ ಶೇಶದ ಜನತೆಯ ತಾಬೆದಾರಿ. ಆದುದರಿಂದ ಡೆಲ್ಲಿ ಆರ್ಡರ್ ಮೇಲೆ ಅವರಿಗೆ ಕುಣಿಯಲಿಕ್ಕೆ ಆಗುವದಿಲ್ಲ. ಮನನೋ ಇಚ್ಛೆ ನಡೆಯಲು ಸಾಧ್ಯವಿಲ್ಲ. ಅಲ್ಲದೆ ಅವರಿಗೆ ಜನರ ಅನುಭವ ಇದ್ದಷ್ಟೂ ದೇಶಕ್ಕೆ ಒಳ್ಳೇದು ಹೇಗೂ ಇರಲಿ, 100 ವರ್ಷದ ಮೇಲೆ ಪರಕೀಯರ ಕೈಕೆಳಗೆ ಆಯಿತು. ಇನ್ನು ನಮ್ಮ ನಿನ್ನು ಸ್ವಂತ ಅಳಿಕೆಯನ್ನು ಪ್ರಯತ್ನ ಮಾಡಿ ನೋಡುವ. ಸ್ವಾತಂತ್ರ್ಯವು ಕೆಲವು ಜನರ ಪ್ರಯೋಜಕಕ್ಕಲ್ಲ ಎಲ್ಲರ ಗೌರವಕ್ಕೆ ಮತ್ತು ಎಲ್ಲರ ಒಳ್ಳೆಯದಕ್ಕೆ.

ಸಿ. ಕೆ. ಶಮ್ಮಯ್ಯ.

ನಾಪೋಕ್ಲಿನ ಸ್ಥಿತಿ.

ದೊಡ್ಡ ಹುದ್ದೆಯ ಅಧಿಕಾರಿಗಳು ಈ ಮಳೆಗಾಲದಲ್ಲಿ ನಾಪೋಕ್ಲನ್ನು ಸಂದರ್ಶಿಸುವ ಪ್ರಯತ್ನ ಪಡುವುದಿಲ್ಲ. ಜನರ ತೊಂದರೆಗಳು ಯಾವವು ಎಂದು ಯಾವ ಅಧಿಕಾರಿಯೂ ತಿಳಿದುಕೊಳ್ಳುವುದಿಲ್ಲ. ಮಡಿಕೇರಿ ಮತ್ತು ವೀರಾಜಪೇಟೆಗಳಿಂದ ಬರುವ ಮಾರ್ಗಗಳನ್ನು ರಿಪೇರಿ ಮಾಡಿಸಲೋಸಗ ಎಷ್ಟೊ ವರ್ಷಗಳಿಂದ ಹಣ ಮಂಜೂರು ಮಾಡಿಸಿಕೊಂಡು ಬರುತ್ತಿದ್ದರೂ ಇಂದಿನ ವರೆಗೆ ಹಾಗೆಯೇ ಇರುವುದು ಏನನ್ನು ಸೂಚಿಸುತ್ತದೆ? ಮಾರ್ಗ ಸರಿಯಾಗಿದ್ದರೆ ಅಧಿಕಾರಿಗಳು ಪ್ರತಿ ತಿಂಗಳೂ ಪ್ರತಿಯೊಬ್ಬರೂ ಒಂದು ಸಾರಿಯಾದರೂ ಬಂದು ಹೋಗುತ್ತಿದ್ದರು. ಹೀಗೆ ಬಾರದೇ ಇರುವುದರಿಂದ ಜನರ ತೊಂದರೆಗಳನ್ನು ತಿಳಿದುಕೊಳ್ಳಲಾರರು. ಇಲ್ಲಿಯ ಜನರು ಕಂಡುಜನರೆಂದೂ ಅವರಿಗೆ ಹೊರಗಿನ ಪ್ರಪಂಚದ ಅನುಭವ ಅವಶ್ಯವಿಲ್ಲೆಂದೂ ತಿಳಿದಿರುವರು. ಜನ ಜಾಗೃತಿಗೆ ಸಂಚಾರೋಪಕರಣಗಳು ಅವಶ್ಯವೆಂದು ನಮ್ಮ ಅಧಿಕಾರಿಗಳಿಗೆ ತಿಳಿಸ ಬೇಕಾಗಿದೆ. ಅಧಿಕಾರಿಗಳು ಬೇಗನೆ ಮಾರ್ಗಗಳನ್ನು ಸರಿಪಡಿಸಿ, ನಾಪೋಕ್ಲಿನ ಹತ್ತಿರದ ವರೆಗೆ ಬಸ್ಸುಗಳು ಬರುವಹಾಗೆ ವ್ಯವಸ್ಥೆಮಾಡಿಸಬೇಕು. ಮಡಿಕೇರಿಯಿಂದ ಕೊಟ್ಟ ಮುಡಿಯವರೆಗೆ ಬಸ್ಸು ಬರುವಂತೆ ತಕ್ಷಣವೇ ವ್ಯವಸ್ಥೆಮಾಡಿಸಬೇಕು. ಇಲ್ಲವಾದರೆ ಬೇರೆಯವರಿಗೆ ಅವಕಾಶಕೊಡಿಸಿ ನಡೆಸುವಂತೆ ವ್ಯವಸ್ಥೆಮಾಡಿಸಬೇಕು. ಕೊಟ್ಟ ಮುಡಿಗೆ ಬೇಗನೆ ಸೇತುವೆಯನ್ನು ಕಟ್ಟುವ ವ್ಯವಸ್ಥೆಯನ್ನು ಮಾಡಬೇಕು. ಇನ್ನೆರಡು ತಿಂಗಳಲ್ಲಿ ಪರ್ವ, ಅಂದಾಜುಪಟ್ಟಿ ಮೊದಲಾದವುಗಳನ್ನು ಮುಗಿಸಿ ಕಂಟ್ರಾಕ್ಟರನ್ನು ಕೊಡಬೇಕು. ಯುದ್ಧೋತ್ತರ ಪುನರ್ರಚನೆಯಲ್ಲಿದೆಯೆಂದು ಹೇಳುತ್ತಾ ತೂರಬಾರದು. ಅವಶ್ಯವಾಗಿ ಬೇಗಬೇಗನೆ ರಚಿಸಬೇಕಾಗಿದೆ. ಜನರಿಗೆ ತೊಂದರೆಯಾಗುವಂತೆ ವರ್ತಿಸುವ ಸಮಯವಿದಲ್ಲವೆಂದು ಅಧಿಕಾರಿಗಳು ತಿಳಿದರೆ ಉತ್ತಮ. ನಾಡಿನವ.

'ಓರಿಯಂಟಲ್'

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪನಿ, ಲಿಮಿಟೆಡ್.

ಇದರಲ್ಲಿ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದ್ದು (ಸದಸ್ಯರ ಹೊಣೆ ಸೀಮಿತವಾಗಿದೆ.)

ಮತ್ತೊಮ್ಮೆ ದಾರಿ 'ಓರಿಯಂಟಲ್' ಮುಂದೆ, ಅತಿಶಯವಾದ ಹಿಂಬಾಲಿಸುವಿಕೆ ಮತ್ತು ವಾರ್ಷಿಕ ಬರ್ಮಾಗಳ ಪಾಲಿಸಿದಾರರಿಗೆ ಜಾಸ್ತೀ ಆಕರ್ಷಣೆ ಕಾಲದಲ್ಲಿ ದತ್ತಾಗಿದ್ದ ಪಾಲಿಸಿಗಳನ್ನು ಫಾರಮುಲ್ಲೇಷನ್‌ಗೊಳಿಸಿದ ಜೀವ ವಿಮಾ ಕಂಪೆನಿಗಳಲ್ಲಿ ಹಿರಿಯುಂಟಲೇ ಪ್ರಥಮ ಸ್ಥಾನ ಪಡೆದಿರುವುದು. ಆದು ಜೀವನದ ಕಾರ್ಯಗಳ ಮೇಲೆ ಬಜ್ಜ ತೆಗೆದುಕೊಳ್ಳಲಿಲ್ಲ. ಆಫರ್ ಒಳ್ಳೆಗೆ ಅರೋಗ್ಯದ ಸರ್ಟಿಫಿಕೇಟ್ ಕೋರಲಿಲ್ಲ

ಧಾರಾಳತನವೇ ವೃದ್ಧಿಯಾಗುತ್ತಿರುವ
ನಮ್ಮ ಜನಪ್ರಿಯತೆಯ ರಹಸ್ಯವಾಗಿದೆ

೧೯೪೭ ರ ಹೊಸ ವ್ಯವಹಾರ .... ಸುಮಾರು ರೂ. ೨೮,೫೦,೦೦,೦೦೦
ನಿಧಿ ತಾ. 31—12—1945ರಲ್ಲಿ ... ಹೆಚ್ಚಾಗಿ ರೂ. ೪೧,೦೦,೦೦,೦೦೦
ನಮ್ಮ ಜೀವ ವಿಮೆಯ ಸ್ಕೀಮುಗಳಿಂದ ಬೇಡಿಕೆಯ ಅಕಸ್ಮಿಕ ಯೋಜನೆಯು ಸಮ್ಮಿಲಿತ

ಮುಖ್ಯ ಖಚೇರಿ-ಓರಿಯಂಟಲ್ ಬಿಲ್ಡಿಂಗ್ಸ್, ಪೋರ್ಟ್, ಬೊಂಬಾಯಿ,
ಶಾಖೆ-'ಓರಿಯಂಟಲ್ ಬಿಲ್ಡಿಂಗ್ಸ್' ಸೌತ್ ಪೆರೇಡ್, ಬೆಂಗಳೂರು ಕಂಟ್.
ಇನ್ಸ್‌ಪೆಕ್ಟರರ ಆಫೀಸು—ಕೆ. ಸದಾಶಿವರೋಡು, ಮಂಗಳೂರು.

ಹೊಸ ಶೋಧನೆ.

ಹಿಂದೇ ಭಾರದಲ್ಲಿ ಕೂಡಲು ಉದುರುವ ದನ್ನು ಗುಣ ಪಡಿಸಿ ನೀನೂ ಸುಂದರ ಬಾವ ಕೇಶ ರಾಶಿಯನ್ನು ಹೊಂದಿರಿ.
ಇಂದೇ ಪಡೆಯಿರಿ.

ಆರ್ನಿಕೊಲ
(ತಂತು ಆರ್ನಿಕಾಎಲಿವಾ)

ಉಷ್ಣತೆಯನ್ನು ಹೋಗಲಾಡಿಸಿ, ನರಿ ಕೂದಲನ್ನು ಕಪ್ಪು ಮಾಡುತ್ತದೆ. ಬುದ್ಧಿ ಶಕ್ತಿಯನ್ನು ವೃದ್ಧಿ ಮಾಡುತ್ತದೆ. ನಿದ್ದೆಗೇಡು, ಕಣ್ಣುಉರಿ, ತಲೆ ಕಿಡಿತ, ತಲೆತಿರುಗುವಿಕೆ, ಎಲ್ಲಾ ಗುಣ ಮಾಡುತ್ತದೆ. ಎಲ್ಲಾ ಕಡೆ ದೊರೆಯುತ್ತದೆ.

ಆರ್ನಿಕೊಲ ಸೇಲ್ಸ್ ಏಜೆಂಟ್ಸ್,
ಪೋಸ್ಟ್ ಬೋಕ್ಸ್ 96, ಮಂಗಳೂರು ದ. ಕ.

MOTOR.

FOR SALE 1938 MODEL DODGE COUPE BLACK COLOUR. PRICE RS. 7,000 OR NEAR OFFER.

APPLY:-

DODAMANE,
Somwarpet.

2-2

ವೈಸರಾಯರ ಅಭಿಲೆಷೆಯು ಮುಕ್ತಾಯ.

ಅಧಿಕಾರ ವರ್ಗದ ಕಾರ್ಯಕ್ರಮ.

ಭಾರತದ ಕೊನೆಯ ವೈಸರಾಯರಾದ ಲಾರ್ಡ್ ಲೂಯಿ ಮೌಂಟ್‌ಬೇಟನ್ನರು ಆಗಸ್ಟ್ ೧೪ ರಂದು ಧೃಢಾತ್ಮರಿಗೆ ಅಧಿಕಾರತ್ಯಾಗ ಮಾಡುವರೆಂದೂ ಮರುದಿನ ಮುಂಜಾನೆ ಅವರೇ ಭಾರತ ಡೊಮಿನಿಯನ್ನಿನ ಘಟನಾತ್ಮಕ ಗವರ್ನರ್-ಜನರಲ್ಲರ ಪದವಿಯನ್ನು ಸ್ವೀಕರಿಸುವರೆಂದೂ ತಿಳಿಯುತ್ತದೆ. ಅವರು ಅಧಿಕಾರಾರೂಢರಾಗಿ ಕೂಡಲೆ, ಪಂ. ಜವಾಹರಲಾಲ್ ನೆಹರೂರವರ ನಾಯಕತ್ವದಲ್ಲಿ ರಚಿಸಲ್ಪಡುವ ಡೊಮಿನಿಯನಿನ ಮಂತ್ರಿಮಂಡಲದ ಪ್ರತಿಜ್ಞಾವಿಧಿಯನ್ನು ಅವರ ಸಮ್ಮುಖದಲ್ಲಿ ನಡೆಯಿಸಲು ಈ ಮಂತ್ರಿಮಂಡಲದಲ್ಲಿ ಯಾರಾರೂ ಇರುವರೆಂಬುದು ಆಗಸ್ಟ್ ಮೊದಲನೇ ವಾರದೊಳಗೆ ನಿಶ್ಚಯಿಸಲ್ಪಡುವುದು ಅಂದಾಜುಗೊಂಡಿದೆ.

ಆಗಸ್ಟ್ ೧೫ ರ ದಿನ ನೆರವೇಗುವ ಸಂವಿಧಾನ ಉತ್ಸವದ ಕಾರ್ಯಕ್ರಮದ ಪ್ರಕಾರ ಲಾರ್ಡ್ ಮೌಂಟ್‌ಬೇಟನ್ನರು ಹಾಗೂ ಮಂತ್ರಿಗಣ ಹಳೆಯ ಸಾರ್ವಭೌಮತ್ವವನ್ನು ಸೂಚಿಸುವ ವೈಭವದಿಂದ ಮೆರವಣಿಗೆಯಲ್ಲಿ ಕೌನ್ಸಿಲ್ ಭವನದ ಕಡೆಗೆ ಕಾಲಿಡಲಿರುವರು. ಮಂತ್ರಿಗಳು ಮೊದಲೇ ಹೋಗಿ ಗವರ್ನರ್-ಜನರಲ್ಲರನ್ನು ಕೌನ್ಸಿಲ್ ಭವನದಲ್ಲಿ ಇದಿರುಗೊಳ್ಳುವರು. ಹಿಂದೀ ಸೈನ್ಯಪಡೆಯ ಒಂದು ತುಕಡಿ ಅವರಿಗೆ ಗೌರವ ರಕ್ಷೆ ಪಲ್ಲಿಸುವುದು. ಅನಂತರ ಗವರ್ನರ್-ಜನರಲ್ಲರನ್ನು ಮೂಲಭೂತ ಸಭೆಗೆ ಭವನಕ್ಕೆ ಕರೆದೊಯ್ಯಲಾಗುವುದು. ಅಲ್ಲಿ ಅವರಿಗೆ ಎಲ್ಲ ಪ್ರಾಂತಗಳ ಮುಖ್ಯ ಮಂತ್ರಿಗಳು, ಪೊತ್ತಿಗೆ ನೇರಿರುವ ಸಂಸ್ಥಾನಗಳ ಅಧಿಪತಿಗಳ ಪರವಾಗಿ ವಿದೇಶರಾಯಭಾರಿಗಳ ಪರಿಚಯ ಮಾಡಿಕೊಡಲಾಗುವುದು. ಇದಾದ ಮೇಲೆ ಗವರ್ನರ್-ಜನರಲ್ಲರು ಭಾಷಣ ಮಾಡುವರು. ಆ ಬಳಿಕ ಅಧಿಕಾರ ಪರಿತ್ಯಾಗದ ಔಪಚಾರಿಕ ವಿಧಿ ನಡೆಯುವುದು. ಕೌನ್ಸಿಲ್ ಭವನದ ಮೇಲೆ ಭಾರತದ ರಾಷ್ಟ್ರ ಧ್ವಜವು ಏರಿಸಲ್ಪಡುವುದು. ಹಾಗು ಸೇನೆಯ ಭಾರತ ಡೊಮಿನಿಯನಿನ ಜನ್ಮವು ಘೋಷಿಸಲ್ಪಡುವುದು.

ಮಧ್ಯಾಹ್ನದಲ್ಲಿ ಯುದ್ಧ ಸ್ಮಾರಕದ ಅವರಣದಲ್ಲಿ ಧ್ವಜವಂದನೆ ನಡೆಯುವುದು. ಗವರ್ನರ್-ಜನರಲ್ಲರ ಸಮ್ಮುಖದಲ್ಲಿ ಹಿಂದೀ ಸೈನ್ಯಪಡೆಗಳು ರಾಷ್ಟ್ರಧ್ವಜಕ್ಕೆ ತಲೆದಾಗಿ ಗೌರವ ಪಲ್ಲಿಸುವು.

ಸಾಯಂಕಾಲದಲ್ಲಿ ಎಲ್ಲ ಸಾರ್ವಜನಿಕ ಕಟ್ಟಡಗಳಲ್ಲಿ ದೀಪೋತ್ಸವ ನಡೆಯುವುದು. ಪಟಾಕಿಗಳನ್ನು ಹಾರಿಸಲಾಗುವುದು ಗವರ್ನರ್. ಜನರಲ್ಲರು ಭೋಜನ ಸಮಾರಂಭವನ್ನೇರ್ಪಡಿಸುವರು.

ಆಗಸ್ಟ್ ೧೫ ಮತ್ತು ೧೬ ಸರಕಾರಿ ರಜೆಯ ದಿನವೆಂದು ಘೋಷಿಸಲಾಗುವುದು.

ಪ್ರಾಂತೀಕ ಗವರ್ನರುಗಳು.

ಈ ಆಗಸ್ಟ್ ತಾರೀಕು ೧೫ ರಿಂದ ಹಿಂದೂದೇಶದ ವಿವಿಧ ಪ್ರಾಂತಗಳಿಗೆ ಹಿಂದೀಯರನ್ನೇ ಗವರ್ನರ್‌ರನ್ನಾಗಿ ನೇಮಿಸುವ ವಿಚಾರಿಷ್ಟು. ಆದರೆ ಹಿಂದೀಯರ ಕೈಳಿಕೆ ಮೇರೆ ಪಂಜಾಬಿನಲ್ಲಿ ಈ ಹಿಂದಿನ ಸರ್ ಆರ್ಕಿಬಾಲ್ಡ್ ನೈಯವರೂ, ಬೊಂಬಾಯಿಯಲ್ಲಿ ಸರ್ ಚಿನಾ ಕಾಲವಿಲೆಯವರೂ ಗವರ್ನರ್‌ರಾಗಿ ಇರುವರು. ಆಸಾಮ್ ಪ್ರಾಂತಕ್ಕೆ ತೆಗೆ ಗವರ್ನರಾಗಿರುವ ಸರ್. ಅಚ್ಚರ್ ಹೈದ್ರಿಯವರಿರುವರು. ಉಳಿದ ಹಿಂದೂಸ್ಥಾನದ ಭಾಗಗಳಿಗೆ ಈ ರೀತಿಯಲ್ಲಿ ನೇಮಕ ಆಗಿದೆ.

(೧) ಶ್ರೀ ರಾಜಗೋಪಾಲಾಚಾರಿಯವರು, ಮದ್ರಾಸು ಜಂಗಾಳ

(೨) ಸರ್ ಜಾನ್ ಹರ್ಬರ್ಟ್ ತ್ರಿವೇದಿಯವರು, ಪೂರ್ವ ಪಂಜಾಬ್

(೩) ಶ್ರೀ ಮುಂಗಳದಾಸ ಪಕ್ವಾಸರವರು, ಸಂಯುಕ್ತಪ್ರಾಂತ ಮತ್ತು ಬೀಹಾರ್.

(೪) ಶ್ರೀ ರಾಜಗೋಪಾಲ್ ಪೌಲಾಚಾರಿಯವರು, ಬೀಹಾರ್.

(೫) ಡಾ. ಕೈಲಾಸನಾಥ ಕಟ್ಜೂರವರು, ಒರಿಸಾ

(೬) ಸಂಯುಕ್ತ ಪ್ರಾಂತಕ್ಕೆ ದಾಬಿದಫ್‌ಜಂಗ್‌ರಾಯ್‌ರವರ ಮೊದಲು ಸಾಹೆಬರಾಗಿದ್ದರು. ಅವರು ಕರ್ತವ್ಯಾಲಯೋರಿ ಕದಲ್ಲಿರುವುದರಿಂದ ಅಂದರೆ ಬದಲು ಸರೋಜಿನೀದೇವಿ ನಾಯಿಡು ಅವರು ಒರಿಸ ಪದೆಗೆ ಪೂರ್ವ ಬಂಗಾಳದ ಗವರ್ನರರಾಗಿರುವರು.

ಪಾಕಿಸ್ತಾನ ಭಾಗದಲ್ಲಿ ಪಟ್ಟಿಮ ಬಂಗಾಳಕ್ಕೆ ಸರ್ ಫ್ರಾನ್ಸಿಸ್ ಮೊಡಿಯವರು.

ಸಿಂಧ್ ಪ್ರಾಂತಕ್ಕೆ ಶ್ರೀ ಗುಲಾಮ್ ಹುಸೇನ್ ಹಿದಾಯತುಲ್ಲಾರವರು

ಬಲೂಚಿಸ್ತಾನಕ್ಕೆ ಸರ್ ಜಾರ್ಜ್ ಕನ್ನಿಂಗ್ ಹ್ಯಾಮ್‌ರವರು

ಪೂರ್ವಬಂಗಾಳಕ್ಕೆ ಗವರ್ನರರ ನೇಮಕ ಇನ್ನೂ ಆಗಲ್ಲಿ.

ಸಮೂಧಿಯಿಂದ ಎದ್ದು ಬಂದಳಾಕೆ.

ಬಿಂದ್ರಾ ಎಂಬಲ್ಲಿಂದ ಒಂದು ಆಶ್ಚರ್ಯಕರವಾದ ಸುದ್ದಿ ಕೇಳಿಬರುತ್ತಿದೆ. ಅಲ್ಲಿಯ ಒಬ್ಬ ಸಿಡ ಭಿಕ್ಷುವಿನ ಹೆಂಡತಿ ತೀರಿ ಹೋದಾಗ ಅವಳ ಅಂತಿಮ ಸಂಸ್ಕಾರಕ್ಕಾಗಿ ಪೋಲೀಸ್ ಅಧಿಕಾರಿಗಳು ಮುನ್ಸಿಪಾಲ್ಟಿಗೆ ತಿಳಿಸಿ ಶವ ಸಂಸ್ಕಾರದ ವ್ಯವಸ್ಥೆ ಮಾಡಿದರು. ಮುನ್ಸಿಪಾಲಿಟಿ ಕಡೆಯಿಂದ ಗೂಡಮೊಲಿಗಳ ಒಂದು ತಂಡ ಕಳಿಳಿಸಲ್ಪಟ್ಟಿತು. ಇಷ್ಟಾಗುವಾಗ ರಾತ್ರೆ ಎರಿಂದುದರಿಂದ ದಹನ ವಿಧಿಯನ್ನು ಮರುದಿನ ಬೆಳಗ್ಗೆ ನಡೆಸುವುದೆಂದು ಗೂಡ ಮೊಲಿಗಳು ತೀರ್ಮಾನಿಸಿದರು ಮರುದಿನ ಬೆಳಗ್ಗೆ ಅವರು ಶವದ ಬಳಿಗೆ ಒಂದು ಗುಳಿತೋಡಿದರು. ಶವವನ್ನು ಗಳಿಯಲ್ಲಿಟ್ಟು ಮೇಲೆ ಮಣ್ಣು ಹೊಸುವಾಗ, ಕಾರ್ಯಕ್ರಮವು ತನಗೆ ಮಣ್ಣಾ ಮುಜ್ಜಲು, ಸತ್ತವಳು ಸಣ್ಣಸ್ವರದಿಂದ ನೀರು ಕೇಳುವುದು ಕೇಳಿಬಂತು. ಗೂಡಮೊಲಿಗಳು ಬೆದರಿದರು. ಒಡನೆ ನೀರು ತಂದು ಕೊಟ್ಟು ಭಿಕ್ಷುವಿನ ಹೆಂಡತಿಯನ್ನು ಮೇಲಕ್ಕೆತ್ತಿ ಉಪಚರಿಸಿ ಆಸ್ಪತ್ರೆಗೆ ದಾಖಲು ಮಾಡಿದರು. ಆಕೆ ಈಗ ಪೂರ್ಣ ಗುಣ ಹೊಂದುತ್ತಿದ್ದಾಳೆ. ತನ್ನನ್ನು ಹಿರ್ದೊಡ್ಡ ಜಾಗದ ಬಳಿಗೆ ಕೊಂಡೊಯ್ಯಲೆಂದೂ ಅಲ್ಲಿ 'ಈಕೆಯ ಕೊನೆಯು ಗಳಿಗೆ ಇನ್ನು ೬ ತಿಂಗಳ ನಂತರ ಬರುವುದು' ಎಂದು ಜೋಸಿ ಆಕೆಯನ್ನು ಕಳಿಸಿ ಕೊಟ್ಟನೆಂದೂ ಆ ಸಜ್ಜನಿಕೆಯಿಂದ ಎನ್ನು ಬಂದ ಹಾಗೆಲ್ಲ ಹೇಳುತ್ತಿದ್ದಾಳೆ

ಬಾಕ್ಸಿ.

ಪದಕಾರ ಗವನಿಸುವದೇ?

ಈ ಆಗಸ್ಟ್ ತಾರೀಕು ೧೫ ರಂದು ಸ್ವಾತಂತ್ರ್ಯ ದಿನಾಚರಣೆಯಾಗಿದೆ. ಈ ಪವಿತ್ರ ದಿನದಂದು ಸ್ವಾತಂತ್ರ್ಯ ಸಂಗ್ರಾಮದ ಈ ವಿಜಯೋತ್ಸವದ ಪವಿತ್ರ ಸಂದರ್ಭದಲ್ಲಿ ಪ್ರತಿ ಮನೆಗಳಲ್ಲಿ ಹಬ್ಬ ಆಚರಿಸುವದು ಅತ್ಯವಶ್ಯವಲ್ಲ. ಆದರೆ ಇದಕ್ಕೆ ಸಂಬಂಧಿಸಿ ಎಲ್ಲಾ ಕಚೇರಿಗಳಲ್ಲಿ ಎಲ್ಲರಿಗೆ ಸಿಹಿ, ಕಾರ ಪಿ, ಸಿಹಿಮೆದ್ದೆ ಮುಂತಾದವು ಸ್ವಲ್ಪ ಪೆಟ್ಟಿನ ಪರಿಮಾಣದಲ್ಲಿ ಹೊರಿಯುವ ಏನಾದರೂ ಸರಕಾರವು ನೂಡುವುದೇ? ಸ್ವಾತಂತ್ರ್ಯ ದೇವಿಯ ಹೆಸರಿನಲ್ಲಿ ತಾ. ೧೫-೮-೪೭ ರಲ್ಲಿ ಕೊಡಗಿನ ಎಲ್ಲಾ ಪಾಠಾಯ, ಸೇವಾ ಅಂಗಸಂಗಳನ್ನು ಒಂದೆಡೆಸೆದ ಸಾಮೂಹಿಕ ಸಮಾರಂಭವೊಂದು ಸುಚಿತವಲ್ಲವೆ? ಜನಪ್ರಿಯ ಸರಕಾರವು ಇದಕ್ಕೆ ಗಮನಕೊಡಬೇಕಾಗಿ ಆಗ್ರಹದ ಬೇಡಿಕೆ.

'ಸ್ವಾತಂತ್ರ್ಯ ಪ್ರಿಯ'

ಪ್ರಕಟಣೆ.

ತಾರೀಖು ೧೫-೮-೪೭ರಿಂದ ನನ್ನೆನ್ನು ಕೊಡಗು ಪ್ರಾಂತಕ್ಕೆ ಆಸಿಸ್ಟೆಂಟ್ ಕಲೆಕ್ಟರ್ ರಿಕ್ರೂಟಿಂಗ್ ಅಧಿಕಾರಿಯಾಗಿ ನೇಮಿಸಿರುವರು. ಸೈನ್ಯಕ್ಕೆ ಯೋಗ್ಯ ಯುವಕರನ್ನು ಸೇರಿಸುವ ಬಗ್ಗೆ ನನ್ನ ಕಾರ್ಯಕ್ರಮಗಳನ್ನು ಮುಂದೆ ಪ್ರಚಲಿಸಲಾಗುವುದು. ದಿಟ್ಟಿನ ಪೂರಿಪಿಗೆ ಈ ವಿಳಾಸಕ್ಕೆ ಪತ್ರಿಗೆ ಬರೆಯಬಹುದು.

ಎಂ. ಬಿ. ಕರುಂಬಯ್ಯ,
ಕೊಳಗದಾಳು,
ಕೊಟ್ಟೂರು ಪೋಷ್ಟ್,
ಕೊಡಗು.

ಬೆಂಡರು ನೋಟೀಸು.

ಈ ಪಟ್ಟಣದ ಕೊಗರ್ಳಿ ಕೊಟೆಯ ತೆಕ್ಕೆಯ ಭಾಗವನ್ನು ಕೊಂಡುಕೊಳ್ಳಲಿಚ್ಛಿಸುವ ಪರಿಂದ ಬೆಂಡರುಗಳನ್ನು ಆಹ್ವಾನಿಸಲಾಗಿ ದೆ. ಬೆಂಡರುಗಳನ್ನು ತಾ. ೨೩-೮-೪೭ ರಲ್ಲು ಬೆಳಿಗ್ಗೆ 10 ಗಂಟೆಗೆ ಕೊಗರ್ಳಿ ಪೋಲೀಸಿನಲ್ಲಿ ತೆರೆಯಲಾಗುವುದು. ಅಂಗೀಕೃತ ಬೆಂಡರುದಾರರು ಮೌಲ್ಯದ ಅರ್ಧ ಹಣವನ್ನು ಅಲ್ಲಿಯೇ ಪಾವತಿ ಮಾಡಬೇಕು.

2-1 ಜಿ. ಬಿ. ಪೈಟ್
ಕೊಗರ್ಳಿ ಪೋಟೆ, ಸುಂಟಿಕೊಪ್ಪ.

FOR SALE.

No 6 Rice Mill 27 H P Hornsby oil Engine Rs 30,000/- Rice Mill alone Rs 20,000

Please apply to

C. K. THAMAIAH,
Ponnampet.
2-2 *S. Coorg.*

ಘಟನಾ ಸಮಿತಿ ಸಭೆ.

ಭಾರತ ರಾಜ್ಯ ಘಟನಾ ಸಮಿತಿಯು ಸಭೆಯು ಕಳೆದ ತಿಂಗಳ ತಾ. ೧೪ ಕ್ಕೆ ಆರಂಭವಾಗಿ ೩೧ ನೇ ತಾರೀಕು ವರೆಗೆ ನಡೆದು ಇದೇ ತಿಂಗಳ ತಾ. ೧೫ ಕ್ಕೆ ಮುಂದೆ ಬಿದ್ದಿದೆ. ಇದೇ ಆಗಸ್ಟ್ ತಾ. ೧೫ ನೇ ದಿನ ಮಧ್ಯರಾತ್ರಿ ಘಟನಾಸಮಿತಿ ಕೂಡುವುದು. ೧೫ ನೇ ತಾರೀಕಿಗೆ ಬೆಳಗ್ಗೆ ಸಭೆ ಜರುಗಿ ಅದೇ ರೀತಿ ಮುಂದೆ ಸಾಗುವದು. ಈ ಸಲದ ಅಧಿವೇಶನದಲ್ಲಿ ಪ್ರಾಂತಿಕ ಘಟನೆ ಹಾಗೂ ಯೂನಿಯನ್ ಘಟನೆಯು ಕೆಲವಂಶಗಳು ಚರ್ಚಿಸಲ್ಪಟ್ಟಿವೆ. ಪ್ರಾಂತಿಕ ಘಟನೆಯ ಬಗ್ಗೆ ತಕ್ಕ ನಿರ್ಣಯಕ್ಕೂ ಬಂದಿದೆ. ಆದರ ಮುಂದಿನ ಸಭೆಯಲ್ಲಿ ಎಲ್ಲ ವ್ಯವಸ್ಥೆಗಳು ಆಗುವವಲ್ಲವೆ ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ನಡೆಯಬೇಕಾದ ಪ್ರತಿನಿಧಿಗಳು ಎಷ್ಟಿರಬೇಕೆಂಬ ಪ್ರಾಂಗಣ ಕೊಂಡ್ರದೊಡನೆ ಸಂಸ್ಥಾನಗಳ ಸಂಬಂಧ ಮುಸ್ಲಿಂ ಲೀಗ್ ಕೆಲವು ಕರಾರುಗಳನ್ನು ಕುರಿತು ಜಿನ್ನಾಯವರು ಬಂದು ನಿರ್ಧಾರಕ್ಕೆ ಬರುವದರಲ್ಲಿ ಸಂಶಯವಿಲ್ಲ. ಈ ಘಟನಾ ಸಮಿತಿಯ ಕಾರ್ಯಕಲಾಪಗಳು ಅಕ್ಟೋಬರ್ ತಿಂಗಳಲ್ಲಿ ಕೊನೆಗೊಳ್ಳಲಿದೆಯೆಂದೂ ತತ್ಪರಲ್ಲಿ ಸ್ವತಂತ್ರ ಭಾರತದ ಪೂರ್ಣ ಘಟನೆಯು ಸಿದ್ಧವಾಗಲಿದೆಯೆಂದೂ ತಿಳಿಯಬಂದಿದೆ.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಗಳು

ಕೊಚ್ಚಿಕ್ಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸಕ್ರೆಟರಿಗಳು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮರೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2.

ಬೋಂಬೆ ಲೈಫ್ ಬಿಲ್ಡಿಂಗ್, ಪೊ. ಬಾ. ನಂ. 1, ಉದಗಮಂ.

(ಟೆಲಿಫೋನ್ ನಂ. 8393)

ಇತರ ಆಫೀಸುಗಳು—ಬೆಂಗಳೂರು, ತಿರುವೆಂಡ್ರಂ, ಕಲ್ಲಿಕೋಟೆ, ಮಂಗಳೂರು, ನಂದ್ಯಾಲ, ಮತ್ತು ಬೊಂಬಾಯಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1912ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಷೇರು ಮೊಬಲಗು ರೂ. 1,33,740, ಜಮಾ ಬಂದ ನೇವ ಕಾತೆ 3,30,268-1-8, ವಸೂಲಾದ ಸ್ಪೇವಿಂಗ್ಸ್ 2,36,454-0-3, ಸೇವಿಂಗ್ಸ್ ಬ್ಯಾಂಕ್ ಡಿವಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ದಿವಾಜಿಟ್ಟುದಾರರಿಗೆ ಜನರ ದಿವಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಯನ್ನು ತಾ. 1-12-46ರಿಂದ ಡೆಂಮಂಡ್‌ಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ದಿವಾಜಿಟ್ಟುಗಳಿಗೆ ಕೀಳದ 0-8-0 ವರಿತ ಬಡ್ಡಿ ಕೊಡಲಾಗುತ್ತೆ. ಬೆನ್ನು ಬೆಲೆ ಅಳಿಕರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ರಿಜಿಸ್ಟ್ರೇರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಚ್ಚಯ್ಯ M L C. ಗೌರವಾಧ್ಯಕ್ಷರು.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು	ಒಟ್ಟು ಆದಾಯ	1,06,09,000 ರೂಪಾಯಿ
	ಚಾಲ್ತಿಯಿರುವ ವಿಮೆ	17,74,52,000 ,,
	ಆಸ್ತಿ	6,67,60,000 ,,
	ಕಂಪೆನಿಯು ಆದಿರಣ್ಯಲ್ಲಿ ಕೊಟ್ಟ ಕ್ಲೈಮುಗಳು	8,83,62,000 ,,

ಅಂಗ ಕಛೇರಿ: ಡಿಸ್ಪೆನ್ಸ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ: ಉರ್ಜಿತಗಳನ್ನು ಸ್ವಾಗತಿಸಿವೆ

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೋಂಬೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಬೋರಯ್ಯನ ದಿನಚರಿ.

ಆಗಸ್ಟ್ ೧೫ ರ ರಜೆಗೆ ವಿವಿಧ ವಿನೋದಗಳಾಗುತ್ತಿವೆ. ಬರುತ್ತಾರೆ ಆಗಸ್ಟ್ ೧೫ ನೇ ತಾರೀಕಿನಿಂದ ಬೈಲಿನಲ್ಲಿ ಕೂಳೆತವು, ಲಾರಿ, ಗಂಡುಗಳನ್ನು ಎದುರಿಸಿದವರು ಸಾ ಆಚರಣೆಯಲ್ಲಿ ಹೆಬ್ಬುಆವನ್ಮೈ.ಟ್ಟಿರುವಂತೆ ಈದು ಬರುವದಿಲ್ಲ ಬಾವಲು ಸ್ವಾತಂತ್ರ್ಯ ಚಳವಳಿ ಪ್ರವಿದಾಗ ಅಧಿಕಾರ, ದರ್ಪಗಳಲ್ಲಿ ಮಾತಿಪವರು ಆಗ ಸ್ವ ೧೫ ರ ಆಚರಣೆಗೆ ಟೊಂಕಕಟ್ಟಿ ಇಳಿದಿದ್ದಾರೆ ಇವರು ಹೊರಿಸಲ್ಪಟ್ಟಿಕ್ಷಣಗಳನ್ನು ಟೀಕಿಗಳ ವಿಮರ್ಶೆ, ವಿಸ್ಮಿ, ಬ್ರಾಂಡಿಗೆ ಆ ಪಾರ್ಟಿಯೂ ಆಗುವ ನಾರ್ಕಿಗಳನ್ನು. ಸ್ವತಂತ್ರ್ಯ ಪೂರ್ವಕ್ಕೆ ಇದಕ್ಕಿಂಥಾ ಉತ್ತಮ ಉಡುಗರೆ ಕೊಡಲು ಇವರಿಂದ ಸಾಧ್ಯವೇ?

* * *

'ಸೇತಕ್ಕೆ ಸ್ವಾತಂತ್ರ್ಯ ಬಂದು. ಜನರಿಗೆ ಜವಾಬ್ದಾರಿ ಬರುವ ಈ ಸಮಯದಲ್ಲಿ ನನಗೆ ವಯಸ್ಸು ಮೀರಲಿಲ್ಲಾ! ಅವರೆಲ್ಲಾ ಬೈಲು ಗೂಳ್ಯದಿಂದ ಆರೋಗ್ಯ ಕಟ್ಟಿತು. ಸ್ವಲ್ಪ ಇತ್ತಲಾಗಿ ಹುಟ್ಟಿದ್ದರೆ ದೇಶಕ್ಕೆ ಬಂದ ಜವಾಬ್ದಾರಿಯಲ್ಲಿ ಯೋಗ್ಯ ಭಾರ ಹೊರಲು ನನಗೆ ಸಾಧ್ಯವಾಗುತ್ತಿತ್ತು ಇರಲಿ, ಸಾಧ್ಯವಿದ್ದವನ್ನು ಮಾಡಲು ನಾನು ಹಿಂದಿರಿಯೆನು' ಎಂದು ದೇಶಸೇವಕರೊಬ್ಬರು ಹೋರಬ್ಯನೆಡನೆ ದೇಳಿದರು. 'ಇತ್ತಲಾಗಿ' ಹುಟ್ಟಿದವರು ಬಹಳ ಜನ್ಮ ಸ್ವಲ್ಪ ಬತ್ತಲಾಗಿ ಹುಟ್ಟಿದ್ದರೆ ಸ್ವಾತಂತ್ರ್ಯ ಬಾವುಟ ಲಿ ಸಮಯಲ್ಲಿ ಅವರು ಗರ್ಭದಲ್ಲೇ ಇರಬಹುದಿತ್ತಲ್ಲವೇ?

* * *

ಮಡಿಕೇರಿಯಲ್ಲಿ ಸೋಮವಾರ ಮತ್ತು ಶುಕ್ರವಾರ, ವೀರಾಜಪೇಟೆಯಲ್ಲಿ ಶನಿವಾರ ಮತ್ತು ಬುಧವಾರ ಮೂಕ ಹೊಟೇಲುಗಳಲ್ಲಿ ಮತ್ತು ಸರಾಯಿ ಅಂಗಡಿಗಳಲ್ಲಿ ಮೊಸದ ತಿನಿಸುಗಳನ್ನು ಮಾಡಬಹುದೆಂದಿದ್ದ ನಿರ್ಬಂಧವನ್ನು ರದ್ದುಪಡಿಸಲಾಗಿದೆ.

ನಾನ್ ಗಜೆಟೆಡ್ ಉದ್ಯೋಗಸ್ಥರ ಸಂಘದ ದ್ವಿತೀಯ ಸಮ್ಮೇಳನವೂ ಮತ್ತು ವಾರ್ಷಿಕ ಮಹಾ ಸಭೆಯೂ ತಾ. ೧೪-೯-೪೭ ರಲ್ಲಿ ಮಡಿಕೇರಿ ಹೈಸ್ಕೂಲ್ ಹಾಲ್‌ನಲ್ಲಿ ನಡೆಯುವದು ಚೀಫ್ ಕಮಿಷನರು ಅಧ್ಯಕ್ಷತೆ ವಹಿಸಲಿರುವರು.

ನಾಳೆ ರವಿವಾರ ಸಾಯಂಕಾಲ ೭ ಘಂಟೆಗೆ ಮಡಿಕೇರಿ ವೇಣುಗಾಂ ಮಂದಿರದಲ್ಲಿ ಶ್ರೀ. ಸಿ ಯಂ. ರಾಮರಾಯರು 'ಮಹಾತ್ಮ ಗಾಂಧಿಯವರ ಧಾರ್ಮಿಕ ಜೀವನ' ಎಂಬ ವಿಚಾರ ಭಾಷಣ ಮಾಡಲಿರುವರು ಸರ್ವರಿಗೂ ಆಮಂತ್ರಣವಿದೆ.

ಬ್ರಿಟಿಷ್ ಸೈನ್ಯಗಳು ಭಾರತದಿಂದ ತಮ್ಮ ದೇಶಕ್ಕೆ ಹೋಗುತ್ತಿವೆ ಈ ಸೈನ್ಯಗಳ ಪ್ರಧಾನ ತುಕಡಿಯು ಕಳೆದ ವಾರ ಬೊಂಬಾಯಿಯಿಂದ 'ಎಸ್ ಎಸ್ ಜಾರ್ಜ್' ಹಡಗದಲ್ಲಿ ಹೋಯಿತು ಅವರನ್ನು ಬೀಳ್ಕೊಡುವ ಸಂದರ್ಭದಲ್ಲಿ ವೈಸರಾಯರಾಪ ಲಾರ್ಡ್ ಮೌಂಟ್ ಬೆಟನ್‌ರವರು ಇವರ ಕಾರ್ಯಕಲಾಪವನ್ನು ಹೊಗಳಿದರು. ಪಂಡಿತ ಜವಾಹರರು ಪಾಕಿಸ್ತಾನ ಪ್ರತಿನಿಧಿಗಳೊಡನೆ ಸ್ನೇಹ ಮತ್ತು ಮಾತುಕತೆಗಾಗಿ ಅಂಬಾಲಕ್ಕೆ ಅವಶ್ಯ ಹೋಗಬೇಕಾದ ಕಾರಣ ನೆಹರೂರವರ ಸಂದೇಶವನ್ನು ಮೇಜರ್ ಜನರಲ್ ಕೊಹಂದೆರ ಕಾರ್ಯಪ್ಪನವರು ಓದಿದರು

ಡಿಫೆನ್ಸ್ ಬೋರ್ಡ್ ಮೆಂಬರು ಶ್ರೀ ಆಬೇಲ್‌ವಾಸ್‌ರವರ ಪತ್ನಿ ತಾರೀಕು ೨೫-೮-೪೭ನೇ ಗುರುವಾರ ದಿವಸ ಬೆಳಿಗ್ಗೆ ೬ ಗಂಟೆಗೆ ಸ್ವರ್ಗಸ್ಥರಾದರು

ಕೊಡಗು ವ್ಯವಸಾಯ ಇಲಾಖೆ.

ಭೈಸೂರಿನ ರೇಷ್ಮೆ ಕೈಗಾರಿಕಾ ಶಾಲೆಯಲ್ಲಿ ತರಬೇತು ಹೊಂದಲು ಕೀವ್ರ ಇಚ್ಛೆಯಿರುವ ಕೊಡಗಿನ ರೈತರಿಂದ ಅರ್ಜಿಗಳನ್ನು ಆಪ್ತಾನಿಸಲಾಗಿದೆ ತರಬೇತಾದ ನಂತರ ತಮ್ಮ ತಮ್ಮ ಮನೆಗಳಲ್ಲಿ ಇದನ್ನು ಗುಡಿ ಕೈಗಾರಿಕೆಯೊಗಿ ಕೈಗೊಳ್ಳಲು ಅವರು ತಯಾರಿರತಕ್ಕದ್ದು. ಪ್ರಥಮ ಬಾರಿಗೆ ಕೊಡಗಿನಿಂದ ಆರು ಜನರನ್ನು ತರಬೇತಿಗೆ ಕಳುಹಿಸುವದಾಗಿ ನಿಶ್ಚಯವಾಗಿದೆ ಕನ್ನಡವನ್ನು ಓದಲು ಬರೆಯಲು ತಿಳಿದಿದ್ದರೆ ಸಾಕು. ವಯಸ್ಸಿನ ನಿರ್ಬಂಧ ಇಲ್ಲ ಹೆಂಗಸರೂ ಅಮೇದ್ವಾರರಾಗಬಹುದು. ಯಾವ ಸ್ಥಳದಲ್ಲಿ ಎಷ್ಟು ಸಮಯದ ವರೆಗೆ ತರಬೇಕೆಂಬುದನ್ನು ಹಿಂದಿನಂತೆ ನಿಶ್ಚಯಿಸಲಾಗುವದು. ತರಬೇತಿನ ಅವಧಿಯಲ್ಲಿ ಪ್ರತಿಯೊಬ್ಬನಿಗೆ ಮಾಸಿಕ ರೂ. 20 ರಷ್ಟು ಸಹಾಯ ಧನ ಕೊಡಲಾಗುವದು. ಅರ್ಜಿಗಳನ್ನು ಅಂಗೀಕರಿಸುವ ಕಡೇ ತಾರೀಕು 15-9-47.

ವ್ಯವಸಾಯ ಆಫೀಸರ್
ಮಡಿಕೇರಿ.

ಕತ್ತಳೆ ಹಣ್ಣಿನ ವ್ಯಾಪಾರಗಾರರಿಗೆ

ಸುಸಮಯ.

ಪೊದ್ದರ ಮೊಟ್ಟೆ ತೋಟದ ಬೇಸಿಗೆ ಕತ್ತಳೆ ಫಸಲನ್ನು ಕೊಳ್ಳಲಿಚ್ಛೆವುಳ್ಳವರು ಸೆಪ್ಟೆಂಬರು ತಿಂಗಳು ಹದಿನೈದನೇ ತಾರೀಕಿನೊಳಗೆ ತಮ್ಮ ಕೆಳಗೆ ನಮೂದಿಸಿರುವ ವಿಳಾಸಕ್ಕೆ ದರಕಾಸ್ತು ಕಳುಹಿಸಿಕೊಡುವದು ಅಂಗೀಕೃತ ದರಕಾಸ್ತುದಾರನು ಅರ್ಧ ಮೊಬಲಗನ್ನು ಅಲ್ಲೇ ಪಾವತಿ ಮಾಡಬೇಕು

ಅಸಿಸ್ಟೆಂಟ್ ಮೇನೇಜರು,
ಪೊದ್ದರ ಮೊಟ್ಟೆ ತೋಟ,
ಚೆಟ್ಟಳ್ಳಿ
ಅಥವಾ
ಜಿ ಎಂ ಮಂಜುನಾಥಯ್ಯ,
ಗುಂಡುಕುಟ್ಟಿ ತೋಟ,
1-1 ಸುಂಟಿಕೊಪ್ಪ.

BULL FOR SALE.

A Gir Breeding Bull will be sold by public auction at Gonicoppal at 2 P. M on the 21st September 1947 by the undersigned. The sale is subject to Confirmation by The Chief Commissioner of Coorg.

C. K KALAPPA,
Chief Veterinary Officer.

ANOUNCEMENT

We have the pleasure to anounce that Messers Coorg Commercial Corporation Limited, Mercara have been appointed Sub-Agents for famous T R I. (British) Radios for the Province of Coorg and North Malabar and South Canara Districts

Ranah Commercial Corporation, Ltd.,
(Sole Distributors for South India Hyderabad and other States)
Gandhinagar,
BANGALORE CITY.

ELEPHANTS FOR SALE.

About 12 elephants (both male and female) will be sold by auction at Tittimathi at 2 P. M, on 13-9-1947. For particulars apply to the Chief Forest Officer, Coorg, Mercara.

C M. Kushalappa,
Chief Forest Officer, Coorg.

—— ಸ್ವಾತಂತ್ರ್ಯ ದಿನಾಚರಣೆ ——

ಗೋಣಿಕೊಪ್ಪ.

ತಾರೀಕು ೧೫-೮-೪೭ ರಲ್ಲೇ ಪಟ್ಟಣದ ಬೀದಿಗಳು, ಮನೆಗಳು ಕಳಿಗುತೋರಣಗಳಿಂದಲಂಕೃತವಾಗಿದ್ದವು. ಈ ದಿನ ರಾತ್ರೆ ಶ್ರೀ. ಶಿರ್ಲಾಲಾನಂದ ದಾಸರವರಿಂದ ಹರಿಕತೆ ನಡೆಯಲು ಮಧ್ಯಾಂತ್ರೆ ಸ್ವಾತಂತ್ರ್ಯೋದಯದಸಮಯಕ್ಕೆಮಂಗಳಪೂಜೆ ನಡೆಯಿತು. ಬೆಳಿಗ್ಗೆ ಮುನೀಶ್ವರ ದೇವಸ್ಥಾನದಲ್ಲಿ ಪೂಜೆ ನಡೆಯಿತು. ಹಿಂದೂ ಮುಸ್ಲಿಮರು ವಿಕವಾಗಿ ನೆರೆದಿದ್ದರು. ಕೈಕೇರಿ ಗ್ರಾಮಸ್ಥರು ಇಲ್ಲಿಗೆ ಬಂದು ಸೇರಿದರು. ವಾದ್ಯಬವರಿಗೆ ಬಟ್ಟೆ ವಿತರಣೆಯು ನಂತರ ಮಹಾಮೇರವಣಿಗೆ ನಡೆಯಿತು. ಡಾ. ಪಿ. ಟಿ. ಅಪ್ಪಚ್ಚುರವರು ಧ್ವಜಾರೋಹಣಮಾಡಿದರು. ಧ್ವಜದ ಗೌರವಾರ್ಥ ೩೧ ಗುಂಡುಗಳನ್ನು ಹಾರಿಸಲಾಯಿತು. ನಂತರ ಪ್ರತಿಜ್ಞೆಯು ಶ್ರೀ. ಪೊನ್ನಿಮಾಡ ನೂಚಯ್ಯನವರಿಂದ ಓದಲ್ಪಟ್ಟಿತು. ಶ್ರೀ. ಜಮ್ಮಾಡ ಮಾದಪ್ಪನವರು ಶ್ರೀ. ಜಿ ಎಂ. ರಬ್ಬಾಣಿಸಾಹೇಬರು ಮೊತಾಡಿದರು. ಊಟೋಪಚಾರದ ನಂತರ ಶ್ರೀ. ಜಮ್ಮಾಡ ಮಾದಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಶ್ರೀ. ಗಳಾದ ಬಿ ಎಸ್. ನಾರಾಯಣಬಿಯರ್ಸ್, ತೊಡಂಡೆರ ಜಂಗಪ್ಪ, ಜಂಗವಂರ ಸೋಮಯ್ಯ, ಮಾಚಿಮಂಡ ನಂಜುಂಡ, ತಡಿಯಂಗಡ ಸುಬ್ಬಯ್ಯ ಮೊದಲಾವನರು ಭಾಷಣ ಮಾಡಿದರು.

ಸಿದ್ದಾಪುರ.

ಸಿದ್ದಾಪುರ ಪೊಲೀಸ್ ಠಾಣೆಯ ಎದುರು ಈ ನಾಡಿನ ಜನರು ಸೇರಿ ಧ್ವಜಾರೋಹಣ ಮಾಡಿದರು. ಮೆರವಣಿಗೆಯ ನಂತರ ಶ್ರೀ. ಪುಚ್ಚಿಮಾಡ ಪೂಪಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀ. ಗಳಾದ ಚೇನಂಡ ಕಾರ್ಯಪ್ಪ ಮತ್ತು ಉಳ್ಳಿಯಡ ದೇವಯ್ಯನವರುಗಳು ಭಾಷಣ ಮಾಡಿದರು. ಶಾಲಾ ಮಕ್ಕಳಿಗೂ ಸಾರ್ವಜನಿಕರಿಗೂ ಆಟೋಟಗಳ ಸ್ಪರ್ಧೆ ನಡೆಯಿತು. ಮಿಸೆಸ್ ಮೂಳೇರ ಗಣಪತಿಯವರು ಬಹುಮಾನ ವಿತರಣೆ ಮಾಡಿದರು.

ಕೆದಮುಳ್ಳೂರು

ಈ ಗ್ರಾಮದ ಮತ್ತು ನೆರೆಊರಿನ ಜನರು ಶ್ರೀ ಕೀರಿಯಂಡ ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿಗರು. ತೋಮರ ಶಾಲೆಯ ಅಧ್ಯಾಪಕರಾದ ಶ್ರೀ ಎಂ. ಕೆ. ಉತ್ತಪ್ಪನವರು ಭಾಷಣ ಮಾಡಿದರು ಗ್ರಾಮದ ಧುಡೇಪರ ದೇವಸ್ಥಾನಕ್ಕೆ ಮೆರವಣಿಗೆ ಹೊರಟು ಪೂಜೆ ನಡೆದ ನಂತರ ಶ್ರೀ. ಮುಂಡ್ಯೋಕಂಡ ಉತ್ತಪ್ಪನವರಿಂದ ಧ್ವಜಾರೋಪಣ ನಡೆಯಿತು. ಊಟ ಉಪಚಾರದ ನಂತರ ಉತ್ಸವ ಸಮಾಪ್ತಿಗೊಂಡಿತು.

ರಾಮಪುರ

ತಾರೀಕು ೧೫ ರ ರಾತ್ರೆ ಭಜನೆ, ಪ್ರಾರ್ಥನೆಗಳಿಂದ ಕಳೆದು ಮರನೆ ದಿನ ಕೂಡಿಗೆ, ಹುಲುಸೆ, ಕಣಿವೆ ಗ್ರಾಮಸ್ಥರು ಇಲ್ಲಿಯ ಶಾಲೆಯಲ್ಲಿಯೂ, ಶ್ರೀರಾಮಲಿಂಗೇಶ್ವರ ದೇವಸ್ಥಾನದಲ್ಲಿಯೂ ಧ್ವಜಾರೋಹಣ ಮಾಡಿ, ರಾಷ್ಟ್ರೀಯ ಮುಂದಾಳುಗಳ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಲಾಯಿತು. ನಂತರ ಶ್ರೀ. ಕಂಡ್ರುತಂಡ ಐಯ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನೆರೆಯಿತು. ಶ್ರೀಗಳಾದ ಕೆ. ಟಿ. ಐಯ್ಯಣ್ಣ, ಪುಟ್ಟು ಸ್ವಾಮಿ, ಕೆ. ನಂಜಪ್ಪ, ಕೆ ಟಿ. ಕೆ ನಂಬಿಶನ್ ಮತ್ತು ಎಚ್ ಅಪ್ಪಯ್ಯಗೌಡ ಇವರುಗಳು ಭಾಷಣ ಮಾಡಿದರು ಆಟೋಟಗಳಲ್ಲಿ ಗೆದ್ದವರಿಗೆ ಶ್ರೀ. ಬಿ. ಮುದ್ದಯ್ಯನವರು ಬಹುಮಾನ ಹಂಚಿದರು.

ಜುಡಿಕೇರಿ.

ಬೆಳಿಗ್ಗೆ ೮-೩೦ ಕ್ಕೆ ಶ್ರೀಭಾತಫೇರಿ ನಡೆಸಿ ಶಾಲೆಯ ಆವರಣದಲ್ಲಿ ಧ್ವಜಾರೋಹಣ ಮಾಡಲಾಯಿತು. ಧ್ವಜದ ಗೌರವಾರ್ಥ ೩೧ ಗುಂಡುಗಳನ್ನು ಹಾರಿಸಲ್ಪಟ್ಟವು. ಮುಸ್ಲಿಮರ ಮಸೀದಿ, ಹಿಂದೂಗಳ ದೇವಸ್ಥಾನಗಳಲ್ಲಿ ಪೂಜೆ ನಡೆಯಿತು. ೧೦ ಗಂಟೆಗೆ ಪಟೆಯ ಬೀದಿಗಳಲ್ಲಿ ಮಹಾಮೆರವಣಿಗೆ ಯಾಯಿತು. ಈ ದಿನದ ಜ್ಞಾಪಕಾರ್ಥ ಹುಲ್ಲೇರಿ ದೇವಾಲಯದ ಎದುರುಗಡೆ ಒಂದು ಪೂಜಿನ ಗಿಡವನ್ನು ಮತ್ತೊಂದು ಸಂಪಿಗೆಗಿಡವನ್ನೂ ನೆಡಲಾಯಿತು ನಂತರ ಶಾಲಾ ಮಕ್ಕಳಿಗೂ ಸಾರ್ವಜನಿಕರಿಗೂ ಆಟೋಟಗಳ ಸ್ಪರ್ಧೆ ನಡೆಯಿತು. ನಂತರ ಶ್ರೀ ಕಾಕತೂರ ಗಣಪತಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನೆರೆಯಿತು ಪ್ರಭಾಕರ, ಶ್ರೀ ಪಿ ಜಿ ಮುದ್ದಯ್ಯ, ಎ. ಜಿ ನಂಜಪ್ಪ ಮುತ್ತಣ್ಣ ಗಂಧರವರಿಂದ ಸಂಗೀತ ನಡೆಯಿತು. ನಂತರ ಶ್ರೀಗಳಾದ ಎಂ. ಆರ್ ಕೃಷ್ಣಯ್ಯ, ಎ. ಎ ಮಾದಪ್ಪ, ಎಚ್. ಪಿ. ಸಂಜಪ್ಪ, ಬಿ. ಡಿ. ಗಣಪತಿ, ಎಚ್. ಎ. ಕುರಾಲಪ್ಪ, ಎಂ. ಬಿ. ಬೋಪಯ್ಯ, ಟಿ. ಎಚ್. ಕರಿಯಪ್ಪ, ಮೊದಲಾವವರು ಭಾಷಣ ಮಾಡಿದರು.

ಸೋಮವಾರಪೇಟೆ.

ಇಲ್ಲಿ ಬೆಳಿಗ್ಗೆ ೯ ಗಂಟೆಗೆ ತಾಲೂಕಾ ಖಜೀರಿಯಲ್ಲಿ ಸುಬೆದಾರರವರಿಂದ ಧ್ವಜಾರೋಹಣ ನಡೆಯಿತು ೮ ಗಂಟೆಗೆ ಆಂಜನೇಯ ದೇವಾಲಯದಲ್ಲಿ ಪೂಜೆ ನಡೆಯಿತು. ನಂತರ ಹಳಿರುತೋರಣಗಳಿಂದ ಸುಸೋಲಂಜಕವಾಗಿ ಅಲಂಕೃತಗಾಗಿದ್ದ ಬೀದಿಗಳಲ್ಲಿ ಮೆರವಣಿಗೆ ಜರಿಯಿತು. ಶಾಲಾ ವೈದ್ಯಾನದಲ್ಲಿ ಶ್ರೀಮತಿ ಡಿ. ಸಾಕಮ್ಮನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀಗಳಾದ ಬಿ. ಬಿ. ಆಸ್ಯಯ್ಯ, ಎಚ್. ಟಿ. ಮುತ್ತಣ್ಣ, ಡಿ. ಎನ್. ದೇವಯ್ಯ, ಕೆ ಚಂದ್ರಶೇಖರಯ್ಯ, ಕಿವಿಕೆಂಡ್ ಸಾವರ್, ಸಿಂಗಾರಿ ಮೊದಲ್ಪ ಇವರೇ ಮೊದಲಾದವರು ಭಾಷಣ ನೂಡಿದರು. ಆಟೋಟಗಳ ಸ್ಪರ್ಧೆಯ ನಂತರ ಸಾಯಂಕಾಲ ೫ ಗಂಟೆಗೆ ಶಾಲಾ ಹಾಲ್ ನಲ್ಲಿ ಬಹುಮಾನ ವಿತರಣೆ, ಸಂಗೀತ ಭಾಷೇರಿಗಳು ನಡೆದವು. ೮ ಗಂಟೆಗೆ ಗಣಕಾರ ಭವನದಲ್ಲಿ ಭೋಜನ ನಡೆಯಿತು.

ಚೆನ್ನಯ್ಯನಕೋಟೆ.

ಇಲ್ಲಿಯ ಶಾಲೆಯ ಆವರಣದಲ್ಲಿ ಶ್ರೀ ಕುಟ್ಟಂಡ ಗಣಪತಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಧ್ವಜದ ಗೌರವಾರ್ಥ ೩೧ ಗುಂಡುಗಳನ್ನು ಹಾರಿಸಲಾಯಿತು. ನಂತರ ಮೆರವಣಿಗೆಯು ಪೊಳೆಬೆಟ್ಟಕ್ಕೆ ಹೋಗಿ ಅಲ್ಲಿಯು ದಿನಾಚರಣೆಯಲ್ಲಿ ಭಾಗವಹಿಸಿ ನಂತರ ಶ್ರೀ ಮಂದೇಪಂಡ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀ. ಮುಂಡಂಡ ಮಾಚಯ್ಯನವರು ಭಾಷಣ ಮಾಡಿದರು. ಆಟೋಟಗಳಲ್ಲಿ ಜಯಶೀಲರಾದವರಿಗೆ ಶ್ರೀಮತಿ ಐಚೆಟ್ಟಿರ ಮೊದಲಗಡಿಗಳು ಬಹುಮಾನಗಳನ್ನು ಕೊಟ್ಟರು.

ಬಾಳ್ಕಿ.

ಶನಿವಾರಸಂತೆಯಲ್ಲಿ ನಡೆಸಿದೆಯೇನು,

ತಾರೀಕು ೧೫-೮-೪೭ ರ 'ಕೊಡಗು' ಪತ್ರಿಕೆಯಲ್ಲಿ ರವಿವಾರ ಸಂತೆಯಲ್ಲಿ ತಾ ೧೫-೮ ರಂದಲ್ಲಿ ಆಚರಿಸಿದ ಸ್ವಾತಂತ್ರ್ಯೋತ್ಸವ ದಿನಾಚರಣೆಯ ವರ್ತಮಾನ ಇದೆ. ಆದರಲ್ಲಿ 'ಮುಸ್ಲಿಮರು ಮಸೀದಿಯ ಮುಂದೆ ವಾದ್ಯಮಾಡಕೂಡದೆಂದು ತಡೆದದ್ದರಿಂದ ಹೆಸರಂಬೆಗೆಯಲ್ಲಿ ಹಿಂದೂಗಳಿಗೆಂದೂ ಮುಸ್ಲಿಮರು ಯೋಗ್ಯರೀತಿಯಲ್ಲಿ ಸಹಕರಿಸಲಿಲ್ಲವೆಂದೂ ಮುಸ್ಲಿಂ ಶಿಕ್ಷಣಕ್ಕೆ ಎಡೆಕೊಟ್ಟಿಲ್ಲವೆಂದೂ ಇರ್ತೆ ಇದೆ' ಎಂದು ಸ್ಪಷ್ಟವಾಗಿದೆ. ಅಂದಿನ ಸತ್ಕಾರ್ಯವನ್ನು ಜನತೆಯ ಮುಂದಿಡಲು ಈ ಲೇಖನ ಬಾಗಿದೆ ಹೋಬಳಿ ಪಾರುಪತ್ಯಗಾರರು ವರು ಇತರ ಸರಕಾರಿ ಉದ್ಯೋಗಿಸ್ಥರ ವಿಸಹ ಸ್ಥಳಿಕ ಮುಂದಾಳುಗಳನ್ನು ತಾರೀಕು ೯-೮-೪೭ ರಲ್ಲಿ ಕರೆಸಿಕೊಂಡು ಯಾವ ಭಾವನ ರೀತಿಯ ಕಾರ್ಯಗಳನ್ನು ಆಚರಿಸಬೇಕೆಂದು ಸಲಹೆ ಪಡೆದು ಅದರಂತೆ ಎಲ್ಲಾ ಕಡೆಗಳಲ್ಲಿ ಸಭೆಗಳನ್ನು ನಡೆಸಿದರು ಇವುಗಳಲ್ಲಿ ಹಿಂದೂ ಮುಸ್ಲಿಮರು ಉತ್ಸಾಹದಿಂದ ಎದುರಿನಲ್ಲಿ ತಳಿರು ತೋರಣಗಳಿಂದ ಶೃಂಗರಿಸಬೇಕೆಂತಲೂ ಚಂದಾ ಹಣ ವಸೂಲಿಮಾಡಿ ಎಲ್ಲರಿಗೂ ಸಿಹಿಯಾದ ತೆಂಪಿಸಿ ಕೆಂತಲೂ ರಾಷ್ಟ್ರೀಯ ಮುಂದಾಳುಗಳ ಭಾವಚಿತ್ರಗಳ ಮತ್ತು ರಾಷ್ಟ್ರಗಳ ಸ್ವಾಧೀನದ ಜೊತೆಯಲ್ಲಿ ಮೆರವಣಿಗೆ ಹೊರಡಬೇಕೆಂದೂ, ಆ ಮೆರವಣಿಗೆಯಲ್ಲಿ ವಾದ್ಯವಿಲ್ಲದೆ ರಾಷ್ಟ್ರಗೀತೆಯನ್ನು ಪಾಡಿಕೊಂಡು ಜಯಘೋಷದಿಂದ ಹೋಗಬೇಕೆಂದೂ ಬಹು ಮತದಿಂದ ತೀರ್ಮಾನಿಸಲಾಗಿತ್ತು.

ಆ ರೀತಿಯಾಗಿ ಅರ್ಮಾನಪಾಸಾದ ನ್ನು ಅಂದು ಉಲ್ಲಂಘಿಸಿ, ತೀರ್ಮಾನ ಮಾಡಿದ ಕವಿಬಿಯುವನೇ ಗುದುಗಳಲೆ ದೇವನಾಸದಿಂದ ಮೂರ್ಕಾಲು ಚಾಕಿವರೆಗೆ ವಾದ್ಯವನ್ನು ಮಾಡಿಸಿಕೊಂಡು ಬಂದು ಪೇಗರ್ ಪೆಟ್ಟಿಗೆ ಹೋಗಬೇಕಾದರೆ ಮಸೀದಿಯ ಮುಂದೆ ವಾದ್ಯಮಾಡಿಕೊಂಡು ಹೋಗಬೇಕೆಂದು ಕೆಲವರು. ಅಲ್ಲಿಗೆ ಹೋಗುವುದೇ ಬೇಡವೆಂದು ಹಲವರು. ಗಾಂಧೀಜಿಯವರ ಅಹಿಂಸಾ ತತ್ವದಂತೆ ಮಸೀದಿಯ ಮುಂದೆ ವಾದ್ಯ ನಿಲ್ಲಿಸಿ ಹೋಗಬೇಕೆಂದು ಕೆಲವರು ಪಟ್ಟು ತೆಮ್ಮೊಳಗೆ ಚರ್ಚೆ ನಡೆಸಿದರು. ಅಷ್ಟಿಂ ನೆಯಿಂದ ಹೋಗಬೇಕೆಂದು ಹೇಳಿದವರ ನ್ನು ಕಾಂಗ್ರೆಸ್ ವಿರೋಧಿಗಳಾದರು ಮತ್ತು ಊರಿನ ಕೆಲವು ಪುಂಡಾಟಿಕೆ ಜನರನ್ನು ತುಚ್ಛಾಕಾರವಾಗಿ ಮೂಕಾನಾಡಿ ದಬ್ಬಾಳಿಕೆಯಿಂದ ಶೃಂಗರಿಸಿದ ರಥವನ್ನು ಕಚೇರಿಯ ಕಡೆ ಹೊರಡಿಸಿಕೊಂಡು ಹೋದರು. ಇದರಲ್ಲಿ ನ್ಯಾಯ ಅನ್ಯಾಯಗಳ ಸಂಬಂಧ ಒಂದೇ ಕೋಮಿನವರಿಗೆ ಹೊಡೆದಾಟದ ಪ್ರಸಂಗವು ಬಂದಿತು. ಇದನ್ನು ನೋಡುತ್ತಿದ್ದ ಮುಸ್ಲಿಂ ಪ್ರಮುಖರು ಏನೋ ಬಾಂಧವರನ್ನೂ ಸಮಾಧಾನ ಪಡಿಸಿದರು. ಅಲ್ಲಿಂದ ತಮ್ಮ ಮಸೀದಿಯ ಮುಂದೆ ಸ್ವಾತಂತ್ರ್ಯ ದಿನಾಚರಣೆಯ ಹುರುಪು ಸಂತೋಷಗಳನ್ನು ತೋರಿಸಲು ಆವೇರಗೊಂಡಿದ್ದ ಮುಸ್ಲಿಮರ ಮನಸ್ಸಿಗೆ ನೋವುಂಟಾಯ್ತು. ಮಸೀದಿಯ ಮುಂದೆ ರಥವು ಬಂದಾಗ ತಮ್ಮ ಮತದ ರಾಷ್ಟ್ರ ಪ್ರಕಾರ ವೈಯೋವ್ಯರ್ಧನೆ ನಡೆಸಿ ಹಣ್ಣುಹೆಂಪಲುಗಳನ್ನು ಹಂಚಬೇಕೆಂದಿದ್ದ ಹಣ್ಣುಗಳನ್ನು ಎಲ್ಲಾ ಕೋಮಿನವರಿಗೂ ಹಂಚಲಾಯ್ತು. ಆನಂತರ ಸುಮಾರು ಮೂರುವರೆ ಸಾವಿರ ಜನತೆಯು ವಿರಾಮ ಪೊಂದಿತು.

ಸುಮಾರು ಐದುಕಾಲು ಗಂಟೆಯ ಸಮಯಕ್ಕೆ ನಾನಾ-ಜನಿಕ ವಿಹಿಂಗು ಗುಡುಗುಗಳಲೆ ಜಯಘೋಷ ಬಾನಿಯಲ್ಲಿ ಸಂರಿತು. ಕೊಡಗು ಕಾಂಗ್ರೆಸ್‌ಪರ ಪ್ರೊ ಸ್ಪೆಂಷೇಯಿಯವ ಬಂದಿತ್ತ ಶ್ರೀಯುತ ಐಯ್ಯಪ್ಪನವರನ್ನು ಅಧ್ಯಕ್ಷರನ್ನಾಗಿ ಸಾಮು ವಾರುಪತ್ಯಗಾರರವರು ಆರಿಸಿದರು ಆದರೆ ಇದರಲು ಆದಕ್ಕೆ ಎದಿಯನ್ನು ಕೊಡದೆ ಶ್ರೀ ಜೆಚ್ ಎಂ. ಪುಷ್ಪಣ್ಣರವರನ್ನು ಆರಿಸಿದರು ಕೂಡಲೇ ಅಧ್ಯಕ್ಷರು ಸ್ಥಾನವನ್ನು ವಹಿಸಿಕೊಂಡು ಅಧ್ಯಕ್ಷ ಭಾಷಣವನ್ನು ವ್ಯಾಖ್ಯಾನಿಸಿದರು. ಇಲ್ಲಿಯ ರಾಯ್ಯ ಕಾರ್ಯಕ್ರಮಗಳು ಸರಿಯಾಗಿಲ್ಲವು ವರಿಂದ ಬಹಳ ಜನರು ಹೊರಟು ಹೋದರು ಶ್ರೀಯುತ ಐಯ್ಯಪ್ಪನವರು ಮಂ ನಂತರ ಧನ್ಯವಾದಗಳ ನಂತರ ಸಭೆಯು ಒಕ್ಕಾಕ್ಷಾಯಿತು

ಇದೇ ಭಾರವಲ್ಲಿ ಹಿಂದೂ ಮುಸ್ಲೀಮರು ಸಹಕರಿಸಿ ಉತ್ಸವವನ್ನು ಯಶಸ್ವಿಯಾಯಿಂದು ಸ್ಪಷ್ಟಪತ್ರಿಕೆಯಿಂದ ತಿಳಿದು ಅಮಿತ ಸಂತೋಷವಾಯ್ತು. ರವಿವಾರ ಸಂತೆಯು ಇಂದಿನ ವರ್ತಮಾನದಿಂದ ನಿಷ್ಪಕ್ಷವಾಗಿದೆ

'ಜಿ. ಎಂ.'

ಬೇಕಾಗಿದೆ.

ಕಕ್ಕಬ್ಬೆಗೆ ಒಬ್ಬರಿಗೆ ಗೊತ್ತಿರುವವರು, 18 ವಯಸ್ಸಿನಿಂದ 23 ವಯಸ್ಸಿನೊಳಗೆ ಇರುವವರು ಮತ್ತು ಒಂದನೇ, ಎರಡನೇ ಮತ್ತು ಮೂರನೇ ಫಾರಂ ಓದಿದ ಹುಡುಗರು. 15-16 ವಯಸ್ಸಿನೊಳಗಿರುವವರು, ಮಿಲಿಟರಿಯಲ್ಲಿ ಟ್ರೇನಿಂಗಲ್ ಟ್ರೇನಿಂಗ್‌ಗೆ ಸೇರಲು ಇರಾದೆ ಇರುವವರು ನೂ. ರಾ ಶ್ರೀ. ಅಲ್ಲಾರೆಂದ ಮಂದಣ್ಣನವರನ್ನು ಈ ಕೆಳಗಿನ ಸ್ಥಳಗಳಲ್ಲಿ ಬಿ. ಬಿ. ಗಳಲ್ಲಿ ನಮೋದಿಸಿಸುವ ತಾರೀಕುಗಳಲ್ಲಿ ನೋಡಬಹುದು.

ಸುಡಿಕೇರಿ ಸೆಪ್ಟೆಂಬರ್ 8 ಮತ್ತು 9ನೇ ತಾರೀಕು ಬೆ. ಬಿ.
ವೀರಾಜಪೇಟೆ – 11 ನೇ ತಾ. ಬೆ. ಬಿ.
ನಾಪೋಕ್ಲು – 13 ನೇ ,, ,,
ಪೊನ್ನಂಪೇಟೆ – 15 ನೇ ,, ,,
ಸೋಮವಾರಪೇಟೆ – 17 ನೇ ,, ,,

ಅಪಪ್ರಚಾರ

ಕೊಡಗಿನ ಭವಿಷ್ಯದ ಪ್ರಶ್ನೆಯೊಂದು ನಾನಾ ರೀತಿಯ ಅಪಪ್ರಚಾರಕ್ಕೂ, ನಾನಾರೀತಿಯ ವ್ಯಕ್ತಿದೂಷಣೆಗೂ ಎಡೆಕೊಟ್ಟಿದೆ. ಈ ಪ್ರಶ್ನೆಯನ್ನೆತ್ತಿಕೊಂಡು ವಾರ್ತೆ ಕಟ್ಟಲು ಹೊರಟವರು ಕೆಲವರಾದರೆ ಈ ಪ್ರಶ್ನೆಯ ನೋಗಿನಿಂದಲೇ ಕೋಮುವಾರು ವಿಷ ಬೀಜವನ್ನು ಚೆಲ್ಲುತ್ತಿರುವವರು ಕೆಲವರು. ಕೆಲವು ವರ್ಷಗಳ ಹಿಂದೆ ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಬೇಕೆನ್ನುವವರು ಕೊಡಗಿನ ಯೂರೋಪಿಯನ್ ಪ್ಲಾಂಟರುಗಳ ಸಹಾಯ ಪಡೆದಿರುವರೆಂಬ ಅಪಪ್ರಚಾರ ನಡೆಯಿತು. ಈಗ ಕೊಡಗು ಪ್ರತ್ಯೇಕವಿರಬೇಕೆನ್ನುವವರು 'ದೆಲ್ಲಿಗೆ ಹೋದಾಗ ಬುಲ್ ಸಾಹೇಬರಿಂದ ದುಡ್ಡು ಪಡೆದಿದ್ದಾರೆ. ಫ್ರೇಜರ್‌ಪೇಟೆಯ ರಾಮಚೆಟ್ಟಿಯವರು ದೆಲ್ಲಿಗೆ ಹೋದರು. ಇವರ ಲಾಭವೆಲ್ಲಿಂದ ಬಂತೆಂದು ಕೇಳಬೇಡಿರಿ ಫ್ರೇಜರ್‌ಪೇಟೆಯ ವ್ಯಾಪಾರಿಯೊಬ್ಬ ಯುದ್ಧಕಾಲದಲ್ಲಿ ಲಾಭಮಾಡಿದರು' ಎಂದು ಅಪಪ್ರಚಾರ ನಡೆದಿದೆ ಕೊಡಗನ್ನು ಬೇರೆ, ಪ್ರಾಂತಕ್ಕೆ ಸೇರಿಸಬೇಕೆನ್ನುವವರು ಶ್ರೀಮತಿ ಸಾಕಮ್ಮನವರ ಸಹಾಯ ಪಡದು ದೆಣಿಗಿದ ಕಾಲವೂ ಒಂದಿತ್ತು. ಈಗಲೂ ಸಿದ್ದಣ್ಣನವರ ಅಭಯಹಸ್ತ ಈ ಸಂಯೋಜನವಾದಿಗಳ ತಲೆಯಮೇಲೆ ಇದಯೆಂದೂ ಪ್ರಚಾರವಾಗಿದೆ ಎಲ್ಲೂ ಕಡೆಯಲ್ಲಿಯ ಜನರು ತಮಗೆ ಸರಿಯೆಂದು ತೋರಿಬಂದದನ್ನು ಸಾಧಿಸಲು ಹೊರಟಿರುವಾಗ ಇನ್ನೊಬ್ಬರನ್ನು ಆಪ್ಪಗೆಯುವ ವಿಚಾರವೇಕೆ? ಒಂದುವೇಳೆ ಈ ಎರಡು ಪಕ್ಷದವರು ದೇಶದ ಭವಿಷ್ಯದ ಕಾರಣಕ್ಕಾಗಿ ಸಿರಿವಂತರಿಂದ ಸಹಾಯಪಡೆದು ಇಲ್ಲೇ ಸಾಮಾನ್ಯ ಜನರಿಂದ ಚಂದಾ ಎತ್ತಿ ಶ್ರಮಿಸುತ್ತಿರುವದು ಸತ್ಯವಾದರೆ 'ಕಮ್ಯೂನಿಸ್ಟ್' ಎಂದು ಹೇಳಕೊಳ್ಳುವವರು ಸ್ವಾರ್ಥ ದೃಷ್ಟಿಯಿಂದ ಸಿರಿವಂತರನ್ನು ಮಾವರಾಗಬೇಕೆಂದು ಹುಡುಕುವುದು ಆಂಥನೀಯವಾದುದಲ್ಲ. ಈ ಧನಾಪೇಕ್ಷ ಮೂವಂದಿರನ್ನು ಹುಡುಕುವ ವೇಶಧಾರಿ ಕಮ್ಯೂನಿಸ್ಟರು ಲಾಭಬುದ್ಧಿಕರನ, ರಾಷ್ಟ್ರೀಕರಣವೇ ಮೊತ್ತೆಲು ಎಮ್ಮು ಬಿರ್ಕರು?

"ಕೊಡಗು ಪ್ರತ್ಯೇಕವಾಗಿರಬೇಕೆಂದು ಹೇಳುವವರು ಕೊಡವರು ಮಾತ್ರವಲ್ಲ, ಕ್ರೆಟ್ಟಿಯವರು, ಯೂರೋಪಿಯನರು, ಕಾಂಗ್ರೆಸ್ಸಿನವರು ಮತ್ತು ಸರಕಾರದವರು ಎಲ್ಲರೂ ಬಂಧುಬಳಗದವರಂತೆ ಕೆಲಸ ಮಾಡುತ್ತಿದ್ದಾರೆ. ಇವರೆಲ್ಲರೂ ಬಡಬಗ್ಗರ ಜೀವನವನ್ನು ಹುಲ್ಲಿನಂತೆಣಿಸಿದವರು ತಮ್ಮ ಸ್ವಾರ್ಥಕ್ಕಾಗಿ, ಲಾಭಕ್ಕಾಗಿ ಕೊಡಗನ್ನು ಬೇರೆ ಇಡಲು ಯತ್ನಿಸುತ್ತಿದ್ದಾರೆ" ಎಂದು ಮಾಂಕು ತಲೆಯ ಕಮ್ಯೂನಿಸ್ಟರೊಬ್ಬರು ಹೇಳಿದ್ದಾರೆ. ಪಾಪ! ಕೊಡಗು ಕರ್ನಾಟಕಕ್ಕೆ ಸೇರಬೇಕೆನ್ನುವವರಿಲ್ಲವೆನ್ನೂ ಲಾಭದ ಆಶೆಬಿಟ್ಟ ತ್ಯಾಗಿಗಳೆಂದು ಅವರು ಭಾವಿಸಿರಬೇಕು. ಕಮ್ಯೂನಿಸ್ಟರೆನ್ನುವ, ಇವರಿಗೇ ಲಾಭವಿಲ್ಲ ದುಡ್ಡು ಮೂದುಪ ಉದ್ಯಮದಲ್ಲೇ ತೊಡಗಿದ ಇವರಿಗೆ ಸೋಗಿನ 'ಕಮ್ಯೂನಿಸ್ಟ್' ಏಕೆ? ಕೊಡಗನ್ನು ಪ್ರತ್ಯೇಕವಿಡಬೇಕೆನ್ನುವವರೆಲ್ಲರೂ 'ಲಾಭದ ಆಶೆಯಿಂದ' ಎಂದು ಹೇಳುವಾಗ ಸಂಯೋಜನವಾದಿಗಳೆಲ್ಲರೂ ಇವರಿಂದಾ ಸೋಗಿನ 'ಕಮ್ಯೂನಿಸ್ಟ್'ರೆಂದು ಇವರಿಗೆ ಅನಿಸಿರಬೇಕು. ಇಲ್ಲಿದ್ದರೆ ಸಂಯೋಜನವಾದಿಗಳಲ್ಲಿ ಸಾವಿರಗಟ್ಟಲೆ ಎಕರೆಯ ಜಮೀನ್ದಾರರೂ, ಪ್ಲಾಂಟೆರರೂ ಇರುವದು ಇವರಿಗೆ ಕಾಣಿಸದಿರಲು ಕಾರಣವೇನು? ಇಡೀ ಜಗತ್ತಿನಲ್ಲಿ ಬಡಜನರು ಒಂದಾಗಬೇಕು, ಬಡಜನರ ರಾಜ್ಯಸ್ಥಾಪನೆಯಾಗಬೇಕು, ಜಲ್ಲೀಯ ಗೊಂದಲ ವಿಲ್ಲದ, ಸಮಸ್ಯೆಯು ತಳಪದಿಯ ಮೂಲ ನಿಂತ ಸಮಾಜವನ್ನು ರೂಪಿಸಲು ಹೊರಟ ಕಮ್ಯೂನಿಷ್ಟರಿಗೆ ಕರ್ನಾಟಕ ಏಕೀಕರಣದ ಮೋಹವೇಕೆ? ಕರ್ನಾಟಕಕ್ಕಾ ಇವರಿಂದ ಯಾವರೀತಿ ಕೊಡಗಿನ ಜನಸಾಮಾನ್ಯರ ಹಿತವಾದೀತೆಂಬುದನ್ನು ಇವರು ಆರೋಚಿಸಿರುವರೇ?

'ಕೊಡಗಿನಲ್ಲಿ ಕಾಲೇಜು ಶಿಕ್ಷಣ, ಕಾಲೇಜಿನಲ್ಲಿ ಓದಿ ಲಿಂಗಳಿಗೆ ರೂ ೧೫-೨೦ ಸಂಬಳಕ್ಕೆ ಉದ್ಯೋಗಗಳಿರುವ ಪರಿಸ್ಥಿತಿ! ಎರವ, ಕುರುಬ, ಪೊದರಿಂದ ಮಿನವ ಮೃಗಜೀವನಂತೆ ಇದ ಒಬ್ಬ ಮನುಷ್ಯನ ಸರಿಯಾಗಿ, ಲಂಬೋದರವಿಷ ಹೆಚ್ಚಿದೆ' ಈ ಮಾತುಗಳು ಭಾರತ ಸೊಡ್ಡ ಪ್ರಾಂತಕ್ಕೆ ಶಿಕ್ಷಣವಿಲ್ಲ ಸೆ? ಕರ್ನಾಟಕದಲ್ಲಿ ವಿಶ್ವವಿದ್ಯಾಲಯಕ್ಕೆ ಸಾರ್ವಜನಿಕ ಶ್ರೀಮಂತಿಕೆ ಲಭ್ಯವಿರುವದೇ? ಕರ್ನಾಟಕದ ಅಧ್ಯಾಪನೆ ಉಳಿವೆನ್ನೆಂದು ಪರಿಶೀಲಿಸಿಲ್ಲವೇ? ರಾಷ್ಟ್ರದಲ್ಲಿ ಶ್ರಮಿಸುವ ವರ್ಗಗಳಿಗೆ ಸಿಪ ರ್ಕನವಿಲ್ಲವೇ? ಕರ್ನಾಟಕದಲ್ಲಿ ಗಿರಿಜನ, ಕುರುಬರ ಪರಿಸ್ಥಿತಿ ಹೇಗಿದೆ? ಎರವ ರುಬರ ಸ್ಥಿತಿ ಏಕೆ? ಉತ್ತಮವೆನ್ನುವವರೂ ಕೂಡ ಉಪವಾಸಬಿದ್ದು ಸಾಯುತ್ತಿರುವಾಗ ಕೊಡಗಿನ ಎರವ, ಕುರುಬರ ಸ್ಥಿತಿ ಅದಕ್ಕಿಂತಾ ಚೆನ್ನಾಗಿಗೆದೆಯೆಂಬ ನೀ ದೃವಾಗದೇ? ಕರ್ನಾಟಕದಲ್ಲಿ ಲಂಚಕೋರತನ, ಲಾಭ ಬದಕತನವಿಲ್ಲವೇ? ಕರ್ನಾಟಕದ ವಿವಿಧ ಬಾಗಗಳಲ್ಲಿ ಇರುವ ಸಿ ಅನುಭವಿಸಿನವರಿಗೆ ತಿಳಿಯುವದೇ ಏನಹ ಧಾರವಾಡದ ಲ್ಲ ಸಂಧಿಸಾಧಕರ ಕೈಗೊಂಬೆಯಾಗಿ ಕೂತ್ಕೊಳ್ಳುವ ಜರ್ಮದ ಗೊಂಬೆಗಳೇನು ನೆನ್ನವ?

ಕೊಡಗು 'ಕೊಡವರಿಗಾಗಿರಬೇಕೆಂದು ಏನೂರು ಹೇಳಿದ್ದಾರೆ? ಈ ಬೆಂಬಳಿಕ ಲ್ಪನೆಯ ಅಪಪ್ರಚಾರವೆತ್ತಿ ತರುತ್ತಿಲ್ಲ. ಜಮ್ಮ, ಜಹಗೀರು, ಕೆಲ್ಲ, ಕೋವಿಗಳಿಂದೋ ಹದಿಂದ ಕೊಡವ ಸಮಾಜವು ಎಂದೂ ಪ್ರತ್ಯೇಕವಾದಿಯಾಗಿಲ್ಲ. ಕೊಡಗಿನ ಎಲ್ಲ ಜನರಿಗೂ ಈ ಹಕ್ಕು ಬರಲಿ. ಕೊಡವ ಸಮಾಜವು ಪ್ರತ್ಯೇಕವಾದಿಯಾಗಿದ್ದರೆ ನಾಡಿನ ಗೌರವ ಹಿರಿಯ ಸಂಘ ಕೊಡಗಿನ ಸಾಮಾಜಿಕ ಸಂಸ್ಥೆಗಳೆಂಬುದನ್ನು ಶ್ಲಾಘಿಸಲೇ? ಕರ್ನಾಟಕ ಏಕೀಕರಣವಾಗಿ ಮೈಸೂರು ರಾಜರನ್ನು ಸ್ವಾಯತ್ತ ಕರ್ನಾಟಕದ ಮಕುಟ ಮಣಿಯಾಗಿ ಇಟ್ಟುಕೊಳ್ಳುವ ಆಶೆ ಯಾರಿಗೆ? 'ಕೊಡಗನ್ನು ಮೈಸೂರಿಗೆ ಸೇರಿಸಿ ಮೈಸೂರು ರಾಜರು ಕೊಡಗಿನ ಅರಸರಾಗಲೀ' ಎಂದು ರಾಜ್ಯಘಟನಾ ಸಮಿತಿಯು ಶಿಫಾರಸ್ಸುಮಾಡಿಕೊಟ್ಟವರಾರು? ಅರಸು ತನದ ಹುಚ್ಚು ಈ ೨೦ ನೇ ಶತಮಾನದಲ್ಲಿ ದ್ದರೆ ಕರ್ನಾಟಕ ಏಕೀಕರಣವಾದಗಳೆ!

ಕೊಡಗಿನಲ್ಲಿ ಭ್ರಾತೃತ್ವದಾನ ಕಾಯ್ಕು ಬದಲೆಕೆಂಬುದೇ ಪ್ರತ್ಯೇಕವಾದಿಗಳ ಆಶಯ. ಜನವಿಯ ವೀರ್ಮೂನದಂತೆ ಭವಿಷ್ಯ ನಿರೂಪವಾಗುವದು. ಆದರೆ ಜನತೆಗೆ ಅಗುವ ಒಬಾಲ ಭಗಳನ್ನು ಕೂಲಂಕುಷವಾಗಿ ಜನತೆಯ ಮುಂದಿಡದೆ ಈ ವಿಚಾರಕ್ಕೆ ಕೋನುವಾರೆ ಬಣ್ಣವನ್ನೋ ಮತ್ತಾನ್ಯವನ್ನೋ ಬಳಿದು ಕಾರ್ಯಸಾಧನೆ ಮಾಡಬೇಕೆನ್ನುವದು ಪ್ರತ್ಯೇಕವಾದಿಗಳಿಗೆ ಶೋಭನವಲ್ಲ. ಜನತೆಯ ಮುಂದೆ ಪ್ರತ್ಯೇಕವಿರುವುದರಿಂದಾಗುವ ಲಾಭ ನಷ್ಟಗಳನ್ನು ನಿರ್ಭಯವಾಗಿ ಇಡುವದು ಕರ್ತವ್ಯವಲ್ಲದೆ, ಕರ್ನಾಟಕದ ಉಪ್ಪರಿಗೆಯಲ್ಲಿ ಸ್ವಾರ್ಥಸಾಧನೆಗೆ ಯೂ ಹೊರಟಿಲ್ಲ

'ಕೊಡಗಿನಲ್ಲಿಯೂ ನಮ್ಮ (ಕಮ್ಯೂನಿಸ್ಟ್) ಚಟುವಳಿ ಜಾರುಬಂಡಿಯಾಗಿಬೇಕು ಅಷ್ಟೆತ್ತದ' ಎಂದು ಆಶ್ವಾಸನತೊಡಲಾಗಿ ನಿಮಗೆ ಅವ್ಯಾನವಿದೆ! ಆದರೆ ಸಿರಿವಂತರೊಂದಿಗೆನ್ನು ಹುಡುಕುವವರಿಗೆ, ಕಣ್ಣಾಳಿ ಸಂಪಾದನೆಯು ಮಗರಾದಲ್ಲಿ ಮಗ್ಗರಾದವರಿಗೆ, 'ಕಮ್ಯೂನಿಸ್ಟ್' ವೇಶ ಧಾರಿಗಳಿಗೆ ಅಲ್ಲಿ ಸ್ಥಳವಿರಲಾರದು ಆದ್ದರಿಂದ ನಿಮ್ಮ ವಾಸ್ತವಭೂಮಿಗಳನ್ನು, ನಿಮ್ಮ ಹೃದಯದ ಆಲಿಂಗನವನ್ನು ಪರೀಕ್ಷಿಸಿ ನಿಜವಾದ 'ಕಮ್ಯೂನಿಸ್ಟ್'ರಾಗಿ ಬನ್ನಿ ಎಂಬ ಆಪ್ಪಣೆ!

'ಚೇತನ'

Reg. No. B. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ ಐ ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ 4-8-0

ಸಂಪುಟ ೨೬ | ತಾರೀಕು ೧೫-೮-೧೯೪೮ನೇ ಶುಕ್ರವಾರ | ಸಂಖ್ಯೆ ೧೧

॥ ದೇವರು ಮತ್ತು ಧರ್ಮ ॥

ಲೇ:—ಬಿ. ಡಿ. ಗಣಪತಿ.

ದೇವರಲ್ಲಿ ?

'ದೇವರು ಇರುವನೇ ?' ಎಂಬ ಪ್ರಶ್ನೆಗೆ ಹಲವರು 'ಇದ್ದಾನೆ' ಎಂಬ ಉತ್ತರವನ್ನಿತ್ತರೂ ಮತ್ತೆ ಕೆಲವರು 'ಇಲ್ಲ' ಎಂಬ ಉತ್ತರವನ್ನು ಕೊಡತ್ತಾರೆ ದೇವರಿದ್ದಾನೆಂಬುವನ್ನು ಸಂಶೋಧಿಸಲು ಎಷ್ಟು ಕಾರಣಗಳನ್ನು ಕೊಡಬಹುದೋ ಅಷ್ಟೇ ರೀತಿ ದೇವರು ಇಲ್ಲ ಎಂಬುದಕ್ಕೂ ಕೂಡಬಹುದು ಆಶ್ಚರ್ಯ ಹಿಂದೂಧರ್ಮವು ದೇವರ ಅಸ್ತಿತ್ವವನ್ನು ಒಪ್ಪಿದೆ ಜಗತ್ತಿನ ಇತರ ಧರ್ಮಗಳೂ ಒಪ್ಪಿದೆ ಕ್ರೈಸ್ತಿಯನ್ ಧರ್ಮವೇ ಆಗಲಿ, ಮಹಮ್ಮದೀಯ ಮತವೇ ಆಗಲಿ, ದೇವರಿಲ್ಲವೆಂದು ಹೇಳುವುದಿಲ್ಲ ಆದರೂ ವಿಜ್ಞಾನಿಕ ವಿಜ್ಞಾನ ಪ್ರಪಂಚದ ಪ್ರಗತಿಯ ಮಂತ್ರವೆಡೆಯಲ್ಲಿ ದೇವರಿಂಬಿಲ್ಲ, ಎಲ್ಲವೂ ನೈಸರ್ಗಿಕವೆನ್ನುವರು ಇದ್ದಾರೆ ಭೌತಿಕ ವಾದಿಗಳು ಇವರು ಕಣ್ಣಿಗೆ ಕಾಣಲು ಸಿಕ್ಕದ, ಮುಟ್ಟಿ ಪರೀಕ್ಷಿಸಲು ಬೊರೆಯದ ಯಾವನೇ ವಸ್ತುವನ್ನು ನಂಬಲಾರರು. ವೇದಾಂತ ಧರ್ಮವು 'ಏಕಂ ಸದ್ವಿಪ್ರಬಹುದಾ ವದಂತಿ' ಎಂದಂಗ ಇವರು ನಂಬಲಿಲ್ಲ ಇದು ಹುಚ್ಚುಕಲ್ಪನೆಯೆಂದರು. ಆದರೆ ಪ್ರತಿ ವಸ್ತುವಿನ ಪ್ರಭಕ್ಕರಣ ಮಾಡುತ್ತಾ ನಡೆದಂತೆ ಅವಲ್ಲವೂ ಕೂಡ ಒಂದೇ ವಸ್ತುವಿನಿಂದ ('ಇಲೆಕ್ಟ್ರಾನ್ಸ್' 'ಪ್ರೊಟಿನ್ಸ್') ಮಾಡಲ್ಪಟ್ಟಿದೆಯೆಂಬುದನ್ನು ಅನಿವಾರ್ಯವಾಗಿ ಒಪ್ಪಬೇಕಾಗಿ ಒಂದಿದೆ ಇಷ್ಟಾದರೂ ದೇವರ ಇರುವಿಕೆಯನ್ನು ಭೌತಿಕವಾದಿಗಳು ಒಪ್ಪುತ್ತಿಲ್ಲ!

ಜಗತ್ತನ್ನು ಲರ್ಥಾತ್ ಮಾನವಗಣವನ್ನು ಬಂಧವಳಿಗಾರರು, ಮಧ್ಯಮ ವರ್ಗದವರು, ಬಡಜನರು ಎಂಬುದಾಗಿ ಮೂರು ವಿಭಾಗ ಮಾಡಿದರೆ ದೇವರ ಬಗ್ಗೆ ಇವರಲ್ಲಿ ಬೇರೆ ಬೇರೆ ಕಲ್ಪನೆ ಇರುವಂತೆ ಕಂಡುಬರುತ್ತದೆ

ಬಂಡವಳಗಾರರು.

ಈ ಶ್ರೀಮಂತ ವರ್ಗವು ದೇವರ ಬಗ್ಗೆ ಇಟ್ಟುಕೊಂಡಿರುವ ಕಲ್ಪನೆಯು ಒಂದು ರೀತಿಯದ್ದು. ಇವರು ದೇವರ ಇರುವಿಕೆಯನ್ನು ಒಪ್ಪುತ್ತಾರೆ. ತಿನ್ನಾದಿ ಕಾಲ ವಿಂದಲೂ ಈ ವರ್ಗವು (ರಾಜಮಹರಾಜರು, ಧನಿಕರು) ಪುರೋಹಿತ ವರ್ಗದೊಡನೆ ಸಂಬಂಧ ಬೆಳಸಿ ದೇವರು, ಧರ್ಮ ಮೊದಲಾದವನ್ನು ಬಡ ಜನರನ್ನು ಸುಲಿಯಲು ಮಾಡುವ ಒಂದು ಸಾಧನವಾಗಿ ಉಪಯೋಗಿಸಿಕೊಂಡಿದ್ದು ಕಂಡುಬರುತ್ತದೆ. ಕಷ್ಟಕಾಲವಿರಲಿ ಸುಖಕಾಲವಿರಲಿ ದಿನಂಪ್ರತಿ ಬೆಳಿಗ್ಗೆಯಿಂದ ಸಂಜೆಯವರೆಗೆ ಅವಿಶ್ರಾಂತವಾಗಿ ದೇವರ ಹೆಸರಿನಲ್ಲಿ ಪೂಜೆ, ಹವಿಸ್ಸಿಗೆ ಸಾಮಗ್ರಿಯಾದಿಯಾಗಿ ಬೇಕಾಗುವಷ್ಟು ಹಣ ಇವರಲ್ಲಿ ಇರುವುದು ಸಾಧ್ಯವಾಗಿದೆ ಇವರು ಪೂಜೆ ಮಾಡಿಸುವ ಪುರೋಹಿತರಿಗೆ ಇವರು 'ಯಾರಿಗೆ ಕೈಮರವಿಲ್ಲ ಅವರಿಗೆ ದೇವರೇ ಕೈಮರ' ಎಂಬ ಭಾವನೆಯಿಂದ ಒಳ್ಳೆಯ ಬಹುಮಾನವನ್ನು ಕೊಡುವುದಿದೆ ಇವರ ಪೂಜೆಯಿಂದ ಪ್ರಸನ್ನನಾದ ದೇವರು ಇವರಿಗೆ ಸಿರಿವಂತಿಕೆ, ಅಧಿಕಾರ, ಪದವಿ, ಸಂತಾನ ಮೊದಲಾದವನ್ನು ಕೊಡುವನೆಂಬ ಭಾವನೆಯಿಂದ ಇವರು ಪೂಜೆ ಮಾಡಿಸುತ್ತಾರೆ ಇವರು ಪೂಜೆ ಮಾಡಿಸುವುದು ಕೇವಲ ಸ್ವಾರ್ಥ ಬುದ್ಧಿಯಿಂದ ಎಂಬುದು ಸ್ಪಷ್ಟವಾಗಿದೆ ಇವರು ದೇವರಿಗೆ ಕೊಡುವ ಕಾಣಿಕೆಯಲ್ಲಿ ಬಡ ಜನರ ಕುಲಿಗೆಗಾಗಿ ಧರ್ಮ, ದೇವರು ಬೇಕು ತಮ್ಮ ಸ್ವಂತ ಸುಖವನ್ನು ಹೆಚ್ಚಿಸಿಕೊಳ್ಳಲು ದೇವರುಬೇಕು. ತಮ್ಮ ಜೀವನದ ಜಾಮಾವಾದ ದುದ್ದನ್ನು ಕೊಡಲು ಕಲು ಅವರಿಗೆ ದೇವರು ಬೇಕು ಅವರಿಗೆ ಭೂಮಿ ಬೇಕು, ಧನಕಿಕ, ಆಸ್ತಿ, ಕುದುರೆ ಬೇಕು. ಮೋಟಾರು, ನಿವಾಸನಬೇಕ, ಒಳ್ಳೆ ಕಾಳುಗಳು, ಸುಖಭೋಗಗಳು ಬೇಕು. ಇವೆ ಅವರ ಸರ್ವಸ್ವ ಇದನ್ನು ಸಾಧಿಸಲು ಬಡ ಜನಗನ್ನು ಮಂಕುಬೂದಿದಿದ್ದಕೆ ಸಾಧ್ಯವಾಗದು ಬಡ ಜನರಿಗೆ ಮಂಕು ಹಾಕುವ ವಸ್ತು ದೇವರು ! ಶ್ರೀಮಂತನು ದಾನಮಾಡುತ್ತಾನೆ. ಗೌರವಕ್ಕಾಗಿ, ಹೆಸರಿಗಾಗಿ! ಜೆರ್ಜ್, ದಾನಶ್ರಾಸಗಳಿಗೆ ಸಮಾರ್ಯಾದೆಯನ್ನು ಪ್ರಾಪ್ತಿ ಹುವರ ಮೂಲಕ ಸ್ವರ್ಗದಲ್ಲಿ ಒಂದು 'ಸೀಟು ರಿಜರ್ವ್' ಮಾಡಲಿಕ್ಕಾಗಿ!

ಬಡ ಜನರು.

ಬಡ ಜನರಿಗೆ ಇಂದು ದೇವರ ಮೇಲಿನ ವಿಶ್ವಾಸ ಇಲ್ಲದಾಗಿದೆ. ಅವರ ಮುಂದಿರುವ ಬಡತನ, ಮೌಢ್ಯತೆ, ಪಾಯಲೆ, ಕಷ್ಟ ಪರಂಪರೆಗಳು ದೇವರ ಅಸ್ತಿತ್ವಕ್ಕೆ ವಿರೆಯೊಗಿ ನಿಂತಿವೆ ಪೂರ್ಣ ಭೌತಿಕ ವಾದಿಗಳಾದ ಕಮ್ಯೂನಿಷ್ಟರು ಈ ಬಡ ಜನರ ಪುರೋಹಿತರಂಗಿ ಈ ಭಾವನೆಯನ್ನು ಚಾಲನೆಯನ್ನು ಕೊಡುತ್ತಿದ್ದಾರೆ. ಬಡವರು, ಧರ್ಮ ಎಂಬುವಕ್ಕೆ ಕಿಲಂಜಲಿಯಿನ್ನು ಇವರು ಕೊಟ್ಟಿದ್ದಾರೆ ಇವರ ಧ್ಯೇಯ ಬಡ ಜನರ ಆರ್ಥಿಕ ಪ್ರಗತಿ, ಬೌತಿಕ ಸುಖಜೀವನ ಇಂದು ಬಡಜನರಲ್ಲಿ ಕಸ್ಸ, ಒಡತನ, ಮೂಢನಂಬಿಕೆ ಹೆಚ್ಚಾಗಿ ಜೀವನವು ದುಃಖಮಯವಾಗಿರುವದು ದೈವೆಚ್ಛೆಯಿಂದಲ್ಲ, ಬಲಾ ಸ್ವಾರ್ಥಿ ಬಂಡವಳಿಗಾರರು, ಸಂಕೀರ್ಣಭಾವನೆಯ ಪುರೋಹಿತರ ಕುಟಿಲತಂತ್ರೆಯಿಂದ ಎಂದು ಸಾರಿಹೊಗಿದ್ದಾರೆ ಬಡ ಜನರು ಇವೆಲ್ಲವನ್ನು ಅರಿತು ಸಂಘಟಿತರಾಗಿ ಅಧಿಕ ರವನ್ನು ಕಿತ್ತುಕೊಳ್ಳಬೇಕು ಈ ಪೂರ್ವಕಲ್ಪನೆಯೇ ಇವರ ದೃಷ್ಟಿಯನ್ನು ಪರಿಸ್ಥಿತಿ ಸುಧಾರಣೆಗೊಳ್ಳಿಸಲು ಸಾಧ್ಯವಾಗದಿರುವಂತೆ ಮಾಡಿದೆ ಇವರು ಧನಿಕ ಬಡವ ಸಂಗಡಗೂಡಿಕೊಳಗೆ ಘೆಷಣೆಯನ್ನು ಪರಿಸ್ಥಿತಿ ಬದಲಾಯಿಸಲು ದೇವರು ದರ್ಮ, ನ್ಯಾಯಗಳ ಆಸ್ಪದವಿಲ್ಲ, ಒಡ ಜನರ ಏಳಿಗೆಗಾಗಿ ದನಿಕರನ್ನಿಸುವ ಪವರ ಆಸ್ತಿ, ದನ, ಕನಕಗಳನ್ನು ಒಲಾಡ್ಡಾರದಿಂ ಸಮಾಜಾಸ್ತಿ ಮಾಡುವದು ಇವರ ಕಾರ್ಯಧ್ಯೇಯ ಬಡ ಜನರ ಮೇಲಿನ ತೀವ್ರ ಅಲಿಂಬನಕ್ಕೆ ಕಾರಣ ಕಮ್ಯೂನಿಷ್ಟರು ಬಿಂಬಿಸುವಂತೆ ಸ್ವರ್ಗ ತಳೆಯಲಾಗಿ ಸ್ವರ್ಗದ

ಬಂಡವಳಿಗಾರರ ಮೇಲಿನ ನೀತಿಯೂ, ಕಮ್ಯೂನಿಸ್ಟರ ಈ ಹೊಸ್ತಾನೀತಿಯೂ ಸಂಕೀರ್ಣ ದೃಷ್ಟಿಕೋನದವು ವನ್ನೆಬಹುದು ಬಂಡವಳಿಗಾರರು ತಮ್ಮ ಸ್ವಾರ್ಥ ಅಬಾಧಕ್ಕಾಗಿ ಅನಕ್ಕಾಗಿ ದೇವರ ಹೆಸರು ಉಚ್ಚಾರಣೆಗಷ್ಟೆ ಸ್ಥಿರವಾಗಿ ಕೊಡಿರುವರು? ಇದು ಸಾಮಾನ್ಯ ಜನಸಾಮಾನ್ಯರಲ್ಲಿ ಬರಬಕ್ಕಾ ವಿಚಾರ ಇದನ್ನು ಉಚಿತಮನಮಾಡಲು ಇಂದು ಹತ್ತಾರುವರಿಗೆ ವೀರ ಸ್ವರ್ಗವಿದ! ಇದು ಕರ್ಮದ ಫಲ! ಎಂಬ ಒಣ ವೇದಾಂತದ ಉಪದೇಶದಿಂದಪ್ರಯೋಜನವಿಲ್ಲ ಭಗವದ್ಗೀತೆಯ 'ಕಡೆಯ ಜನಕನನ್ನು ನಂಬಿ ಹೋರಾಡು' ಬೋಧಿಯಂತೆ ಹಿಂತೆಗೆಯದಿರು' ಎಂಬ ಶ್ರೀಕೃಷ್ಣನ ಮಹಾಸಂದೇಶದ ಆಜ್ಞೆಯೊಗೆ ಬೇಕಾಗಿದೆ

ದೇವರ ಕಪ್ಪಲ್ಲ

ಹಿಂದೂಸ್ಥಾನದಲ್ಲಿ ಅಂಕಲಹವಾಗುತ್ತಿದ್ದರೆ ಅದು ದೇವರ ತಪ್ಪಲ್ಲ. ಇಂದು ಜಗತ್ತಿನ ಯಾವ ಭಾಗದಲ್ಲಿ ಕಲಹವಿಲ್ಲ? ದೇವರ ಅಸ್ತಿತ್ವವನ್ನು ಒಪ್ಪದವರಾಸ್ತಿಕವಾದಿ ದೇಶಗಳಲ್ಲಿಯೂ ಯುದ್ಧ ನಡೆದಿದೆ ಮಾನವ ಕುಲದ ಜೀವನವು ಬೂವಾಗಲೂ ಶಾಶ್ವತ ಸಂತೋಷದ ಶಿಖರವಲ್ಲ ಇಲ್ಲವೇ ಅದು ಚಿರ ದುಃಖದ ಸಮುದ್ರವೂ ಅಲ್ಲ. ಹಾಗಿದ್ದಿದ್ದರೆ ಮಾನವ ಕುಲವು ಎಂದೋ ಆತ್ಮಹತ್ಯೆ ಮಾಡಿಕೊಂಡು ನಿರ್ನಾಮವಾಗುತಿತ್ತು. ಜಗತ್ತಿನಲ್ಲಿ ದುಃಖವಿದ್ದರೆಷ್ಟಿರುವುದೋ ಇದೆ. ಏರು ಇರುವದರೊಂದಿಗೆ ತಗ್ಗೂ ಇರುವಂತೆ ಅಸ್ತಿತ್ವವಿದ್ದರೆ ನಿತ್ಯಕ್ಕೂ ಸ್ಥಳವಿದೆ. ಧರ್ಮ ಹೆಸರಿನಲ್ಲಿ ಒಂದೆರೆ ಕ್ರಾಂತಿಯಾದರೆ ಅದೇಧರ್ಮದಹೆಸರಿನಲ್ಲಿ ಪ್ರತಿಕ್ರಾಂತಿಯೆದೆ ಶಾಂತಿಯಿದೆ! ಆದರೆ ಜಗತ್ತಿನಲ್ಲಿ ಎಂದೆಂದಿಗೆ ವರೆಗೂ ಎಲ್ಲಾ ಕಡೆಗಳಲ್ಲಿಯೂ ಪೂರ್ಣಕಾಂತಿಯೂ, ಪೂರ್ಣ ಹಗೆತನವೂ ಇರಲಿಲ್ಲವೆಂದು ಈ ಜಗತ್ತು ಶಾಶ್ವತ ರಾಜಿಯ ನೆಲೆವೀಡಾದೀತೆಂದು ಒಬ್ಬ ಸಾಧು ಪುರುಷನು ಕನಸು ಕಾಣಕ್ಕಿದ್ದಾರೆನ್ನಬೇಕು. ಹಿಂದೂಮೇಶದಲ್ಲಿ ಇಂದು ಉಪಸ್ಥಿತವಾಗಿರುವ ಕೋಮುವಾರು ಜಗಳವು ನಿಲ್ಲಿಬಹುದು ಅದರೆ ತರ್ಕಿಕ ಅಪನಂತಯನ್ನು ತೊಡೆಯ ಹಾಕಲು ಮತ್ತೊಂದು ಜಳವಳವಾಗಬಹುದು ಹೀಗೆ ಒಂದರ ನಂತರ ಒಂದೊಂದಂತೆ ಜಳವಳ

(ನೇ ಪುಟ ನೋಡಿ)

ಕೊಡಗು

ತಾ. ೧೨-೯-೧೯೪೪ನೇ ಶುಕ್ರವಾರ

ವಿಜಯ.

ಕಲ್ಕತ್ತಾದಲ್ಲಿ ತಲೆದೋರಿದ ಹಿಂದೂ ಮುಸ್ಲಿಂ ಘರ್ಷಣೆಯಿಂದ ದುಃಖಿತರಾಗಿ ಕಲ್ಕತ್ತಾ ನಗರಕ್ಕೆ ಪುನಹ ಚೈತನ್ಯೋದಯವಾಗುವ ವರೆಗೆ ನಿರಶನವ್ರತವನ್ನು ಕೈಕೊಂಡ ಮಹಾತ್ಮಗಾಂಧೀಜಿಯವರು ೭೩ ಗಂಟೆಗಳ ನಂತರ ತಮ್ಮ ಉಪವಾಸವನ್ನು ನಿಲ್ಲಿಸುವ ಪರಿಸ್ಥಿತಿಯುಂಟಾದದ್ದು ಹಿಂದೂ ದೇಶೀಯರೆಲ್ಲರಿಗೆ ಒಡಿಸಲಾರದ ಆನಂದವನ್ನು ಉಂಟುಮಾಡಿದೆ. ಕಲ್ಕತ್ತಾದ ರಾಜಕೀಯ ಮುಂದಾಳುಗಳು ತಮ್ಮ ಜನಾಬ್ದಾರಿಯನ್ನರಿತು ಎರಡು ಪಾಗಡದವರೂ ಏಕೀಕೃತರಾಗಿ ಮಹಾತ್ಮಗಾಂಧೀಜಿಯವರಿಗೆ ವಿಶ್ವಾಸವಾಗುವ ರೀತಿಯ ಭರವಸೆಕೊಟ್ಟು ಗಾಂಧೀಜಿಯವರ ಉಪವಾಸವನ್ನು ನಿಲ್ಲಿಸಲು ಶಕ್ತರಾದರು. ಕಲ್ಕತ್ತಾದಲ್ಲಿ ಇನ್ನು ಕೋಮುವಾರು ಜಗಳ ತಲೆದೋರದಂತೆ ಮಾಡುವದಾಗಿಯೂ, ಆ ಗತ್ಯವಿದ್ದರೆ ಆದಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸುವದಾಗಿಯೂ ಅವರು ಭರವಸೆಕೊಟ್ಟಿರುವರು. ಅದರಂತೆ ಕಲ್ಕತ್ತಾದ ಗಲಾಟೆಗಳು ನಿಂತ ೨೪ ಗಂಟೆಯ ನಂತರ ಮಹಾತ್ಮರು ಉಪವಾಸವನ್ನು ಮುರಿದರು. ಮಹಾತ್ಮರ ಉಪವಾಸದ ಪ್ರಭಾವವು ಕಲ್ಕತ್ತದ ಮೇಲೆ ಮಾತ್ರವಲ್ಲ; ಇತರ ಕಡೆಗಳ ಮೇಲೂ ಸಾಕಷ್ಟು ಅಗುವಷ್ಟು ಆಗಿರಬಹುದು.

ಅಹಿಂಸಾ ಬತ್ತಳಿಕೆಯೊಳಗಿನ ಕತೆ ಅಸ್ತ್ರವಾದ ಉಪವಾಸವ್ರತವು ಎಂದೂ ಸೋಲನ್ನು ತಿಳಿಯದು. ಅದು ಅಜೇಯವಾದುದು, ಎಂಬುದನ್ನು ಮಹಾತ್ಮರು ಇನ್ನತೆಗೆ ತೋರಿಸಿಕೊಟ್ಟರು. ದೇಶದಲ್ಲಿ ಶಾಂತಿ ನೆಲೆಸಬೇಕಾದರೆ ಅಹಿಂಸಾ ಮಾರ್ಗವೇ ಉತ್ಕೃಷ್ಟವಾದುದು; ಚಿರ ಶಾಂತಿದಾಯಕವಾದುದು ಎಂಬುದನ್ನೂ ಸ್ಪಷ್ಟಪಡಿಸಿದ್ದಾರೆ. ಮಹಾತ್ಮರಿಗೆ ಪಂಜಾಬಿನಿಂದ ಕರೆಬಂದ ಕಾರಣ ಅಲ್ಲಿಗೆ ಅವರು ಹೊರಟಿದ್ದಾರೆ. ಆದರೆ ಡೆಲ್ಲಿಯಲ್ಲಿ ತನ್ಮಧ್ಯೆ ಉಪಸ್ಥಿತವಾದ ಘರ್ಷಣೆಯ ದೆಸೆಯಿಂದ ಅವರು ಡೆಲ್ಲಿಯಲ್ಲೇ ಇರಬೇಕಾಗಿ ಬಂದಿದೆ. ಡೆಲ್ಲಿಯಲ್ಲಿ ಇನ್ನರ ಇರುವಿಕೆಯು ಶಾಂತಿಪ್ರೇರಕವಾಗಿದೆ.

ವರ್ತಮಾನ.

ಕುಂಜಿಲಗೇರಿಯ ಶ್ರೀ ಪಯ್ಯಮ್ಮಡಿ ಮಮ್ಮೆದೆ- ಇವರ ಕೊಟ್ಟಿಗೆಯಲ್ಲಿ ಆರುತಿಂಗಳಿಂದ ಕಪ್ಪುವರ್ಣದ ಬಿಳಿಪಟ್ಟೆಯ ಹೋರಿಯಿದ್ದು, ಕಾನೂರುಗ್ರಾಮದ ಶ್ರೀ ಎಂ. ಬಿ. ನಾಣಯ್ಯನವರ ದನಗಳ ಜೊತೆಯಲ್ಲಿ ಕಳೆದ ಆರುತಿಂಗಳಿಂದ ಒಂದು ತೆಂಪು ಹಸುವೂ, ಫ್ರೇಜರ್ ಪೇಟೆ ಅಂಚಾನಿಪುರ ಫಾರಮ್ಮಿನ ದನಗಳ ಜೊತೆಯಲ್ಲಿ ಕಳೆದ ತಿಂಗಳಿಂದ ಒಂದು ಬಿಳಿ ಹಸವೂ ಇದೆಯೆಂದೂ ತಿಳಿಯ ಬಂದಿದೆ. ಪೋಲೀಸರು ತಕ್ಕ ರುಜುವಾತಿನಿಂದ ಅವುಗಳನ್ನು ಹೊಡೆದು ಕೊಂಡು ಹೋಗಬಹುದೆಂದೂ ಸೂಚಿಸುತ್ತಾರೆ.

ಮಡಿಕೇರಿ ವಿದ್ಯಾರ್ಥಿ ಕಾಂಗ್ರೆಸ್ಸಿನ ವರು ಮೈಸೂರು ಸತ್ಯಾಗ್ರಹಕ್ಕೆ ತಮ್ಮ ಸಹಾನು ಭೂತಿಯನ್ನು ತೋರಿಸಿ ತಾರೀಕು ೧೦-೯-೪೪ರಲ್ಲಿ ಮುಷ್ಕರ ಮಾಡಿದರು. ಮದಿಕೇರಿಯ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಸಹಕರಿಸಿದ್ದರು. ಮೆರವಣಿಗೆಯ ನಂತರ ಸಭೆ ಸೇರಿ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸುವ ರೂಪವನ್ನು ಮಾಡಿ ಕಳುಹಿಸಿದರು.

ತಾರೀಕು ೯-೯-೪೪ರಲ್ಲಿ ನಾವೋಕ್ಲು ಶಾಲೆಯ ವಿದ್ಯಾರ್ಥಿಗಳು ಮೈಸೂರು ವಿದ್ಯಾರ್ಥಿಗಳ ಮತ್ತು ಕಾಂಗ್ರೆಸ್ಸಿನವರ ಮೇಲೆ ಮೈಸೂರು ಸರಕಾರವು ಕೈಕೊಂಡ ದಬ್ಬಾಳಿಕೆಯನ್ನು ನಿವೇದಿಸಿ ಹರತಾಳವನ್ನಾಚರಿಸಿದರು.

ದಕ್ಷಿಣ ಕೊಡಗು ಕರ್ನಾಟಕ ಸಂಘದವರು ಏರ್ಪಡಿಸಿದ್ದ "ಕೊಡಗಿನಲ್ಲಿ ಕನ್ನಡ ಸಾಹಿತ್ಯ ಪ್ರಚಾರ" ವೆಂಬ ಪ್ರಬಂಧ ಸ್ಪರ್ಧೆಯಲ್ಲಿ ಸಾರ್ವಜನಿಕರ ಪೈಕಿ ಪ್ರಥಮ ಬಹುಮಾನವು ಶ್ರೀ ಬಿ. ಡಿ. ಗಣಪತಿಯವರಿಗೂ, ವಿದ್ಯಾರ್ಥಿಗಳ ಪೈಕಿ ಪ್ರಥಮ ಬಹುಮಾನ ಸೋಮವಾರಪೇಟೆ ಹೈಸ್ಕೂಲಿನ ಶ್ರೀ ಎಸ್. ಎಸ್. ನಂಜುಂಡ ಶರ್ಮರವರಿಗೂ, ದ್ವಿತೀಯ ಬಹುಮಾನ ಅಪೇ ಶಾಲೆಯ ಶ್ರೀ ಎಸ್ ಎಸ್. ವೀರಪ್ಪನವರಿಗೂ ದೊರೆತಿದೆಯೆಂದೂ, ಈ ಪಾರಿತೋಷಕಗಳನ್ನು ಸಂಘದ ಮುಂದಿನ ಸಮ್ಮೇಳನದಲ್ಲಿ ಕೊಡಲಾಗುವದೆಂದೂ ತಿಳಿಯ ಬಂದಿದೆ.

ತಾರೀಕು ೩೧—೮—೪೪ ರಲ್ಲಿ ವೀರಾಜಪೇಯಲ್ಲಿ ಶ್ರೀ ಕಾವೇರಿ ಆಶ್ರಮದಲ್ಲಿ ಶ್ರೀ ಗಣೇರರಾಯರ ಅಧ್ಯಕ್ಷತೆಯಲ್ಲಿ ಶ್ರೀ ಗಂಗಾಧರರಾಯರು, ಎನ್. ಎನ್. ಕುಟ್ಟಪ್ಪ ಮತ್ತು ರಾಮ ರತ್ನಂರವರು ಕಾವ್ಯವಾಜನ ಮಾಡಿದರೆಂದೂ, ಶ್ರೀ ಎಚ್. ಕೆ. ಚಂತಾಮಣಿಯವರು ವೇದಾಂತದ ವಿಚಾರ ಭಾಷಣ ಮಾಡಿದರೆಂದೂ ಪ್ರತಿ ಆದಿತ್ಯವಾರ ೩ ಗಂಟೆಯ ಮೇಲೆ ಇಂಥಾ ಕಾರ್ಯಕ್ರಮ ಅಲ್ಲಿ ನಡೆಯುವದೆಂದೂ ವಾರ್ತೆ.

ಬ್ರಿಗೇಡಿಯರಾಗಿದ್ದ ಶ್ರೀ ಕೊಡಂಡೆರ ಸುಬ್ಬಯ್ಯ ತಿಮ್ಮಯ್ಯನವರನ್ನು ಪಂಜಾಬಿನ ಜಲಂಧರು ಮಿಲಿಟರಿ ಡಿವಿಜಿನಿನ ಕಮಾಂಡರಾಗಿ ನೇಮಿಸಿರುವರೆಂದೂ, ಶ್ರೀ ಚೆಪ್ಪುಡೀರ ಪೊನ್ನಪ್ಪನವರನ್ನು ಬ್ರಿಗೇಡಿಯರಾಗಿ ನೇಮಿಸಲಾಗಿದೆಯೆಂಬುದೂ ತಿಳಿಯಬರುತ್ತದೆ.

ಕೊಡಗಿನ ಜಿಲ್ಲಾ ನ್ಯಾಯಾಧಿಕಾರಿಗಳಾದ ಶ್ರೀ ನಿತ್ಯಾನಂದ ಮುದ್ದಪ್ಪನವರು ಎರಡುವರೆ ತಿಂಗಳು ರಜೆಯಲ್ಲಿರುವದರಿಂದ ಯುದ್ಧೋತ್ತರ ಪುನರ್ನಿರ್ಮಾಣ ಸಲಹಾ ಸಮಿತಿಯ ಶ್ರೀ ಐ. ಸಿ. ಸುಬ್ಬಯ್ಯನವರು ತಮ್ಮ ಕೆಲಸದೊಂದಿಗೆ ಜಿಲ್ಲಾ ನ್ಯಾಯಾಧೀಶರ ಕೆಲಸವನ್ನು ನೋಡಿಕೊಳ್ಳುವಂತೆ ನೇಮಿತರಾಗಿರುವರು.

ತಾ. ೧೩ನೇ ಶನಿವಾರ ಸಾಯಂಕಾಲ ೭ ಘಂಟೆಗೆ ವೇದಾಂತ ಮಂದಿರದಲ್ಲಿ ಸಂಗೀತ ರತ್ನಾಕರ ಬಸವರಾಜ್ ಪುರಾಜಿಕ್ 'ರೇಡಿಯೋ ಸ್ಟಾರ್' ಅವರು ಶಾಸ್ತ್ರೀಯ ರೀತಿಯ ಗಾಯನ ನಡೆಸಲಿರುವರು. ಸರ್ವರಿಗೂ ಆಮಂತ್ರಣವಿದೆ.

ಮಡಿಕೇರಿ ಮಹಿಳಾ ಸಮಾಜದ ಆಶ್ರಯದಲ್ಲಿ ನಡೆಯುತ್ತಿರುವ ಹಿಂದೀ ತರಗತಿಗಳ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಸರ್ಟಿಫಿಕೇಟುಗಳನ್ನು ಕೊಡುವ ಸಮಾರಂಭವು ತಾರೀಕು ೧೪-೯-೪೪ನೇ ಆದಿತ್ಯವಾರ ಮಧ್ಯಾಹ್ನ ೩ ಗಂಟೆಗೆ ವಿ. ಬ. ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಕಾವೇರಿ ಮಂಡಲ್‌ನಲ್ಲಿ ನಡೆಯುವದು.

ಕೊಡಗು ಪಿಂಚಿನ್‌ದಾರರ ಅಸೋಸಿಯೆಷನ್ನೊಂದು ಮಡಿಕೇರಿಯಲ್ಲಿ ಸ್ಥಾಪಿತವಾಗಿ ಅದರ ದ್ವಿತೀಯ ಮೀಟಿಂಗು ಈ ತಾರೀಕು ೨೬ನೇ ಶನಿವಾರದಿನ ೧೧ ಗಂಟೆಗೆ ಓಂಕಾರೇಶ್ವರ ದೇವಸ್ಥಾನದ ಮಹಡಿಯಲ್ಲಿ ನಡೆಯುವದು.

ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿಯೇ ಇಟ್ಟು ಸುಧಾರಣೆ ಕೊಡಬೇಕೆಂಬುದನ್ನು ಕುರಿತು ಚೀಫ್ ಕಮಿಷನರುಗಳ ಪ್ರಾಂತ್ಯ ರಚನಾ ಸಮಿತಿಯ ಮೆಂಬರುಗಳಿಗೆ ಮಾಹಿತಿಕೊಡಲು ಡೆಲ್ಲಿಗೆ ಹೋಗಿದ್ದ ಶ್ರೀ ಪಿ. ಐ. ಬೆಳ್ಯಪ್ಪನವರು ತಾ. ೮ ರಲ್ಲಿ ವಾಪಸು ಬಂದಿರುವರು.

ಕೊಡಗು, ಡೆಲ್ಲಿ ಮತ್ತು ಅಜ್ಮೀರ್ ಮಿರ್ವಾರ್ ಈ ಮೂರು ಪ್ರಾಂತ್ಯಗಳನ್ನು ಹೊಸರಚನೆಯಲ್ಲಿ ಪ್ರತ್ಯೇಕ ಪ್ರಾಂತ್ಯಗಳಾಗಿಯೇ ಇಟ್ಟು, ಇವುಗಳಿಗೆ ಹೆಚ್ಚು ಕಮ್ಮಿ ದೊಡ್ಡ ಪ್ರಾಂತ್ಯಗಳಂತೆಯೇ ಪಂಜಾಬಿ ಪುಂಡಳಿಯಂದೊಡಗೂಡಿನ ಸುಧಾರಣೆಗಳನ್ನು ಕೊಡುವಂತೆ ಚೀಫ್ ಕಮಿಷನರುಗಳ ಪ್ರಾಂತ್ಯರಚನಾ ಸಮಿತಿಯವರು ಕಾನ್ಸ್ಟಿಟ್ಯೂಷನ್ ಅಸೆಂಬ್ಲಿಗೆ ಸಿಫಾರಸ್ಸು ಮಾಡಲು ತೀರ್ಮಾನಿಸಿರುವರೆಂದು ವರ್ತಮಾನ.

ನೋಟೀಸು.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
ಮಡಿಕೇರಿ.

ಉತ್ತರ ಕೊಡಗು ತಾಲೂಕು ಕೊಡ್ಲಿಪೇಟೆ ಮರೂರು ಸೋಸುಗ್ವನವರ ಮಗ ಶ್ರೀ ಎಂ. ಬಸಪ್ಪನವರು ನಮ್ಮ ಬ್ಯಾಂಕಿನಲ್ಲಿ ಗುಡ್ಸ್ ಲೋನ್ (Goods Loan) ನಂಬ್ರ 5/46ರಲ್ಲಿ ಯೂಲಕ್ಕಿ ಲೋನ್ ಮಾಡಿ ರೂ. 1,500/-ರನ್ನು ತಾ. 4-12-46ರಲ್ಲಿ ಪಡಕೊಂಡಿರುತ್ತಾರೆ. ಸದರಿ ಲೋನಿನ ಬಡ್ಡಿಯು ಬಾಕಿಯಾಗುವದರಿಂದಲ್ಲೂ, ಮೂಲಿನ ಪ್ರಯತ್ನಪಡಿಸಿದರೂ ದೊರಕದಿರುವದರಿಂದಲೂ, ಸದರಿ ಬಸಪ್ಪನವರಿಗೆ ಅಸಲು ಮತ್ತು ಬಡ್ಡಿಯನ್ನು ಕೊಟ್ಟು ಮೂಲವನ್ನು ಬಿಡಿಸಿಕೊಂಡು ಹೋಗಬೇಕೆಂಬುದಾಗಿ ರಿಜಿಸ್ಟ್ರಿ ನೋಟೀಸು ಮೂಲಕ ತಿಳಿಸಿದಾಗ್ಯೂ, ಬಿಡಿಸಿಕೊಂಡು ಹೋಗದೆ ಇದ್ದುದರಿಂದ, ಸದರಿ ಲೋನಿನ ಬಾಪ್ತು ಬ್ಯಾಂಕಿಗೆ ಬರಬೇಕಾ ಅಸಲು ರೂ. 1,500/- ಮತ್ತು ಅದರ ಬಡ್ಡಿ ಮತ್ತು ಇದರ ಖರ್ಚುಗಳನ್ನು ಬರಮಾಡಿಕೊಳ್ಳುವರೆ ಸದರಿ ಲೋನ್ ನಂಬ್ರ 5/46ರ ಬಾಪ್ತು ಯೂಲಕ್ಕಿಯನ್ನು ಇದೇ ತಿಂಗಳ ತಾ. 21-9-47ನೇ ಆದಿತ್ಯವಾರ ಪೂರ್ವಾಹ್ನ ೧೦ ಘಂಟೆ 11ಕ್ಕೆ ಯೂ ಬ್ಯಾಂಕಿಗೆ ಇತರ ಯುಕ್ತ ಬಂಡ ತಾರೀಖು ವ ಸಮಯದಲ್ಲಿ ಮಡಿಕೇರಿ ಮಹದೇವಪೇಟೆಯಲ್ಲಿರುವ ಬ್ಯಾಂಕಿನ ಆಫೀಸಿವಲ್ಲಿ ಬಹಿರಂಗವಾಗಿ ವಿಲಂ ಮಾಡಲಾಗುವುದು. ಇಲ್ಲವೇ ಸ್ವಯ್ಕೇಕವಾಗಿ ಮಾರಾಟ ಮಾಡಲಾಗುವುದು ಎಂಬುವುದನ್ನು ಈ ಮೂಲಕ ಸರ್ವರಿಗೂ ತಿಳಿಸೋಣಾಗುತ್ತದೆ.

ಮಡಿಕೇರಿ, T. K. Rai,
11-9-1947. ಏಜೆಂಟರು,
ದಿ ವಿಜಯಾ ಬ್ಯಾಂಕ್ ಲಿಮಿಟೆಡ್.

ಕಿತ್ತಳೆ ಫಲಲು ಹರಾಜು.

ಮೂಲಂಬಿ, ಕುಮುಟೂರು ಮತ್ತು ಮೂದಾಪುರ ತೋಟಗಳ ಬೇಸಿಗೆ ಕಿತ್ತಳೆ ಫಲಲನ್ನು ಇದೇ ಇಸವಿ ಆಕ್ಟೋಬರ್ ತಾರೀಕು 7 ನೇ ಮಂಗಳವಾರ ದಿನ ಬೆಳಿಗ್ಗೆ 11 ಘಂಟೆಗೆ ಕುಮುಟೂರು ಹೆಡೆಳಿಯ ಫೀಸಿನಲ್ಲಿ ಕ್ಯಾಪ್ಟನ್ ಚನ್ನಬಸಪ್ಪನವರ ರೂಬು ರಾಬು ಹರಾಜು ಮೂಡಲ್ಪಡುತ್ತದೆ. ಮೇಲ್ಕಂಡ 3 ತೋಟಗಳ ಫಲಲುನ್ನು ಪ್ರತ್ಯೇಕ ಪ್ರತ್ಯೇಕವಾಗಿ ಹರಾಜು ಮೂಡಲ್ಪಡುವುದು. ಹರಾಜಿನಲ್ಲಿ ಫಲಲನ್ನು ಪಡಕೊಂಡವರು ಅರ್ಧ ಪೊಬಲಗನ್ನು ಕೂಡಲೇ ವಾವತಿ ಮಾಡಬೇಕಾಗುತ್ತದೆ. ಹರಾಜಿನ ಪೊಬಲಗನ್ನು ಅಂಗೀಕರಿಸುವ ಮತ್ತು ತಿರಸ್ಕರಿಸುವ ಹಕ್ಕನ್ನು ತೋಟದ ಮೂಲೀಕರು ಇಟ್ಟು ಕೊಂಡಿರುವರು.

ಹೆಚ್ಚಿನ ವಿವರಗಳನ್ನು ಮೂದಾಪುರ ತೋಟದ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಮೂದಪುರ ಗ್ರೂಪ್ ತೋಟಗಳು,
ಮೂದ ಪುರ ಪೋಸ್ಟು,
3-1 ಉ. ಕೊಡಗು.

ಟೆಂಡರು.

ಕುಟ್ಟದಲ್ಲಿರುವ ಅನಿವರಿ ಮತ್ತು ಹೂವಿನಕಾಡು ತೋಟದ ಕಿತ್ತಳೆ ಮತ್ತು ಒಳೆಯ ಮೆಣಸಿನ 1947-48 ವರುಷದ ಫಸಲನ್ನು ಟೆಂಡರು ಮೂಲಕ ವಹಿಸಿಕೊಟ್ಟಕ್ಕೆ ಇಚ್ಛಿಸುವುದರಿಂದ ಖಾಯಂದಾರರು 1947ನೇ ಇಸವಿ ಸೆಪ್ಟೆಂಬರು ತಾರೀಕು 25ನೇ ಗುರುವಾರ ದಿನ ಸಾಯಂಕಾಲ 6 ಗಂಟೆಯ ಒಳಗೆ ಈ ಕೆಳಗಿನ ಅಡ್ರೆಸಿಗೆ ಟೆಂಡರನ್ನು ತಲಪಿಸಬಕ್ಕದ್ದು.

ಪ್ರತೀ ಟೆಂಡರುದಾರರು ಟೆಂಡರಿನ ಜೊತೆಯಲ್ಲಿ ರೂ. 2,000 (ಎರಡುಸಾವಿರ) ಗಳನ್ನು ಡಿಪಾಜಿಟ್ಟು ಇಡತಕ್ಕದ್ದು. ಡಿಪಾಜಿಟ್ಟಾಯಿಲ್ಲದ ಟೆಂಡರುಗಳನ್ನು ಅಂಗೀಕರಿಸುವುದಿಲ್ಲ.

ಯಾವ ಟೆಂಡರನ್ನೂ ಅಂಗೀಕರಿಸುವ, ಮತ್ತು ತಿರಸ್ಕರಿಸುವ ಹಕ್ಕನ್ನು ಕಂಪೆನಿಯ ಅಧಿಕಾರಿಗಳು ಇಟ್ಟುಕೊಂಡಿರುವರು

ಹೆಚ್ಚಿನ ಶರತ್ತುಗಳನ್ನು ಈ ಕೆಳಗಿನ ಅಡ್ರೆಸಿಗೆ ಬರೆದು ತಿಳಿದುಕೊಳ್ಳಬಹುದು.

ಕೆ. ಸಿ. ಬೆಳ್ಯಪ್ಪ,
ಹೂವಿನಕಾಡು ತೋಟ,
ಕುಟ್ಟ ಪೋಸ್ಟು, ದ. ಕೊಡಗು.

HOUSE FOR SALE.

A house in Chural Street, Virajpet with land at the back of the house is for sale. Apply with your offer to:-

V. TEXEIRA,
MARIKUPPAM P. O
MYSORE STATE.

3-1

ದೇವರು ಮತ್ತು ಧರ್ಮ.

(ನಿನ್ನೆ ಪುರಿದಿಂದ ಸಾಗಿದ್ದು)

ಗಳು ನಡೆಯುತ್ತಲೇ ಇರುತ್ತವೆ. ಒಂದು ಕಾರಣಕ್ಕಲ್ಲದಿದ್ದರೆ ಮತ್ತೊಂದಕ್ಕೆ ಯುದ್ಧವಾಗುತ್ತಲೇ ಇರುತ್ತದೆ! ಆದ್ದರಿಂದ ಶಾಂತಿ ಅಶಾಂತಿಗಳಿಗೆ ದೇವರು ಕಾರಣರೆನ್ನುವದು ಮೂಢ ಕಲ್ಪನೆ.

ಈ ಜಗತ್ತಿನ ಸುಖ ದುಃಖಗಳಲ್ಲಿ ವಿಶೇಷವಾಗಿ ತೇಲಾಡುವವರು ಅವರ ಸ್ಥಳಗಳನ್ನು ಅನುಭವಿಸಲೇ ಬೇಕಾಗುತ್ತದೆ. ಅದ್ದರಿಂದ ಜಗತ್ತಿನ ಸುಖದುಃಖಗಳ ಅಪೇಕ್ಷೆಯನ್ನು ತ್ಯಜಿಸಿ ನಿರಿಚ್ಛನಾಗು ಎಂದು ವೇದಾಂತವು ಸಾರುತ್ತಿದೆ. ನಾವು ನಮ್ಮ ಸುಖದುಃಖಗಳ ದೃಷ್ಟಿಯಿಂದಲೇ ದೇವರ ಬೆಲೆಕಟ್ಟುತ್ತಿದ್ದೇವೆ. ದೇವರು ನಮ್ಮನ್ನು ಸುಖಿಗಳಾಗಿಡಬಿದ್ದರೆ ನಮಗೆ ದೇವರು ಬೇಕಿಲ್ಲ ಶಿಶುವಿಗೆ ಅಟವ ಸಾಮಾನು ದೊರೆಯದಿದ್ದರೆ ದೇವರಿಲ್ಲವೆನ್ನುತ್ತದೆ! ಶಾಲಾ ಮಕ್ಕಳ ಪಾರವು ಸುಲಭವಾಗಿ, ಪರೀಕ್ಷೆಯಲ್ಲಿ ಉತ್ತೀರ್ಣರಾಗದಿದ್ದರೆ ದೇವರಿಲ್ಲವೆನ್ನುತ್ತಾರೆ! ತಮ್ಮ ಆಕೆ ಭರವಸೆಗಳು ಈಡೇರಿದಿದ್ದರೆ ದೇವರ ಅಸ್ತಿತ್ವವನ್ನು ಯುವಕರು ಛೀಗಳಿಯುತ್ತಾರೆ ಮುದುಕರು ತಮ್ಮನ್ನು ಸಿರ್ಬಲತೆಗಾಗಿ ದೇವಸ್ಥಲವೆನ್ನುತ್ತಾರೆ ಮುಸಲ್ಮಾನರನ್ನು ಹುಟ್ಟಿಸಿದುದಕ್ಕೆ ಹಿಂದುಗಳು ದೇವರನ್ನು ತೆಗಳುತ್ತಾರೆ ಈ ದೇವರು ಯಾವುದಕ್ಕೆಲ್ಲಾ ಜವಾಬ್ದಾರನಾಗಬೇಕು? ದೇವಸ್ಥಾನದಲ್ಲಿ ಕೇಡಿಗನೆಕಾಯಿ ಒಡೆದರೆ ದೇವರು ನಮ್ಮ ಆರಯಗಳನ್ನು ನೆರವೇರಿಸಬೇಕು. ವ್ಯವಸಾಯಕ್ಕೆ ಸಕಾಲದಲ್ಲಿ ವಳಿ ಸೊಡೆಸಬೇಕು! ಮಾನವ ಪರ ಸುಖ ದುಃಖಗಳನ್ನು ಕಣ್ಣಿಟ್ಟು ಪರಿಪಾಲಿಸಿ ಯೋಗ್ಯರೀತಿ ವರ್ತಿಸಬೇಕು. ಇಲ್ಲಗಿದ್ದರೆ ದೇವರಿಲ್ಲ! ದೇವರನ್ನು ಮೇತನಕ್ಕೆತ್ತಿ ಚಾಕರಿಸೆ ಮಟ್ಟಿಕ್ಕೆ ಇಂದಿನ ಮನುಜ ತಂದಿದೆ!

'ದೇವರು ದಿಂಡರು ಕೈಲಾಗದವರಿಗೆ' ಬದವರಿಗೆ. ಈ ಜಗತ್ತೇ ಸರ್ವಸ್ವ. ಕತ್ತಿಯಿದ್ದವನ ಕಾಲ ಇಲ್ಲಿ ಸುಖಿಗಳಾಗಿ ಬದುಕುವದೇ ಜೀವನ ಧ್ಯೇಯ" ಎನ್ನುವವರೂ ಇದ್ದಾರೆ

ದಾ ವಿ

ಬದಲಾಗುತ್ತಿರುವ ಜಗತ್ತಿನಲ್ಲಿ, ನೆತ್ತರಾದ ಪ್ರಪಂಚದಲ್ಲಿ, ಪೂರ್ಣ ಜಾಲದಂಡಿರುವ ಈ ಪರದೆಯಲ್ಲಿ ಶಾಶ್ವತ ಶಾಂತಿಯನ್ನು, ಸುಖವನ್ನು ಬಯಸುವದು ಹುಚ್ಚುತನ ಇಡೀ ಜಗತ್ತಿನ ಜನರೆಲ್ಲರೂ ಕ್ರಿಶ್ಚಿಯನರಾದರೂ, ಮುಸ್ಲಿಮರಾದರೂ ಇಲ್ಲವೇ ಹಿಂದುಗಳಾದರೂ ಜಗತ್ತಿನಲ್ಲಿ ಶಾಶ್ವತ ಶಾಂತಿ ನೆಲಸದು. ಇಂದು ನಾವು ಮುಸ್ಲಿಮರು ಮಾಡಿದ ಹಾನಿಯ ನೀತಿಗಾಗಿ ಉರಿದೇಳುತ್ತಿದ್ದೇವೆ. ಆದರೆ ಇದೇ ರೀತಿಯ ಪಾಶವೀ ನೀತಿ ಜಗತ್ತಿನ ಬೇರೆಡೆ ನಡೆಯುತ್ತಿಲ್ಲವೇ? ಸಾಗಾದರೆ ಈ ಅಶಾಂತಿಗೆ ಉತ್ತರವೆಲ್ಲಿ?

'ಧೈರ್ಯದಿಂದ ಹೋರಾಡಿ ಮುಸ್ಲಿಮರೆಲ್ಲರನ್ನೂ ಭರತಖಂಡದಿಂದ ಓಡಿಸಿರಿ' ಎಂದು ಕೆಲವರು ಹೇಳುತ್ತಾರೆ. ನಮ್ಮ ಕುಟುಂಬ, ಆಸ್ತಿಗಳನ್ನು ಕಾಯ್ದುಕೊಳ್ಳಲು ಪ್ರಾಣಿಗಳೂ ಹೋರಾಡುತ್ತವೆ. ಪ್ರಾಣಿ ವರ್ಗದಿಂದಲೇ ದತ್ತವಾಗಿ ಬಂದಿರುವ ಈ ನೀತಿಯನ್ನು ಸಮಾಜದ ಉದ್ಧಾರಕ್ಕಾಗಿ, ಕ್ಷೇಮಾಭಿವೃದ್ಧಿಗಾಗಿ ಉಪಯೋಗಿಸಿದೆ ಸಾಧ್ಯವಿಲ್ಲ. ಮನುಷ್ಯರು ಶತ್ರುವಿನ ಎದುರು ತಲಿಗಳಂತೆ ಪ್ರತಿಭಟಿಸದೆ ನ್ಯಾಯಬೇಕೆಂದು ಯಾವ ವಿಚಾರಶೀಲನೂ ಹೇಳನು. ಆದರೆ ಈ ಮಾರ್ಗವು ತಾತ್ಕಾಲಿಕವಾದುದು. ಚಿರಂತನವಾದುದಲ್ಲ; ಶತ್ರುವನ್ನು ಸ್ನೇಹಿತನಾಗಿ ಪರಿವರ್ತಿಸುವ ತನಕ ಕಚ್ಚಾಟ ನಿಲ್ಲುವಾರದು. ಕ್ರಿಶ್ಚಿಯನ್ ಮತ್ತು ಮಹಮ್ಮದೀಯ ಧರ್ಮಗಳು ಈ ತಾತ್ಕಾಲಿಕ ಮಾರ್ಗದಲ್ಲಿ ಪ್ರಯತ್ನಿಸುತ್ತಿವೆ. ಆದ್ದರಿಂದಲೇ ಮತಾಂತರಗಳನ್ನು ಬಲಾತ್ಕಾರದಿಂದ ಅವರು ಮಾಡುತ್ತಾರೆ ಇಬ್ಬರು ಸಿಗ್ಗಲವೇಬುದು ದಿನ ಕಳದಂತೆ ಹೆಚ್ಚು ವಿಶದವಾಗುತ್ತಿದೆ. ಹಿಂದೂ ಧರ್ಮವು ಇನ್ನೊಬ್ಬರ ಹೃದಯ ಪರಿವರ್ತನೆಯನ್ನು ತಪ್ಪು ಕ್ರಿಯೆಯವಾಗಿಟ್ಟು ಕೊಂಡಿದೆ. ಅದರಲ್ಲಿ ಬಲಾತ್ಕಾರವಿಲ್ಲ ಆದರೆ ಇಂದು ಹಿಂದೂಧರ್ಮ ಹಿಂದಿನಂತೆ ಆರಾ ಜನಪ್ರಿಯವಾಗಿಲ್ಲ. ತನ್ನ ಹಿಂದಿನ ವೈಶಿಷ್ಟ್ಯವನ್ನು ಳಕಕೊಂಡಿರುತ್ತಿದೆ ಆದರೆ ತನ್ನ ಪೂರ್ಣ ಸ್ಫೂರ್ತಿಯನ್ನು ಅರಿತು ಮುನ್ನಡೆಯಬೇಕು ಜಗತ್ತಿನ ಉದ್ಧಾರವಾಗಬೇಕಾದರೆ ಈ ಮಾರ್ಗದಿಂದ ಸಾಧ್ಯ

ಮೈಸೂರಿಗೆ ಜವಾಬ್ದಾರಿ ಸರಕಾರ?

ಮೈಸೂರಿನ ಸತ್ಯಾಗ್ರಹ ಪ್ರಮುಖವಾಗಿ ನಡೆಯುತ್ತಿದೆ ಅನೇಕ ಸಾರಿ ಜನರ ಮೇಲೆ ಬೆಂಗಳೂರು ಮೈಸೂರುಗಳಲ್ಲಿ ಗುಂಡು ಹಾರಿಸಲಾಗಿದೆ. ಬಲವರು ಸತ್ತಿದ್ದಾರೆ ಅನೇಕರು ಗಾಯ ಗೊಂಡಿದ್ದಾರೆ ಸಾರ್ವತ್ರಿಕ ದಸ್ತಗಿರಿಗಳಾಗಿವೆ ಮೈಸೂರು ಲೈಬ್ರೆ ಕಾಮಗಾರರು ಇಂದಿಗೂ ಜನರು ಮುಷ್ಕರ ಹೂಡಿದ್ದಾರೆ ಇದರಿಂದ ಪರಿಹಾರಿಸೂ ಅಡಚಣೆಯಾಗಿದೆ.

ತಾವೀಕು ಲರಲ್ಲಿ ಮೈಸೂರಿನ ಆರಸರು ಒಂದು ಹೇಳಿಕೆಯನ್ನು ಹೊರಡಿಸಿ ಮೈಸೂರಿಗೆ ಮುಂಬರುವ ಹೊಸ ರಾಜ್ಯ ಸಂವಿಧಾನದಲ್ಲಿ ಜವಾಬ್ದಾರಿ ಸರಕಾರವನ್ನು ಕೊಡಲಾಗುವುದೆಂದು ಘೋಷಿಸಿದ್ದಾರೆ. ಈ ಭರವಸೆಯ ಮೇರೆ ಸತ್ಯಾಗ್ರಹ ನಿಲ್ಲಿಬಹುದೆಂಬ ಊಹೆ ಇವೆಯಾದರೂ ದಸ್ತಗಿರಿಯಾದವರ ಬಿಡುಗಡೆಯಿಲ್ಲದೆ ಯಾವ ನಿರ್ಧಾರವೂ ಆಗಲಾರದು.

ಕಾಂಗ್ರೆಸ್ ಪ್ರೆಸಿಡೆಂಟರ ರಾಜಿನಾಮೆ?

ಕಾಂಗ್ರೆಸ್ ಪ್ರೆಸಿಡೆಂಟರಾದ ಶ್ರೀ. ಜೆ. ಬಿ ಕೃಪಲಾನಿಯವರು ತನ್ನ ಪ್ರೆಸಿಡೆಂಟ್ಸ್ಥಾನಕ್ಕೆ ರಾಜಿನಾಮೆ ಕೊಡಲಿರುವರೆಂದು ತಿಳಿಯಬಂದಿದೆ. ಕಾಂಗ್ರೆಸ್ ಕಾರ್ಯವರ್ತಿಗಳಾದ ಶ್ರೀ. ರಂಜರೂವಾದೇವಾವರು ಇದು ನಿರಾಧಾರವಾದ ವಾರ್ತೆಯೆಂದು ಹೇಳುತ್ತಾದ ವಾರ್ತೆಯೆಂದು ಪ್ರೆಸಿಡೆಂಟರು ರಾಜಿನಾಮೆ ಕೊಡುವದು ನಿಜವೆಂದೂ ಮುಂಬರಿಯ ತಿಂಗಳ ಕಾಂಗ್ರೆಸ್ ಕಮಿಟಿ ವಿಷಯಿಸಿ ರಾಜಿನಾಮೆ ಪತ್ರವನ್ನು ಪರಿಶೀಲಿಸಲಿಗುವದೆಂದೂ ತಿಳಿಸಬಂದಿದೆ.

ದೆಲ್ಲಿಯಲ್ಲಿ ದಂಗೆ.

ದೆಲ್ಲಿಯಲ್ಲಿ ದಂಗೆ ಪ್ರಾರಂಭವಾಗಿದೆ ಅನೇಕರ ಕೊಲೆಯಾಗಿದೆ ಮಿಲಿಟರಿ, ಪೊಲೀಸರು ಬೀದಿಬೀದಿಗಳಲ್ಲಿ ಗಸ್ತುತಿರುಗುತ್ತಿದ್ದಾರೆ ಮನೆಮನೆಗಳ ಲೂಟಿ ನಡೆದಿದೆ. ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಿದೆಯಂತೆ ಪಂಡಿತ ಜವಾಹರರು ದಂಗೆ ಗೊಳಗಾದ ಪ್ರದೇಶಗಳನ್ನು ಸಂರಕ್ಷಣಾ ಮಂತ್ರಿ ಬಲದೇವಸಿಂಗರೊಡನೆ ಸುತ್ತಿದರು. ಇವರು ಸುತ್ತುತಿದ್ದಾಗ ಒಬ್ಬನನ್ನು ಕೊಲ್ಲಲುದ್ಯುಕ್ತನಾದ ದಂಗೆಕಾರನ ಕೈಯಿಂದ ಕತ್ತಿಯನ್ನು ಹಿಡಿದೆಳೆದು ರಕ್ಷಿಸಿದರಂತೆ ಅನೇಕ ಕಡೆ ಮನೆ ಲೂಟಿ ಮಾಡುತ್ತಿದ್ದವರನ್ನು ಸ್ವತಹ ಹಿಡಿದು ದಸ್ತಗಿರಿ ಮಾಡಿರುವರಂತೆ ಸಹರೂರವರ ಇರುವಿಕೆಯು ಈ ಭಾಗಗಳಲ್ಲಿ ಜನತೆಗೆ ಧೈರ್ಯ ಕೊಡುತ್ತಿದೆಯಂತೆ ಗಾಂಧೀಜಿಯವರು ದೆಲ್ಲಿಗೆ ತಾವೀದಿನ ರಲ್ಲಿ ಬಂದಿರುವರು

ಹೈದರಾಬಾದಿನಲ್ಲಿ ಸತ್ಯಾಗ್ರಹ.

ಹೈದರಾಬಾದಿನ ಸತ್ಯಾಗ್ರಹವು ಬಹು ಬಿರುಸಿನಿಂದ ನಡೆಯುತ್ತಿದೆ. ಹೈದರಾಬಾದು ಸರಕಾರವು ಜನತೆಯ ಮೇಲೆ ಬಹಿರಂಗ ಯುದ್ಧ ಸಾರಿದಂತೆ ತೋರುತ್ತಿದೆ ಹೈದರಾಬಾದ್ ಸರಕಾರದ ಅಡಳಿತ ಸೂತ್ರವನ್ನು ನಿರೂಪಿಸುತ್ತಿರುವ ಕೋಮುವಾದಿ (ಛೀಗ್) ಸಂಸ್ಥೆ 'ಇತ್ತೆದುಲ್ ಮುಸಲ್ಮಾನ್' ಪ್ರತ್ಯೇಕ ಆರಯದಂತೆ ಹೈದರಾಬಾದಿನ ದಬ್ಬಾಳಿಕೆ ನಡೆಯುತ್ತಿದೆ ಸ್ವಾತಂತ್ರಾದ್ ಸೈನ್ಯದವರು ತಮ್ಮ ಆರಸೊತ್ತಿಗೆಯನ್ನು ಈ ರೀತಿಗೆ ಒಪ್ಪಿಸಿಗುವರೋ ಎಂಬಂತೆ ತೋರುತ್ತಿದೆ ದಸ್ತಗಿರಿಗಳು ಸಾವಿರ ಸಂಖ್ಯೆಯಲ್ಲಿ ಆಗಿವೆ ವಿದ್ಯಾರ್ಥಿಗಳ ಮೇಲೆ ಅಂತಿ, ಗುಂಡಿನ ಪುಕರಣಗಳು ನಡೆದಿವೆ ಶಾಲಾ ಕಾಲೇಜುಗಳು ಮುಚ್ಚಲ್ಪಟ್ಟಿವೆ ಹೈದರಾಬಾದಿನ ಕಾಂಗ್ರೆಸಿನ ಸ್ಪುಸಿಡೆಂಟರಾದ ಸ್ವಾಮಿ ರಮಾನಂದತೀರ್ಥರು ಜೈಲಿನಲ್ಲಿ ಉಪವಾಸವ್ರತ ಕೈಕೊಂಡಿದ್ದಾರೆ ಇವರೊಡಗೆ ಇನ್ನೂ ಹಲವು ರಾಜಕೀಯ ಕೈದಿಗಳು ನಿರಶನ ವ್ರತ ಪ್ರಾರಂಭಿಸಿರುವರು.

ಬೇಕಾಗಿದೆ.

ತಕ್ಕಮಟ್ಟಿಗೆ ಓದ ಬರಹ ಗೊತ್ತಿರುವವರು, 18 ವಯಸ್ಸಿನಿಂದ 23 ವಯಸ್ಸಿನೊಳಗೆ ಇರುವವರು ಮತ್ತು ಒಂದನೇ, ಎರಡನೇ ನುತ್ತು, ಮೂರನೇ ಫಾರಂ ಓದಿದ ಹುಡುಗರು. 15-16 ವಯಸ್ಸಿನೊಳಗಿರುವವರು, ಮಿಲಿಟರಿಯ ಟೆಕ್ನಿಕಲ್ ಟ್ರೇನಿಂಗ್‌ಗೆ ಸೇರಲು ಇಂದೇ ಇರುವವರು ಮಾ ರಾ ಶ್ರೀ ಅಪ್ಪಾಸಂಡ ಸುಂದರ್ಣಾಸವರನ್ನು ಈ ಕೆಳಗಿನ ಸ್ಥಳಗಳಲ್ಲಿ ಬಿ. ನಕ್ಷತ್ರಲ್ಲಿ ನಡೆಸಿರುವ ತಾರೀಕುಗಳಲ್ಲಿ ನೋಡಬಹುದು.

ನಾಪೋಕ್ಲು – 13 ನೇ ,, ,,
ಪೊನ್ನಂಪೇಟೆ – 15 ನೇ ,, ,,
ಸೋಮವಾರಪೇಟೆ – 17 ನೇ ,, ,,

COORG FOREST DEPARTMENT

NOTICE.

Meraana, the 8 September 47.

Applications are invited from candidates who are not less than 18 years nor more than 25 years of age on 1-4-1948 for undergoing training for Ranger's appointment in the Forest College at Debra Dun during 1948-50 The applicants should be natives of Coorg by birth or domicile and they must have passed the intermediate examination of any recognised Indian University with one or more of the following subjects: Mathematics, Physics Chemistry, Botany and Zoology. A certificate of of having passed any other examination of an equivalent or higher standard will be admissible. The minimum qualification will be reduced for war-service candidates to the Matriculation, or the Indian Army Special certificate of education, with preference to those who have obtained good marks (at least 50%) in English and Mathematics and to those who have taken General Science or Biology. The age limit which at present is that candidates should not have attained the age of 25 on April 1st of the year of admission to the College will be raised by the number of completed years of war service, subject to the provision that no candidate shall have passed his 31st birth day on April 1st of the year of admission to the College

Before admission to the College the candidates are required to pass a qualifying examination and it is likely that the Government will bear the major portion of the cost of training at the College.

For further particulars apply to the Chief Forest Officer. Coorg, and the applications should reach him not later than 21-9-47 and the candidates should appear for personal interview on 25-9-1947 at 9 A. M. in the Chief Forest Officer's Office.

C. M. Kushalappa.
Chief Forest Officer, Coorg.

'ಓರಿಯಂಟಲ್'

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಗವರ್ನರ್ಮೆಂಟ್ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದ್ದು (ಸದಸ್ಯರ ಹೊಸ ನಿಯಮಿತವಾಗಿದೆ.)

ಮತ್ತೊಂದು ಬಾರಿ 'ಓರಿಯಂಟಲ್' ಮುಂದೆ, ಇತರೆಯವು ಹಿಂಬಾಲಿಸುತ್ತವೆ. ಮಲಯ, ಮತ್ತು ಬರ್ಮಾಗಳ ನಾಲಿಸಿದಾರಿಗೆ ಜನಸ್ತೋ ಅಕ್ರಮಣ ಕಾಲದಲ್ಲಿ ರಕ್ಷಾದಿದ್ದ ಜೀವಿಸಿಗಳನ್ನು ಹೊಸಜೀವನಗೊಳಿದ ಜೀವ ವಿಮಾ ಕಂಪೆನಿಗಳಲ್ಲಿ ಓರಿಯಂಟಲೇ ಪೆಟ್ಟು ಹೊದಲನೇಯದು. ಅದು ಬಾಕಿಯಾದ ಕಂತುಗಳ ಮೇಲೆ ಬಡ್ಡಿ ತೆಗೆದುಕೊಳ್ಳಲಿಲ್ಲ. ಅಥವಾ ಒಳ್ಳೇ ಆರೋಗ್ಯದ ಸರ್ಟಿಫಿಕೇಟ್ ಕೇಳಲಿಲ್ಲ

ಧಾರಾಳತನವೇ ವೃದ್ಧಿಯೊಗುತ್ತಿರುವ
ನಮ್ಮ ಜನಪ್ರಿಯತೆಯ ರಹಸ್ಯವಾಗಿದೆ.

ಗತಳಿಗರ ಹೊಸ ವ್ಯವಹಾರ .... ಸುಮಾರು ರೂ. ೨೮,೫೦,೦೦,೦೦೦
ನಿಧಿ ತಾ. 31—12—1946ರಲ್ಲಿ .... ಹೆಚ್ಚಾಗಿ ರೂ. ೪೪,೫೫,೦೦,೦೦೦

ನಮ್ಮ ಜೀವ ವಿಮೆಯ ಸ್ಕೀಮೊಂದು ಬೇಡಿಕೆಯ ಅಳವಡಿತ ಯೋಜನೆಯು ನಮ್ಮಲ್ಲಿದೆ.

ಮುಖ್ಯ ಖಜೇರಿ—ಓರಿಯಂಟಲ್ ಬಿಲ್ಡಿಂಗ್ಸ್, ಫೋರ್ಟ್, ಬೊಂಬಾಯಿ,
ಶಾಪೆ—'ಓರಿಯಂಟಲ್ ಬಿಲ್ಡಿಂಗ್ಸ್' ಸೌತ್ ಪೇರೇಡ್, ಬೆಂಗಳೂರು ಕಂಟ್.
ಇನ್ಸ್‌ಪೆಕ್ಟರರ ಆಫೀಸು—ಕೆ. ಸದಾಶಿವ ರೋಡು, ಮಂಗಳೂರು.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಸೂರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೋ. ಬಾ. ನಂ. 337, ಮದ್ರಾಸು 2.
ಬೋಂಬೆ ಲೈಫ್ ಬಿಲ್ಡಿಂಗ್, ಪೋ. ಬಾ. ನಂ. 1, ಉಡುಪಿ.
(ಟೆಲಿಫೋನ್ ನಂ. 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂದರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಅಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರು ಮೊಬಲಗು ರೂ. 1,33,740, ಜಮೂ ಬಂದ ಶೇವಣಾತಿ 3,30,268-1-8, ವಸೂಲಾದ ಕ್ಷೇಮನಿಧಿ 2,36,454-0-3, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಿಖು ಶೇವಣಾತಿಯನ್ನು ತಾ. 1-12-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0-8-0 ದರದ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ರಿಜಿಸ್ಟಾರರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾನ್ಜಿ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ವಪ್ನ ಸಂಗತಿಗಳು.	ಒಟ್ಟು ಆದಾಯ	1,07,09,000	ಮೀರಿದೆ
	ಚಾಲ್ತಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
	ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು	8,83,62,000	,,

ಅಂಗ ಕಛೇರಿ: ವಿಸ್ಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ಟ್ರೀ, ಬೆಂಗಳೂರು. ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯ ಲೈಫ್ ಬಿಲ್ಡಿಂಗ್,

Edited, Printed and Published by P. I. Bellippa at Press, Mercara, for 'Kodagu' Ltd.

ಇದು ನಿಜವೇ?

ಸಂಗ್ರಾಹಕ—ಶ್ರೀಧರ.

(ದೇಖರ ಶ್ರೀಧರರು ಕೆಳಗಿನ ಪ್ರಶ್ನೆ ಕೇಳಿ ಅವರ ಜಿಜ್ಞಾಸೆಯನ್ನು ಕೊಟ್ಟಿದ್ದಾರೆ ಇದು ನಿಜವಲ್ಲ ವೆಂದು ಯೋಗ್ಯ ರುಜುವಾತಿನಿಂದ ಆರುವಳಿ ಕೊಟ್ಟರೆ ಅದನ್ನು ಕ್ಯಾಟಿಸಲಾಗುವುದು. ಸಂ.)

ಸಂಯೋಜನಾ ಪಕ್ಷದವರಲ್ಲಿ ಕೊಡಗನ್ನು ಪ್ರತ್ಯೇಕ ವಿಡುವದು ಸಾಧ್ಯನಿಲ್ಲೆಂಬ ಬಗ್ಗೆ ಕೆಳಗಿನ ಕಾರಣ ಕೊಟ್ಟು ರಾಜ್ಯಪುನರ್ನಾ ಸಭೆಗೆ ಐದು ಜನರಿಂದ ಸಹಿಮಾಡಲ್ಪಟ್ಟ ಮೆಮೋರಿಯಲ್ ಒಂದನ್ನು ಕಳುಹಿಸಲಾಗಿದ್ದರಂತೆ! ಆದರಲ್ಲೂ ಇನ್ನು ಬೇರೆ ರೀತಿಯಿಂದಲೂ ಈ ಕೆಳಗಿನ ಅಭಿಪ್ರಾಯಗಳನ್ನು ಕೊಟ್ಟಿರುವರಂತೆ!

(೧) ಕೊಡಗಿನ ಉತ್ಪನ್ನ ೧೫ ಲಕ್ಷ ವೆಂದೂ ಇದರಲ್ಲಿ ಏಳು ಲಕ್ಷ ರೂಪಾಯಿ ಎಸ್ಟೇಟ್ಸ್ ಬಾಬಿನಿಂದ ಬರುವದೆಂದೂ ತೋರಿಸಿರುವರಂತೆ!

(೨) ಕೊಡಗಿನ ನ್ಯಾಯ, ಇತರ ಆಡಳಿತಗಳಲ್ಲವೂ ಒಬ್ಬನ ಕೈಯಲ್ಲಿರುವದರಿಂದ ಇದು ಒಬ್ಬನ ಆಡಳಿತವೆಂಬ ಬರೆದಿರುವರಂತೆ!

(೩) ಹಣವಿಲ್ಲದೆ ಕೊಡಗಿನ ರಸ್ತೆಗಳು ಜೆನ್ನಾಗಿಲ್ಲ. ಕೊಡಗಿನಲ್ಲಿ ವಿದ್ಯಾ ವಿಕಾಸವಾಗಿಲ್ಲ. ಎಲ್ಲಾ ಪ್ರಾಂತಗಳಿಗಿಂತಲೂ ಕೊಡಗು ಹಿಂದಿದೆ; ಇದಕ್ಕೆ ರುದ್ದಿನ ಅಭಾವವೇ ಕಾರಣವೆಂದಿರುವರಂತೆ!

(೪) ಕೊಡವರು ಜಮ್ಮ ಹಿಡುವಳಿದಾರರು. ಆವರದೇ ಕೊಡಗಿನಲ್ಲಿ ದಬ್ಬಾಳಿಕೆ. ಉಳಿದ ಕೋವುಗಳು ಬಹು ಮಟ್ಟಿಗೆ ಹಿಂದಕ್ಕೆ ತಳ್ಳಲ್ಪಟ್ಟಿವೆ. ಇವರ ಉದ್ಧಾರವಾಗಬೇಕಾದರೆ ಬೇರೆ ಸ್ವಾಂತ್ರ ಜೊಡನೆ ಇವನ್ನು ಸೇರಿಸಲೇ ಬೇಕೆಂದು ಸೂಚನೆ ಕೊಟ್ಟಿರುವರಂತೆ!

(೫) ಕೊಡಗನ್ನು ಮೈಸೂರಿಗೆ ಸೇರಿಸಿ ಮೈಸೂರಿನ ಆರಸರು ಕೊಡಗಿನ ಆರಸರಾಗಿರಲಿ ಎಂಬ ಸೂಚನೆ ಮಾಡಿರುವರಂತೆ!

(೬) ಕೊಡಗನ್ನು ಪ್ರತ್ಯೇಕವಿಡುವ ಇಲ್ಲವೇ ಬೇರೆ ಪ್ರಾಂತಕ್ಕೆ ಸೇರಿಸುವ ಬಗ್ಗೆ ಜನರ "ರೆಫರೆಂಡಂ" ತೆಗೆದು ಆ ಅಭಿಪ್ರಾಯವಂತೆ ವೀರ್ಮಾನವಾಗ ಬೇಕಲ್ಲದೆ ಆ ಪರಿಗೆ ಕೊಡಗಿಗೆ ಯಾವ ರಾಜಕೀಯ ಸುಧಾರಣೆಯನ್ನೂ ಕೊಡಕೂಡದೆಂದು ಹೇಳಿರುವರಂತೆ!

ಟಿಪ್ಪಣಿ.

ಸಂಯೋಜನಪ್ರವಾದಿಗಳು ಒಂದು ಮೇಕೆ ಮೇಲೆ ನಮೂದಿಸಿರುವಂತೆ ಕೊಡಗಿನ ವಿಚಾರದಲ್ಲಿ ರಾಜ್ಯಪುನರ್ನಾ ಸಭೆಗೆ ಅರುವಿಕೆ ಕೊಟ್ಟಿದ್ದು ನಿಜವಾದರೆ ಇದು ಶುದ್ಧ ಅಪಪ್ರಚಾರವಾಗಿದೆ. ನಿಜಾಂಶ ಹೀಗಿದೆ.

(೧) ಕೊಡಗಿನ ಎಸ್ಟೇಟ್ಸ್ ಉತ್ಪತ್ತಿ ಏಳು ಲಕ್ಷವಿರುವ ಇಂದು ಸರಕಾರವ ಜಮ್ಮಿ ಉತ್ಪತ್ತಿ ೪೦ ಲಕ್ಷವಾಗಿದೆ.

(೨) ಕೊಡಗಿನ ಎಲ್ಲಾ ಇಲಾಖೆಗಳೂ ಒಬ್ಬನ ಆಧಿಕಾರದಲ್ಲಿ ನಡೆಯುತ್ತಿಲ್ಲವೆಂಬುದು ಕೊಡಗಿನಲ್ಲಿ ವಾಸಿಸುವವರಿಗೆ ತಿಳಿಯದೆ ಇರಮ. ನ್ಯಾಯ ಇಲಾಖೆಗೆ ಚೀಫ್ ಕಮಿಷನರೇ ಸರ್ವಾಧಿಕಾರಿಯಲ್ಲ. ಪಿ. ಡಬ್ಲ್ಯೂ. ಡಿ. ಆಗರಿ, ಫಾರೆ[illegible] ಇಲಾಖೆಯೂಗಲೀ, ಇಲ್ಲವೇ ಇನ್ನಾ[illegible] ಇಲಾಖೆಯೂಗಲೀ ಒಬ್ಬನ ಆಡಳಿ[illegible]ರಿಲ್ಲ.

(೩) ಕೊಡಗಿನ ರಸ್ತೆಗಳು ಹಾಳು ಸ್ಥಿತಿಯಲ್ಲಿ ಬಹುಶಃ ಇರುವದಾದರೆ ಹಣದ ಅಭಾವವಲ್ಲ. ಕೆಲಸಗಾರರನ್ನು ಒದಗಿಸಿಕೊಳ್ಳಲಾರದ ಅಧಿಕಾರಿಗಳಿಂದ. ಇಲ್ಲಿ ವಿದ್ಯೆ ಹಿಂದೂದೇಶದ ಎಲ್ಲಾ ಪ್ರಾಂತಗಳಿಗಿಂತಲೂ ಹೆಚ್ಚಾಗಿದೆ.

(೪) ಜಮ್ಮ ಹಿಡುವಳಿ ಕೊಡವರಿಗೆ ಮಾತ್ರವಲ್ಲ; ಇತರರಿಗೂ ಇದೆ. ಕೊಡವರು ದಬ್ಬಾಳಿಕೆ ನಡೆಸುತ್ತಿರುವದು ಸತ್ಯವಾಗಿದ್ದರೆ ಹೊರಗಿನಿಂದ ಬಂದು ಕೊಡವರು ಅದರಾತಿಥ್ಯದಿಂದ ಕೊಡಗು ಮಣ್ಣಿನಲ್ಲಿ ಬೇರು ಬಿಟ್ಟು ಚಿಗುರಿರುವ ಸಂಯೋಜನವಾದಿಗಳಿಗೆ ಎಡೆ ಇರುತ್ತಲೇ ಇರಲಿಲ್ಲ.

(೫) ಪ್ರಜಾಪ್ರಭುತ್ವ ತತ್ವ, ಜನತಾ ರಾಜ್ಯ ಎನ್ನುವ ಕಾಂಗ್ರೆಸ್ಸಿನವರು ಇನ್ನೂ ರಾಜರು ನಮ್ಮನ್ನಾಳಬೇಕೆಂದು ಕೇಳುವ ಕಾಲವಿದಲ್ಲ.

(೬) ಕೊಡಗಿಗೆ ಬರಬಹುದಾದ ಸುಧಾರಣೆಯನ್ನು ತಡೆಹಿಡಿದು ಇಂದಿನ ಅಹಿತ ಆಡಳಿತನೇ ನಡೆಯುವಂತೆಸಗುವ ಹಾನಿಕಾರಕ ನೀತಿಯಿದು. "ಮಗಳು ವಿಧವೆಯೊದರೂ ಚಿಂತೆಯಿಲ್ಲ, ಅಳಿಯ ಸಾಯಬೇಕು" ಎಂಬ ನೀತಿ!

ಮಲೇರಿಯೂ ಕಂಟ್ರೋಲ್ ಯೂನಿಟ್.

ಮಳೆಗಾಲದ ಈ ತಿಂಗಳುಗಳಲ್ಲಿ ಸೊಳ್ಳೆಯ ಕಾಟವು ಹೆಚ್ಚಾಗುವುದಂಟು. ಆದರೆ ಹೆಚ್ಚೆನ ಸಂಖ್ಯೆ ಮಲೇರಿಯೂ ಕಾರಿಗಳಲ್ಲ. ಮನೆಯ ಸುತ್ತಮುತ್ತಲೂ ಸಂಗ್ರಹವಾಗಿ ನಿಂತ ನೀರುಗಳಲ್ಲಿ ಸೊಳ್ಳೆಯ ಸಂತತಿಗಳು ತುಂಬಾ ಉತ್ಪನ್ನವಾಗುತ್ತವೆ. ಸುತ್ತಲೂ ಬಿದ್ದಿರುವ ಒಡಕು ಮಡಕೆಗಳು, ಕುಪ್ಪಿಗಳು, ತೆಂಗಿನಕಾಯಿ ಚಿಪ್ಪಿಗಳೂ, ಬಾಳೆಯ ಗುಪ್ಪೆಗಳು, ಖಾಲಿ ಟಿನ್ನುಗಳು ಮತ್ತು ಚಿಕ್ಕ ಚಿಕ್ಕ ಹೊಂಡಗಳು ಮಳೆಯ ನೀರನ್ನು ಸಂಗ್ರಸಿಕೊಂಡು ಸೊಳ್ಳೆಯ ಸಂತಾನೋತ್ಪತ್ತಿಗೆ ಅಪ್ಪದನಾಗಿವೆ.

ಪ್ರತಿಯೊಬ್ಬ ನಿವಾಸಿಯೂ ತನ್ನ ಮನೆಯ ಸುತ್ತು ವಾರಕ್ಕೊಮ್ಮೆ ಮೇಲೆ ಹೇಳಿದ ರೀತಿ ಸಂಗ್ರಹವಾಗಿರುವ ನೀರನ್ನು, ಜೆಲ್ಲಿ, ಹೊಂಡಗಳನ್ನು ಮುಚ್ಚಿ ಭದ್ರತೆಯನ್ನು ಮಾಡುವ ಶಿಕ್ಷನ್ನು ಕ್ರಮ ತಪ್ಪದೆ ಅನುಸರಿಸಿದರೆ ಸೊಳ್ಳೆಯ ಕಾಟವನ್ನು ಬಹಳ ಮಟ್ಟಿಗೆ ನಿಗ್ರಸಬಹುದು. ಮಲೇರಿಯೂ ಸೊಳ್ಳೆಯ ಈ ಮೊಟ್ಟೆಗಳು ಮರಿಯಾಗಿ ರಕ್ಷನನ್ನು ಹೀರುವ ಸೊಳ್ಳೆಯಾಗಿ ಹಾರಬೇಕಾದರೆ ನೀರಿನಲ್ಲಿ ಹತ್ತು ದಿನಗಳ ಅವಧಿ ಇದೆ. ಆದುದರಿಂದ ಎಂಟು ದಿನಕ್ಕೊಮ್ಮೆ ಸಂಗ್ರಹವಾಗಿರುವ ನೀರನ್ನು ಖಾರಿಮಾಡುತ್ತಾ ಬಂದರೆ ಸಕಾಲದಲ್ಲೇ ಸೊಳ್ಳೆಯ ಸಂತಾನವನ್ನು ನಾಶ ಮಾಡ ಬಹುದು.

ಕೊಡಗು ಮಲೇರಿಯೂ ಆಫೀಸರು.

Reg. No. B. 1000.
'KODAGU' MERCARA. (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೨೬ | ಕಾರೀಕು ೧೯-೮-೧೯೪೭ನೇ ಮಂಗಳವಾರ | ಸಂಚಿಕೆ ೧೬

ಗೃಹ ರಕ್ಷಕ (ಹೋಮ್ ಗಾರ್ಡ್ಸ್) ದಳವನ್ನು ರಚಿಸಿರಿ.

ಲೇ:—'ಗುಪ್ತ' ಮಡಿಕೇರಿ.

ಪೀಠಿಕೆ.

"ಹಲವೆ ದೆಲ್ಲಯಲ್ಲಿ ಕಳೆದ ಎರಡು ವಾರಗಳಲ್ಲಿ ನಡೆದ ದಂಗೆ ಸುತ್ತು ಜನ ಪಾಸಿಗೆ ಮುಖ್ಯ ಕಾರಣ ಪಂಜಾಬಿನಿಂದ ಬಂದ ನಿರಾಶ್ರಿತರು ಜಬ್ಬಿಪಿದ ಕರುಣಾಕಥೆಗಳು" ಎಂಬುದಾಗಿ ನಮ್ಮ ಪ್ರಧಾನ ಮಂತ್ರಿಯವರೆ ನೆಹರೂರವರು ಹೇಳಿದರು. ಈ ಕಥೆಗಳಲ್ಲಿ ಕೆಲವು ನಿಜವಿರಲೂ ಬಹುದು. ಹಲವು ಕಾಲ್ಪನಿಕವಾಪವೂ ಇರಬಹುದು. ಆದರೂ ಅವುಗಳ ಪರಿಣಾಮವು ಭಯಂಕರ ದಂಗೆಯಲ್ಲಿ ಪರಿಣಮಿಸಿತು. ಸರಕಾರದಲೆಕ್ಕದಂತೆ ದೆಲ್ಲಿಯಲ್ಲಿ ೧,೦೦೦ ಜನರು ಸತ್ತರು. ಆಸ್ತಿಕರು ಗಾಯಗೊಂಡರು. ಕೋಟ್ಯಾಂತರ ರೂಪಾಯಿಗಳ ನಷ್ಟ ವಾಯಿತು. ಈ ನಿರ್ದಯತೆಯಿಂದ ತಿಳಿಯುವದೇನೆಂದರೆ ದೇಶದಲ್ಲಿ ನೆಲೆಮುತ್ತಿರುವ ದಂಗೆ, ಅಂತರ್ಕಲಹಗಳಿಗೆ ಬೀಜ ವಾಪ್ಪಾಪಿಯಿಂದ ಹೇಳಲ್ಪಡುವ ವಾರ್ತೆಗಳು ಒಂದು ಕಾರಣವೆಂದು.

ಕೊಡಗಿನಲ್ಲಿ ಕಳೆದ ಕೆಲವು ದಿನಗಳಿಂದ ಒಂದು ರೀತಿಯ ವಾರ್ತೆಗಳು ಹೆಚ್ಚಾ ತೊಡಗಿವೆ. ಇದು ಗ್ರಾಮಗ್ರಾಮಗಳಿಗೂ ಪಸರಿಸಿ ಗ್ರಾಮೀ ಜನರು ಕಾತುರರಾಗಿದ್ದಾರೆ. ಈ ವಾರ್ತೆಗಳ ಸತ್ಯ ಮಿಥ್ಯತೆ ಹೇಗಿದ್ದರೂ ಕೊಡಗಿನವರಂದ ನಾವು ಶೀಘ್ರ ಇತರ ಭಾಗದ ಘಟನೆಗಳಿಂದ ಒಂದು ಪಾಠವನ್ನು ಕಲಿಯ ಬಿದ್ದಕೆಗೊಳ್ಳಬೇಕಾಗಿದೆ. ಪಂಡಿತ ಜವಾಹರರ ನೇತೃತ್ವದಲ್ಲಿ ಈ ದಂಗೆಗಳನ್ನು ಅಡಗಿಸಲು ಯೋಗ್ಯ ಸಿದ್ಧತೆಗಳಾಗುತ್ತಿವೆ. ಈ ದಂಗೆಗಳು ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ತಲೆದೋರಿದರೂ ಅವನ್ನು ದಕ್ಷತೆಯಿಂದ ಎದುರಿಸಬಲ್ಲಷ್ಟು ವಿಸ್ತೃತವಾದ ವ್ಯವಸ್ಥೆಗಳು ನಡೆದಿವೆ. ಈ ಸಮಯದಲ್ಲಿ ಕೊಡಗಿನವರಾದ ನಾವು ಕೂಡ ಒಂದು ಪಡೆಯನ್ನು ತಯಾರು ಮಾಡಬೇಕಾದ್ದು ಅವಶ್ಯ. ಈ ದಳವನ್ನು ಗೃಹರಕ್ಷಕರು (Home guards) ಎಂದರೂ ಸರಿಯೇ ಇಲ್ಲವೇ ಶಾಂತಿ ದೂತರು (Peace Brigade) ಎಂದರೂ ಸರಿಯೇ. ಹೇಗಿದ್ದರೂ ಇಂಥಾ ಒಂದು ದಳ ಏರ್ಪಡಬೇಕಾದುದು ಅತ್ಯವಶ್ಯವಾಗಿದೆ.

ಅವಶ್ಯಕತೆ ಮತ್ತು ಧ್ಯೇಯ.

ಇಂಥಾ ಒಂದು ದಳವು ಯಾವದೇ ಪ್ರದೇಶದಾರು ದೃಷ್ಟಿಯಿಂದ ರಚಿತವಾಗಬೇಕಾದ ಅವಶ್ಯಕತೆ ಮತ್ತು ಧ್ಯೇಯ. ಇವರೆ ವರೆಗೆ ಭಾರತದಲ್ಲಿ ಕಂಡು ಬಂದಿರುವ ದೊಂಗೆಗಳಲ್ಲಿ ಒಟ್ಟಿದ ಜನತೆಯ ಅಸುರಾವೇಶಗಳಾರಿ ಉತ್ಪನ್ನವಾದವು. ಇದರ ಅವಶ್ಯಕತೆಗೆ ಕೊಡಗಿನಲ್ಲಿ ಇಟ್ಟಿರುವ ನೈಸರ್ಗಿಕ ಪರಿಸರವೂ ಒಂದು ಕಾರಣವಾಗಿದೆ. ಪತ್ರಿಕೆಗಳಲ್ಲಿ ಯಾವ ವೃತ್ತಾಂತಗಳು ಇಲ್ಲದಿರುವ ಕೊಡಗಿನ ಪ್ರಾಂತ್ಯದಲ್ಲಿ ದಕ್ಷಿಣ ಕೊಡಗಿನಲ್ಲಿ ವಿಶಿಷ್ಟವಾದ ಪರಿಸ್ಥಿತಿಯೂ ಇದೆ. ಮಲೆಯಾಳಿಗಳು ಮತ್ತು ತಮಿಳರು ಇಲ್ಲಿ ಬಹುಸಂಖ್ಯಾತರಾಗಿದ್ದಾರೆ. ಇವರಲ್ಲಿ ಕೆಲವರು ಕೊಡಗಿನ ಸಂಸ್ಕೃತಿಯಲ್ಲಿ ಬೆರೆತಿದ್ದರೂ ಬಹುಪಾಲು ಜನರು ಕೊಡಗಿನ ಸಂಸ್ಕೃತಿಯಿಂದ ಬಹಳ ದೂರವಿದ್ದಾರೆ. ಇವರಲ್ಲಿ ಕೆಲವರು ಕೊಡಗಿನ ಸಂಸ್ಕೃತಿಯನ್ನು ಕೆಡಿಸಲು ಪ್ರಯತ್ನಿಸುತ್ತಿರುವದು ಕಂಡು ಬಂದಿದೆ. ಈ ಕಾರಣಗಳಿಂದಾಗಿ ಇವರು ಮಾಡಬೇಕಾದ ಕೆಲಸದ ಸರ್ವ ಜವಾಬ್ದಾರಿಯನ್ನು ಕೊಟ್ಟು ದೇಶದ ಎಲ್ಲೆಡೆಗಳಲ್ಲಾ ಇವರ ನೇತೃತ್ವದಲ್ಲಿ ದಳಗಳು ಸಂಯೋಜನೆಗೊಳ್ಳಬೇಕು. ಇಸ್ಪೋಟಕ ಮೇಲೆ ಧಾಳಿ ಮಾಡುವ ದೃಷ್ಟಿಯಿಂದಲ್ಲ; ಬದಲು ತಪ್ಪು ಬಂಧುಬಳಗ, ಆಸ್ತಿರಕ್ಷಣೆಯ ದೃಷ್ಟಿಯಿಂದ. ದೇಶದ ಶಾಂತಿಯ ಧ್ಯೇಯದಿಂದ.

ಈ ದಳದ ಯಶಸ್ವಿತೆ ಇಲ್ಲವೇ ಸಾರ್ಥಕತೆ ಆದರಲ್ಲಿ ಸೇರುವ ಪ್ರತಿವ್ಯಕ್ತಿಯ ಪ್ರತಿಷ್ಠೆಯ ಮೇಲೆ ನಿಂತಿದೆ. ಕೋಮುವಾರು ಭಾವನೆಯ ವ್ಯಕ್ತಿಗಳಿಗೆ ಇದರಲ್ಲಿ ಸ್ಥಳವಿರಕೂಡದು. ಆಸ್ತಿರಕ್ಷಣೆಗಲ್ಲದೆ ಇತರೆ ವಿಚಾರಕ್ಕೆ ಹಿಂಸಾಪೂರ್ಣವಲಂಬಿಸುವವರಿಗೂ ಎಡೆ ಇರಬಾರದು. ಜನರ ಹಿತಚಿಂತಕನು ನಾನು, ಜನಸೇವೆಯೆ ನನ್ನ ಧ್ಯೇಯ. ಎಲ್ಲರೂ ಸಹೋದರಿ ಸಹೋದರರು ಎಂಬ ಭಾವನೆಯಿಂದ ವರ್ತಿಸುವ ವಾತಾವರಣವು ಮೂತ್ರ ಉಗಳವು ಬೆಳೆದು ಬಾಳಬೇಕು. ಆದ್ದರಿಂದ ಕೆಲವೇ ಜನರಿಂದ ದಳವು ರಚಿತವಾಗಿ ಬೆಳೆಯಲು ಯೋಗ್ಯವಲ್ಲ. ದಕ್ಷರು ಇಷ್ಟಕ್ಕೆ ನೀವು ಈ ಯೋಜನೆಯಲ್ಲಿ ಭಾಗವಹಿಸಬೇಕು. ಪ್ರಸ್ತುತ ಪರಿಸ್ಥಿತಿಯಲ್ಲಿ ದೇಶದಲ್ಲಿ ನಡೆಯುತ್ತಿರುವ ಘಟನೆಗಳಿಂದ ಸ್ಪಷ್ಟವಾಗಿ ನಿಮಗೆ ಈ ಭಾವನೆಯು ಸ್ಪುರಿಯಿಸಿದ ಕ್ಷಣದಲ್ಲಿಯೂ ಸ್ಥಳ ಮಾಡಿಕೊಳ್ಳಿರಿ. ಇಂಥಾ ಪರಿಸ್ಥಿತಿಯಲ್ಲಿ ಎಲ್ಲರಿಗೂ ಅವಶ್ಯವಾದ ಊರಿನ ಪರಿಸ್ಥಿತಿಯನ್ನು ತಿಳಿದು ಯೋಜನೆಯನ್ನು ಕೈಗೊಳ್ಳಲು ಊರಿನ ಜನರೆಲ್ಲರ ಸಹಾಯವೂ ಅವಶ್ಯವಿದೆ.

ಸಂಘಾರಪ ಕರ್ತವ್ಯ.

ಸರಕಾರವು ಇಂಥಾ ದಳಗಳು ರೂಪಗೊಳ್ಳುವಂತೆ ಪ್ರೋತ್ಸಾಹಿಸಬೇಕು. ರೂಪುಗೊಂಡ ಸಂತರ ಅದನ್ನು ದಕ್ಷ ಸಮಾಯಪಟ್ಟಿಸ್ತು ಜನರಿಂದ ಪೂರ್ತಿ ಅಧಿಕಾರ ಕಲ್ಪಿಸಬೇಕು. ಕೊಡಗಿನಲ್ಲಿ ಬಲಿಷ್ಠ ನಾ, ಲೇವಿಯೋಗಳ ವ್ಯವಸ್ಥೆಯಿಲ್ಲದ ಕಾರಣ ಒಂದೆಡೆಯಿಂದ ಮತ್ತೊಂದೆಡೆಗೆ ವಾರ್ತೆಗಳು ಹಾಬ್ಬಲು ಹಲವು ದಿನಗಳು ಬೇಕಾಗುವವು. ಆಧುನಿಕ ಆಯುಧಗಳ ಉಪಯೋಗ, ಅವಶ್ಯಕ ಸಾಗಿಸುವ ಅವಕಾಶಗಳ್ಳಾದಿವರೆ, ಕಡಿಮೆ ಸಂಖ್ಯೆಯಲ್ಲಿರುವ ಪೊಲೀಸುಪಡೆ, ಸೈನ್ಯದ ಅಭಾವ ಈ ದೃಷ್ಟಿಗಳಿಂದ ಸರಕಾರವು ಈ ವೇಳೆ ಇಂಥಾ ಗೃಹರಕ್ಷಕ ದಳಗಳ ಏರ್ಪಾಡು ಮಾಡಬೇಕಿತ್ತು. ಯುದ್ಧಕಾಲದಲ್ಲಿ ಈ ವಲ ಕಾಂಗ್ರೆಸ್ ಚಲ ವಲಯಗಳನ್ನು ಆ ವಲೋಕಿಸಲೋ ಎಂಬಂತೆ ಒಂದು ರಾಷ್ಟ್ರೀಯ ರಕ್ಷಕ (Civic gaurds) ರ ದಳವಿತ್ತು. ಅದು ಎಷ್ಟು ದಕ್ಷತೆಯಿಂದ ಕೆಲಸಮಾಡಿತೋ ಆ ಮಾತಿರಲಿ. ಇಂದಿನ ಈ ಸಂದಿಗ್ಧ ಸಮಯದಲ್ಲಿ ಜನತೆಯ ರಕ್ಷಣೆಯ ದೃಷ್ಟಿಯಿಂದ, ದೇಶದ ಶಾಂತಿಯ ಧ್ಯೇಯದಿಂದ, ಗೃಹರಕ್ಷಕ ದಳ ಸ್ಥಾಪನೆಯಾಗಲಿ. ಸರಕಾರವು ಇದರ ಜವಾಬ್ದಾರಿ ವಹಿಸಲಿ. ಸರ್ವ ಸಾರ್ವಜನಿಕರೂ ಇದಕ್ಕೆ ಬೆಂಬಲವನ್ನೀಯಲಿ.

CIRCULAR.

THE COORG TRANSPORT LTD. MERCARA.

It is proposed to convene the Annual General meeting of the company by about the third week of October 1947. The Shareholders are requested to send their resolutions, if any so as to reach the office on or before the first October 1947, to enable the Directors to prepare the Agenda for the said meeting

A. C. Madapa,
Managing Director.

WANTED

a fully qualified Internal Auditor for the C. C. E. Co-operative Stores, Ltd., Pollibetta, Coorg. Previous experience essential. State salary expected, age, experience in Auditing or Book-keping and business.

ANNOUNCEMENT.

THE WARDEN INSURACE CO., LTD.
BANGALORE BRANCH.

We have pleasure to annonnce to the Public in general and our Patrons and policy-holders in particular that in view of our increased business activities, our Branch Office will be shifted from 142, (5th Cross) Ghandhinagar, Bangalore City to a more spacious premises (House No. 11), situated along the 5th Main Road in Gandhinagar. Bangalore city as from the 24th September 1947.

P. C. KARMBAYA.
BRANCH SECRETARY.

ಕೊಡಗು

ತಾ. ೧೯-೯-೧೯೪೭ನೇ ಶುಕ್ರವಾರ

ಸೌಹಾರ್ದತೆ ಇರಲಿ.

ದೇಶದ ಉದ್ದಗಲಕ್ಕೂ ಇಂದು ಜನತೆಯಲ್ಲಿ ಕೋಮುವಾರು ಭಾವನೆಯು ಹಬ್ಬಿದೆ. ನವಖಾಲಿ, ಬೀಹಾರ್, ಪಂಜಾಬ್ ದುರಂತಗಳ ಫಲವಾಗಿ ಹಿಂದೂ ದೇಶದ ಆಕೀಕ ಕಡೆಗಳಲ್ಲಿ ದಂಗೆ, ಜಗಳ ಸಳಾದವು. ಇವುಗಳ ಪರಿಣಾಮವು ಪ್ರತಿ ಭಾರತೀಯನ ಹೃದಯವನ್ನೂ ಸುಟ್ಟಿದೆ. ಈ ಕಾರಣದಿಂದ ಇಂದು ದೇಶದಲ್ಲಾಗುವ ಸರ್ವ ಕಾರ್ಯಕಲಾಪಗಳನ್ನೂ ಕೋಮುವಾರು ದೃಷ್ಟಿಯಿಂದ ನೋಡುವಂತಾಗಿದೆ. ಬೇರೆಡೆ ನಡೆದ ಕೋಮುವಾರು ದಂಗೆ, ಅತ್ಯಾಚಾರಗಳ ದುರಂತ ಛಾಯೆಯು ಎಲ್ಲೆಲ್ಲೂ ಹಬ್ಬಿ ಇಲ್ಲಸಲ್ಲದ ಪ್ರಚಾರಗಳಾಗುತ್ತಿವೆ. ಈ ಪರಿಸ್ಥಿತಿಯಲ್ಲಿ ಈ ಭಾವನೆಗಳಿಗೆ ಜನತೆ ಎಡೆಗೊಡಬಾರದು. ಸಹಸ್ರಾರು ವರ್ಷಗಳಿಂದ ಮಿಳಿತರಾಗಿ ಸಹೋದರರಂತೆ ಬಾಳಿದ ಆರ್ಯೀಯ ಸೌಹಾರ್ದತೆಯನ್ನು ತಾತ್ಕಾಲಿಕವಾಗಿ ರೂಪುಗೊಂಡಿರುವ ಕೋಮುವಾರು ಭೂತಕ್ಕೆ ಬಲಿಕೊಟ್ಟು ಭಾರತದ ಚರಿತ್ರೆಗೆ ಕಲಂಕವನ್ನು ತರಬಾರದು. ಪಂಡಿತ ಜವಾಹರ್‌ಲಾಲ್ ನೆಹರೂರವರು ಈ ಬಗ್ಗೆ ಭಾರತೀಯರಿಗೆ ಯೋಗ್ಯ ಮಾರ್ಗದರ್ಶನವಿತ್ತಿರುವರು. ಮುಸ್ಲಿಂ ಭ್ರಾಂತಿಯರನ್ನು ಅಪನಂಬಿಕೆಯಿಂದ ನೋಡುವದನ್ನು ನಿಲ್ಲಿಸಬೇಕು. ವೈಕ್ತಿಗತವಾಗಿ ನಡೆಸುವ ಹತ್ಯಾಕಾಂಡ, ಕೊಲೆಗಳಿಂದ ಯಾರಿಗೂ ಹಿತವಾಗಲಾರದು. ಹಿಂದೂದೇವಸಲ್ಲಾಗಲೀ, ಪಾಕಿಸ್ತಾನದಲ್ಲಾಗಲೀ ಸರಕಾರವಿಲ್ಲವೆಂದು ಭಾವಿಸಿ ಜನತೆಯೇ ಪಾಪಾನನ್ನು ತಮ್ಮ ಕೈಗೆ ತೆಗೆದುಕೊಂಡು ಹತ್ಯಾಕಾಂಡಕ್ಕೆ ಇಳಿದಿರುವದು ನಮ್ಮ ಸರಕಾರವನ್ನು ನಾವೇ ಹಂಬಯಿಯಿಂದ ತಿವಿದಂತೆ. ಸರ್ವರನ್ನೂ ವಿಚಾರಿಸಿ ತೀರ್ಮಾನ ಮಾಡಲು ಜನಪ್ರೀತ ಸರಕಾರಗಳು ಎಷ್ಟೋ ಭಾಗಗಳಲ್ಲಿಯೂ ಇರುವಾಗ ಕೋಮುವಾರು ಭಾವನೆಯ ಮುಬ್ಬಿನಿಂದ ಜನರು ಹೆಚ್ಚಗುತ್ತ ವರ್ತಿಸಿ ಸರ್ವನಾಶ ಮಾಡಿಕೊಳ್ಳಬಾರದು.

ಕೊಡಗು ಹಿಂದೂ ಮುಸ್ಲಿಂ ಐಕ್ಯತೆಯ ವಿಚಾರದಲ್ಲಿ ಇತೀ ಭಗತಖಂಡಕ್ಕೆ ಮೊದಲಿಯಾಗಿದೆಯಾದರೂ ಕಳೆದ ಕೆಲವು ದಿನಗಳಿಂದ ಹಾನಿಕಾರಕ ಅಪಪ್ರಚಾರಗಳು ತಲೆದೋರಿವೆ. ನಾನಾ ಕೆಟ್ಟಿಗಳು ಹುಟ್ಟಿಕೊಂಡಿವೆ. ಕೊಡಗಿನ ಮುಸ್ಲಿಮರ ಮೇಲೆ ಆನೇಕ ರೀತಿಯ ದೌರ್ಜನ್ಯಗಳೂ ಹೇರಲ್ಪಟ್ಟಿವೆ. ಇವೆಲ್ಲವೂ ಕೂಡ ನಿರಾಧಾರವಾದುವುಗಳೆಂದು ಸರಕಾರವು ಸ್ಪಷ್ಟ ರೀತಿಯಿಂದ ಪ್ರಕಟಿಸಿದೆ. ಆ ಮೇಲೆ ಜನಸಾಗದೆ ಪರ ಆವರ ಪ್ರತಿನಿಧಿಯೂ ಜೋಳಿಗೆಯೊಂದನ್ನು ಕೊಟ್ಟಿದ್ದಾರೆ! ಹೀಗಿರುವಾಗ ಜನತೆಯು ಸಹಕಾರ್ಯತೆಯನ್ನು ತೋರಬೇಕು. ಇಂದಿನಂಥಾ ಸಂದಿಗ್ಧ ಸಮಯದಲ್ಲಿ ಪ್ರತಿಯೊಬ್ಬನೂ ತನ್ನ ವಿಚಾರಶಕ್ತಿಯನ್ನು ಕಳೆದುಕೊಂಡಂತೆ ಜೇಳದ್ದನ್ನೆಲ್ಲಾ ನಂಬದೆ, ಪರ್ಯಾಲೋಚಿಸಿ ಅಪಪ್ರಚಾರ ಮಾಡುವವರನ್ನು ತಡೆಗಟ್ಟಬೇಕು. 'ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು' ಎಂಬ ನಾಣ್ನುಡಿಯಂತೆ ಕಿವಿಯಾರೆ ಕೇಳಿದರೂ ವಿವೇಚನೆಮಾಡಬೇಕು. ಆದರ ಸತ್ಯತೆಯನ್ನು ಅರಿಯಬೇಕು. ಬೇಜವಾಬ್ದಾರಿಯಿಂದ ಮನೋರಂಜನೆಗಾಗಿ ಆಡುವ ಮಾತುಗಳೇ ಅಪಪ್ರಚಾರದ ಉಗಮಸ್ಥಾನ. ಆದ್ದರಿಂದ ಸರ್ವರೂ ನಾವಲಿಗೆ ಬಿಗಿಹಿಡಿದು ವರ್ತಿಸಬೇಕು. ಅಂಥಾ ವಾರ್ತೆ ಬಂದಾಗ ಅದನ್ನು ಉಪ್ಪು ಹುಳಿ ಹಚ್ಚಿ ಗ್ರಾಮಗ್ರಾಮಗಳಲ್ಲಿ ಹಬ್ಬಿಸುವ ಬದಲು ಅದನ್ನು ಸರಕಾರಕ್ಕೆ ತಿಳಿಸಿ ಸತ್ಯತೆಯನ್ನು ತಿಳಿಯಬೇಕು.

ಕೊಡಗಿನ ಹಿಂದೂ ಮುಸ್ಲಿಮರು ಸಹೋದರರಂತೆ ಬದುಕಿದ್ದಾರೆ, ಬದುಕುತ್ತಿದ್ದಾರೆ. ಕೊಡಗಿನಲ್ಲಿ ಕೇವಲ ೧೪,೦೦೦ ವಿರುವ ಮುಸ್ಲಿಮರು ಯಾವದೇ ಆಕೃಷ್ಟಕ್ಕೆ ತೊಡಗುವದು ಸಾಧ್ಯವಿಲ್ಲ. ತೊಡಗಲಾರರು. ಈಗ ಕೊಡಗಿನಲ್ಲಿ ಹಬ್ಬುತ್ತಿರುವ ಅಪಪ್ರಚಾರದಿಂದ ಸ್ವಾಭಾವಿಕವಾಗಿ ಇವರು ಗಾಬರಿಗೊಂಡಿರುವರು. ಯಾವುದೇ ಕೋಮು ಹೆದರಿಕೊಂಡು ಜೀವಿಸುವ ಪರಿಸ್ಥಿತಿ ಇನ್ನರೆ ಆ ಭಾಗವು ಪೂರ್ಣ ಸ್ವಾತಂತ್ರ್ಯವನ್ನು ಪಡೆದಿಲ್ಲವೆನ್ನಬೇಕಾಗುತ್ತದೆ. ಆದ್ದರಿಂದ ಮೊನ್ನೆಯಾಗಿ ಬಂದಿರುವ ಸ್ವಾತಂತ್ರ್ಯ ಸೂರ್ಯನ ದಿವ್ಯಪ್ರಭೆಯಲ್ಲಿ ಈ ನಿರಾಧಾರೆದ ಕೋಮುವಾರು ಭಾವನೆಯನ್ನು ತೊರೆದು ಎಂದಿನಂತೆ ಕೊಡಗಿನ ಎಲ್ಲಾ ಕೋಮುಗಳೂ ಸಹೋದರರಂತೆ ಕಲೆತು ದೇಶದ ಸರ್ವಾಂಗೀಣ ಉನ್ನತಿಗೆ ಬಾಧಿಸಾರಾಗುವರೆಂದು ನಮ್ಮ ಆಶೆ.

ಮರ್ಡರ್ ಮೊಕದ್ದಮೆ.

ಕೊಡಗು ನ್ಯಾಯವಿಧಾಯಕ ಸಭೆಯು ತಾ. ೨೭-೧೦-೪೭ಕ್ಕೆ ಮುಂದರಿಸಲ್ಪಟ್ಟಿದೆ.

ಜಿಲ್ಲಾ ಬೋರ್ಡಿನ ಸಭೆಯೊಂದು ತಾ. ೬-೧೦-೪೭ರಲ್ಲಿ ನಡೆಯುವದು.

ಕಿಗ್ಗಟ್ಟಿನಾಡು ಸ್ಪೆಷ್ಯಲಿನ ವಿದ್ಯಾರ್ಥಿಗಳು ಮೈಸೂರು ಸತ್ಯಾಗ್ರಹಕ್ಕೆ ತಮ್ಮ ಸಹಾನುಭೂತಿಯನ್ನು ವ್ಯಕ್ತ ಮಾಡಲು ತಾ. ೮-೯-೪೭ರಲ್ಲಿ ಸಾಂತೇತಿಕ ಮುಷ್ಕರ ಮಾಡಿದರು.

ಮೈಸೂರು ಸತ್ಯಾಗ್ರಹದಲ್ಲಿ ಭಾಗವಹಿಸಲು ಕೊಡಗಿನಿಂದ ಹೋಗಿದ್ದ ಶ್ರೀ ಪಿ. ಆರ್. ತಮ್ಮಯ್ಯನವರನ್ನು ತಾ. ೬ರಲ್ಲಿ ಬೆಂಗಳೂರಿನಲ್ಲಿ ಬಂಧ್ಯ ರಾತ್ರಿಯಲ್ಲಿ ಇತರ ೪೦ ಜನರೊಡನೆ ದಸ್ತಗಿರಿ ಮಾಡಿ ಖನೇ ತಾರೀಕು ರಾತ್ರೆ ಮಿಲಿಟರಿ ಸ್ಯಾನಾನಲ್ಲಿ ಹಡಸೆಂಟು ಮೈಲು ದೂರ ತೆಗೆದುಕೊಂಡು ಹೋಗಿ ಬಿಟ್ಟಿರೆಂದೂ ನಂತರ ಅವರು ತಾ. ೧೫ರ ಪರೆಗೆ ಪ್ರಚಾರ ಮಾಡುತ್ತಾ ಮೈಸೂರು ಆರಮನೆ ಸತ್ಯಾಗ್ರಹದಲ್ಲಿ ಭಾಗ ವಹಿಸಿದರೆಂದೂ ಇವರನ್ನು ದಸ್ತಗಿರಿ ಮಾಡಿ ಪುನಹ ಪಾಪವದಲ್ಲಿ ತಂದು ಬಿಟ್ಟರೆಂದೂ, ಇತ್ತಲಾಗಿ ಅವರು ಕೊಡಗಿಗೆ ಬಂದಿರುವರೆಂದೂ ವರ್ತಮಾನ.

ತಾ. ೩೦-೯-೪೭ರಿಂದ ಕುಪ್ಪಾ ಸಂತೆಯು ಈ ವರೆಗಿನಂತೆ ಆದಿತ್ಯವಾರಗಳಲ್ಲಿ ನಡೆಯದೆ ಮಂಗಳವಾರಗಳಲ್ಲಿ ನಡೆಯುವದೆಂದು ತಿಳಿಯಬಂದಿದೆ.

ಮದ್ರಾಸ್ ಸರಕಾರದ ಕೋಳಿ ಸಾಕು ವಿಕೆಯು ತರಬೇತಿನಲ್ಲಿ (Poultry Research training) ಶ್ರೀ ಪಟ್ಟಿದ ಐಯ್ಯಪ್ಪನವರು ಜೇರ್ಗಡೆಯಾಗಿರುವರು.

ಆಹಾರ ಕಂಟ್ರೋಲ್ ಇನ್ಸ್‌ಪೆಕ್ಟರಾದ ಶ್ರೀ ಕೊಳುವಂಡ ಉತ್ತಯ್ಯನವರು ತಾ. ೧೫ರ ರಾತ್ರೆ ಗಾಡಿಯಲ್ಲಿ ಕೋವಿ ತೆಗೆದುಕೊಂಡು ತಿತಿಮತಿಯ ಕಡೆಗೆ ಹೋಗುತ್ತಿದ್ದಾಗ್ಗೆ ಅಕಸ್ಮಾತು ಗುಂಡು ಹಾರಿ ಅವರ ಕೆಂಕುಳಿಗಾಗಿ ಬೆನ್ನ ಹಿಂಬದಿಗೆ ದಾಟಿ ಜಖಂ ಆಗಿದೆಯೆಂದೂ ಆವರು ಮೈಸೂರಿನಲ್ಲಿ ಚಿಕಿತ್ಸೆ ಪಡೆಯುತ್ತಿರುವರಾಗಿಯೂ ತಿಳಿಯಬರುತ್ತದೆ.

ಅಕ್ಟೋಬರ್ ತಾ. ೨ ಮಹಾತ್ಮಾ ಗಾಂಧೀಜಿಯವರ ಜನ್ಮ ದಿನವಾದ್ದರಿಂದ ಅದು ಸಾರ್ವತ್ರಿಕ ರಜಾ ದಿನವಾಗಿದೆಯೆಂದು ಕೊಡಗು ಸರಕಾರವು ಪ್ರಕಟಿಸಿದೆ.

ಯೋಗ್ಯ ಯುವಕರನ್ನು ನೌಕಾದಳಕ್ಕೆ ಸೇರಿಸಿಕೊಳ್ಳುವ ದೃಷ್ಟಿಯಿಂದ ಇಂಗ್ಲೆಂಡಿನಲ್ಲಿಯ 'ಕೆಡೆಟ್' ತರಬೇತಿಗೆ ತಗಲುತ್ತಿದ್ದ ಖರ್ಚ ೯೦೦ ಪೌಂಡುಗಳನ್ನು ೧೫೦ ಪೌಂಡುಗಳಿಗೂ, ಇಂಡಿಯನ್ ನೌಕಾದಳ ಪ್ರವೇಶ ಶರೀಕ್ಷೆ ಫೀಜನ್ನೂ ರೂ ೫೦ರಿಂದ ರೂ. ೩೦ಕ್ಕೂ ಇಳಿಸಿ ಇದರಿಂದಾಗುವ ನಷ್ಟವನ್ನು ಇಂಡಿಯಾ ಸರಕಾರ ಹೊತ್ತುಕೊಳ್ಳುವ ನಿರ್ಧಾರ ಮಾಡಿದೆ.

ನಿರಾಶ್ರಿತರಿಗೆ ನೆರವು.

ಹಿಂದೂಸ್ಥಾನದ ಇಂದಿನ ಪರಿಸ್ಥಿತಿ ಶಕ್ತಿಗಳಿಗೆ ಮೂಲಕಲವೂ ಮತ್ತು ಕಣ್ಣಾರೆ ಕಂಡುಬಂದ ಜನಗಳ ಪೂರ್ಣಕಲವೂ ಸಾಧಾರಣ ಎಲ್ಲರಿಗೂ ತಿಳಿದಂಥಾ ವಿಷಯವಾಗಿದೆ. ಜೀವನ್ಮಾಗಿ ದಿನ ಹಸ್ತಿಗಳನ್ನು ಓದುತ್ತಿರುವನರ ಬೈಕೆ ಅನೇಕರು ಕಣ್ಣೀರುಗಳನ್ನು ಸುರಿಸಿದ್ದಾರೆ, ಸುರಿಸುತ್ತಿದ್ದಾರೆ.

ಹಿಂದೂಸ್ಥಾನವು ಕಳೆದ ಮುನ್ನೂರು ವರ್ಷಗಳಿಂದ ನಾನಾ ತರದ ಕಷ್ಟಗಳಿಗೆ ಈಡಾಗಿದೆ. ಆದೆಲ್ಲವನ್ನೂ ಮರೆತರೂ ೧೯೪೬ನೇ ಆಗಸ್ಟ್ ನಂತರಿಂದ ಹಿಂದೂ ಸ್ಥಾನದಲ್ಲಾಗುತ್ತಿರುವ ವಿಚಾರಗಳನ್ನು ನೆನೆದರೆ ಸಹಜಲಸಾಧ್ಯವಾದ ದಾರುಣ ವೇದನೆಯುಂಬಾಗುತ್ತದೆ.

ಜನಾಂಗಕ್ಕಾಗಲೀ ಯಾ ವೈಕ್ತಿಗತ ಮನುಷ್ಯರ ಶಕ್ತಿಗೆ ಅತೀತವಾದ ರೀತಿ ಬರುವ ಕಷ್ಟಗಳು ಒಂದು ವಿಧ. ಉದಾಹರಣೆಗೆ—ಕ್ವೆಟ್ಟಾ, ಬಿಹಾರ್ ಭೂಕಂಪಗಳು. ಒಂದು ದೇಶವು ಇನ್ನೊಂದು ದೇಶದ ಜೊತೆಯಲ್ಲಿ ಯುದ್ಧ ಹೂಡುವುದು ಮತ್ತೊಂದು ವಿಷಯ. ಸುಮಾರು ನುನ್ನೂರು ವರ್ಷಗಳಿಂದಲೂ ಪರಕೀಯರ ಆಳಿಕೆಯಲ್ಲಿ ಗುಲಾಮರಾಗಿದ್ದು ಈಗ ಸಿಕ್ಕಿದ ಸ್ವಾತಂತ್ರ್ಯ ದಕ್ಕಲಾರದೆಂದೇ ನೆರೆಯವರನ್ನು ಜೊಂದು ಲೂಟಿ ಮಾಡಿ ಅತ್ಯಾಚಾರ ಮಾಡುವ ವಿಷಯವನ್ನು ಆಲೋಚಿಸಿದಕೆ ನರಗಳು ನಡುಗುತ್ತವೆ.

೧೯೪೬ ನೇ ಇಸವಿ ಆಗಸ್ಟ್ ೧೫ರಿಂದ ಉತ್ತರ ಹಿಂದೂಸ್ಥಾನದಲ್ಲಿ ನಡೆಯುತ್ತಿರುವ ಅತ್ಯಾಚಾರವನ್ನು ಬೇರೆ ಬೇರೆಯಾಗಿ ವಿಂಗಡಿಸಿ ಪ್ರಯೋಜನವಿಲ್ಲ. ಆವರ ಕಾರಣವನ್ನು ಹುಡುಕಿ ಲಾಭವಿಲ್ಲ. ಎಲ್ಲರಿಗೂ ಇಂಬಳಿಕೆಯ ವಿಷಯವಾಗಿದೆ. ನಾವು ಈಗ ವಿಚಾರಿಸಬೇಕಾದುದು ಒಂದು ವಿಷಯ. ಪಶ್ಚಿಮ ಪಂಜಾಬಿನಲ್ಲಿ ಬಹುಮಟ್ಟಿನವರನ್ನು ದಬ್ಬಾಳಿಕೆಗೆ ಸಿಕ್ಕಿ ನೋದು ರಪ್ಪಟ್ಟಿ ಬಟ್ಟೆಯನ್ನೂ ಕಳೆದು ಕೊಂಡು ಬಂದಿರುವ ನಿರಾಶ್ರಿತರ [illegible]

ನಮ್ಮ ಈ ಪುಣ್ಯ ಕೊಡಗು ದೇಶವು ಒಂದಾನೊಂದು ಕಾಲದಲ್ಲಿ—ಎಂದರೆ ೪೫ವ್ವು ಕೊಡಗನ್ನು ಲೂಟುಮಾಡುವುದಕ್ಕೆ ಮೊದಲು ಬಹಳ ಜನಗಳಿಂದ ತುಂಬಿತ್ತು. ಈಗ ಆದೇ ಭೂಮಿಯ ಜನಸಂಖ್ಯೆಯು ಬಹಳ ಕಡಿಮೆಯಾಗಿದೆ. ಇದಕ್ಕಿಂತ ನೂರು ಚದರ ಮೈಲು ಪುಣ್ಯವಾಗಿರುವ ಕೊಚ್ಚಿನ್ ಪ್ರಾಂತ್ಯದಲ್ಲಿ ಇದಕ್ಕಿಂತ ಆಂದಾಜು ಹತ್ತುಪಾಲು ಹೆಚ್ಚು ಜನರಿದ್ದಾರೆ ಹೀಗೆ ಇರುವ ವೇಳೆಯಲ್ಲಿ ಅನ್ನದ ಅಭಾವವಿರುವ ಪ್ರಾಂತ್ಯದವರು ಕೂಡ ನಿರಾಶ್ರಿತರಿಗೆ ಆಶ್ರಯವನ್ನು ಕೊಡಲಿಕ್ಕೆ ಕರೆಯುತ್ತಿರುವಾಗ ನಾವು ಸುಮ್ಮನಿರಬಾರದು. ಆದುದರಿಂದ ನಮ್ಮ ದೇಶದ ಸರಪಾಗಿ ನಮ್ಮ ಕೌನ್ಸಿಲ್ ಮೆಂಬರುಗಳೂ ಮತ್ತು ಸರಕಾರದವರೂ ಕೂಡಲೇ ಜನರ ಅಭಿಪ್ರಾಯವನ್ನು ತಿಳಿದು ಕಮ್ಮಿ ಪಕ್ಷ ಒಂದು ಸಾವಿರ ಜನರಿಗಾದರೂ ಆಶ್ರಯ ಒದಗಿಸುವ ವಿರ್ಪಾಡು ಮಾಡಬೇಕೆಂದು ಈ ಲೇಖಕನ ಕೋರಿಕೆ.

ಸಿ. ಕೆ. ತಮ್ಮಯ್ಯ.

ಪ್ರಕಟಣೆ.

ಸಮಾಜಕ್ಕೂ ಸಾರ್ವಜನಿಕ ಶಾಂತಿಗೂ ಕೆಡುಕು ಮಾಡಲಿಚ್ಛೆಯಿಲ್ಲದ ಕೆಲವು ಸಮಾಜ ವಿರೋಧಿಗಳು ಕೋಮುವಾರು ಕಲಹವನ್ನು ಉದ್ರೇಕಗೊಳಿಸುವ ಅಭಿಪ್ರಾಯದಿಂದ ಆಧಾರವಿಲ್ಲದ ಸುದ್ದಿಗಳನ್ನು ಹಬ್ಬಿಸುತ್ತಿರುವುದು ಸರಕಾರದ ಅವಗಾಹನೆಗೆ ಬಂದಿರುತ್ತದೆ ಕೊಡಗಿನ ಹೊರ ಪ್ರದೇಶಗಳಿಂದ ಜಾತಕುಗಳ ಒಂದು ಭಾಗ ಬಂದಿದೆಯೆಂದೂ, ಅವುಗಳು ಒಂದು ಪಕ್ಷದ ಜನರಿಗೆ ಹಂಚಲ್ಪಟ್ಟಿದೆಯೆಂದೂ ಈ ಸಮಾಜ ಶತ್ರುಗಳು ಬುದವಿಲ್ಲದ ಸುದ್ದಿಯನ್ನು ಹಬ್ಬಿಸುತ್ತಾರೆಂದು ತಿಳಿದು ಬಂದಿದೆ. ಈ ಸುದ್ದಿಗಳಲ್ಲಿ ಯಾವುದೊಂದು ಸತ್ಯಾಂಶವೂ ಇಲ್ಲವೆಂದು ಚೀಫ್ ಕಮಿಷನರರವರು ಈ ಮೂಲಕ ಸರ್ವಜನಿಕರಿಗೆ ತಿಳಿಸಲು ಇಷ್ಟಪಡುತ್ತಾರೆ. ಅಲ್ಲದೆ ಈ ಬಗೆಯ ಸುಳ್ಳು ಸುದ್ದಿಗಾರರನ್ನು ಬಗೆಲಿಗೆ ಹಾಕಲು ಸಾರ್ವಜನಿಕರು ಸಹಕರಿಸಬೇಕೆಂದು ಚೀಫ್ ಕಮಿಷನರರವರು ಮನಃಪೂರ್ವಕವಾಗಿ ಆಹ್ವಾನಿಸುತ್ತಾರೆ.

ಕೆ. ಚಂಗಪ್ಪ,
ಚೀಫ್ ಕಮಿಷನರರವರು.

ಬೇಕಾಗಿದೆ.

ಈ ಕೆಳಗೆ ಕಾಣುವ ಯುದ್ಧಗಳಿಗೆ ತಕ್ಕ ಮಾಹಿತಿ, ಯೋಗ್ಯತೆ ಮತ್ತು ವಿದ್ಯೆ ಇರುವ ಜನರು ಬೇಕಾಗಿದ್ದಾರೆ. ಆ ಬಗ್ಗೆ ಅರ್ಜಿಗಳನ್ನು ಇದೇ ತಿಂಗಳು 29ರ ವರೆಗೆ ಸ್ವೀಕರಿಸಲಾಗುವುದು. ವಿದ್ಯೆ, ಮಾಹಿತಿ ಪಗೈರೆ ತಪಶೀಲ್ ಸಮೇತ ಈ ಕೆಳಗಿನವರಿಗೆ ಅರ್ಜಿ ಹಾಕಿಕೊಳ್ಳುವುದು.

1 ಆಕ್ಸಾಯಿ ಸುಪರಿಂಟೆಂಡೆಂಟ್ ಮತ್ತು ಮೇನೇಜರ್ ಮುನ್ಸಿಪಲ್ ಆಫೀಸ್.	75/5/125
2 ಆಕ್ಸಾಯಿ ಕ್ಲಾರ್ಕ್	30/3/60
1 ಮೆಕ್ಯಾನಿಯರು	25/2/2/45
9 ಜವಾನರು	14/-

ಮೋಸೆ ಮೊನೇಸ್,
ಮುನ್ಸಿಪಾಲಿಟಿ ಅಧ್ಯಕ್ಷರು.

ರಾಷ್ಟ್ರಧ್ವಜದ ಮಹತ್ವ.

ಏನೇ ಇರಲಿ. ಆಗಸ್ಟ್ ೧೫ನೇ ತಾರೀಖಿನ ದಿನ ಸಮಾರಂಭವು ಒಳ್ಳೇ ಗಾಂಭೀರ್ಯದಿಂದ ಮತ್ತು ರಾಜಭಕ್ತಿಯಿಂದ ಕೊನೆಗೊಂಡಿತು. ಅದು ಹಾಗಾಗುವುದು ಅವಶ್ಯಕವೂ ಆಗಿತ್ತು, ಅನಿವಾರ್ಯವೂ ಆಗಿತ್ತು. ಎರಡು ಪಂಗಡಗಳ ನಡುವೆ ಪರಸ್ಪರ ವಿರೋಧವು ಹುಟ್ಟಿಕೊಂಡಿದ್ದಲ್ಲಿ ಯಾವಾಗಲೂ ಹಿಂದುಸ್ತಾನದ ಜನರಿಗೆ, ಕಾರ್ಯಾಡಳಿತಕ್ಕೆ ಕಣ್ಣು ಬಂದಂತೆ ಸ್ವಾತಂತ್ರ್ಯ ಸಿಕ್ಕಿಲ್ಲ, ಆದರೆ ಆವಾಗ ಅವರಿಗೆ ಸ್ವಾತಂತ್ರ್ಯ ಸಿಕ್ಕಿದಂತೆ ಆಗುವುದು. ಆದ್ದರಿಂದ ಈ ಸಲ ಆಗಸ್ಟ್ ೧೫ನೇ ತಾರೀಖಿನ ದಿನ ಸಮಾರಂಭವು ಒಳ್ಳೇ ಗಾಂಭೀರ್ಯದಿಂದ ಮತ್ತು ರಾಜಭಕ್ತಿಯಿಂದ ಕೊನೆಗೊಂಡಿತು. ಅದು ಹಾಗಾಗುವುದು ಅವಶ್ಯಕವೂ ಆಗಿತ್ತು, ಅನಿವಾರ್ಯವೂ ಆಗಿತ್ತು. ಎರಡು ಪಂಗಡಗಳ ನಡುವೆ ಪರಸ್ಪರ ವಿರೋಧವು ಹುಟ್ಟಿಕೊಂಡಿದ್ದಲ್ಲಿ ಯಾವಾಗಲೂ ಹಿಂದುಸ್ತಾನದ ಜನರಿಗೆ, ಕಾರ್ಯಾಡಳಿತಕ್ಕೆ ಕಣ್ಣು ಬಂದಂತೆ ಸ್ವಾತಂತ್ರ್ಯ ಸಿಕ್ಕಿಲ್ಲ, ಆದರೆ ಆವಾಗ ಅವರಿಗೆ ಸ್ವಾತಂತ್ರ್ಯ ಸಿಕ್ಕಿದಂತೆ ಆಗುವುದು. ಆದ್ದರಿಂದ ಈ ಧ್ವಜವನ್ನು ಹಿಡಿದುಕೊಂಡು ಕುಣಿದರು. ಮನೆ, ಗುಡಿ, ಬಾವುಟಗಳ ಮೇಲೆ ಈ ಧ್ವಜವು ಆನಂದವಾಗಿ ಹಾರಾಡಿತು. ಸಂಕಾರಿ ಕಟ್ಟಡಗಳ ಮೇಲೆ ಕೂಡ ಅದು ಕಂಗೊಳಿಸಿತು.

ಜನರಿಗೆ ಸ್ವಾತಂತ್ರ್ಯ ಪ್ರಾಪ್ತಿಯು ವಿಷಯದಲ್ಲಿ ಆನಂದವಾದಂತೆ, ನಮ್ಮ ನೂತನ ಸರಕಾರಕ್ಕೂ ಅದೇ ಪ್ರಮಾಣದಲ್ಲಿ ಹರ್ಷೋದ್ರೇಕವಾಗಿತ್ತೆಂದು ಹೇಳಿದರೆ ತಪ್ಪಾಗಲಾರದು. ಇನ್ನಿರುವ ಉತ್ಸಾಹಗಳ ಆಚರಣೆಯಲ್ಲಿ ನಡೆದ ಸಮಾರಂಭಗಳನ್ನು ತಡೆಯುವುದಕ್ಕೆ ಯಾರಿಗೂ ಸಾಧ್ಯವಿಲ್ಲದ ಹಾಗೆ ಮಾಡಲು ಎಷ್ಟೇ ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ. ಮತ್ತು ಹಾಗೆ ತಡೆದು ಬೇರೆಂಬ ಕಲ್ಪನೆಯು ಕೂಡ ಸಂಕಾರಿಕ್ಕಾಗಲಿ ಜನತೆಗಾಗಲಿ ಬರುವಂತೆ ಸಂಭವವಾಗಿದ್ದು,

ಪ್ರತಿ ಒಂದು ಹೈಸ್ಕೂಲಿನಿಂದ ಮೂರು ಹೆಸರುಗಳನ್ನು ಕಳುಹಿಸಬೇಕೆಂದು ಕೋರಲಾಗಿದೆ.

(೧) ಶ್ರೀಮತಿ ಬಿ. ಟಿ. ಜಯಲಕ್ಷ್ಮಮ್ಮ (ಗೌರಮ್ಮ) ಇವರ ಸ್ಮಾರಕಾರ್ಥವಾಗಿ 'ಕವಿತಾ ಕನ್ಯಾವಾಚನ.'

(೨) ಶ್ರೀ ಅಪ್ಪಜ್ಜು ಕವಿಯವರ ಸ್ಮಾರಕಾರ್ಥವಾಗಿ 'ಕನ್ನಡ ವಾಲ್ ಫೈ' (ಈ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಆ ದಿನ ಹಗಲು ೧೦ ಗಂಟೆಗೆ ಒಳಿಸಲಾಗುವುದು.)

ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಇಷ್ಟ ಪಡುವ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಪೂರ್ಣ ತಮ್ಮ ಹೆಸರನ್ನೂ, ಶಾಲೆಯ ಹೆಸರನ್ನೂ ದಿನಾಂಕ ೨೦ ನೇ ಜನವರಿಗೆ ಮೊದಲೆ ಗೌರವ ಕಾರ್ಯದರ್ಶಿಗಳಿಗೆ ಕಳುಹಿಸಿಕೊಟ್ಟಿರಬೇಕು.

ಬಿ. ಎಸ್. ವಿ. ಕೆ. ವಿಠಲ್,
ಗೌರವ ಕಾರ್ಯದರ್ಶಿ.

ಬಸ್ ಪರ್ಮಿಟುಗಳು.

ಬೆಟ್ಟೋಲು ಆಧಾರವೆಂದು ತೋರಿ ನಿಲ್ಲಿ ಬಸ್ಸಿಗೆ ಬಸ್ ಪರ್ಮಿಟುಗಳನ್ನು ಸಿ ಟ್ಟಿ ಸಿ ಡಿ ವಿಚಾರ ಪರಿಶೀಲಿಸಿ ಸಾರ್ವಜನಿಕರ ಒಳ್ಳೆ ಮಂತ ಸೂರಿರುತ್ತೋ ಎಂಬುದು ಬಗೆಹರಿಯುವುದಿಲ್ಲ. ಹಿಂಬೂರಿನ ಕಷ್ಟ ಪರಿಸ್ಥಿತಿಯಿಂದಾಗಿ ಪೆಟ್ರೋಲು ಅಭಾವವು ಸ್ವಾಭಾವಿಕವಾದರೂ, ಇನ್ನು ಕಾಲದಲ್ಲಿಯೂ, ಆ ಸ್ಥಾಯಿಯೆಸ್ಸಾ ಸರಿಪಡಿಸಿದ್ದರೆ ಸರ್ಕಾರವನ್ನು ಸಿಲ್ಲಿಸಿ ಈ ಮಧ್ಯೆ ಓಡಾಡಲಿಕ್ಕೆ ನ್ಯಾಯಬದ್ಧವಿದ ಸರ್ವಿಸುಗಳು ಈಗಲೂ ಓಡುತ್ತಿರುವುದನ್ನು ನೋಡುವಾಗ ಮತ್ತು ಒಂದೂಂದು ಬೈಸಿನಲ್ಲಿ ನಾಲ್ಕೈದು ಸರ್ವಿಸುಗಳು ದಿನದಲ್ಲಿ ಓಡುತ್ತಾ ಇರುವಲ್ಲಿ ಅದು ಹಾಗೆಯೇ ನಡೆಯುತ್ತಾ ಇರ್ಲಿ ಅಂದಮಾತ್ರ ದಂತಿರುವ ನಾಪೋಕ್ಲಿನವರ ದುರ್ಭಾಗ್ಯವೂ ಎಂಬಂತೆ ಮೊದಲಿನಿಂದಲೂ ಬೇಸಿಗೆಯಲ್ಲಿಯೂ ಓಡುತ್ತಿದ್ದ ಒಂದೇ ಒಂದು ಸರ್ವಿಸ್ಸನ್ನು ನಿಲ್ಲಿಸಿದ ವಿಷಾದಕರ. ಕೊಡಗಿನಲ್ಲಿ ಹೆಚ್ಚಾಗಿ ಓಡಾಡುತ್ತಿರುವ ಲಾರಿಗಳಂದಲಾದರೂ ಸ್ವಲ್ಪಾಂಶ ಪೆಟ್ರೋಲು ಉಳಿಸಿಕೊಂಡು ಸಾರ್ವಜನಿಕ ಸೌಯೋಗಕರ ಪೌಕರ್ಯಕ್ಕಾಗಿ ಬಸ್ಸು ಸರ್ವಿಸುಗಳು ನಡೆಸಲು ಇದುವರೆಗೆ ಸರಕಾರವು ಏಕೆ ಪ್ರಯತ್ನಿಸಿಲ್ಲವೆಂಬುದು ಜನತಾಹಿತಸಾಧನೆಯನ್ನು ಕೈಗೊಳ್ಳಬೇಕಾಗಿ ವಿನಂತಿ.

'ಬಸ್ ಪ್ರಯಾಣಿಕ'

ವಿದ್ಯಾರ್ಥಿಗಳಿಗೆ ಸ್ಪರ್ಧೆಗಳು.

ಪನ್ ೧೯೪೬ನೇ ಇಸವಿ ನವೆಂಬರ್ ತಿಂಗಳ ಭಾನುವಾರ (ದಕ್ಷಿಣ ಕೊಡಗು ಕರ್ನಾಟಕ ಸಾಹಿತ್ಯ ಸಂಘದ) ಆಶ್ರಯದಲ್ಲಿ ಕೆಳಗೆ ತೋರಿಸಿರುವ ಸ್ಪರ್ಧೆಗಳು ವೀರಾಜಪೇಟೆ ಹೈಸ್ಕೂಲ್ ಹಾಲಿನಲ್ಲಿ ಬೆಳಿಗ್ಗೆ ೯½ ಗಂಟೆಗೆ ನಡೆಯುವವು. ಕೊಡಗಿನ ಹೈಸ್ಕೂಲ್ ವಿದ್ಯಾರ್ಥಿಗಳು ಭಾಗವಹಿಸಬಹುದು.

ಪ್ರತಿ ಒಂದು ಹೈಸ್ಕೂಲಿನಿಂದ ಮೂರು ಹೆಸರುಗಳನ್ನು ಕಳುಹಿಸಬೇಕೆಂದು ಕೋರಲಾಗಿದೆ.

(೧) ಶ್ರೀಮತಿ ಬಿ. ಟಿ. ಜಯಲಕ್ಷ್ಮಮ್ಮ (ಗೌರಮ್ಮ) ಇವರ ಸ್ಮಾರಕಾರ್ಥವಾಗಿ 'ಕವಿತಾ ಕನ್ಯಾವಾಚನ.'

(೨) ಶ್ರೀ ಅಪ್ಪಜ್ಜು ಕವಿಯವರ ಸ್ಮಾರಕಾರ್ಥವಾಗಿ 'ಕನ್ನಡ ವಾಲ್ ಫೈ' (ಈ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಆ ದಿನ ಹಗಲು ೧೦ ಗಂಟೆಗೆ ಒಳಿಸಲಾಗುವುದು.)

ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಇಷ್ಟ ಪಡುವ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಪೂರ್ಣ ತಮ್ಮ ಹೆಸರನ್ನೂ, ಶಾಲೆಯ ಹೆಸರನ್ನೂ ದಿನಾಂಕ ೨೦ ನೇ ಜನವರಿಗೆ ಮೊದಲೆ ಗೌರವ ಕಾರ್ಯದರ್ಶಿಗಳಿಗೆ ಕಳುಹಿಸಿಕೊಟ್ಟಿರಬೇಕು.

ಬಿ. ಎಸ್. ವಿ. ಕೆ. ವಿಠಲ್,
ಗೌರವ ಕಾರ್ಯದರ್ಶಿ.

A BEAUTY AID FOR THE MODERN GIRL !

ತರತರದಾರ ನಟ್ಟಿಗಳಲ್ಲಿ

ಕುಂಕುಮವು ಪಡ್ಯುವ ಹೊಸ ಸೌಂದರ್ಯವರ್ಧಕ ಸಾಧನ

"ಕುಂಕುಮ"

ಬೆಲೆ ರೂ. ೩-೧೫-೦.

ಸಾಮಾನ್ಯ ಸ್ಟಿಲ್ಲಾಗಿ ಕಾಲ್ಬು ಪೌಡರಾಯುವ ಹೊಸ್ಟೈಲ್ ಆರ್ಸರ್ ಕಾಯಿಸಿ.





ವಿವರಗಳಿಗೆ:—
ನೆಜ್ಜೂರ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. ೧೫,
— ಮೈಸೂರು —
ಫ್ಯಾಕ್ಟರಿ:—೩೩ ಮಲಾಲಕ್ಷ್ಮಿ ಬಿಡ್ಡಿಲ್, ಬೋಬಾಯಿ ೧೧.

ಮುಂಬಯಿಯಲ್ಲಿ ಸಿಗುವ ಕೃಷಿಗಳು—

(೧) ಅಖಿ ಧ್ವನಿ ಕಾರ್ಮಿಕರ ಸಂಘದ ಸ್ಕೌರ್ಸ್, ಚಾಕಿ,
(೨) ಶ್ರೀ ದಾದಾಸ್ಟ್ಟ್ ಸ್ಕೌರ್ಸ್, ಒಸ್ಸಾ ಸ್ಪ್ಯಾಂಜ್,
(೩) ಪಾರ್ಲಿ ಸ್ಕೌರ್ಸ್, ಜಸ್ಸಾ ಸ್ಪ್ಯಾಂಜ್,
(೪) ಕೊಡಗು ಕಲ್ಲಿನ ಸರ್ಕಾರ್ಸ್ ಸಹಕಾರ ಸಂಘದ ಸ್ಕೌರ್ಸ್,
(೫) ಕಾಮೋಸೆರೆಸ್ ಸ್ಕೌರ್ಸ್, ಬೆಕ್ಕಸೋಪು,
(೬) ಜಮಲಕ್ಷ್ಮಿ ಸ್ಕೌರ್ಸ್, ಟೂಲಾಗೇಟು.

INSURE YOUR VEHICLES
WITH
THE PREMIER LIFE AND GENERAL INSURANCE CO., LTD.

Head Office:—Premier Insurance Buildings, Madras.
The Largest Motor Insurance Company of S. India.

SPECIAL FEATURE.

1. Lowest Premiums.
2. Instalment Payments.
3. Special Fleet Rebates
4. Free Accident Insurance Benefit of Rs. 10,000.

ANNUAL PREMIUM INCOME RS. 10,00,000.

WANTED.

Agents in all unrepresented areas on most Liberal terms. For particulars apply to:

INSPECTOR, C/o. Post Master, NAPOKLU, S. COORG.
OR
T. V. RAMAMURTI, B. A., B. L., A. I. A., MANAGER & ACTUARY.

ಜೋರೇ ಗೌಡನ ವರದಿ.

'ಜೊಸ್ಪಿಚ್ಚಮ್ಮನ ಪೆಸ್ಸು ಮುಚ್ಚಿತು, ಪ್ಪುದುವ ಸೂಂಬಮ್ಮನೆ ಹ ದರ ಮಂಟ್ಟಿತು' ಎಂಬ ಗಾದೆಯ ಧನಿಯಲ್ಲಿ ಯಾವುದೇ ದರ್ಜಾದಲ್ಲಿಯಾದರೂ ಪಕ್ಕಕೊಂಡು ಸೂಕ್ತವಾದ ಒಪ್ಪುತ್ತದೆ, ಅವನ್ನು ಹೇಳುವ ಪ್ರಸಂಗ 'ಡೂಡ್ಡನ. ತಿಂದರೆ ತಿಜಫಗ ಒಡನ. ತಿಂದರೆ ಹೊಟ್ಟಿಗಿಲ್ಲಪ್ಪಡ್ಡಕ್ಕ!'

* * *

ಹಬ್ಬಾಲೆಯು ಗ್ರಾಮಸ್ಥರು ಸಪಕಾರ ಸಂಗಾದಲ್ಲಿರುವ ದಲ್ಲಿ ಸೀರಿ ಕಳೆದ ವರ್ಷ ಎಂದು ಬಿನಗಳಿ ವರಗೆ ಸ್ವತಹ ಗ್ರಾಸ್ಯ ಸುಧಾರಣಾ ಕಲಸ ಮಾಡಿದರೂ ಈ ಒನ ರು ಈ ತಂಥಿಯಲ್ಲಿ ಸಮಾರು ಎಂಭೂ ಸಾವಿರ ರೂಪಾಯಿಗಳ ಕೆಲಸವನ್ನು ತ ಮ್ಮ ಗ್ರಾಮದ ಹಿತಕ್ಕಾಗಿ ಮಾಡಿಕೊಂಡ ರು ಈ ವರ್ಷವೂ ಇದೇ ರೀತಿ ವಿವಿಧ ಯೋಜನೆಗಳನ್ನು ಕೈಗೊಂಡು ಕಾರಣರಾದವರು ಕೊಡಗಿನ ಪ್ರತ್ಯೇಕ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುವ ಶ್ರೀಮಾನ್ ಬಿ. ಸುಬ್ಬಯ್ಯನವರು. ಇವರು ಸಾರ್ವಜನಿಕ ಕೆಲಸಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಸ್ಮರಿಸಿ ಗ್ರಾಮಸ್ಥರು ಸಾರ್ವಜನಿಕ ಸಭೆಯೊಂದನ್ನು ಕರೆದು ಅಭಿನಂದನಾ ಪತ್ರವನ್ನು ಕೊಡಲು ನಿರ್ಧರಿಸಿದ್ದಾರೆ.

'ಯೊಲೆಯುನ ಪಾಯಸ ಹರುವನಿ ನೇಕೆ? ಎನ್ನುವ ಸಮಯವಿದಲ್ಲ ಪ್ರಸ್ತುತ ಚೋರಮ್ಮನ ಸಪಸೂರ್ಗ, ಇವರ ಮಾರ್ಗದರ್ಶನ ಪಡೆದಲ್ಲಿ ಆಗುತ್ತಿರುವ ಅಭಿವೃದ್ಧಿಗಳನ್ನು ಪರಿಶೀಲಿಸಬೇಕು ಮುಂದಾಳುಗಳಿದ್ದಾರೆಂದು ಕಳ್ಳ ಕೂಪಿನ ಮ್ಮ ಕೈಕಾಲಿಗೆ ಒಂಬೀಲ ನೆಮ್ಮ ಸುಮ್ಮ ಡಾಳುಗಳೂ ಪಾರ್ಟಿ, ಪಕ್ಷ ಬಟ್ಟು ಎಲ್ಲ ಅಧಿಕಾರದ ಭೋಟಿಯಲ್ಲಿರ ವದರಿಂದ ನಮ್ಮ ಹಿರಿ ನಾಸ್ ಯೂಡುಕೊಳ್ಳಬೇಕು. ನಾವು ನಮ್ಮ ಜವಾಬ್ದಾರಿಯನ್ನರಿತು ನಡೆದಿದ್ದರೆ ಯಾವ ಸರ್ಕಾರದಿಂದಲೂ ಸ್ಪಯೋಜನವಿಲ್ಲ ನಾವು ಪ್ರಜೆಯಾಂದ ನ್ನು ಮಿಂ ಎಸಬೇಕು ನಿಮ್ಮವನಿಸಿ ಗನು ರಂಡವನ್ನು ಅನುಸರಿಸಿ ದ್ದೇ ಗೆರಿ ಒಳ್ಳೆಯದೇ ಎನ್ನುವ ಪ್ರಶ್ನೆ ಎಲ್ಲರ ಮನಸ್ಸಿನಲ್ಲಿ ಕೊರೆಯುತ್ತಿದೆ.

* * *

ಕೊಡಗಿನ ಸರಕಾರವನ್ನು ಮಾದಗಿನ ವರೇ ನಡೆಸಿಕೊಂಡಿದ್ದಾರೆ ಸಂಗಾಸದ ಮೂರು ಈಸಾಲ್ಟಗೆ ಮೆಂಬರ್ಗಳಿದ್ದು ಸುಲ್ಲಿ ಕೊಡಗರಿಂದಲೇ ಪಿಂಬಾಯ್ಕೆ ಮಾಡಲ್ಪಟ್ಟಿದ್ದರೂ ಅಧಿಕಾರಕ್ಕೆ ಸ್ವತಂತ್ರವಾಗಿ ಇಲ್ಲವೆಂದರೆ ಅಗಾಗ್ಗೆ ಬಾಗಿ ಕರಿಸಿದ ದಾಕ್ಷಿಣ್ಯಕ್ಕೆ ಯೋಗ ಸಾರ ಬಲಾಸ್ಥ ಸ್ಥಾನಕ್ಕೆ ಎಷ್ಟು ಟ್ಟಿದರೂ ಪ್ರಯೋಜನವಿಲ್ಲ ಎಂಬುದು ಸಾಬೀತಾಗಿದೆ. ಸಾಲಿನ ಬಾಲ್ಲಿ ದಿನವೂ ಆಗಾಗ್ಗೆ ಟೀಕೆಸಾಂಕಲ್ಯಗಳಾಗುತ್ತಿದ್ದರೂ ಕ್ಕಲದ್ದಾಗಿದೆ! ಲೆಜಿಸ್ಲೇಟಿವ್ ಕೌಂಸಿಲ್ ಇದ್ದಾಗ ಇ, ಬಜೆಟ್ ಕಾಲದಲ್ಲಿ ಮಾತ್ರ ಎಂಬಂತಾಗಿ!

* * *

ಕೊಡಗಿನ ಸಮಸ್ಯೆಗಳನ್ನು ಬಗೆಹರಿಸಲು ಕೊಡಗಿನವರೇ ಆದ ಮಂತ್ರಿಗಳಿದ್ದಾರೆ ಎಂಬ ಭರವಸೆಯಿಂದ ಕೊಡಗಿನ ಜನತೆ ಕಾಯುತ್ತಿದೆ. ಆದರೆ ಕೊಡಗಿನ ಸಮಸ್ಯೆಗಳು ಕೊಡಗಿನವರಿಗೆ ಮಾತ್ರ ಸೀಮಿತವಾಗಿರದೆ ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರುವುದರಿಂದ ಮಂತ್ರಿಗಳು ಕೊಡಗಿನವರಾಗಿರುವುದಕ್ಕಿಂತ ಕರ್ನಾಟಕದವರಾಗಿರುವುದು ಹೆಚ್ಚು ಪ್ರಯೋಜನಕಾರಿಯಾಗಿದೆ. ಕೊಡಗಿನ ಸಮಸ್ಯೆಗಳನ್ನು ಕೊಡಗಿನವರಿಗೆ ಒಪ್ಪಿಸಿದರೆ ಅವರು ಕೊಡಗಿನ ಜನತೆಯ ಹಿತದೃಷ್ಟಿಯಿಂದ ಮಾತ್ರ ಯೋಚಿಸಿ ಕಾರ್ಯಪ್ರವೃತ್ತರಾಗುವುದರಿಂದ ಸಮಸ್ಯೆಗಳು ಬಗೆಹರಿಯುವ ಬದಲು ಇನ್ನಷ್ಟು ಜಟಿಲವಾಗುವ ಸಾಧ್ಯತೆಯೇ ಹೆಚ್ಚು. ಕೊಡಗಿನ ಸಮಸ್ಯೆಗಳನ್ನು ಕೊಡಗಿನವರಿಗೆ ಒಪ್ಪಿಸಿದರೆ ಅವರು ಕೊಡಗಿನ ಜನತೆಯ ಹಿತದೃಷ್ಟಿಯಿಂದ ಮಾತ್ರ ಯೋಚಿಸಿ ಕಾರ್ಯಪ್ರವೃತ್ತರಾಗುವುದರಿಂದ ಸಮಸ್ಯೆಗಳು ಬಗೆಹರಿಯುವ ಬದಲು ಇನ್ನಷ್ಟು ಜಟಿಲವಾಗುವ ಸಾಧ್ಯತೆಯೇ ಹೆಚ್ಚು. ಕೊಡಗಿನ ಸಮಸ್ಯೆಗಳನ್ನು ಬಗೆಹರಿಸಲು ಕೊಡಗಿನವರೇ ಆದ ಮಂತ್ರಿಗಳಿದ್ದಾರೆ ಎಂಬ ಭರವಸೆಯಿಂದ ಕೊಡಗಿನ ಜನತೆ ಕಾಯುತ್ತಿದೆ. ಆದರೆ ಕೊಡಗಿನ ಸಮಸ್ಯೆಗಳು ಕೊಡಗಿನವರಿಗೆ ಮಾತ್ರ ಸೀಮಿತವಾಗಿರದೆ ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರುವುದರಿಂದ ಮಂತ್ರಿಗಳು ಕೊಡಗಿನವರಾಗಿರುವುದಕ್ಕಿಂತ ಕರ್ನಾಟಕದವರಾಗಿರುವುದು ಹೆಚ್ಚು ಪ್ರಯೋಜನಕಾರಿಯಾಗಿದೆ

Reg. No. M. 1550.
'KODAGU' MERCARA. (Coorg).

ಕೊಡಗು

ಸಂಪಾದಕರು—ಸಿ. ವಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೨೬ | ತಾರೀಕು ೩೧-೧೧-೧೯೪೮ನೇ ಬುಧವಾರ | ಸಂಚಿಕೆ ೫೫

॥ ಪಾಕಿಸ್ಥಾನದ ಭವಿಷ್ಯ ॥

'ಅನಾಯೂಸವಾಗಿ ದೊರಕಿದ್ದು ಅಷ್ಟೇ ಅನಾಯೂಸವಾಗಿ ಕಳೆದುಹೋಗುವುದು.' ಇದು ಒಂದು ನಿಸರ್ಗ ನಿಯಮವೇ ಆಗಿದೆ. ಆಕಸ್ಮಿಕವಾಗಿ ಅಮೃತಕೊಟ್ಟರೂ ಆರ್ಜಿರ್ಣವಾಗುವುದೂ ಒಂದು ನಿಸರ್ಗ ನಿಯಮವೇ. ಹೀಗೆಯೇ ಇಂದು ಪಾಕಿಸ್ಥಾನದ ಗತಿಯೂ ಆಗಿದೆ, ಆಗಲಿದೆ ಎಂಬುದರ ಪೂರ್ವ ಚಿನ್ಹೆಗಳು, ಹಿಂದುಸ್ಥಾನ-ಪಾಕಿಸ್ಥಾನಾಂತರ್ಗತ ಭಾರತಭೂಮಿಯಲ್ಲಿ ನಡೆದ ಕೇವಲ ಎರಡು ಮೂರು ತಿಂಗಳುಗಳ ಘಟನೆಗಳನ್ನು ಚಿಕಿತ್ಸಕ ಬುದ್ಧಿಯಿಂದ ಪರಿಶೀಲಿಸಿದವರಿಗೆ ಕಂಡುಬರದೆ ಇರದು.

ಸನ್ ೧೯೪೭ರ ನೆಯ ಇಸವಿಯಲ್ಲಿ ಈ 'ಪಾಕಿಸ್ಥಾನ' ಪ್ರಜಾರವು ಭಾರತದಲ್ಲಿ ಪ್ರಬಲಗೊಂಡ ರೀತಿಯಲ್ಲಿ ಉದ್ಭವಿಸಿತು. ಸರಕೀಯರ ಕೈವಾಡದಿಂದ, ಪರಕೀಯರ ಹಿತಸಾಧನೆಗಾಗಿ ಉಪಯೋಗಿಸಿದ ತಂತ್ರಗಳಲ್ಲಿ ಇದೊಂದು ಯಶಸ್ವಿಯಾದ ತಂತ್ರವೆಂದು ಹೇಳಬಹುದಾದರೂ, ಅಖಿಲ ಭಾರತ ಕಾಂಗ್ರೆಸ್ಸಿನ ಜಾಜ್ವಲ್ಯ ದೇಶಾಭಿಮಾನ, ಸ್ವಾರ್ಥತ್ಯಾಗದೆದುರು ಈ 'ವರ'ವೂ ಒಂದು ಶಾಪವಾಗಿ ಪರಿಣಮಿಸುವ ರೀತಿಯಲ್ಲಿದೆಯೆಂದು ಸದ್ಯದ ಘಟನೆಗಳ ಪರಿಶೀಲನೆಯಿಂದ ನಿರ್ಧಾರವಾಗಿ ಹೇಳಬಹುದು.

ಕಾಂಗ್ರೆಸಿನ ದೇಶಕಾರ್ಯಕ್ಕೆ ಕಾಲ್ತೊಡಕನ್ನು ಒಡ್ಡಲಿಕ್ಕೆಂದು ಜಾತೀಯ ಘೋಷವನ್ನು ಪ್ರೇರೇಪಿಸಿದ, ಆಳರಸರ ಕೃಪಾಪ್ರಸಾದ (?) ದಿಂದ ಮುಸ್ಲಿಂ ಲೀಗು ಪ್ರಥಮದಿಂದ ಬೆಳೆಯತೊಡಗಿ, ಪಾಕಿಸ್ಥಾನ ಪ್ರಚಾರವನ್ನು ಭಾರತದ ತುಂಬೆಲ್ಲ ಜಾತೀಯತೆಯ ತಳಹದಿಯ ಮೇಲೆಯೇ ನೂಡಿತು. ಪಾಕಿಸ್ಥಾನವನ್ನು ತೆಗೆದುಕೊಂಡೇ ತೀರುವೆನೆಂದು ಪ್ರಚಂಡ ಕೂಗನ್ನೆಬ್ಬಿಸಿದ ಭಾರತೀಯ ಮುಸ್ಲಿಮರಲ್ಲಿ ಇಂದು ಸುಮಾರು ೪ ಕೋಟಿ ಜನರು ಅಂದರೆ ಅರ್ಧಕರ್ಧ ಜನರು, ಪಾಕಿಸ್ಥಾನದಲ್ಲಿ ಸ್ಥಾಪಿತರಾಗಿದ್ದೆ, ಹಿಂದುಸ್ಥಾನದಲ್ಲಿ ಅಲ್ಪಸಂಖ್ಯಾಕ ಸ್ಥಾನದಲ್ಲಿ ಕೊಳೆಯಬೇಕಾಗಿ ಬಂದಿದೆ. ಇನ್ನು ಪಾಕಿಸ್ಥಾನದಲ್ಲಿಯು ಮುಸ್ಲಿಮರ ಸ್ಥಿತಿಯಾದರೂ ಒಳ್ಳೇ ಸಮೂಧಾರಣವಿದೆ ಎನ್ನಬೇಕೇ, ಅಲ್ಲಿ ಇನ್ನೂ ಸಮರ್ಥ ಸರಕಾರವೇ ಸ್ಥಾಪಿತವಾಗಿಲ್ಲ ಪೆಂಡು ಪೆಂಡ್ಗೆಯೆದ್ದಿದೆ. ಪಾಕಿಸ್ಥಾನ ಹಿಂದುಸ್ಥಾನಗಳು ಕೂಡಿದ ಗದಿಪ್ರದೇಶಗಳಲ್ಲೆಲ್ಲ ಅನಪೇಕ್ಷವಾದ ಅನೂಸುಸವಾದ ಅನಾಹುತಗಳು ನಡೆದೇ ಇವೆ. ಹಿಂದೂ ಮುಸ್ಲಿಂ ಭೇದಭಾವದ ಸ್ಫೋಜದಿಂದಲೂ ಸಾಂದಾರ್ದದಿಂದಲೂ ಸಾವಿರಾರು ಮೆರಗಳಿಂದ ಅಣ್ಣಾ ತಮ್ಮಂದಿರಂತೆ ನಡೆದು ಕೊಂಡು ಬಂದ ಜನರು ಈ ಪಾಕಿಸ್ಥಾನದ ಸ್ಪಾಸಂಭ್ರಾವದಾದೊಡನೆ ಪಿಶಾಚಿಗಳಂತೆ ಸಸನ್ಮಿತ್ರ ಕೃತ್ಯಗಳನ್ನು ಮಾಡತೊಡಗುವುದನ್ನು ನೋಡಿದರೆ, ಮೂರನೆಯ ಮಹಾ ಮೊದಲೆ ಗೊತ್ತುಗಡಿಟ್ಟ ಗತ್ತುಗುರಿಕೆಯೆಂದು ಧಾರಾಳವಾಗಿ ಹೇಳಬರುವಂತಿದೆ. ಈ ಎರಡು ಮೂರು ತಿಂಗಳುಗಳಲ್ಲಿಯೇ ೧೦೦ ಕ್ಕೆ ೫೦ ರಷ್ಟು ಜನ ಮುಸ್ಲಿಮರು ಈ ಪಾಕಿಸ್ಥಾನದ ಅನ್ಯಪಾತ್ರೆಯೆಂದು ಕೂಗಿಬ್ಬಿಸಿದ್ದಾರೆ. ಹಿಂದುಸ್ಥಾನದಲ್ಲಿಯು ಮುಸ್ಲಿಮರು ಹಿಂದುಸ್ಥಾನದ ಸರಕ ರಕ್ಷೇ ನಿಸ್ಪೃಹರಾಗಿರುವೆವೆಂದು ಸಾರುತ್ತಲಿದ್ದಾರೆ ಜಲ್ಲವೆ ಭೌಗೋಲಿಕ ದೃಷ್ಟಿಯಿಂದಲೂ, ೧೦೦ ಕ್ಕೆ ೮೦ ರಷ್ಟು ಮುಸ್ಲಿಂ ಪ್ರಜೆಗಳುಳ್ಳ ದೃಷ್ಟಿಯಿಂದಲೂ, ಪಾಕಿಸ್ಥಾನಕ್ಕೇ ನ್ಯಾಯವಾಗಿ ಸೇರಬೇಕಾಗಿದ್ದ ಕಾಶ್ಮೀರ ಸಂಸ್ಥಾನದ ಪ್ರಜಾಪ್ರಮುಖರು (ಅವರೂ ಮುಸ್ಲಿಮರೇ!) ಪೊಸ್ನೆ ಮೊನ್ನೆ ಹಿಂದುಸ್ಥಾನ ಒಕ್ಕೂಟಕ್ಕೆ ಸೇರಿ ಹಿಂದೀ ಸೈನ್ಯ ಸಹಾಯದಿಂದ ಪಾಕಿಸ್ಥಾನದ ದಾಳಯನ್ನು ಎದುರಿಸುತ್ತಲಿದ್ದಾರೆ. ಅವು ಪಾಕಿಸ್ಥಾನಕ್ಕೆ ಸೇರುವ ಸಾಧ್ಯತೆ ಕಂಡುಬರುವದಿಲ್ಲ. ಲೀಗ್ ಪ್ರೇರಿತ ಧಾಳಿಗಾರರು ಅಲ್ಲಿ ಮಾಡಿದ ಅನಾಚಾರವೇ ಇದಕ್ಕೆ ಕಾರಣವಾಗಿದೆ. ಯಾವ ತತ್ವದ ಮೇಲೆ ಪಾಕಿಸ್ಥಾನವು ಪ್ರಾದುರ್ಭವಿಸಿತೋ ಆ ತತ್ವಕ್ಕೆ ಆ ವರೇ ವಿರುದ್ಧವಾಗಿ, ಮುಸ್ಲಿಂ ಮುಸ್ಲಿಮರೊಳಗೇ ತಾಳಮೇಳವಿಲ್ಲದಂತೆ ನಡೆದಿರುವುದನ್ನು ನೋಡಿದರೆ, ಈ 'ಜಿನ್ನಾಜಯ' ದ ಪ್ರಭಾವವು ಕೈಗೂಡದೆಂದೂ ಅನೈಸರ್ಗಿಕವೆಂದೂ ಅನಿವಾರ್ಯವಾಗಿ ಹೇಳಬೇಕಾಗುತ್ತದೆ.

ಅಲ್ಲದೆ ಈ ಪಾಕಿಸ್ಥಾನೀ ಪ್ರಮುಖರು ಆದೂರದರ್ಶಿತ್ವದಿಂದಲೂ, ಪರಕೀಯರ ಕೈವಾಡದಿಂದಲೂ, ಪ್ರೇರಿತರಾಗಿ ದುಡುಕುತನದಿಂದ ನಡೆಯತೊಡಗಿದ್ದಾರೆಂದು, ಈಗ ಕಾಶ್ಮೀರದಲ್ಲಿ ನಡೆದ ಘಟನೆಗಳಿಂದ ಧಾರಾಳವಾಗಿ ಹೇಳಬಹುದಾಗಿದೆ. ಪಾಕಿಸ್ಥಾನದ ಮೇಲೆ ಭಯಂಕರ ಗಂಡಾಂತರ ಬಂದಿದೆಯೆಂದೂ, ಪಾಕಿಸ್ಥಾನಕ್ಕೆ ಪ್ರಪಂಚದಲ್ಲಿಯ ಉಳಿದ ಮುಸ್ಲಿಂ ರಾಷ್ಟ್ರಗಳೆಲ್ಲವೂ ಸಹಾಯನೀಡಬೇಕೆಂದೂ ಹುರುಳಿಲ್ಲದ ಜೊಬ್ಬೆಯನ್ನು ಇಂದು ಪಾಕಿಸ್ಥಾನ ಸರಕಾರವು ನಡೆಸಿದೆ. ಹುಟ್ಟಿದ ಎರಡು ಮೂರು ತಿಂಗಳಲ್ಲಿಯೇ, ಭಾರತದಲ್ಲಿ ಅನೂನುಷ ರೀತಿಯ ಕೋಲಾಹಲವನ್ನೆಬ್ಬಿಸಿದ ಮತ್ತು ಪ್ರಪಂಚಕ್ಕೆಂ ಸಂರಕ್ಷಣೆಗಾಗಿ ಕೂಗುತ್ತಿರುವ ನವೋದಿತ ಕೂಸು ಎಂತಹ ಆಸಾಮ್ಯ ನಕ್ಷತ್ರದಲ್ಲಿ ಜನ್ಮತಾಳಿದೆಯೋ!

ಯಾವುದೇ ಒಂದು ಸರಕಾರವನ್ನು ಪ್ರಪಂಚದ ರುಂಬನೋಡಿದರೂ, ಒಂದು ಜಾತಿಯ ಜನರಿಗಾಗಿಯೇ ಉದಾಹರಿಸಿಯಿಲ್ಲ; ಅದು ತುಂಬ ಅವ್ಯವಹಾರ್ಯ! ಒಂದೇ ಜಾತಿಯ ಜನರಿಗಾಗಿ ಮೂರ್ನೆ ಒಂದು ದೇಶವೂ ಒಂದು ಸರಕಾರವೂ ಇದುವರೆಗೆಂದರೆ ಅದು ದೇವರೆಂದಾಗಲಿ, ಸರಕ ರವೆಂದಾಗಲಿ ಎಂದೂ ಯಾರಿಂದಲೂ ಎಸ್ಸಿಸಿಕೊಳ್ಳಲಾರದು. ಈ ಮಾತು ನಿಸರ್ಗನಿದ್ದಷ್ಟಿದ್ದರೂ, ಇದರ ವಿರುದ್ಧ ಈ ಪಾಕಿಸ್ಥಾನವು ಜನ್ಮತಾಳಿದೆ. ಎಂತಹ ಕಟ್ಟಾಸ್ಪೃನ ಸರಕ-ರದಲ್ಲಾಗಲೀ, ಎಂತಹ ಕ್ರೂರ ಮತ್ತು ನ್ಯಾಯಾಸಹ್ಯ ಅಧಿಕಾರ ಬಳಿಯಲ್ಲಾಗಲಿ, ತಪಿತಪ್ಪನಿಗೆ ಒಂದಾವೇಳೆ ಕ್ಷಮೆಯಿದೊರಕುವ ಆಕಯನ್ನು ಕ್ಷಣಚಿತ್ತಾಗಿಯಾದರೂ ಇಟ್ಟುಕೊಳ್ಳಬಹುದು. ಆದರೆ ನಿಸರ್ಗ ಮಾತ್ರ ತನ್ನೆ ವಿರುದ್ಧ ಮೋಪಗಾರರನ್ನು, ತಪ್ಪಿತಸ್ಥರನ್ನು ಎಂದೂ ಕ್ಷಮಿಸಿವ ಉದಾಹರಣೆಯಿಲ್ಲ. ಕೂಡಲೆ ಆಗಲಿ, ಸಾವಕಾಶವಾಗಿಯಾಗಲಿ, ನಿಸರ್ಗದ ವಿರುದ್ಧ ನಡೆದ -ಪ್ತಿಗೆ ವಿನ್ಸಯೋಗ ತಪ್ಪಲ್ಲದ್ದೇ, ಆಗಲೇಬೇಕು' ಇಂದು ಪಾಕಿಸ್ಥಾನದ ಗಣ, ರ ನಿಯಮದಂತೆ ಪ್ರಕಾರ ಆಗತಪ್ಪಲ್ಲದ್ದೇ.

ಒಬ್ಬ ಮನುಷ್ಯನಾಗಲಿ, ಒಂದು ಜಾತಿಯವರಾಗಲಿ ಅಥವಾ ಜನಾಂಗವಾಗಲಿ, ಅಲ್ಪಸ್ವಲ್ಪ ಹೆಜ್ಜೆತಪ್ಪಿದಮೆಗಳನ್ನು ಸಹಿಸಿಕೊಂಡು, ದೊಡ್ಡ ಮನಸ್ಸಿನಿಂದ ಹೋಗುವದು ಹಿತಕರವಾದ ಮಾತು. ತುಂಬ ಹೊಣೆಗಾರಿಕೆಯನ್ನು ಸಹಿಸಿಕೊಂಡು ಹುಟ್ಟಿಪೂರಿತನದಿಂದ ನಡೆದರೆ ಕೇಡು ತಪ್ಪದು. ಆನ್ಯೇಕಲ್ಲ, ಅಂದೊಂದು ವೇಳೆ ತಪ್ಪನ್ನವರೇ ತನ್ನ ಹೊತ್ತಿಗಾಗದೆ ಹೋಗುವುದಲ್ಲದೆ ಪ್ರಸಂಗತೆರಿಗಿಯೂ ನಿಲ್ಲಬಹುದು. ಆದ್ದರಿಂದ ಒಂದು ಜನಾಂಗವ ಅಥವಾ ಒಂದು ರಾಷ್ಟ್ರದ ಅಗಸೋಗಗಳ ಹೊಣೆ ಹೊತ್ತುಕೊಂಡವರಲ್ಲಿ ಎಂತಹ ತಾಳ್ಮೆಯೂ ಯುಕ್ತಾಯುಕ್ತ ವಿವೇಕವೂ ದೊಡ್ಡ ಗುಣಗಳೂ ಇರಬೇಕು! ಇಲ್ಲದೆ ಹೋದಲ್ಲಿ ಹೆದರೆದುವುದರಲ್ಲಿ ಸಂದೇಹವಿಲ್ಲ.

ಈ ಬಗೆಯ ಎಲ್ಲ ನಿಸರ್ಗ ನಿಯಮಗಳಿಗೂ ಪಾಕಿಸ್ಥಾನವಿಂದು ಹೊರತಾಗಿ ನಿಂತಿರುವುದಲ್ಲದೆ,ಅನೇಕ ಅನ್ಯಾಯದ ಕೃತಿಗಳನ್ನೂ ಅಸಂಬದ್ಧ ಘೋಷಣೆಗಳನ್ನೂ ಅವ್ಯವಹಾರೇಷು ವ್ಯಾಪಾರವನ್ನೂ ನಡೆಸುತ್ತ ತನ್ನ ನಾಶದ ದಾರಿಯನ್ನು ತಾನೇ ತುಳಿಯುತ್ತಲಿದೆ. ಪಾಕಿಸ್ಥಾನದ ಪ್ರಾವಾದಿಗಳೂ, ಸರಳವಲ್ಲದ ನಾಶಕಾರಕ ವರ್ಗದಿಂದಲೇ ಮನ್ನಡೆಯುತ್ತಲಿದ್ದಾರೆ. ಸುಮಾರು ೫-೬ ಕೋಟಿ ಜನರ ಆಗು ಹೋಗುಗಳ ಹೊಣೆ ಹೊತ್ತ ಈ ವಾಕಿ ಸ್ಥಾನದ ಪ್ರವಾದಿಗಳು ಇನ್ನಾದರೂ ತಾಳ್ಮೆಯಿಂದಲೂ ವಿಶಿದ್ಧ ಮನಸ್ಸಿನಿಂದಲೂ ವಿಚಾರ ನೂಡಿ, ತಾಲ್ಕೊಪ್ಪತ್ತು ತಾವು ಬಾಳಬೇಕೆಂಬ ಮತ್ತು ಉಳಿವರನ್ನೂ ಬಾಳಗೊಡಬೇಕೆಂಬ ದೂರದೃಷ್ಟಿಯನ್ನಿಟ್ಟುಕೊಂಡು ನಡೆದರೆ ಉಭಯರಿಗೂ ಕ್ಷೇಮ. ಇಲ್ಲದಿದ್ದರೆ.....? ನಿಸರ್ಗನಿಯಮದಂತೆ, ಒಳ್ಳೆಯದಕ್ಕೆ ಸುಖವೂ, ಕೆಡುಕಿನವಕ್ಕೆ ದುಃಖವೂ ತಪ್ಪಿದ್ದಲ್ಲ.

"ಜೈ ಹಿಂದ್"

ವಾರ್ತೆ.

ದೇಶದ ಪರಿಸ್ಥಿತಿಯನ್ನವಲೋಕಿಸಿ ಜೀವನಾವಶ್ಯಕ ವಸ್ತುಗಳ ನಿಯಂತ್ರಣವನ್ನು ಕೈಗೆದುಹಾಕುವದು ಸಾಧ್ಯವೇ ಎಂದು ಪರಿಶೀಲಿಸಿ ಸಂಬಂಧಪಟ್ಟ ಸರಕಾರಗಳು ಹಾಗೆ ಮಾಡಬೇಕೆಂದು ಅ. ಭಾ. ಕಾ. ಸಮಿತಿಯು ರಠಾವು ಮಾಡಿದ.

ನಿಯಂತ್ರಣವೇ ಕಳ್ಳಸಂತೆ, ಲಾಳಬಡಕತನ, ಮೋಸ, ಆಹಾರದ ಅಭಾವಕ್ಕೆ ಕಾರಣವೆಂದು ಮಹಾತ್ಮಾಗಾಂಧೀಜಿಯವರು ಅಭಿಪ್ರಾಯಪಟ್ಟಿರುವರು.

ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಶ್ರೀ. ಸಿದ್ದಲಿಂಗಯ್ಯನವರು ಅರಿಸಲ್ಪಟ್ಟರುವರು. ಇವರಿಗೆ ೧೫೫ ಓಟುಗಳೂ ಇವರ ವಿರೋಧಿ ನಿಂತ ಶ್ರೀ. ಕೆ. ಹನುಮಂತಯ್ಯನವರಿಗೆ ೭೫ ಓಟುಗಳೂ ದೊರೆತಿದ್ದವು.

ಜಗತ್ತಿನಲ್ಲಿ ಅತ್ಯಂತ ಎತ್ತರವಾದ ಹಿಮಾಲಯ ಶಿಖರಕ್ಕೆ 'ಮೌಂಟ್ ಎವರೆಸ್ಟ್' ಎಂದು ಹೆಸರು ಇಟ್ಟಿದ್ದು ತಪ್ಪು. ಅದನ್ನು ಕಂಡು ಹಿಡಿದವರು ಭಾರತೀಯರಾದ ಶ್ರೀ. ರಾಧಾನಾಥ್ ಸಿಂಗರೆಂದೂ ಆದ್ದರಿಂದ ಪಾಶ್ಚಿಮಾತ್ಯ ಹೆಸರನ್ನು ಬದಲಾಯಿಸಿ ರಾಧಾನಾಥ ಶಿಖರವೆಂದು ಇಡಬೇಕೆಂದು ಒಬ್ಬರು ಇಂಡಿಯಾ ಸರಕಾರಕ್ಕೆ ಸೂಚಿಸಿರುವರು.

ಇಂಗ್ಲೆಂಡಿನ ರಾಜಕುಮಾರಿ ಎಲಿಝಬೆತಳ ವಿವಾಹದಲ್ಲಿ ಹಿಂದುಸ್ಥಾನವು ಕೊಡಲಿಚ್ಚಿಸಿದ ಉಡುಗೊರೆಗಳನ್ನು ಗವರ್ನರ್ ಜನರಲ್ ಮೌಂಟ್ ಬ್ಯಾಟನ್ನರು ತಮ್ಮ ಸಂಗಡ ಒಯ್ದರು. ಇವುಗಳಲ್ಲಿ ಮೊಗಲಾಯರ ರತ್ನಖಚಿತ ಗೆಜ್ಜೆಗಳವೆ ಎಂದು ತಿಳಿಯುತ್ತದೆ. ರಾಜಕುಮಾರಿಯ ಪಟ್ಟಿಗೆ ಹಿಂದುಸ್ಥಾನವು ಏನನ್ನು ಮೂರ್ತಿಯನ್ನು ಉಡುಗೊರೆಯಾಗಿ ಕಳುಹಿಸಿವೆ. ಹಿಂದುಸ್ಥಾನದ ಪರವಾಗಿ ಗವ್ನರ್ಸ್ ಜನರಲ್ ಮತ್ತು ವಿ. ಕೆ. ಕೃಷ್ಣಮೆನನ್ನರು ಈ ವಿವಾಹ ಸಮಾರಂಭದಲ್ಲಿ ಭಾಗವಹಿಸುವರು. ಮಹಾತ್ಮಗಾಂಧಿಯವರು ಇವರ ವಿವಾಹದ ಉಡುಗೊರೆಯಾಗಿ ತಾನು ಸ್ವತಹ ನೆಯ್ದ ಮೇಜುಗಳಿಗೆ ಹಾಸುವ ಹೊದಿಕೆ ವಸ್ತ್ರವನ್ನು ಕಳುಹಿಸಿರುವರು.

ಶ್ರೀ ಸಿ. ರಾಜಗೋಪಾಲಾಚಾರ್ರಿ ಸ್ಥಳದಲ್ಲಿ ಸರ್ ಬಿ. ಎಲ್. ಮಿತ್ರ ಇವರನ್ನು ಪಶ್ಚಿಮ ಬಂಗಾಳದ ಗವರ್ನರರಾಗಿ ನಿಯಮಿಸಲ್ಪಟ್ಟಿದ್ದಾರೆ. ಅವರ ಪ್ರತಿಜ್ಞಾವಿಧಿ ತಾ. ೧೭ರಲ್ಲಿ ನಡೆಯಿತು. ಅವರು ಆ ಕಾಲಕ್ಕೆ ಧೋತರ ಉತ್ತರೀಯ ಇತ್ಯಾದಿ ಹಿಂದೀ ಉಡುಪನ್ನು ಧರಿಸಿದ್ದರು.

ಕೊ ಡ ಗು

ತಾ. ೨೧-೧೧-೧೯೪೭ ನೇ ಶುಕ್ರವಾರ

ಅಖಿಲ ಭಾರತ ಕಾಂಗ್ರೆಸ್ ಸಮಿತಿ.

ಭರತಖಂಡವು ಸ್ವತಂತ್ರವಾದನಂತರ ಪ್ರಥಮವಾಗಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ದೆಲ್ಲಿಯಲ್ಲಿ ಕೂಡಿತು. ಇದರಲ್ಲಿ ಸ್ವಾಮುಖ್ಯವಾದ ಎಂಟು ರಠಾವುಗಳು ಅಂಗೀಕರಿಸಲ್ಪಟ್ಟವು. ಈ ಸಭೆಯಲ್ಲಿಯೇ ಹೊಸ ಪ್ರೆಸಿಡೆಂಟರಾಗಿ ಬಾಬು ರಾಜೇಂದ್ರ ಪ್ರಸಾದರ ಆಯ್ಕೆಯೂ ಆಯಿತು. ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಸರಕಾರದ ರೀತಿ ನೀತಿಯನ್ನೂ, ಜನತೆಯ ಆಶಯವನ್ನೂ ಬಲ್ಲವರೇ ಕಾಂಗ್ರೆಸಿನ ನೆಂಥಾ'ಮಹಾ ಸಂಸ್ಥೆಯ ಅಧ್ಯಕ್ಷರಾಗಿ ರತಕ್ಕವ್ದು ಅತ್ಯವಶ್ಯ. ರಾಜೇಂದ್ರ ಪ್ರಸಾದರಂಥಾ ಮಹಾ ಮುಂದಾಳುಗಳು ಅಧಿಕಾರ ಮಂತ್ರಿ ಪದಕ್ಕಿಂತಲೂ ಜನತಾ ಸಂಸ್ಥೆಯೂದ ಕಾಂಗ್ರೆಸ್ಸಿನ ಅಧ್ಯಕ್ಷ ಪದವು ಹಿರಿದೆಂದು ತಿಳಿದು ಮಂತ್ರಿಪದಕ್ಕೆ ರಾಜಿನಾಮೆಯನ್ನಿತ್ತು ಬರಲಿರುವುದು ದೇಶದ ಸೌಭಾಗ್ಯ.

"ಸ್ವಾತಂತ್ರ್ಯವು ಜವಾಬ್ದಾರಿಕೆಯನ್ನೆ ಅಲ್ಲ; ಹೊಸ ಸಮಸ್ಯೆಗಳನ್ನೂ, ಹೊಸ ಭಾರವನ್ನೂ ಕೇರುತ್ತದೆ" ಎಂಬುದರಲ್ಲಿ ಸಂಶಯವಿಲ್ಲ. ಹಿಂದೂ ದೇಶವು ಏಂಗಡಿಸಲ್ಪಟ್ಟಿದ್ದರೂ ದೇಶವು ಎರಡಾಗಲಿಲ್ಲ ವೆಂಬುದು ಕಾಂಗ್ರೆಸ್ ಸಮಿತಿಯ ಅಭಿಪ್ರಾಯ. ಆಡಳಿತ ದೃಷ್ಟಿಯಿಂದ ಭಾಗಮಾಡಿಗಬಹುದಾದರೂ ಸಹಸ್ರಾರು ವರ್ಷಗಳಿಂದ ಏಕವಾಗಿ ನಡೆದು ಬಂದಿರುವ ಸಂಸ್ಕೃತಿ, ಆಚಾರ, ವಿಚಾರ, ಜೀವನ ಧ್ಯೇಯಗಳು ಕತ್ತರಿಸಲ್ಪಡುವದು ಸಾಧ್ಯವಿಲ್ಲ. ಆದ್ದರಿಂದ ಭಾರತೀಯರು ಒಂದು; ಯಾವದೇ ಭಾಗದಲ್ಲಿರಲಿ, ಪ್ರಜಾ ಪ್ರಭುತ್ವ ಭಾರತವಲ್ಲಿ ಪ್ರತಿಯೊಬ್ಬನಿಗೂ ಸಮಾನ ರೀತಿಯಿಂದ ಬದುಕಿ ಬಾಳುವ ಹಕ್ಕಿದೆ. ಇದೇ ಆಶಯವನ್ನು ಅಖಿಲ ಭಾರತ ಕಾಂಗ್ರೆಸಿನ ಒಂದು ರಠಾವು ಸಮರ್ಥಿಸಿದೆ. ಇದರೊಂದಿಗೆ ಅನ್ಯಾಯದ ರೀತಿಯಲ್ಲಿ ಮನೆಬಿಟ್ಟು ಜೀವ ರಕ್ಷಣೆಗಾಗಿ ಓಡಿಹೋದವರ ಮನೆಗಳನ್ನು ಅಕ್ರಮಿಸಿ, ಹೆಣ್ಣು ಮಕ್ಕಳನ್ನು ಮತಾಂತರಿಸಿದ ವಿಚಾರವನ್ನು ಎಂಡಿಸಿ ಮನೆಮಠಗಳನ್ನು ಪುನಹ ಮೂಲಿಕರಿಗೆ ಒದಗಿಸಿ ಕೊಡುವ ಮತಾಂತರವಾದವರನ್ನು ಪುನಹ ಜಾತಿಗೆ ತರುವ ಶ್ರೀ ಜಯಪ್ರಕಾಶ ನಾರಾಯಣ ರವರ ತಿರ್ಮಾನವನ್ನೂ ಎ. ಐ. ಸಿ. ಸಿ. ಯು ಒಪ್ಪಿದೆ.

ದೇಶದ ಆರ್ಥಿಕ ವಿತರಣೆ, ಔದ್ಯೋಗಿಕ ಬೆಳವಣಿಗೆ, ದಕ್ಷ ಆಡಳಿತ, ಪಠರ ಮತ್ತು ಹಳ್ಳಿಗಳಿಗೆ ಬೇಕಾದ ಜಾಂಧವ್ಯಗಳನ್ನು ರಚಿಸುವ ಬಗ್ಗೆ ಯೋಗ್ಯ ಯೋಜನೆಗಳನ್ನು ತಯಾರಿಸಲು ಕಾಂಗ್ರೆಸಿನ ಮುಖಾಮುಂದಾಳುಗಳಿಂದ ಕೂಡಿದ ಸಮಿತಿಯೊಂದರ ರಚನೆಯೂಗಿದೆ. ಒಂಡ ಕಳಕಾಹಿ ಮತ್ತು ಪಾಸಗಿ ದಬ್ಬಾಳಿಕೆಗಳನ್ನು ನಿಲ್ಲಿಸುವದು ಇದರ ಧ್ಯೇಯವಾಗಿದೆ. ಕಾಂಗ್ರೆಸಿನ ಈ ನಿರ್ಣಯವು ಸಮತಾವಾದಿಗಳನ್ನೂ ಮೆಚ್ಚಿಸತಕ್ಕಂಥಾದ್ದಾಗಿದೆ. ದೇಶದಲ್ಲಿಯು ಇಂದಿನ ಪರಿಸ್ಥಿತಿಯು ದೃಷ್ಟಿಯಿಂದ, ಕಾಂಗ್ರೆಸ್ಸಿನ ಧ್ಯೇಯು ಸಾಫಲ್ಯವಾದ ಕಾರಣದಿಂದ ಕಾಂಗ್ರೆಸ್ ಫುಟ ನೆಯನ್ನು ಬದಲಾಯಿಸುವ ಆವಶ್ಯಕತೆ ಬಂದಿರುವದರಿಂದ ಇದಕ್ಕಾಗಿ ಒಂದು ಸಮಿತಿಯನ್ನು ನೇಮಿಸಿ ಮುಂದೆ ಜನವರಿ ಆಂತ್ಯದಲ್ಲಿ ಕೂಡಲಿರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಅವರ ಕರಡು ನಿಯಮವಳಿಯನ್ನು ಒಪ್ಪಿಸುವಂತೆ ತೀರ್ಮಾನಿಸಲಾಗಿದೆ.

ಮತ್ತೊಂದು ನಿರ್ಣಯದಲ್ಲಿ ಸಂಸ್ಥಾನಾಧೀಶರನ್ನು ಉದ್ದೇಶಿಸಿ, 'ಜನತೆಯ ಅಭಿಪ್ರಾಯವೇ ಪರಮ ಶ್ರೇಷ್ಠ ಕಾಯಿದೆಯೆಂದರಿತು ವರ್ತಿಸದಿದ್ದರೆ ಕಾಂಗ್ರೆಸು ಆಶ್ರಿತ ರಾಜರಿಗೆ ಆಶ್ರಯಕೊಡಲು ಸಾಧ್ಯವಾಗದು' ಎಂದು ಹೇಳಿದ್ದಾರೆ. ಸಂಸ್ಥಾನಾಧೀಶರು ಶಮ್ಮ ನಿರಂಕುಶ ಆಡಳಿತವನ್ನು ನಿಲ್ಲಿಸಿ ಪ್ರಜಾಪ್ರಭುತ್ವ ಸರ್ಕಾರದಲ್ಲಿ ಮುನ್ನಡಿಯಿಟ್ಟು ಜವಾಬ್ದಾರಿಸರಕಾರಗಳನ್ನು ಸ್ಥಾಪಿಸಿ ಸಂಸ್ಥಾನಗಳ ಜನತಾ ಹಿರಿಷತ್ತಿನ ಸೂಚನೆಯಂತೆ ಆಡಳಿತ ನಡೆಸಬೇಕೆಂದು ಸೂಚಿಸಲಾಗಿದೆ. ದೇಶದಲ್ಲಿ ಕೋಮುವಾರು ಸಂಸ್ಥೆಗಳಿಗೆ, ಖಾಸಗಿ ಸೇನೆಗಳಿಗೆ ಪ್ರೋತ್ಸಾಹಕೊಡದೆ ಧರ್ಮದ ಹೆಸರಿನಲ್ಲಿ ರಾಷ್ಟ್ರೀಯ ಹಿತಚಿಂತನೆಗೆ ತೊಡರುತರುವ ಸಂದರ್ಭಗಳು ಬಾರದಂತೆ ವರ್ತಿಸಬೇಕೆಂದೂ ನಿರ್ಣಯಿಸಲಾಗಿದೆ. ಕೇವಲ ಸಂಕಾರಪ್ಪೊಂದೇ ಸೇನೆ, ಪೊಲೀಸು ಯೂ ವಾಲಂಟಿಯರ್ ದಳಗಳನ್ನು ಇಡಬೇಕಲ್ಲದೆ ಯಾವ ಖಾಸಗಿ ಸಂಸ್ಥೆಯೂ ಇವನ್ನು ಇಡಕೂಡದೆಂದು ನಿರ್ಬಂಧಿಸುವ ಈ ರಠಾವು ಸಮಂಜಸವಾದದ್ದು. ಖಾಸಗಿ ಸಂಸ್ಥೆಗಳು ಈ ನಿರ್ಣಯದಲ್ಲಿ ಸಹಕರಿಸಿ ವರ್ತಿಸಬೇಕಾದುದು ಅತ್ಯವಶ್ಯವಾಗಿದೆ.

ಕಡೆಯದಾಗಿ ಆಹಾರ ಮತ್ತು ಬಟ್ಟೆಯ ಮೇಲಿರುವ ನಿಯಂತ್ರಣವ ವಿಚಾರದ ರಠಾವು ಚರ್ಚಿಸಲ್ಪಟ್ಟಿತು ನಿಯಂತ್ರಣದಿಂದ ಲಾಭಬಡಕತನ, ಕಪ್ಪು ಸಂತೆ ಇವುಗಳಿಗೆ ಎಡೆ ಇರಬಹುದಾದರೂ ನಿಯಂತ್ರಣವನ್ನು ತೆಗೆದು ಹಾಕುವುದರಿಂದ ಆಹಾರ ಪದಾರ್ಥಗಳನ್ನು ಬೆಳೆಸುವ ವಿಚಾರಕ್ಕೆ ಪ್ರೋತ್ಸಾಹ ದೊರೆಯಬಹುದಾದರೂ ನಿಯಂತ್ರಣವನ್ನು ಏಕಾ ಏಕಿ ತೆಗೆದು ಹಾಕುವುದರಿಂದ ಕೃಯಕ್ಕೆ ನಡೆದು ಊಟ ಮಾಡುವವರಿಗೆ ವಿಪರೀತ ತೊಂದರೆಯಾಗುವುದು. ಮಳ್ಳುಗರಿಗೆ ಜೀವನ ಕಠಿಣವಾಗುವದು. ಆದ್ದರಿಂದ ಕಾಂಗ್ರೆಸ್ ಸಮಿತಿಯು ಸಾರ್ವಜನಿಕ ಹಿತಕ್ಕೆ ತೊಂದರೆ ಬಾರದಂತೆ ಕ್ರಮಕಃ ನಿಯಂತ್ರಣವನ್ನು ತೆಗೆಯುವ ಸೂಚನೆಯಿತ್ತುದು ಯುಕ್ತವಾಯಿತು ಕಾಂಗ್ರೆಸ್ಸಿನ ನಿರ್ಣಯಗಳು ಮಹತ್ವಪೂರ್ಣವಾದುವು. ಈ ಸಂದಿಗ್ಧ ಸಮಯದಲ್ಲಿ ದೇಶೀಯರಿಗೆ ಎ. ಐ. ಸಿ. ಸಿ. ಯು ಯುಕ್ತ ಮಾರ್ಗ ತೋರಿಸಿದೆ.

ವರ್ತಮಾನ.

ಈ ನವಂಬರು ತಾರೀಕು ೨೬ನೇ ಗುರುವಾರ ದಿನ ಶ್ರೀ ಇಗ್ಗುತ್ತಪ್ಪ ದೇವರ ಕಲಾಷ್ಟ ಹೆಬ್ಬಪ್ಪ, ೩೮ ನೇ ಶುಕ್ರವಾರ ರೋಹಿಣಿ ನಕ್ಷತ್ರದಲ್ಲಿ ರಾತ್ರೆ ೮ ಗಂಟೆಗೆ ನೆರೆ ಕಟ್ಟಿಸಲೂ, ೯ ಗಂಟೆಗೆ ಕದುರು ತೆಗೆಯುವದೂ ೧೦ ಗಂಟೆಗೆ ಭೋಜನ ಮಾಡುವದು ಶ್ರೇಯಸ್ಕರವೆಂದೂ, ಸೂರಣಿ ದಿನ ನಾಡು ಪೆಣ್ಣೆಂದೂ ಪ್ರಕಟಿಸಲಾಗಿದೆ.

ತಾ. ೧೪-೧೧-೪೭ರಲ್ಲಿ ಕೋತೂರು ಗ್ರಾಮಸ್ಥರು ಶ್ರೀಮತಿ ಕೊಡಂದೆರ ಗಂಗಮ್ಮ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ದೇವಸ್ಥಾನದಲ್ಲಿ ಪೂಜೆ ನಡೆಸಿ ಜವಾಹರರ ಜಯಂತಿಯನ್ನು ಆಚರಿಸಿದರು. ಶ್ರೀಗಳಾದ ಕೆ. ಎಂ ಸುಬ್ಬಯ್ಯ, ಎಚ್. ಎಂ. ನಂಜುಮಲ್ಲಯ್ಯ, ಪಿ. ಎ ವಿಶ್ವನಾಥ ಇವರೂ ಶ್ರೀಮತಿಯರಾದ ಭಾಗೀರಥಿಭಾಯಿ, ರಾಧಾಬಾಯಿ ಇವರೂ ಜವಾಹರರ ಆದರ್ಶ ಜೀವನದ ವಿಚಾರ ನಿವೇದಿಸಿದರು.

ಸೈನ್ಯದಲ್ಲಿ ನೈಸರ್ಗಾಯರ ಕಮಿಷನ್ ಪಡೆದಿದ್ದ ಶ್ರೀಗಳಾದ ಬಡ್ಡಿರ ಪಿ. ಬಿದ್ದಪ್ಪ ಮಂತ್ರ ಮಾರುವಂಡ ಡಿ. ತಿಮ್ಮಯ್ಯ ಇವರಿಬ್ಬರನ್ನೂ ಪೊಲೀಸ್ ಸಬ್ ಇನ್ಸ್‌ಪೆಕ್ಟರಾಗಿ ಆಯಲಾಗಿದೆಯೆಂದೂ ಅವರು ಡೆಲ್ಲಿಯಲ್ಲಿ ತರಬೇತಿ ಹೊಂದುತ್ತಿರುವರೆಂದೂ ತಿಳಿಯಬಂದಿದೆ.

ಗೋವಿಂದರಾಯ ಎಂಬುವ ೧೨ ರೇಶನ್ ಪಾನೂನಿಗೆ ವಿರುದ್ಧವಾಗಿ ತಿಳಿ ಸೇರು ಅಕ್ಕಿಯನ್ನು ಪೊನ್ನಂಪೇಟೆಯಲ್ಲಿ ಸ್ಥಳೀಯರೊಬ್ಬರಿಂದ ಪಡೆದುಕೊಂಡಿದ್ದಕ್ಕೆ ದೇಶನ್ ಪಾನೂನು ೧೧ನೇ ಶರತ್ತಿನಂತೆ ತಕ್ಸೀರು ನಡಿಸಿ ಅವರಿಗೆ ವೀರಾಜಪೇಟೆ ಮುನ್ಸೀಪಲು ರೂ. ೩೦ ಜುಲ್ಮಾನೆ ಮಾಡಿರುವರೆಂದು ತಿಳಿಯುತ್ತೀನೆ.

ಕೊಡಗು ಪ್ರಗತಿಪರ ಸಾಹಿತ್ಯ ಸಂಘದ ಉದ್ಘಾಟನ ಸಮಾರಂಭವು ಡಿಸೆಂಬರ್ ತಾರೀಕು ೬ರಲ್ಲಿ ಕೊಡಗು ಬೋರ್ಡ್ ಕಮಿಷನರವರ ಅಧ್ಯಕ್ಷತೆಯಲ್ಲಿ ಸೆಂಟ್ರಲ್ ಹೈಸ್ಕೂಲ್ ಮಾಲ್ಕಿನಲ್ಲಿ ನಡೆಯುವದ.

ಕೊಡಗು ನಾನಾಗಜೆಟೆಡ್ ಉದ್ಯೋಗಸ್ಥರ ವಿಶೇಷ ಮಹಾ ಸಭೆಯು ತಾ. ೯-೧೧-೪೭ರಲ್ಲಿ ನಡೆದು ಸೆಂಟ್ರಲ್ ಪೇ ಕಮಿಷನಿನಿಂದ ವಿಸ್ತಾರಸ್ಸಿನಂತೆ ಸಂಬಳವನ್ನು ಹೆಚ್ಚಿಸಬೇಕೆಂತಲೂ, ಇದನ್ನು ಕೊಡಲು ತಡವಾದರೆ ಮೂರು ತಿಂಗಳ ಸಂಬಳ ಮುನ್ನೂರು ರೂಪಾಯಿಗಳಿಗೆ ಏರುವೆ ಮುಂಗಡವಾಗಿ ಕೊಡಬೇಕೆಂತಲೂ, ಜೀವಿನ ದರದಲ್ಲಿ ಸಂಬಳ ದೊರೆಯದಿದ್ದರೆ ಹೊಸ ಸಂಬಳವನ್ನು ಯಾವ ಉದ್ಯೋಗಸ್ಥನೂ ಹೊಂದಿಕೊಳ್ಳದೆ ಮುಂದಿನ ಮಹಾ ಸಭೆಯು ಏರ್ಮಾನಿಸಿದಂತೆ ನಡೆಯಬೇಕೆಂದೂ ತೀರ್ಮಾನಿಸಿರುವರು.

ಕಳೆದ ತಾರೀಕು ೧೬ನೇ ಆದಿತ್ಯವಾರ ದಿನ ಹಿಂದೂ ಸಂಘಟನೆ ಮತ್ತು ಪೈದಿಕ ಧರ್ಮದ ಪುನರುದ್ಧಾರದ ಉದ್ದೇಶದಿಂದ ಮಡಿಕೇರಿ ಮಹಾದೇವಪೇಟೆಯಲ್ಲಿ ಶ್ರೀ ಸ್ವಾವಿಶದಾನಂದಸರಸ್ವತಿಯವರ ಹಸ್ತದಿಂದ ಆರ್ಯ ಸಮಾಜವನ್ನು ಸ್ಥಾಪಿಸಲಾಗಿದೆ.

ನಾಪೋಕ್ಲು ತಾಲೂ ವಿದ್ಯಾರ್ಥಿಗಳು ನೆಹರೂ ಜಯಂತಿಯನ್ನು ತಾ. ೧೫ ರಲ್ಲಿ ಆಚರಿಸಿದರು. ಶ್ರೀಗಳಾದ ಎಂ. ಆರ್. ತಿಮ್ಮಪ್ಪಯ್ಯ ಮತ್ತು ಪಿ. ನೂದಯ್ಯ ಇವರುಗಳು ಭಾಷಣಮಾಡಿದರು.

"ಅಹಿಂಸೆಯು ಆಚರಣೆಗೆ ಅಸಾಧ್ಯವಾದದು" ಎಂಬ ವಿಚಾರದಲ್ಲಿ ಮಡಿಕೇರಿ ಹೈಸ್ಕೂಲ್ ಹಾರ್ಲ್‌ನಲ್ಲಿ ರಾ. ಬ. ಕೆ. ಜಿ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ತಾ. ೨೦ ರಲ್ಲಿ ಪ್ರಾರಂಭವಾದ ಸಾರ್ವಜನಿಕ ಚರ್ಚೆಯು ಆ ದಿನಕ್ಕೆ ಮುಗಿಯದೆ ತಾ. ೨೩ನೇ ಆದಿತ್ಯವಾರ ಮಧ್ಯಾಹ್ನ ೩½ ಗಂಟೆಗೆ ಮುಂದಂಪಲ್ಲಟ್ಟಿದೆ.

ಹಿಂದೂದೇಶಕ್ಕೆ ಸ್ವಾತಂತ್ರ್ಯ ಬಂದ ಸಂತೋಷಕ್ಕಾಗಿ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದಲ್ಲಿ ಈ ವರ್ಷ ವಿಶೇಷ ವ್ಯಾಧ್ಯನೆಯ ವಿಸರ್ಜನೆ ಮಾಡುವ ದೃಷ್ಟಿಯಿಂದ ಸಾರ್ವಜನಿಕರ ನೆರವನ್ನು ಆ ವೇಷಲಾಗಿದೆ. ಸಕ್ಕರೆ ವಿತರಣೆಯ ತಪ್ಪೊತ್ತಿವನ್ನಕ್ಕೆ ರೂ. ೫೦, ಸಕ್ಕರೆ ಇಲ್ಲದೆ ತಿಪ್ಪೋತ್ತಿವನ್ನಕ್ಕೆ ರೂ. ೩೫ ಖರ್ಚುತಗಲು ವದಂತೆ.

ವೀರಾಜಪೇಟೆ ಸೆಂಟರಿನಿಂದ ನಿರಾಶ್ರಿತರ ನಿಧಿಗೆ ರೂ. ೧೩೭-೮-೦ ಸಂಗ್ರಹವಾದದ್ದನ್ನು ಕೇಂದ್ರ ನಿರಾಶ್ರಿತರ ಸಮಿತಿಗೆ ಕಳುಹಿಸಲಾಗಿದೆಯೆಂದು ವಾರ್ತೆ.

ಭಾರತ ಕೀರ್ತಿವರ್ಜಿ ಪಂಡಿತ ಜವಾಹರಲಾಲರ ಜನ್ಮದಿನಾಚರಣೆಯನ್ನು ತಾ. ೧೪-೧೧-೪೭ರಲ್ಲಿ ವೀರಾಜಪೇಟೆಯವಿದ್ಯಾರ್ಥಿಕಾಂಗ್ರೆಸ್ಸಿನವರು ಆಚರಿಸಿದರು. ಪ್ರಭಾತ ಫೇರಿಯಿಂದ ಮಾರ್ನಿಂಗ್ ವೈದ್ಯನಪಲ್ಲಿ "ಕೊಡಗು" ಪತ್ರಿಕೆಯ ಏಜಂಟರಾದ ಶ್ರೀ ಕೆ. ಯಂ. ಸುಬ್ರಾಯರಿಂದ ಧ್ವಜಾರೋಹಣವಾಯಿತು. ಆನೆಯ ಮೇಲೆ ನೆಹರೂರವರ ಭಾವಚಿತ್ರ ರಾಷ್ಟ್ರ ಧ್ವಜದಿಂದ ಮೆರವಣಿಗೆಯಾಯಿತು. ಮಧ್ಯಾಹ್ನದ ಮೇಲೆ ಮುಖ್ಯೋಪಾಧ್ಯಾಯರಾದ ಶ್ರೀ ಗಣೇಶರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀಗಳಾದ ವಿ. ರಂಗರಾವ್ ಬಿ ಯಂ ಕಾರ್ಯಪ್ಪ ನಾಯಿಡ ಚಿಣ್ಣಪ್ಪ, ಶ್ರೀ ಯಂ. ಯಸ್. ರಾಮಚಂದ್ರಶರ್ಮ ಇವರುಗಳು ವಿದ್ಯಾರ್ಥಿ ಕಾಂಗ್ರೆಸ್ಸಿನ ಉದ್ದೇಶಗಳ ಬಗ್ಗೆ ವಿಚಾರ ಮಂಡಿಸಿದರು. ಸಾಯಂಕಾಲ ೪ ಗಂಟೆಗೆ ಸಭೆ ಸೇರಿ ಶ್ರೀಗಳಾದ ಎಂ. ಎ, ಎಲ್‌ಎಲ್. ಬಿ., ವಕೀಲ್, ತಾ. 20-11-47. ವೀರಾಜಪೇಟೆ.

ನೋಟೀಸು.

(I) ವೀರಾಜಪೇಟೆನಾಡು ಅಂಬಟ್ಟಿ ಗ್ರಾಮದಲ್ಲಿ ಎಂದರೆ ವೀರಾಜಪೇಟೆಯಿಂದ ಬರೇ ಎರಡು ಮೈಲು ದೂರದಲ್ಲಿ ಏಳು ನೂರು ಬಟ್ಟಿ ಒಳ್ಳೆಯ ವೀರಾವರಿ ಭೂಮಿ ಮತ್ತು ಇದಕ್ಕೆ ಸೇರಿದ ಹನ್ನೆರಡು ಏಕರು ಬಾಣಿ. ಕ್ರಯ ಹನ್ನೆರಡು ಸಾವಿರ ರೂ ಪಾಯಿ ಯೂ ಇದರ ಸಮೂಪ.

(2) ವೀರಾಜಪೇಟೆ ನುಂಸ್ಸಿಪಾಲಿಟಿಯೊಳಗೆ ಮೂರ್ಕೆಟ್ಟಿನ ಒತ್ತಿನಲ್ಲಿ ಅಂದಾಜು 10,500 ರೂ. ಕ್ರಯ ಬಾಳುವ ಎಂಟು ಕುಟುಂಬಗಳು ವಾಸಕ್ಕೆ ಅನುಕೂಲವಾಗಿ ನ್ಯಾಯವಾಗಿ ಬಾಡಿಗೆ ಬರುತ್ತಿರುವ ಕಟ್ಟಡವೂ ಇದರ ಹಿಲ್ಲಿನಲ್ಲಿ ಒಂದು ಏಕರು ರೊಬನ್ಟಾ ಕಾಫಿ ತೋಟವೂ ಮಾರಾಟಕ್ಕಿದೆ.

ಕೊಂಡುಕೊಳ್ಳುವ ಪಾರ್ಟಿಸ್‌ದಾರರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳತಕ್ಕದ್ದು

ಮಿಸೆಸ್ ಬೆಳ್ಳಿಯಪ್ಪ
3-1 **ಪೊನ್ನಪ್ಪಸ್**
C/o. ಕೆ. ಪಿ. ಶಂಬುಬಯ್ಯನವರು,
ಎಂ. ಎ, ಎಲ್‌ಎಲ್. ಬಿ., ವಕೀಲ್,
ತಾ. 20-11-47. ವೀರಾಜಪೇಟೆ.

ಸಂಸ್ಥಾನಗಳಲ್ಲಿಯ ಕಿರುಕುಳ

ಜುನಾಗಡ.

ಜುನಾಗಡದ ನವಾಬರು ತಮ್ಮ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಿದ ಕಾರಣ ದೇಶದಲ್ಲಾದ ಗಲಭೆ ಒಂದೆಡೆ, ಹಿಂದೀ ಒಕ್ಕೂಟವು ಜುನಾಗಡದರಕ್ಷಣೆಗಾಗಿ ಕೈಕೊಂಡ ಕಾರ್ಯಕಲಾಪಗಳನ್ನು ಇನ್ನೊಂದೆಡೆ ನೋಡಿಯೇ ಎಂಬಂತೆ ಪಾಕಿಸ್ತಾನಕ್ಕೆ ಹೋಗಿದ್ದರು ಅವರ ಮುಖ್ಯಮಂತ್ರಿಯವರೂ ಹೋಗಿದ್ದರು. ಜನತೆಯು ಅಭಿಪ್ರಾಯಕ್ಕೆ ವಿರುದ್ಧವಾಗಿ ರಾಜರು ವರ್ತಿಸಿದರಿಂದ ಅಲ್ಲಿಯ ಪ್ರಜಾವರ್ಗವು ಗಾಂಧೀ ಕುಟುಂಬದವರಾದ ಶ್ಯಾಮಲದಾಸ ಗಾಂಧೀಯವರ ನೇತೃತ್ವದಲ್ಲಿ ಜುನಾಗಡದ ಹಳ್ಳಿ ಹಳ್ಳಿಗಳನ್ನು ಆಕ್ರಮಿಸುತ್ತಾ ಜುನಾಗಡದಲ್ಲಿ ತಮ್ಮದೇ ತಾತ್ಕಾಲಿಕ ಸರಕಾರವನ್ನು ರಚಿಸಿದ್ದರು. ಇವರ ಸಂಡಯೂತ್ಪಯು ಬಹು ಬಿರುಸಿನಿಂದ ನಡೆಯುತ್ತಿತ್ತು. ಇಷ್ಟರಲ್ಲಿ ವಿಚಿತ್ರ ರೀತಿಯಲ್ಲಿ ಜುನಾಗಡದ ರಾಜರು ಹಿಂದೀ ಒಕ್ಕೂಟದ ಸಹಾಯವನ್ನು ಯಾಚಿಸಿ ಜುನಾಗಡವನ್ನು ರಕ್ಷಿಸಬೇಕೆಂದು ಬೇಡಿಕೊಂಡರು. ಭಾರತದ ಸೇನೆಗಳ ರಾಜಕೋಟ್ ರೀಜಿನಲ್ ಕಮಿಷನರ ನೇತೃತ್ವದಲ್ಲಿ ಜುನಾಗಡ ಆಡಳಿತವನ್ನು ವಶಪಡಿಸಿಕೊಂಡವು. ಭಾರತ ಸರ್ಕಾರವು ಕಳುಹಿಸಿದ ಸೇನೆಯನ್ನು ಜುನಾಗಡದ ಜನತೆಯು ಆದರದಿಂದ ಸ್ವಾಗತಿಸಿತು. ಜುನಾಗಡವು ಹಿಂದೀ ಒಕ್ಕೂಟಕ್ಕೆ ಸೇರಿಹೋಯಿತು.

ಹೈದರಾಬಾದ್.

ಹೈದರಾಬಾದು ಒಂದು ಕಡೆ ಹಿಂದೀ ಒಕ್ಕೂಟದೊಡನೆ ಸಂಧಿಯ ಮಾತುಕತೆ ನಡೆಸುತ್ತಿದ್ದರೂ ಮತ್ತೊಂದೆಡೆ ತನ್ನ ಸಿದ್ಧತೆಗಳನ್ನು ವಿಸ್ತೃತ ರೀತಿಯಿಂದ ನಡೆಸುತ್ತಿದೆ. ಸಂಧೀ ಪ್ರಯತ್ನವು ನಿಷ್ಫಲವಾದ ಕಾರಣ ಮುಖ್ಯ ಮಂತ್ರಿಯಾಗಿದ್ದ ಛತಾರಿನ ನವಾಬರು ರಾಜನಾಮೆ ಕೊಟ್ಟರು. ಪುನಹ ಒಂದು ಸಂಧಿ ಪ್ರಯತ್ನಕ್ಕಾಗಿ ಮೀರ್ ನವಾಬ್‌ಜಂಗ್, ಆಲ್ಬುರ್ಕರ್ಹೀಮ್ ಮತ್ತು ಪಿ. ವೆಂಕಟರಾಮರೆಡ್ಡಿ ಇವರುಗಳಿಂದ ಕೂಡಿದ ಸಮಿತಿಯೊಂದನ್ನು ನವಾಬರು ನೇಮಿಸಿದ್ದರು. ಇದರ ಪ್ರಯತ್ನವೂ ಹೆಚ್ಚು ಸಫಲವಾಗುವಂತೆ ತೋರಿಬರುವದಿಲ್ಲ. ಹೈದರಾಬಾದ್ ಸಂಸ್ಥಾನವು ತನ್ನ ನಿರಂಕುಶ ಸ್ವಾಮಿತ್ವವನ್ನು ಇಟ್ಟುಕೊಂಡು ಸ್ವತಂತ್ರ ರಾಜ್ಯವಾಗಲು ಬಯಸುತ್ತಿರುವದರಿಂದ ಹಿಂದೀ ಒಕ್ಕೂಟವು ಈ ಸಂಧಾನಗಳಿಗೆ ಒಪ್ಪಿಲ್ಲ. ಒಂದೆಡೆ ಈ ರೀತಿ ಸಂಧಾನ ಪ್ರಯತ್ನವಾದರೆ ಮತ್ತೊಂದೆಡೆ ಹೈದರಾಬಾದು ಯುದ್ಧ ಸಿದ್ಧತೆಯನ್ನು ಮಾಡತೊಡಗಿದೆ. ತನ್ನ ಮುಖ್ಯ ಸೇನಾನಿಯನ್ನು ಇಂಗ್ಲೆಂಡಿಗೆ ಕಳುಹಿಸಿ ಯುದ್ಧ ಸಾಮಗ್ರಿಗಳನ್ನು ತರಿಸುತ್ತಿದೆ. ಪ್ರತಿ ವರ್ಷ ತನ್ನ ಸೈನ್ಯ ಖರ್ಚಿಗಾಗಿ ಹೈದರಾಬಾದು ೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತಿತ್ತು. ಈವರ್ಷ ಈ ಬಾಬಿಗೆ ೬ ಕೋಟಿ ರೂಪಾಯಿಗಳನ್ನು ಬಜೆಟ್ಟಿನಲ್ಲಿಟ್ಟಿದೆ.

ಹಿಂದೂದೇಶದ ಉಪಪ್ರಧಾನರಾದ ಸರ್ದಾರ್ ಪಟೇಲರು ಹೈದರಾಬಾದ್ ನವಾಬರಿಗೆ ಬುದ್ಧಿವಾದ ಹೇಳುತ್ತಾ ಇಂದಿನಂತೆ ವಿರೋಧ ನೀತಿಯನ್ನು ಸರಸಿದರೆ ಜುನಾಗಡ ನವಾಬರಂತೆ ದಿಕ್ಕೆಟ್ಟು ಓಡಿಹೋಗುವ ಪರಿಸ್ಥಿತಿ ಬಂದೀತೆಂದೂ, ತಮ್ಮ ಆರಸುತನವನ್ನು ಕಳೆದುಕೊಳ್ಳಬೇಕಾದೀತೆಂದೂ ಎಚ್ಚರಿಸಿರುವರು ಹೈದರಾಬಾದ್ ಸರಕಾರವು ಗೋವಾ ಮತ್ತು ಪೊಂಚಲಿಪಟ್ಟಣಗಳನ್ನು ಬಂದರುಗಳಾಗಿ ತನಗೆ ಬೇಕೆಂದು ಕೇಳಿದಮದಕ್ಕೆ ಉತ್ತರವಾಗಿ ಇದೇನು ನವಾಬರ ವಿಕ್ರಾರ್ಜಿತ ಆಸ್ತಿಯಲ್ಲವೆಂದು ಸರ್ದಾರರು ಉತ್ತರಿಸಿದ್ದಾರೆ.

ತ್ರಿಪುರ ಸಂಸ್ಥಾನ.

ಪೂರ್ವ ಬಂಗಾಳದಲ್ಲಿರುವ ಮತ್ತು ಹಿಂದೀ ಒಕ್ಕೂಟಕ್ಕೆ ಸೇರಿದ ತ್ರಿಪುರಿ ಎಂಬ ಸಂಸ್ಥಾನದಲ್ಲೂ ಮುಸ್ಲಿಮರು ತಮ್ಮ ಕಿರುಕುಳ ಪ್ರಾರಂಭಿಸಿರುವರು. ಈ ಸಂಸ್ಥಾನಕ್ಕೆ ಸೇರುವ ಹಲವು ಜಮೀನ್ದಾರಿಗಳ ರೈತರುಗಳು ತಮ್ಮ ಕುಂದುಕೊರತೆ ಸರಿಪಡಿಸಿಕೊಳ್ಳಲು ಹೂಡಿದ ಚಳವಳವನ್ನು ಉಪಯೋಗಿಸಿಕೊಂಡು ಕೆಲವು ದೌರ್ಜನ್ಯಕಾರೀ ಜನರು ಸಂಸ್ಥಾನದೊಳಕ್ಕೆ ನುಗ್ಗಿದುದಲ್ಲದೆ ಈ ಸಂಸ್ಥಾನ ಪಾಕಿಸ್ತಾನಕ್ಕೆ ಸೇರಬೇಕೆಂದೂ ಚಳವಳ ಪ್ರಾರಂಭಿಸಿರುವರು. ತ್ರಿಪುರದ ರಾಣಿಯವರು ತಮ್ಮ ಸಂಸ್ಥಾನದ ಭವಿಷ್ಯದ ಬಗ್ಗೆ ಭಾರತ ಸರಕಾರದೊಡನೆ ಮಾತುಕತೆ ಕಡೆಸಲು ತಮ್ಮ ಮುಖ್ಯಮಂತ್ರಿ ಶ್ರೀ. ಎಸ್. ಚಟರ್ಜಿಯವರೊಡನೆ ಡಿಲ್ಲಿಗೆ ಹೋಗಿದ್ದರು. ಈ ಸಂಸ್ಥಾನಕ್ಕೆ ಸಹಾಯಮಾಡಲು ಭಾರತ ಸೈನ್ಯಗಳು ಹೋಗಿವೆ.

ಕಾಶ್ಮೀರ.

ಕಾಶ್ಮೀರದಲ್ಲಿ ಯುದ್ಧ ಪೂರ್ಣವಾಗಲಿಲ್ಲ ಘಾಳಿಗಾರರು ಹಿಮ್ಮೆಟ್ಟಿ ಒಡ.ತ್ತಿರುವರು. ಗಡಿನಾಡಿನ ಮುಖ್ಯ ಮಂತ್ರಿ ಅಬ್ದುಲ್ ಕ್ವಯೂಮರವರ ಮಾತು ಕೇಳಿ ತಾವು ಘಾಳಿಮಾಡಿದ್ದು ಸರಿಯೂಗಲಿಲ್ಲವೆಂದು ಸೆರೆಸಿಕ್ಕಿದ ಅನೇಕರು ಹೇಳುತ್ತಿರುವರು. ಬರಮೂಲವನ್ನು ವಶಪಡಿಸಿಕೊಂಡ ಹಿಂದೀ ಸೈನ್ಯಗಳು ಮುಂದೊತ್ತಿ ಶ್ರೀನಗರದಿಂದ ೬೦ ಮೈಲುಗಳ ದೂರದಲ್ಲಿರುವ ಉರಿ ಎಂಬ ಸ್ಥಳವನ್ನು ಆಕ್ರಮಿಸಿರುವರು. ಘಾಳಿಗಾರರು ಜೀವಗಳ್ಳರಂತೆ ಒಡುತ್ತಿದ್ದಾರೆ. ಆದರೂ ಕಾಶ್ಮೀರ ಯುದ್ಧ ಮುಗಿದಂತಾಗಿಲ್ಲ

ಕಾಶ್ಮೀರದ ಜನರಿಗೆ ಅಭಯ ನೀಡುವ ದೃಷ್ಟಿಯಿಂದ ಪಂಡಿತ ಜವಾಹರರು ತಾ. ೧೯ರಲ್ಲಿ ಕಾಶ್ಮೀರಕ್ಕೆ ಹೋಗಿದ್ದರು. ಯುದ್ಧ ರಂಗಗಳನ್ನು ಕಣ್ಣಾರೆ ಪರೀಕ್ಷಿಸಿದರು. ಅಲ್ಲಿಯ ಹೆಂಗಸು, ಮಕ್ಕಳು ತಮ್ಮ ದುಸ್ಥಿತಿಯನ್ನು ನೆಹರೂರವರೊಡನೆ ಹೇಳಿ ಬಿಕ್ಕಿಬಿಕ್ಕಿ ಅತ್ತರು. ಶ್ರೀನಗರದಲ್ಲಿ ನೆಹರೂರವರಿಗೆ ಅತ್ಯಂತ ವೈಭವದ ಸ್ವಾಗತ ಕೊಡಲಾಯಿತು. ಕಾಶ್ಮೀರಕ್ಕೆ ನುಗ್ಗಿರುವ ಪಾಕಿಸ್ತಾನ ಘಾಳಿಕಾರರನ್ನು ಹಿಮ್ಮೆಟ್ಟಿಸಿದ ಮೇಲೆ ಹಿಂದೀ ಸೇನೆಗಳು ಕಾಶ್ಮೀರದಲ್ಲಿ ಅನಾವಶ್ಯಕವಾಗಿ ಒಂದು ಗಳಿಗೆಯೂ ಇರಲು ಇಷ್ಟಪಡುವುದಿಲ್ಲವೆಂದು ಪಂಡಿತರು ಹೇಳಿದರು. ಮೊನ್ನೆಯಷ್ಟೆ ಸರ್ದಾರ ಪಟೇಲರೂ ಕಾಶ್ಮೀರಕ್ಕೆ ಹೋಗಿದ್ದರು. ಕಾಶ್ಮೀರದ ಪರಿಸ್ಥಿತಿ ಹಿಡಿತಕ್ಕೆ ಬಂದಿದೆ. ಹಿಂದೀ ಸೈನಿಕರು ಈ ಯುದ್ಧದಲ್ಲಿ ಬಹಳ ದಕ್ಷತೆಯಿಂದ ಹೋರಾಡಿದರೆಂದೂ ನೆಹರೂ ಮತ್ತು ಪಟೇಲರು ಮುಕ್ತ ಕಂಠದಿಂದ ಹೊಗಳಿರುವರು.

ವಿನಂತಿ.

ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯದ ಪ್ರಗತಿಪರ ದೃಷ್ಟಿಯ ಲೇಖನಗಳನ್ನು, ವಿಜ್ಞಾನ, ಚಿಕ್ಕ ಕಥೆ, ಕವನ ಇತ್ಯಾದಿಗಳನ್ನು ಸದ್ಯದಲ್ಲಿಯೇ "ಕೊಡಗು ಪ್ರಗತಿಪರ ಸಾಹಿತ್ಯ ಸಂಘ"ದವರು ಹೊರಡಿಸಲಿರುವ ಮೂಸ ಪತ್ರಿಕೆಗೆ ಕಳುಹಿಸಲು ಇಚ್ಛಿಸುವವರು ಡಿಸೆಂಬರ್ ತಾ. ೭ರ ಒಳಗೆ ಕಳಿಗಿನ ಪತ್ರಿಕೆಗೆ ಕಳುಹಿಸಬೇಕಾಗಿ ಕೋರುತ್ತೇನೆ.

ಬಿ ಕೆ. ಎನ್. ಮೂರ್ತಿ,
ಗೌ. ಕಾರ್ಯದರ್ಶಿ,
ಪ್ರಗತಿಪರ ಸಾ. ಸಂಘ,
ಮಡಿಕೇರಿ.

WARDEN MARCHES AHEAD.

ANOTHER YEAR OF RECORD BUSINESS.

Youngest working on Surplus of Funds of Progress of the past three years:

Business	1944	1945.	1946.
Introduced: Rs.	1,20,57,513.	1,56,19,295.	2,04,53,277
Completed: Rs.	1,04,77,346	1,32,87,529.	1,72,12,480

WARDEN INSURANCE CO., Ltd.

H. O. BOMAY.

ORGANISATION ALL OVER INDIA, CEYLON & EAST AFRICA.

Wide scope for energetic young men as Agents, Special Agents and paid Organisers under our new Expansion Scheme

For particulars apply to:
P. C. Karambaya,
Brach Secretary.

Branch Office for Mysore State & Coorg:
142, Gandhinagar,
BANGALORE CITY.

ವಾರ್ಡನ್ ಇನ್‌ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಹೆಡ್ ಆಫೀಸ್:— ಬೊಂಬಾಯಿ)

ಮೈಸೂರು ಮತ್ತು ಕೊಡಗು ಶಾಖೆ:

V ಮೆಯಿನ್ ರೋಡ್ ಗಾಂಧಿ ನಗರ, ಬೆಂಗಳೂರು ಸಿಟಿ.

INSURE YOUR LIFE

WITH

The Premier Life and General Insurance Co., Ltd.

Head Office:—Premier Insurance Buildings Madras

DOUBLE & TREBLE INDEMNITY PARMANENT DISABILITY BENEFITS OFFERED WIT OUT ANY EXTRA PREMIUM WITH HOUSE PURCHASE BENEFIT

REVERSIONARY BONUS: 8 PER THOUSAND PER ANNUM.

WANTED.

Agents in all the unrepresented areas on most lucrative terms. For particulars, apply to:

INSPECTOR.
C/o. Post Master,
Napoklu, S Coorg

OR

T. RAMAMURTI.
B A., B. L., A. I. A.,
Manager & Actuary

ಸ್ತ್ರವ್ಯವಹಾರಗಳು ✻ ✻ ✻

ಸಾಹಿತ್ಯ ಸಂಘಗಳು.

ಕನ್ನಡ ಸಾಹಿತ್ಯ ಪ್ರಚಾರ ಕಾರ್ಯವು ಕರ್ನಾಟಕದ ಮೂಲೆ ಮೂಲೆಗಳಲ್ಲೂ, ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕವೂ ಮತ್ತು ಅದರ ಅಂಗಗಳಾದ ಪ್ರದೇಶ ಸಮಿತಿ ಮತ್ತು ಕರ್ನಾಟಕ ಸಂಘಗಳ ಮೂಲಕ ಇತೋಪ್ಯತಿಶಯವಾಗಿ ನಡೆದಿದೆ. ಜನರಲ್ಲಿ ಭಾಷಾಭಿಮಾನವೂ, ಸಾಹಿತ್ಯಭಿರುಚಿಯೂ ದಿನೇ ದಿನೇ ಹೆಚ್ಚುತ್ತಿರುವುದೂ, ಒಂದು ಶುಭಸೂಚನೆ. ಪ್ರಾಚೀನ ಮತ್ತು ಆಧುನಿಕ ಸಾಹಿತ್ಯಪರಿಚಯ ಸಾರ್ವತ್ರಿಕವಾಗಿ ಜನರಿಗಾಗಬೇಕೆಂಬ ಉದ್ದೇಶದಿಂದ ಉಪನ್ಯಾಸಗಳು, ಕಾವ್ಯವಾಚನಗಳು, ಸಾಹಿತೋತ್ಸವಗಳು ಅನೇಕ ಮುಖವಾಗಿ ಆಗುತ್ತಿವೆ. ಒಂದೆರಡು ದೊಡ್ಡ ನಗರಗಳಲ್ಲಿ ಹಲವಾರು ಸಾಹಿತ್ಯ ಸಂಸ್ಥೆಗಳು ಇದೂಂದೇ ಗುರಿಯಿಂದ ಆಯಾಯ ರಂಗಗಳಲ್ಲಿ ಉತ್ಸವ ಕಾರ್ಯಕ್ರಮಗಳನ್ನು ಕೈಕೊಂಡಿವೆ. ಹಿರಿಯ ಸಾಹಿತಿಗಳೂ ಇದರೊಡನೆ ಕಲೆತು ಕಿರಿಯರನ್ನು ಪ್ರೋತ್ಸಾಹಿಸಿ ಸಾಹಿತ್ಯಕಲೆಯನ್ನು ಬೆಳೆಸುತ್ತಿರುತ್ತಾರೆ.

ಕೊಡಗಿನಲ್ಲೂ ಮಡಿಕೇರಿ, ಸೋಮವಾರಪೇಟೆ ಮತ್ತು ವೀರಾಜಪೇಟೆಗಳಲ್ಲಿ ಕರ್ನಾಟಕ ಸಂಘಗಳು ಉಂಟಾಗಿ ಅವುಗಳ ಮೂಲಕ ಈಗ ಹತ್ತಾರು ವರ್ಷಗಳಿಂದ ಕನ್ನಡ ಭಾಷಾ-ಪರಿಚಯ ಮತ್ತು ಸಾಹಿತ್ಯ ಪರಿಚಯ ಸಾರ್ವತ್ರಿಕವಾಗಿ ಆಗುತ್ತಿರುವುದು ಸರ್ವರಿಗೂ ಸಂತೋಷವಾದ ವಿಷಯ. ಈ ಸಂಘಗಳು ಇನ್ನೂ ಶ್ರಮಿಸುತ್ತಾ ಇವೆ. ಇನ್ನೆಲ್ಲವು ಆಯಿತು ಕರ್ನಾಟಕ ಸಾಹಿತ್ಯಪರಿಷತ್ತಿನ ಅಂಗಸಂಸ್ಥೆಗಳಾಗಿ ಕೆಲಸ ನಡಾಯ್ತಿರಬೇಕು. ಇವುಗಳ ಕೆಲಸವು ಕೇವಲ ಸಾಹಿತ್ಯ ದೃಷ್ಟಿಯಿಂದ ಮಾತ್ರವಾಗಿರುವ ಕಾರಣ, ಫಲಿತಾಂಶವು ಅಷ್ಟಾಗಿ ಗೋಚರಕ್ಕೆ ಬಾರದಿರಬಹುದು. ಪುಸ್ತಕ ಪ್ರಕಟನಾ ಕಾರ್ಯವು ಈ ಸಂಸ್ಥೆಗಳ ಉದ್ದೇಶಗಳಲ್ಲಿ ಒಂದಾಗಿರುವುದಾದರೂ ಇದು ವರೆಗೂ ಪ್ರಚಾರ ಯೋಗ್ಯವಾದ ಪುಸ್ತಕಗಳು ಬಾರದಿದ್ದ ಪ್ರಯುಕ್ತ ಇದೊಂದು ಕೆಲಸ ಹಾಗೆಯೇ ಉಳಿದಿದೆ. ಆದರೂ ಈ ಕರ್ನಾಟಕ ಸಂಘಗಳ ಕಾರ್ಯಕಲಾಪಗಳು ಜನರಿಗೆ ಚೆನ್ನಾಗಿ ಪರಿಚಯವಾಗಿವೆ ಉತ್ತಮ ತರದ ಬರವಣಿಗೆಗಳನ್ನು ಸಾಹಿತ್ಯಪರಿಷತ್ತಿನ ಆಶ್ರಯದಲ್ಲಿ ಪ್ರಕಟಿಸಿ ಮಾಡಿ ಆ ಮುಖಾಂತರ ಲೇಖಕರು ಉತ್ತೇಜನಪಡೆಯುವುದಕ್ಕೂ ಅವ್ಕಾಶವಿದೆ. ಇದನ್ನು ಒತ್ತಿ ಹೇಳಬೇಕಾಗಿದೆ.

ಇತ್ತೀಚೆಗೆ ಮಡಿಕೇರಿಯಲ್ಲಿ 'ಅಖಿಲ ಕೊಡಗು ಪ್ರಗತಿಪರ ಸಾಹಿತ್ಯ ಸಂಘ' ಪೆಟ್ಟು ಜೆಸರಿನಿಂದ ಇನ್ನೊಂದು ಸಾಹಿತ್ಯ ಸಂಘದ ಜನನವಾಗಿದೆ. ಈ ಸಂಘದ ವ್ಯವಸ್ಥಾಪಕರು, ಪರಿಷತ್ತಿನ ಮತ್ತು ಕರ್ನಾಟಕ ಸಂಘಗಳ ಅಸ್ತಿತ್ವವನ್ನು ಅರಿತಿದ್ದರೂ ಅವರಲ್ಲಿ ಕೆಲವರು ಆವರ ಕೆಲಸ ಕಾರ್ಯಗಳಲ್ಲಿ ಬಿಂಗಗಳಾಗಿದ್ದರೂ, ಈ ಸಂಸ್ಥೆಗಳ ಅಧಿಕಾರ ವರ್ಗದಲ್ಲಿದ್ದರೂ ಅವುಗಳ ಇರವನ್ನೇ ಅರಿಯದವರಂತೆ ಹೊಸದಾದ ಪ್ರಕಟಣೆಗಳನ್ನು ಹೊರಡಿಸಿರುವುದು ಆಶ್ಚರ್ಯವಾಗಿರುತ್ತೆ. ಇವರ ಉದ್ದೇಶವು ಕನ್ನಡ, ಹಿಂದಿ, ಉರ್ದು, ಮತ್ತು ಇಂಗ್ಲಿಷ್ ಭಾಷಾಸಾಹಿತ್ಯ ಪ್ರಚಾರ ಕಾರ್ಯವಾದರೂ, ಕನ್ನಡ ಸಾಹಿತ್ಯ ಸೇವೆಯು ಕನ್ನಡ ಪರಿಷತ್ತು ಮತ್ತು ಸಂಘಗಳ ಮುಖೇನ ಆಗುತ್ತಿರುವ ಪ್ರಯುಕ್ತ ಇದಕ್ಕೆ ಎದುರಾಗಿ ಇಷ್ಟು ಚಿಕ್ಕ ಕ್ಷೇತ್ರದಲ್ಲಿ ಮತ್ತೊಂದು ಸಂಘ ನಿರ್ಮಾಣಮಾಡಿ ನೈಮನಸ್ಸು ಬೆಳೆಸಲು ಪ್ರಯತ್ನಿಸುತ್ತಿರುವುದು ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಹಿತಕರವಲ್ಲವೆಂದು ಹೇಳಬೇಕಾಗಿದೆ. ಇದರ ವ್ಯವಸ್ಥಾಪಕರು ಪರಿಷತ್ತು ಮತ್ತು ಕರ್ನಾಟಕ ಸಂಘಗಳಲ್ಲಿಯೇ ಈ ಧ್ಯೇಯವನ್ನು ಮುಂದುವರಿಸಿ, ಕನ್ನಡ ಭಾಷಾ ಸೇವಾ ಕಾರ್ಯವನ್ನು ಇನ್ನೂ ಅಮೋಘವಾಗಿ ಮಾಡಲು ಅವಕಾಶವಿದೆ. ಆದರೆ ಈ ಪ್ರತಿಸ್ಪರ್ಧೆಯು ಯಾವುದಾದರೂ ಒಂದು ಸಂಸ್ಥೆಗೆ ಧಕ್ಕೆ ಉಂಟುಮಾಡಬಹುದೆಂಬ ಶಂಕೆಯನ್ನು ದಾರದಿರದು.

ಇಂಗ್ಲಿಷ್ ಸಾಹಿತ್ಯ ವಿಶ್ವಸಾಹಿತ್ಯವಾಗಿದ್ದ ಅದರ ವಿಸ್ತಾರ, ಪ್ರಪಂಚ ವಿಸ್ತಾರವಾಗಿರುವ ಪ್ರಯುಕ್ತ ಅವಕ್ಕೆ ಯಾವ ಸಂಘಗಳ ಸೇವೆಯೂ ಬೇಕಾಗಿಲ್ಲ. ಹಿಂದೀ ಪ್ರಚಾರ ಕಾರ್ಯಕ್ಕೆ ಪ್ರತ್ಯೇಕ ಸಂಘವೇ ಇದೆ. ಆದ ಕಾರಣ ಈ ಪ್ರಗತಿಪರ ಸಾಹಿತಿಗಳು ತಮ್ಮ ಕಾರ್ಯವನ್ನು ಪರಿಷತ್ತು ಮತ್ತು ಕರ್ನಾಟಕ ಸಂಘಗಳ ಮೂಲಕ ಮುಂದುವರಿಸಬೇಕೆಂದು ನಮ್ಮ ವಿನಯದ ಪ್ರಾರ್ಥನೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧವಾ ಕರ್ನಾಟಕ ಸಂಘದ ಕಾರ್ಯಗಳು ಅವರು ಬೇಳುವಂತೆ ಸಂಕೀರ್ಣವಲ್ಲ; ವಿಶಾಲವೂ ವಿಸ್ತಾರವು ಆಗಿದೆ.

ಕು. ವೆಂ. ನಾರಾಯಣರಾವ್.
ಗೌ. ಕಾರ್ಯದರ್ಶಿ,
ಕೊಡಗು ಕರ್ನಾಟಕ ಸಂಘ ಮಡಿಕೇರಿ.

ಪೋಷಕರ ದಿನಾಚರಣೆ.

ಮಡಿಕೇರಿ ಹೈಸ್ಕೂಲಿನ ವಿದ್ಯಾರ್ಥಿ ನಿವಾಸಗೃಹದಲ್ಲಿ ಪೋಷಕರ ದಿನಾಚರಣೆಯನ್ನು ತಾ. ೯-೧೧ ೬೭ ರಲ್ಲಿ ಆಚರಿಸಲಾಯಿತು. ಈ ದಿನಾಚರಣೆಗೆ ಪೋಷಕರು ಕೊಡಬೇಕಿದ್ದಷ್ಟು ಪ್ರೋತ್ಸಾಹ ಕೊಡಲಿಲ್ಲವೆಂದು ನನಗನಿಸಿತು. ಪೋಷಕರ ದಿನಾಚರಣೆಯ ತತ್ವವನ್ನು ಪ್ರತಿಯೊಬ್ಬನೂ ಒಪ್ಪಿಕೊಳ್ಳಬೇಕು. ಪ್ರತಿಯೊಬ್ಬ ಪೋಷಕನೂ ನಿವಾಸಗೃಹಕ್ಕೆ ಹೋಗಿ ವಿದ್ಯಾರ್ಥಿಗಳಿಗೆ ಯಾವ ವ್ಯವಸ್ಥೆಯಿದೆ; ಅವರ ಸರಿಸ್ಥಿತಿಯನ್ನು ಯಾವ ರೀತಿ ಸುಧಾರಿಸಬಹುದು ಎಂಬುದನ್ನು ಪರಿಶೀಲಿಸಿ ಸಂಚಾಲಕರಿಗೆ ಯೋಗ್ಯ ಸಲಹೆಕೊಟ್ಟು ವಿದ್ಯಾರ್ಥಿಗಳ ಪುರೋಭಿವೃದ್ಧಿಯಲ್ಲಿ ಸಹಕರಿಸಬೇಕಾದುದು ಕರ್ತವ್ಯವಾಗಿದೆ. ಇದಕ್ಕೆ ಅನುವನ್ನು ಮಾಡಿದ ಮಡಿಕೇರಿ ವಿದ್ಯಾರ್ಥಿ ನಿವಾಸಗೃಹದ ಮೊದರಿಯನ್ನು ಇತರ ಶಾಲೆಗಳ ವಿದ್ಯಾರ್ಥಿ ನಿವಾಸಗೃಹದ ಕಾರ್ಯಕರ್ತರು ಅನುಸರಿಸಬೇಕು. ಮಕ್ಕಳನ್ನು ಬೋರ್ಡಿಂಗಿನಲ್ಲಿ ಸೇರಿಸಿಬಿಟ್ಟಾಕ್ಷಣ ತಂದೆ ತಾಯಂದಿರ ಜವಾಬ್ದಾರಿ ಮುಗಿಯಲಿಲ್ಲ. ಪೋಷಕರು ಇನ್ನಾದರೂ ತಮ್ಮ ಮಕ್ಕಳ ಹಿತದೃಷ್ಟಿಯಿಂದ ಈ ವಿಚಾರಗಳಲ್ಲಿ ಆಸಕ್ತಿ ವಹಿಸಬೇಕಾಗಿದೆ.

'G.'

ಕಪ್ಪು ಸಂತೆ.

ಕಪ್ಪು ಸಂತೆಯ ಕೂಗು ಹಿಂದೂದೇಶದ ಉದ್ದಗಲಕ್ಕೂ ಇದೆ. ಕೊಡಗಿನಲ್ಲಿಯೂ ಅದರ ಹಾವಳಿ ಇಲ್ಲದೆ ಇಲ್ಲ. ಆಕರಾಷ್ಟ್ರೀಯ ರಂಗದಲ್ಲೂ ಕೂಡ ಕಪ್ಪು ಸಂತೆ ಇದೆ. ಯುದ್ಧಕಾಲದಲ್ಲಿ ಜೈನಾ ಕಮ್ಯೂನಿಷ್ಟರಿಗೆ ವಿಯದ್ದವಾಗಿ ಅವರಿಗೆ ಕಾವು ಸರಬರಾಯಿ ಮಾಡುತ್ತಿದ್ದ ಯುದ್ಧ ಸಾಮಗ್ರಿಗಳೂ ಕಪ್ಪು ಸಂತೆಯವೆ. ಇಂದು ಬ್ರಿಟನಿನಿಂದ ಹೈದರಾಬಾದಿಗೆ ಆಗುತ್ತಿರುವ ಯುದ್ಧ ಸಾಧನೆಗಳ ಸರಬರಾಯಿಯೂ ಕಪ್ಪು ಸಂತೆಯೇ ಕಪ್ಪು ಸಂತೆ ಮೊನವನ ಪ್ರತಿ ವ್ಯವಹಾರ ಕ್ಷೇತ್ರದಲ್ಲಿಯೂ ಹಬ್ಬಿದೆ. ಲಾಭವ ಆಶಿಯಿರುವ ಪ್ರತಿ ಕ್ಷೇತ್ರವೂ ಕಪ್ಪು ಸಂತೆಯ ತವರುಮನೆ. ಈ ದೃಷ್ಟಿಯಿಂದ ನಾವು ಕಲಿಯುತ್ತಿರುವ ವಿದ್ಯೆ ಕಪ್ಪು ಸಂತೆಯಾಗಿದೆ. ಬೆಳಗಿನಿಂದ ಸಾಯಂಕಾಲದವರೆಗೆ ದುಡಿದರೂ ದಿನಕ್ಕೆ ಒಂದು ರೂಪಾಯಿ ಸಂಪಾದಿಸಲಾರದ ರೈತನ ರಾಜ್ಯದಲ್ಲಿ ಸರಕಾರಿ ಉದ್ಯೋಗಿಗಳೆಂದು ದಿನಕ್ಕೆ ಹತ್ತು, ನೂರು, ಏಳುನೂರರ ವರೆಗೆ ವೇತನ ಪಡೆಯುವವರೂ ಕಪ್ಪು ಸಂತೆ. ಈ ರಂಗಗಳಲ್ಲಿ ಆಸಕ್ತರಾಗಿರುವ ಜನರು ಕಪ್ಪು ಸಂತೆ ನಿಲ್ಲಿಸಬೇಕೆಂದು ಆಡುವ ಮಾತಿನಲ್ಲಿ ತತ್ವವಿಲ್ಲ. ಇದನ್ನು ಹೇಳುವ ಯೋಗ್ಯತೆ ಸಮತಾವಾದಿಗಳಾದ ಗಾಂಧಿ, ನೆಹರೂ, ಜಯಪ್ರಕಾಶ ಮೊದಲಾದವರಿಗಲ್ಲದೆ ಎಲ್ಲರಿಗಿಲ್ಲ. ಆದ್ದರಿಂದ ಕಪ್ಪು ಸಂತೆಯ ನಿರ್ಮೂಲಕ್ಕೆ ಒಂದೇ ದಾರಿಯೆಂದರೆ ನಿರ್ಮಲ ಸಮತಾವಾದ ಮಾತ್ರ.

C. K. T.

ಇದಾವ ನ್ಯಾಯ?

ಸರಕಾರಿ ಉದ್ಯೋಗಿಗಳು ೫೫ ವರ್ಷದವರಾದರೆ ಅವರು ಕೆಲಸದಿಂದ ನಿವೃತ್ತರಾಗಬೇಕು ಎಂಬ ನಿಯಮವಿದೆ. ಸೆಂಟ್ರಲ್ ಪೇ ಕಮಿಷನು ಇದನ್ನು ೬೦ ಇರಬೇಕೆಂದು ಶಿಫಾರಸ್ಸು ಮಾಡಿದೆ. ಉದ್ಯೋಗಿಗಳು ೫೫ ವರ್ಷಗಳಲ್ಲಿ ನಿವೃತ್ತರಾಗಬೇಕೆನ್ನುವದರ ಕಾರಣ, ಮನದ ಪ್ರಾಯದಲ್ಲಿ ಶಾರೀರಕ ಮತ್ತು ಮಾನಸಿಕ ಶಕ್ತಿ ಕುಂದುತ್ತದೆ ಎಂದಾಗಿರಬಹುದು. ಇದು ಎಂದಿಗೂ ಯೋಗ್ಯ ಕಾರಣವಾಗದು. ಇಂದು ಮಹಾತ್ಮಗಾಂಧೀಜಿಗೆ ೭೮ ವರ್ಷ ತುಂಬಿದೆ. ಆದರೆ ಇವರ ಮೆದುಳಿನ ತೀಕ್ಷ್ಣತೆ, ಶಾರೀರಕ ಚೇತನಗಳು ಕುಗ್ಗಿಲ್ಲ. ಇಂದಿಗೂ ೩೦ ಗಂಟೆ ದಿನಕ್ಕೆ ದುಡಿಯುತ್ತಾರೆ. ಸರ್ದಾರ್ ಪಟೇಲರ ವಯಸ್ಸು ೭೨. ಪಂಡಿತ ಜವಾಹರರ ವಯಸ್ಸು ೭೮, ಬಾಬು ರಾಜೇಂದ್ರ ಪ್ರಸಾದ್, ಗೋವಿಂದ ವಲ್ಲಭ ಪಂತ್, ಶಂಖ್ವಾ ಇವರೆಲ್ಲರೂ ೭೦ ದಾಟಿದವರೇ. ಆದರೂ ಅವರ ಕಾರ್ಯ ಕುಶಲತೆಯೊಗಲಿ, ಚೈತನ್ಯವಾಗಲಿ ಕುಗ್ಗಿಲ್ಲ. ಕೇಂದ್ರ ಸರಕಾರದಲ್ಲಿರುವ ಡಾ. ಮತಾಯಿಯವರು ೭೫ ದಾಟಿದವರು. ಸರ್ ರಾಧಾಕೃಷ್ಣನ್ ರವರೂ, ಎನ್. ಗೋಪಾಲಸ್ವಾಮಿ, ಮಿ ಮೂರ್ ಇಸ್ಮೈಲ್, ಸಿ. ಪಿ. ರಾಮಸ್ವಾಮಿ ಇವರೆಲ್ಲರೂ ೭೫ಕ್ಕೆ ಮಿಗಿದವರು. ಅವರೆಲ್ಲರೂ ಕೆಲಸಕ್ಕೆ ಅಯೋಗ್ಯರೇ? ಇಂದು ಹಿಂದೂದೇಶದ ಸೂತ್ರ ಚಾಲನೆ ೭೫ ವರ್ಷಕ್ಕೆ ಮಿಗಿದವರಿಂದಲೇ ಆಗುತ್ತಿರುವಾಗ ಸರಕಾರಿ ಉದ್ಯೋಗಿಗಳು ೫೫ರಲ್ಲಿ ನಿವೃತ್ತರಾಗಬೇಕೆಂಬ ಖಡ್ಡಾಯ ಕಾನೂನೇಕೆ? ನಿರ್ಬಲರಾದವರನ್ನು, ಅಯೋಗ್ಯರಾದವರನ್ನು ನಿವೃತ್ತಿಪಡಿಸುವ ದರಲ್ಲಿ ಅರ್ಥವಿದೆ. ಆದರೆ ಎಲ್ಲರೂ ೫೫ರಲ್ಲಿ ನಿವೃತ್ತರಾಗಬೇಕೆಂಬುದು ಯೋಗ್ಯವಲ್ಲ. ಅನೇಕ ಸಂದರ್ಭಗಳಲ್ಲಿ ನಿವೃತ್ತರಾದವರನ್ನು ಪುನಹ ದೊಡ್ಡ ಹುದ್ದೆಗಳಿಗೆ ತಂದು ಹೆಚ್ಚಿಲಾಗುತ್ತಿದೆ ಪರಿಸ್ಥಿತಿ ಹೀಗಿರುವಾಗ ಅರಕ್ತರು ಅಯೋಗ್ಯರೆಂದು ತಂದು ಬಂದವರನ್ನು ಮಾತ್ರ ನಿವೃತ್ತಿಗೊಳಿಸುವ ನಿಯಮವನ್ನು ಅನುಸರಿಸುವದು ಉತ್ತಮವಲ್ಲವೇ?

B. M.

ಬೆಳ್ಳಿರು

ಪಸನ್ ಸಾಹೇಬರ ಪಸನ್
ಉಂಡೆ ನಶ್ಯ.

ಸಹೋದರರೇ,

ಸುಮಾರು 100 ವರ್ಷಗಳಿಂದ ಪ್ರಖ್ಯಾತಿ ಹೊಂದಿ ಅನೇಕ ಯೋಗ್ಯತಾ ಪತ್ರಗಳನ್ನು ಪಡೆದು ಮೈಸೂರು, ಕೊಡಗು ಮತ್ತು ಇಂಡಿಯದ ಬಹು ಭಾಗಗಳಲ್ಲಿ ಮಾರಾಟವಾಗುತ್ತಿರುವ ನಮ್ಮ ನಶ್ಯವು ಒಂದು ತಿಂಗಳಿಟ್ಟರೂ ಹುಳಿಯಾಗದೆ ಚೆರುಕು ಮತ್ತು ಸುವಾಸನೆಗಳಿಂದೊಡಗೂಡಿ ಮನಸ್ಸಿಗೆ ಆಹ್ಲಾದ ಪಡಿಸುವುದು ಮೂಗಿಗೆ ಸಂಬಂಧ ಪಟ್ಟ ಪೀನಸೆಯೇ ಮೊದಲಾದ ವ್ಯಾಧಿಗಳನ್ನು ಹೋಗಿಲಾಡಿಸುತ್ತೆ.

ಬೆಲೆ ಸೇರು 1ಕ್ಕೆ (24ತೋಲ) 2-8-0

ಹಾಸಲು ಮತ್ತು ಪ್ಯಾಕಿಂಗ್ ಚಾರ್ಜು ಬೇರೆ. ಧಡಿಯೂ ವ.ಣ ತರಿಸಿಕೊಂಡರೆ ಹಾಸಲು ಕಡಿಮೆ ಬೀಳುತ್ತದೆ.

ವಿಳಾಸ,

ಹಸನ್ ಸಾಹೇಬ್ ಅಂಡ್ ಸನ್ಸ್,
ನಶ್ಯದ ವ್ಯಾಪಾರಿಗಳು,
ಬೆಳ್ಳಿರು ಪೋಸ್ಟು,
ಮಂಡ್ಯ ಡಿ.

ವೀರಾಜಪೇಟೆಗೆ 'ಕೊಡಗು'
ಏಜೆಂಟರು:
ಶ್ರೀ ಕೆ. ಎಂ. ಸುಬ್ರಾಯಪ್ಪನವರು.

ಬಾಬುರಾಜೇಂದ್ರ ಪ್ರಸಾದರು ಕಾಂಗ್ರೆಸ್ ಅಧ್ಯಕ್ಷರು.

ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಆಚಾರ್ಯ ಜೆ. ಬಿ. ಕೃಪಲಾನಿಯವರು ತಮ್ಮ ಅಧ್ಯಕ್ಷತೆಗೆ ರಾಜೀನಾಮೆಕೊಟ್ಟಿರುವದರಿಂದ ಕೇಂದ್ರ ಸರಕಾರದ ಆಹಾರ ಮಂತ್ರಿಗಳಾದ ಬಾಬೂ ರಾಜೇಂದ್ರ ಪ್ರಸಾದರನ್ನು ಕಾಂಗ್ರೆಸ್ ಪ್ರೆಸಿಡೆಂಟರಾಗಿ ಆರಿಸಲಾಗಿದೆ. ಪ್ರಸಾದರು ಕೇಂದ್ರ ಸರಕಾರದ ತಮ್ಮ ಮಂತ್ರಿಪದಕ್ಕೆ ರಾಜೀನಾಮೆ ಕೊಡಲಿರುವರು.

ಹಿಂದೀ ಒಕ್ಕೂಟದ ನ್ಯಾಯಶಾಸನ ಸಭೆ.

ರಾಜ್ಯಸ್ಥಾಪನಾ ಸಭೆಯೇ ಹಿಂದೀ ಒಕ್ಕೂಟದ ನ್ಯಾಯಶಾಸನ ಸಭೆಯಾಗಿ ತಾ. ೨೬-೧೧-೪೭ರಿಂದ ದೆಲ್ಲಿಯಲ್ಲಿ ಕೂಡಿದೆ. ಇದರ ಪ್ರೆಸಿಡೆಂಟರಾಗಿ ಶ್ರೀ ಜಿ. ವಿ. ಮಾವ್‌ಲಂಕರರನ್ನು ಆರಿಸಲಾಗಿದೆ. ಕಾಂಗ್ರೆಸ್ ಪಕ್ಷದಿಂದ ಸಮಿತಿಯ ತೀರ್ಮಾನದಂತೆ ಪ್ರಾಂತೀಯ ನ್ಯಾಯಶಾಸನ ಸಭಾಗಳಲ್ಲಿ ಸದಸ್ಯರಾಗಿರುವ ರಾಜ್ಯತಾಸನ ಸಭೆಯಲ್ಲಿ ಭಾಗವಹಿಸಲೂ ಡದಾಗಿ ವಿಧಿಸಲಾಗಿದೆ. ಇದು ಸಮಾರು ಆಂಕ್ಷಿಂಧಾ ವಿಷ್ಕಿದ ಸಮಸ್ಯೆಗೆ ಅನ್ವಯಿಸುವದು.

ಸಾರ್ವಜನಿಕ ಸಭೆಗಳು.

ತಾರೀಖು ೨೬ನೇ ಶನಿವಾರ ಸಂಜೆ ವಾರಪೆ ಬಯಲ್ಲಿ ಶ್ರೀ ಕೆ. ವೆಂಗಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ಆವರಲ್ಲಿ ಈ ಕೆಳಗಿನ ಠರಾವುಗಳು ಸರ್ವಸಮ್ಮತದಿಂದ ಪಾಸಾದವು

(೧) ಕತೆದ ಕೊಡಗು ನ್ಯಾಯವಿಧಾಯಕ ಸಭೆಯಲ್ಲಿ ಕಾಲೇಜು ಸ್ಥಾಪನೆಯನ್ನು ಕುರಿತು ಪಾಸಾದ ಠರಾವು ದೇರದನ್ನು ಅಭಿಪ್ರಾಯದಂತೆಯೆ ಆದುದರಿಂದ ಕೊಡಗಿನಲ್ಲಿ ಕಾಲೇಜನ್ನು ಸರ್ಕಾರದವರೇ ಸ್ಥಾಪಿಸಿ ನಡೆಸಬೇಕೆಂದು ಈ ಸಭೆಯು ಸರ್ಕಾರಕ್ಕೆ ಒತ್ತಾಯಪೂರ್ವಕ ವಿನ್ನವಿಸುತ್ತದೆ

(೨) ಕಾಲೇಜನ್ನು ಸರ್ಕಾರವೇ ಸ್ಥಾಪಿಸಬೇಕೆಂಬ ಠರಾವಿಗೆ ಕಳಿದ ಕಾನೂನು ಮಿಟಿಂಗಿನಲ್ಲಿ ವಿರೋಧವಾಗಿ ಒಟ್ಟುಮಾಡಿದ ಕೌನ್ಸಿಲು ಮೆಂಬರುಗಳ ಮೇಲೆ ಈ ಸಭೆಯವರಿಗೆ ವಿಶ್ವಾಸವಿಲ್ಲದ್ದರಿಂದ ಅವರು ಕೂಡಲೇ ತಮ್ಮ ಮೆಂಬರುತನಕ್ಕೆ ರಾಜೀನಾಮೆ ಕೊಡಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ

ಎಡೂರು

ತಾರೀಖು ೩-೧೧-೪೭ ರಲ್ಲಿ ಈ ಗ್ರಾಮಸ್ಥರ ಸಭೆಯು ಶ್ರೀ ಕೆ. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸೇರಿ ಮೇಲಿನ ಅರ್ಥದ ಠರಾವುಗಳನ್ನು ಮಾಡಿದರು.

ತೋಳೂರು ಶೆಟ್ಟಳ್ಳಿ

ತಾರೀಕು ೪-೧೧-೪೭ ರಲ್ಲಿ ತೋಳೂರು ಶೆಟ್ಟಳ್ಳಿ ಕೂತ, ದೊಡ್ಡ ತೋಳೂರು, ಚಿಕ್ಕತೋಳೂರು ಗ್ರಾಮಗಳ ಜನರು ಶ್ರೀ. ಬಿ. ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಮೇಲಿನ ಅರ್ಥದ ಠರಾವುಗಳನ್ನು ಅಂಗೀಕರಿಸಿದರು

ಕುಂದಳ್ಳಿ

ತಾರೀಕು ೫-೧೧-೪೭ ರಲ್ಲಿ ಕುಂದಳ್ಳಿ, ಕುಮರಳ್ಳಿ, ಬೆಟ್ಟಗೇರಿ, ಕೊತ್ತನಳ್ಳಿ ಗ್ರಾಮಸ್ಥರು ಶ್ರೀ ಎಚ್. ಟಿ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೇಲಿನ ಆಶಯದ ಠರಾವುಗಳನ್ನು ಅಂಗೀಕರಿಸಿದರು

ವೀರಾಜಪೇಟೆ.

ತಾ ೨೮ರಲ್ಲಿ ಶ್ರೀ ಬಿದ್ದಂಡ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ನಡೆದು ಮೇಲಿನ ಅರ್ಥದ ಠರಾವುಗಳು ಪಾಸಾದವು.

ಕಿಬ್ಬೆಟ್ಟ.

ತಾ ೭-೧೧-೪೭ ರಲ್ಲಿ ಹರಗ, ಕಳ್ಳಿಕಿಬ್ಬೆಟ್ಟಳ್ಳಿ, ಕಿಬ್ಬೆಟ್ಟ ಗ್ರಾಮಸ್ಥರು ಶ್ರೀ ಎನ್. ಮುಳ್ಳಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ಮೇಲಿನ ಆಶಯದ ಠರಾವುಗಳನ್ನು ಪಾಸುಮಾಡಿದರು.

ಕೈಕೇರಿ

ತಾರೀಕು ೮-೧೧-೪೭ ರಲ್ಲಿ ಕೈಕೇರಿ ಗ್ರಾಮಸ್ಥರು ಶ್ರೀ ಕುಸ್ಸಂದ ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೇಲಿನ ನಿರ್ಣಯಗಳನ್ನು ಅಂಗೀಕರಿಸಿದರು

ದೇವಣಗೇರಿ

ತಾರೀಕು ೧೧ರಲ್ಲಿ ದೇವಣಗೇರಿಯಲ್ಲಿ ಶ್ರೀ ಪುಟ್ಟರ ಪೂಣಚ್ಚನವರ ಅಧ್ಯಕ್ಷತೆಯಲ್ಲೂ, ಮೇದೋಕಳ್ಳಿ ಶ್ರೀ. ಪಿಟ್ಟಡಿಸಿ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಗಳು ನಡೆದು ಮೇಲಿನ ಅರ್ಥದ ಠರಾವುಗಳು ಪಾಸಾದವು

ಪುದಿಕೇರಿ

ತಾರೀಕು ೧೧ರಲ್ಲಿ ಶ್ರೀ ಹೊಟ್ಟೋಳಂಡ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೇಲಿನ ಸಾರಾಂಶದ ನಿರ್ಣಯಗಳಾದವು

ಜನ್ಮತ್ತಿ.

ತಾ ೧೧ರಲ್ಲಿ ಶ್ರೀ ನೆಲ್ಲಮಕ್ಕಡ ಚಿಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೇಲಿನ ಅರ್ಥದ ಠರಾವುಗಳನ್ನು ಮಾಡಿರುವರು.

ಚೆಂಬೆಬೆಳ್ಳೂರು

ಈ ಗ್ರಾಮಸ್ಥರು ತಾರೀಕು ೧೨ರಲ್ಲಿ ಶ್ರೀ ಸೋಮಯ್ಯಂಡ ಪೂಣಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೇಲಿನ ಆಶಯದ ಠರಾವುಗಳನ್ನು ಪಾಸು ಮಾಡಿದರು.

ಪಾರಾಣೆ.

ತಾ ೧೬ರಲ್ಲಿ ಪಾರಾಣೆಯಲ್ಲಿ ಶ್ರೀ ಕುಯಿಮಂಡ ಕಾಳಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೇಲಿನ ಅಭಿಮತದ ಠರಾವುಗಳು ಪಾಸಾದವು.

ನಾಪೋಕ್ಲು.

ತಾ. ೧೫ರಲ್ಲಿ ನಾಪೋಕ್ಲುನಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಬಿ ಪಿ ಪೂಚಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಮೇಲಿನ ಅರ್ಥದ ಠರಾವುಗಳು ಪಾಸಾಗಿವೆ ಲಭ್ಯವಿಲ್ಲ

ಕುತ್ತುನಾಡು

ತಾರೀಕು ೧೮-೧೧-೪೭ರಲ್ಲಿ ಕುತ್ತುನಾಡು ಜನರ ಸಭೆಯೊಂದು ಶ್ರೀ ಕಾಳೇಂಗಡ ಅಚ್ಚುದ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಮಿಟಿಂಗಿಗೆ ಹಾಜರಿದ್ದ ಶ್ರೀ ಪಿ ಎಂ. ನಾಣಮ್ಮಯ್ಯನವರು ಕೌನ್ಸಿಲಿನ ನಿರ್ಣಯವನ್ನು ಸಮರ್ಥಿಸಿ ಮಾತಾಡಿದರು ಆದರೂ ಅವರಿಗೆ ವಿರುದ್ಧ ಸರ್ವಾನುಮತದಿಂದ ಮೇಲಿನ ಅರ್ಥದ ಠರಾವುಗಳು ಪಾಸಾದವು

ಮೂರ್ನಾಡು

ತಾರೀಕು ೨೦ರಲ್ಲಿ ಮೂರ್ನಾಡಿನಲ್ಲಿ ಶ್ರೀ ಪಾಂಡಂಡ ಮುದ್ದಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಮೇಲಿನ ಆಶಯದ ಠರಾವುಗಳು ಪಾಸಾದವು

ಹಾತೆ.

ಕೋಮುವಾರು ಸಂಸ್ಥೆಗಳ ಅವಶ್ಯಕತೆ ಇನ್ನು ಮುಂದೆ ಇಲ್ಲ. ಅವುಗಳಿಂದ ದೇಶಕ್ಕೆ ಹಾನಿ ಬಿಂಡಿತ ಮುಸ್ಲಿಂಲೀಗ್ ಇರುವುದಾದರೆ ಮುಸಲ್ಮಾನರಿಗೇ ಹಾನಿ ಎಂಬುದಾಗಿ ಪೂರತ್ ನಗರದ ಮುಸ್ಲಿಂ ಲೀಗ್ ನಿರ್ಣಯಿಸಿದೆ

ಬೇರಾರ್-ಹೈದರಾಬಾದ್ ಗಡಿ ಪ್ರದೇಶದ ಗ್ರಾಮಗಳಿಗೆ ಅತ್ಯರಕ್ಷಣೆಗಾಗಿ ಅಪ್ಯವರ್ಯಾದ ಮಿಲಿಟರಿ ಪಿಕ್ಷಣನನ್ನು ಕೊಡಲು ಭಾರತ ಸರ್ಕಾರವನ್ನು ಮಧ್ಯಪ್ರಾಂತ ಮತ್ತು ಬೀರಾರ್ ಸರ್ಕಾರದವರು ಕೇಳಿಕೊಳ್ಳಲ್ಪಟ್ಟಿದ್ದಾರೆಂದೂ, ಸದ್ಯದಲ್ಲಿಯೇ ಆ ಸ್ಥಳಕ್ಕೆ ೧೫೦ ಜನ ಶಿಕ್ಷಕರನ್ನು ಕಳುಹಿಸಲಾಗುವುದೆಂದೂ ತಿಳಿದು ಬರುತ್ತದೆ

ಕೊಡವರ್ಷ ಆರಂಭವಾಗುವ ವೇಳೆಗೆ ಸರಿಯಾಗಿ ಇಂಡಿಯಾ ಸರಕಾರದವರು ತಮ್ಮ ಸಾಧನೆಯನ್ನು ಚಿರಸ್ಮರಣೆಯಿಡುಗೊಳಿಸುವಂಥಾ ಪೋಸ್ಟಲ್ ಸ್ಟ್ಯಾಂಪುಗಳನ್ನು ಸಿದ್ಧಗೊಳಿಸುವರು. ೧½ ಆಣೆ, ೩½ ಆಣೆ ಮತ್ತು ೧೨ ಆಣೆ ಬೆಲೆಯ ಮೂರು ಬಗೆಯ ಸ್ಟ್ಯಾಂಪುಗಳನ್ನು ಅಚ್ಚು ಮಾಡಲಾಗುವುದು. ೧½ ಆಣೆಯ ಸ್ಟ್ಯಾಂಪುಗಳು ಒಳದೇಶದ ಉಪಯೋಗಕ್ಕಾಗಿ. ೩½ ಆಣೆಯ ಸ್ಟ್ಯಾಂಪುಗಳನ್ನು ಅಂತರ ರಾಷ್ಟ್ರೀಯ ವ್ಯವಹಾರದಲ್ಲಿ ಉಪಯೋಗಿಸಬಹುದು ವಿದೇಶಿಯ ವೈಮಾನಿಕ ಟಪ್ಪಾಲುಗಳಿಗೆ ೧೨ ಆಣೆ ಸ್ಟ್ಯಾಂಪುಗಳು ಉಪಯೋಗವಾಗುವವು.

ತಾ. ೧೮ರಲ್ಲಿ ಜೊಮಿನಿಯನ್ ಶಾಸನ ಸಭೆಯಲ್ಲಿ ಪ್ರಶ್ನೋತ್ತರಗಳು ನಡೆದಾಗ ನಿರಾಶ್ರಿತರ ಬಹು ಮುಖ್ಯವಾಗಿ ಪ್ರಸ್ತಾಪಿಸಲ್ಪಟ್ಟಿತು. ಈ ಪ್ರಶ್ನೆಗಳಿಗೆಲ್ಲಾ ಕೇಂದ್ರ ಸರ್ಕಾರದ ಪರಿಹಾರ ಮತ್ತು ಪುನರ್ವಚನಾ ಮಂತ್ರಿಗಳಾದ ಶ್ರೀ. ಕೆ. ಸಿ. ನಿಯೋಗಿಯವರು ಉತ್ತರಕೊಟ್ಟರು ಸೆಪ್ಟೆಂಬರ್ ಒಕ್ಟೆ ಮುಂಜೆ ಇಂಡಿಯನ್ ಯೂನಿಯನ್ನಿಗೆ ೧೩ ಲಕ್ಷ ಜನ ನಿರಾಶ್ರಿತರಾಗಿ ಬಂದರು ಸೆಪ್ಟೆಂಬರ್ ಅರಿಂದ ನವಂಬರ್ ೧೫ರ ವರೆಗೆ ೬೫ ಲಕ್ಷ ಮುಸ್ಲಿಮೇತರ ನಿರಾಶ್ರಿತರು ಬಂದರು ಇದೇ ಕಾಲಾವಧಿಯಲ್ಲಿ ಭಾರತದಿಂದ ಪಾಕಿಸ್ಥಾನಕ್ಕೆ ತೆರಳಿರುವವರ ಸಂಖ್ಯೆ ೧೯೩೦೦೦ ನಿರಾಶ್ರಿತರ ಪುಯಣ ಮತ್ತು ಸೋಷಣೆಗಾಗಿ ಈಕ್ಕೋಟಿ ೨೦ ಮುಖ್ಯಧಾಗದ ವರೆಗೆ ೬ ಕೋಟಿ ರೂಪಾಯಿ ಖರ್ಚಾಗಿದೆ ಎಂದು ನಿಯೋಗಿಯವರು ತಿಳಿಸಿದರು.

THIS CAN BE YOURS!

A complexion clear as childhood's, petal soft and delicate with the bloom of youth What woman does not long for it? "YEAST PAC" gives you back this natural loveliness swiftly, surely, safely

BRINGS BEAUTY BACK !!

For the first time in cosmetic history is a face pack, which applies the tonic & revitalising properties of live active yeast directly to the skin. After the very first application of "YEAST PAC" you can see and feel the difference The penetrating, stimulating qualities of "YEAST PAC" carry away blackheads and blemishes leaving your complexion flawless and beautifully smooth and soft.

A NEW DISCOVERY

Derma yeast with Vitamin B 1 and B. 2 is a new discovery which is contained in 'YEAST PAC' and prepared from their exclusive formula by the YEAST PAC COMPANY, LONDON.

Price per sachet As. 8, For sample sachet send ten annas postal stamps

Trade enquiries to:

NEJJUR & COMPANY,
POST BOX NO. 15,
HUBLI (M. S. M. Rly)
OR
Branches at: BOMBAY or BANGALORE.

ಬೋರೇ ಗೌಡನ ವರದಿ.

ಮೂನಾರ್‌ನಿಡಿನಲ್ಲಿ ಬಂಟರವನೊಬ್ಬನನ್ನು ಮುಸ್ಲಿಂ ಧರ್ಮಕ್ಕೆ ಮತಾಂತರಗೊಡಿರುವರೆಂದು ವಾರ್ತೆ ಬಂದಿದೆ. ಮೂರ್‌ನಿಡು, ನಾಪೋಕ್ಲಿನ ಮೂಪಿಲೈಗಳು ಹಿಂದು ಹಾಕಿ ಈತನನ್ನು ಮಲಬಾರಿನ ಫಾನ್ಸಾಸಿ ಎಂಬಲ್ಲಿಗೆ ಕಳುಹಿಸಿರುವರಂತೆ! ಜವೇ?

* * *

ಹಿಂದೂಧರ್ಮ ಜಗತ್ತಿನಲ್ಲಿಯೇ ಹೆ ರಾದುದು. ಸರ್ವಧರ್ಮಗಳ ಸಮ್ಮಿಲನ ದು. ಆದರೂ ಜನರು ಮತಾಂತರ ಹೊಂದಲು ಕಾರಣವೇನಿರಬಹುದು? ಮ ುಷ್ಯನು ದೇವರ, ಧರ್ಮದ ಹೆಸರು ಯೇ ಕೊಂಡರೆ ಹೊಟ್ಟೆತುಂಬುವದೇ? ನಾವು ರ್ಗದ ಕಲ್ಪನೆಯಲ್ಲಿ ಇಹದ ಜೀವನವ ನ್ನು ಮರೆತಿರುವೆವು. ಹೊಟ್ಟೆಗೆ ಅನ್ನ ವಿಲ್ಲದವನಿಗೆ ಈ ಧರ್ಮದಿಂದ ಪ್ರಯೋಜ ನವೇನು?

ಕೆಲವರನ್ನು ಹರಿಜನರೆಂದು ತಳ್ಳಿ, ಕೆಲವರನ್ನು ಸಮೂಜದಲ್ಲಿ ಕೀಳುತರಗತಿ ಯವರೆಂದು ವಿಂಗಡಿಸಿರುವ ಹಿಂದೂ ಸ ಮೂಜದ ನ್ಯೂನಾತಿರೇಕಗಳೇ ಮತಾಂತ ರಗಳಿಗೆ ಮೂಲ ಕಾರಣ. ಹೊನ್ನಿನ ಮ ನೆಯಲ್ಲಿ ಉಪವಾಸ ಸಾಯುವದಕ್ಕಿಂತ ಲೂ ಮಣ್ಣಿನ ಮನೆಯಲ್ಲಿ ಅವಲಕ್ಕಿ ತಿಂ ದು ಜೀವಿಸುವದು ಹಿತವಲ್ಲವೇ? ಹಿಂ ದೂ ಧರ್ಮವೇನೋ ಹಿರಿದು. ಹೊನ್ನಿ ನ ಮನೆ. ಆದರೆ ಹಿಂದೂ ಸಮೂಜದಲ್ಲಿ ರುವ ಏರುತಗ್ಗುಗಳು ಮತ್ತೆಲ್ಲಿವೆ? ಆದ್ದ ರಿಂದ ಹಿಂದೂ ಧರ್ಮಾವಲಂಬಿಗಳು ಎಲ್ಲ ರನ್ನೂ ಸಹೋದರರಂತೆ ಭಾವಿಸಿ ಅಧರಿಸಿ ದ ವಿನಹ ಈ ಮತಾಂತರಗಳಿಗೆ ಅಂತ್ಯವಿ ರಲಾರದು.

* * *

ಹಿಂದೂ ದೇವಸ್ಥಾನ ಒಂದರಲ್ಲಿ ಪೂ ಜೆ ನಡೆದಿತ್ತು. ಪೂಜೆಯ ಮಧ್ಯದಲ್ಲಿ ಗ್ರಾಮದ ಸಭ್ಯರೊಬ್ಬರು ಬಂದರು. ಆ ವರನ್ನು ಮರ್ಯಾದೆಪೂರ್ವಕ ದೇವರ ವಿ ಗ್ರಹದ ಹತ್ತಿರದ ಆಸನ ಒಂದರಲ್ಲಿ ಕೂರಿ ಸಿದರು. ನನಗೆ ಆಶ್ಚರ್ಯವಾಯಿತು. ಆತನ ದಂಡಿಗೆ ಜೆಲಿಯೇ ಯಾ ಆತನ ಸ ದ್ಗುಣಕ್ಕೆ ಸ್ಥಾನವೇ ಎಂದು ವಿಚಾರಿಸಲು ಗ್ರಾಮದ ಧನಿಕರವರೆಂದು ತಿಳಿದು ಬಂದಿ ತು. ಮಸೀದಿಯೊಂದರಲ್ಲಿ ನಮಾಜು ನ ಡೆಯುತಿತ್ತು. ಶ್ರೀಮಂತ ಫ್ಲಾಂಟರೊ ಬ್ಬರು ಬಂದರು. ಅವರು ಮುಂದೆ ನು ಗ್ಗಿ ಹೃದಯ ಸ್ಥಾನವನ್ನಾಕ್ರಮಿಸಲಿಲ್ಲ. ಕೆಕ್ಕರಿದು ತುಂಬಿದ್ದ ಇತರ ಮುಸ್ಲಿಮರ ಹಿಂದೆ ತಾವೂ ಮಂಡಿಸಿದರು. ನಮ್ಮ ನೆರೆ ಊರಿನ ಮುಸ್ಲಿಮರಿಗೆಲ್ಲಾ ಇವರು ಮುಂದಾಳು. ಜೂತೆಗೆ ಧನವಂತರು. ಇವರನ್ನೇಕೆ ಮುಸಲ್ಮಾನರು ಆಧರಿಸಿ ಮುಂದೆ ಕೂರಿಸಲಿಲ್ಲ? 'ಖುದಾಕೆ ಘರ್ ಮೆ ಸಬ್ ಏಕ್ ಹೈ' ದೇವರ ಮನೆಯಲ್ಲಿ ಎಲ್ಲರೂ ಸಮಾನರು ಎಂದುತ್ತರಬಂತು. ದೇವರು ತೋಳಿನ ಒಲವನ್ನಾಗಲೀ, ಜೇ ಬಿನ ತೂಕವನ್ನಾಗಲೀ, ಬ್ಯಾಂಕಿನ ಲೆಕ್ಕ ವನ್ನಾಗಲೀ ನೋಡುವವನಲ್ಲ. ಅವನು ನೋಡುವದು ಹೃದಯದ ಆಳವನ್ನು. ಅ ಲ್ಲವೇ?

ಜಿಲ್ಲಾ ಬೋರ್ಡಿನ ಶಾಲಾ ಅಧ್ಯಾಪಕರೊಬ್ಬರು ಸಾ ರ್ವಜನಿಕ ಸಭೆಯೊಂದರಲ್ಲಿ ಕೂಡಮಂವಾರು ಭಾವನೆಯ ಭಾಷಣ ಮಾಡಿದರಂತೆ 'ಕೊಡಗಿನ ನಾಯಿಗಳು ಪಶುವಾಗಬೇಕು; ಅವರ ದರ್ಪ ಭೂಗತವಾಗಬೇಕು' ಎಂದು ಕೂಗಿತೋಡರಂತೆ. ವಿದ್ಯಾರ್ಥಿಗಳಿಗೆ ವಿದ್ಯೆ ಹೇಳುವ ಅಧ್ಯಾಪಕರು ಈ ರೀತಿ ರಾಜಕೀಯದಲ್ಲಿ ಭಾಗವಹಿಸಿ, ಕೋಮುವಾರು ವಿಷ ಜಿಲ್ಲೂತ್ತಿರುವದರ ನಿಜವೆ? ಜಿಲ್ಲಾ ಬೋರ್ಡಿನ ಸದಸ್ಯರೊಬ್ಬರು ಹಾಜರಿದ್ದರೂ ಅವರ ಮುಂದೆಯೇ ಈ ಕಥೆ ನಡೆಯಿತಂತೆ. ಆ ವರು ಇ ದಕ್ಕೆ ಸಮ್ಮತಿ ಇತ್ತಿರುವರೇ?

ಅಧಿಕ ಪ್ರಸಂಗ.

(ಲಂಡನ್ನಲ್ಲಿ ಮೇಜರ್ ಜನರಲ್ ಕಾರ್ಯಪ್ಪ ನವರು ಈ ಕೆಳಗಿನಂತೆ ಹೇಳಿದರೆಂದು ವರದಿ.

"ಹಿಂದುಸ್ಥಾನದ ಇಂದಿನ ಸ್ಥಿತಿಗತಿಯಲ್ಲಿ ಅಹಿಂಸೆ ಕೆಲಸಕ್ಕೆ ಬಾರದು. ಪ್ರಬಲ ಸೈನ್ಯವೊಂದೇ ಹಿಂದೂಸ್ಥಾನವನ್ನು ಜಗತ್ತಿನ ಮಹಾರಾಷ್ಟ್ರಗಳಸಾಲಿಗೆ ಎತ್ತಬಲ್ಲದು" ಎಂದು ಜನರಲ್ ಕಾರ್ಯಪ್ಪನವರು, ಇನ್ನೂ ಅನೇಕ ತಜ್ಞರಂತೆ, ತಮ್ಮ ಅಳವಿಗೆ ಮೀರಿದ ನೀರಿನಲ್ಲಿಳಿದು ಅಹಿಂಸೆಯ ವಿಷಯಕ್ಕೆ ರುವ ತಮ್ಮ ಶಿಷ್ಟ ತಿಳಿವಳಿಕೆಯನ್ನು ಪ್ರದರ್ಶಿಸಿ ದ್ದಾರೆಂದು ನನಗೆ ತೋರುತ್ತದೆ. ಅಹಿಂಸೆಯ ಮಾರ್ಗವನ್ನು ಕುರಿತು ಅವರಿಗೆ ಅ ಲ್ಪಜ್ಞಾನಕ್ಕಿಂತ ಹೆಚ್ಚೇನೂ ಇರಲಾರದು. ಆಜೀವ ಅಹಿಂಸಾಚಾರದಲ್ಲಿರುವ ನಾನು ಅದರ ವಿಷಯ ಪೂರ್ಣಜ್ಞನಲ್ಲದಿದ್ದರೂ ತಜ್ಞನೆಂದು ಹೇಳಿಕೊಳ್ಳಲಿಲ್ಲೆ. ಸಿಚ್ಚೆಳ ಹೇಳುವದಾದರೆ ಅಹಿಂಸೆಯನ್ನು ಆಚರಿಸುತ್ಯ ಹೋದಂತೆ ನನ್ನ ಜೀವನದಲ್ಲಿ ಅಹಿಂಸೆಯು ಏರಿ ಪೂರ್ಣ ಅಭಿವ್ಯಕ್ತಿಯನ್ನು ಸಾಧಿಸುವದು ಎಷ್ಟು ದೂರದ ಮೂತೆಂದು ನನಗೆ ಹೆಚ್ಚು ಹೆಚ್ಚು ತಿಳಿದು ಬರುತ್ತದೆ. ಈ ಮೂತು ಅರಿವಿಲ್ಲದ್ದರಿಂದಲೇ, ಕರ್ಧಾ ತ್ ಜಗತ್ತಿನಲ್ಲಿ ಮಾನವನ ಪರಮಕರ್ತವ್ಯದ ಜ್ಞಾನವಿಲ್ಲದ್ದರಿಂದಲೇ ಜನರಲ್ ಕಾರ್ಯಪ್ಪನವರು ಇಂದಿನ ಯುಗದಲ್ಲಿ ಹಿಂಸೆಯ ಎದುರಿಗೆ ಅಹಿಂಸೆಯು ಆಟ ಸಾಗುವದಿಲ್ಲೆಂದು ಜೋರಾತ್ಕಾರೆ. ನಾನು ಮಾತ್ರ ನಿಷ್ಕಲಂಕ ಅಹಿಂಸೆಯೊಂದೇ ಇಂದಿನ ಅಣುಬಾಂಬಿನ ಯುಗದಲ್ಲಿ ಹಿಂಸೆಯ ಆಟ ಎಲ್ಲ ಕೀಟಲೆಗಳನ್ನೂ ಕಂಗೆಡಿಸ ಒಪ್ಪಿದೆಂದು ಸಾಧಿಸುನೆ. ಜನರಲ್ ಕಾರ್ಯಪ್ಪನವರು, ಆದೂ ಅವರಿಗೆ ಯುದ್ಧ ವಿದ್ಯೆಯನ್ನೂ ಪದ್ಧತಿಯನ್ನೂ ಕಲಿಸಿದ ಬ್ರಿಟಿಶರ ಸಹಾಯ ತಪ್ಪಿಸುವಾಗ, ತಮ್ಮಳವು ಮೀರಿ ಮಾತಾಡಿದ್ದರೆ ಜೆನ್ನಾಗುತ್ತಿತ್ತು. ಜನರಲ್ ಕಾರ್ಯಪ್ಪನವರನ್ನು ಏರಿಸಿದ ಸೇನಾಪತಿಗಳು ಕೂಡ ಅಹಿಂಸೆಯ ಸಾಧ್ಯಸಾಧ್ಯತೆಯನ್ನು ಕುರಿತು ಮಾತಾಡುವ ಹಕ್ಕು ತಮ್ಮದಲ್ಲವೆಂದು ಒಪ್ಪಿಕೊಂಡು ಚಾಣಾಕ್ಷರಾಗಿದ್ದಾರೆ. ಯುದ್ಧ ವಿದ್ಯೆಗೆ ಪನ್ನ ತಾರುಮಂಸೆಯಲ್ಲಿ ದಿವಾಳಿಗರಿ ಒದಗಿರುವದನ್ನು ನಾವಿರಾರು ಸಲ ನೋಡುತಿದ್ದೇವೆ. ವೇರುಪೇಟೆಯಲ್ಲಿ ಆ ಜಿದವಾಳಿಯೆದ್ದವನೇ ಆ ಬಗೆಯ ಜುಗಾರಿಯನ್ನು ಹಾಡಿಕೊಡಾಡಬೇಳೆ?

ಹೊಸದಿಲ್ಲಿ, ಮೋ. ಕೆ. ಗಾಂಧಿ.
೬-೧೧-೪೬.

ಆಚಾರ್ಯ ಜೆ. ಬಿ. ಕೃಪಲಾನಿಯವರ ರಾಜಿನಾಮೆ.

ಕಾಂಗ್ರೆಸ್ ಪ್ರೆಸಿಡೆಂಟರಾಗಿದ್ದ ಆಚಾರ್ಯ ಜೆ. ಬಿ. ಕೃಪಲಾನಿಯವರು ತಮ್ಮ ಪ್ರೆಸಿಡೆಂಟ್ ತನಕ್ಕೆ ರಾಜಿನಾಮೆಯಿತ್ತಿರುವರು. ಕೇಂದ್ರದಲ್ಲಿ ಅಧಿಕಾರ ವಹಿಸಿರುವ ಕಾಂಗ್ರೆಸ್ ಮಂತ್ರಿಗಳುಗಳಿಗೂ ಕಾಂಗ್ರೆಸ್ ಪ್ರೆಸಿಡೆಂಟರಿಗೂ ಕೆಲವು ವಿಚಾರಗಳಲ್ಲಿ ಒಂದಾಬಿಕೆ ಬೀಳದ್ದರಿಂದಲೂ, ಅವರೊಳಗೆ ಚಿರಸ್ಥಾಯಿಯೂದ ವಿಶ್ವಾಸ ಉಳಿದಿಲ್ಲವಾದ್ದರಿಂದಲೂ ತಾವು ರಾಜಿನಾಮೆ ಕೊಟ್ಟಿರುವದಾಗಿ ಅವರು ಹೇಳಿದ್ದಾರೆ. ಕಾಂಗ್ರೆಸ್ಸಿಗೂ, ಕೇಂದ್ರ ಸರಕಾರಕ್ಕೂ ಇಂದಿರುವ ಸಂಬಂಧವು ಸಂಶಯಾಸ್ಪದವಾದುದೆಂದೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಕೇಂದ್ರ ಮಂತ್ರಿ ಮಂಡಳದ ಮೇಲೆ ಹಿಡಿತವಿರಬೇಕೆಂದೂ, ಇಂದು ಕಾಂಗ್ರೆಸ್ ವರ್ಕಿಂಗ್ ಸಮಿತಿಯಲ್ಲಿರುವ ಬಹು ಜನರು ಕೇಂದ್ರ ಮತ್ತು ವ್ರಾಂತಗಳಲ್ಲಿ ಸರಕಾರಿ ಜವಾಬ್ದಾರಿ ವಹಿಸಿ ಕೊಂಡಿರುವದರಿಂದ ಕಾಂಗ್ರೆಸ್ ಮತ್ತು ಸರಕಾರದ ಸಂಬಂಧವು ಸ್ಪಷ್ಟವಡಿಸಲ್ಪಡಬೇಕೆಂದೂ ಅವರು ತಮ್ಮ ಹೇಳಿಕೆಯಲ್ಲಿ ವ್ಯಕ್ತಮಾಡಿರುವರು.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2.

ಬೋಂಬೆ ಲೈಫ್ ಬಿಲ್ಡಿಂಗ್, ಪೊ. ಬಾ. ನಂ. 1, ಉಡುಪಿ.

(ಟೆಲಿಫೋನ್ ನಂ. 8408)

ಇತರ ಆಫೀಸುಗಳು:—ಬೆಂಗಳೂರು, ತಿರುನೆಂದರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರು ಮೊಬಲಗು ರೂ. 1,33,740, ಜಮೂ ಬಂದ ಠೇವಣಾತಿ 3,30,268-1-8, ವಸೂಲಾದ ಕ್ಷೇಮನಿಧಿ 2,36,454-0-3, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ಡಿವಾಜಿಟ್ಟುದಾರರಿಗೆ ಅವರ ಡಿವಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿಗಮು ಠೇವಣಾತಿಯನ್ನು ಕಾ. 1-12-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಕೇಕಡ 0-8-0 ದರದ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮೆನೇಜ್ಮೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ವಷ್ಟ ಸಂಗತಿಗಳು.

ಒಟ್ಟು ಆದಾಯ .... 1,07,09,000 ಮೀರಿದೆ
ಚಾಲ್ತಿಯಿರುವ ವಿಮೆ .... 17,74,52,000 ,,
ಆಸ್ತಿ .... 6,67,60,000 ,,
ಕಂಪೆನಿಯು ಅದಿಯಲ್ಲಿ ಕೊಟ್ಟ ಕ್ಲೈಮುಗಳು .... 8,83,62,000 ,,

ಆಂಗ ಕಛೇರಿ: ಎಜೆನ್ಸಿ ಪ್ರಧಾನ ಕಛೇರಿ:

ಕಿಸ್ಟ್ಸ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಆರ್ಜಗಳನ್ನು ಸ್ವಾಗತಿಸಿದೆ.

ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೋಂಬೇ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1850.
'KODAGU' MERCARA. (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೨೬ | ತಾರೀಕು ೩೦-೧೧-೧೯೪೬ನೇ ಶುಕ್ರವಾರ | ಸಂಚಿಕೆ ೨೬

ಕೋಮುವಾರು ಭಾವನೆ ತೊಲಗಲಿ.

ಲೇ:— ಬಿ. ಡಿ. ಗಣಪತಿ.

ಹಿಂದೂದೇಶದಲ್ಲಿ ಆಗುತ್ತಿರುವ ಅನರ್ಥಗಳಿಗೆ ಈ ಕೋಮುವಾರು ಭಾವನೆಯೇ ಕಾರಣ. ಪರಕೀಯರು ನಮ್ಮ ಮೇಲೆ ಹಲವು ಶತಮಾನಗಳ ವರೆಗೆ ಶಾಸನಮಾಡಿದ್ದಾದರೂ ಕೋಮುವಾರು ಭಾವನೆಯಿಂದ ಬಿಡಬಿಡಿಯಾದ ನಮ್ಮ ಕೃಷ್ಟಿಲ್ಯದ ಕಾರಣದಿಂದ. ಹಿಂದೂ ಮುಸ್ಲಿಮರುಗಳಿಗೆ ಜಗಳ; ಬ್ರಾಹ್ಮಣ, ಬ್ರಾಹ್ಮಣೇತರರೊಳಗೆ ಕಲಹ, ಈ ರೀತಿಯ ಭೇದಭಾವವು ನಮ್ಮ ಶಕ್ತಿಯನ್ನು ಸೂರೆಗೊಂಡು ಭಾರತೀಯರನ್ನು ನಿರ್ಬಲರನ್ನಾಗಿ, ನಿಸ್ತೇಜರನ್ನಾಗಿ ಮಾಡಿದೆ. ಕೋಮುವಾರು ಭಾವನೆಯು ಉದ್ವೇಕಗೊಂಡ ಕಾರಣವೇ ಹಿಂದೂದೇಶದ ವಿಭಜನೆ ಆಗಬೇಕಾಯಿತು. ಕೋಮುವಾರು ಭಾವನೆಯು ಕಾರಣಕ್ಕಾಗಿಯೇ ಇಂದು ಕೊಲೆ, ಕಾಳಗಗಳು ನಡೆಯುತ್ತಿವೆ. ಈ ಕೋಮುವಾರು ವಿಷಾಚೆಯಿಂದ ಭಾರತದಲ್ಲಿ ಅದ ಮತ್ತು ಆಗುತ್ತಿರುವ ಹಾನಿಯು ಅಷ್ಟಿಷ್ಟಲ್ಲ. ಬಂಧ್ಯ, ತಮಿಳರ ಕೆತ್ತಟ್ಟ, ಬ್ರಾಹ್ಮಣ ಬ್ರಾಹ್ಮೇತರ ಘರ್ಷಣೆ, ಇವುಗಳಿಗೆಲ್ಲಾ ಕೋಮುವಾರು ತತ್ವದ ಛಾಯೆ ಬಿದ್ದಿದೆಯೆಂದರೆ ತಪ್ಪಾಗಲಾರದು. ಈ ಕೋಮುವಾರು ಭಾವನೆಯು ಇಡಿಯಾಗಿದ್ದ ಭಾರತವನ್ನು ಬಿಡಿ ಬಿಡಿಯಾಗಿ ಮಾಡಿತು. ಪ್ರತಿಯೊಂದು ಕ್ಷೇತ್ರದಲ್ಲೂ ಈ ಭಾವನೆಯು ಪ್ರವೇಶವಾಗಿ ಕೋಮುವಾರು ಕಾಲೇಜುಗಳು, ಕೋಮುವಾರು ಸಂಸ್ಥೆಗಳು, ಕೋಮುವಾರು ವಾತಾವರಣವು ಸಾರ್ವತ್ರಿಕ ಹಬ್ಬಿತು. ಸರಕಾರವು ಇದಕ್ಕೆ ಬೆಂಬಲವಿತ್ತು ಕೋಮುವಾರು ತತ್ವದಂತೆ ಚುನಾವಣೆ, ಕೋಮುವಾರು ತತ್ವದಂತೆ ಸರಕಾರವಲ್ಲಿ ಉದ್ಯೋಗ, ಮೊದಲಾದುವುಗಳ ವಿಪರೀತವಾಯಿತು. ಈ ಭಾವನೆಗೆ ಪ್ರಚೋದನೆಯೆನ್ನುತ್ತಿತು. ಈ ಕಾರಣದಿಂದ ಅಖಂಡ ಹಿಂದೂಸ್ಥಾನವು ನೂರಾರು ಕೋಮುಗಳಾಗಿ ವಿಂಗಡವಾಯಿತು.

ಕೋಮುವಾರು ಪಿಡುಗೂತವು ಜಗತ್ತನ್ನೇ ಆವರಿಸಿದೆ. ದಕ್ಷಿಣ ಆಫ್ರಿಕಾದಲ್ಲಿ ಬಿಳಿಜನರು ಭಾರತೀಯರ ಬಗ್ಗೆ ತೆಳಿದಿರುವ ಕರಿ ನೀತಿಯೂ ಕೋಮುವಾರು ಪ್ರೇರಿತವಾದುದೇ. ಅಮೇರಿಕನರು ನೀಗ್ರೋಗಳ ಬಗ್ಗೆ ತೋರಿಸುತ್ತಿರುವ ಅಸಹ್ಯ ವೃತ್ತಿಯು ಕೋಮುವಾರು ಪಿಶಾಚಿಯ ನಗ್ನ ನೃತ್ಯವೇ. ಬಿಳಿಯರು ಕಪ್ಪು ಜನರು ಎಂಬ ಭಾವನೆಗೆ ಕಾರಣವಾದರೂ ಈ ಕೋಮುವಾರು ಕಲ್ಪನೆಯೇ. ಜಗತ್ತಿನಲ್ಲಿ ಆದ ಮತ್ತು ಆಗುತ್ತಿರುವ ಮರಂತಗಳಿಗೆ, ಬಹುಸಂಖ್ಯೆಯ ಯುದ್ಧಗಳಿಗೆ ಈ ಕೋಮುವಾರು ಭಾವನೆಯೇ ಕಾರಣ ಜರ್ಮನರು ತಾವು ಆರ್ಯರೆಂದೂ, ಸಂಸ್ಕಾರಿಗಳೆಂದೂ ಪರಿವಿಲ್ಲರೆಂದೂ ಭಾವಿಸಿ ಉಳಿದವರನ್ನು ಬಾಳಿಬದುಕಲು ಯತ್ನಿಸಿದರು. ಪಾಶ್ಚಿಮಾತ್ಯ ಪೌರ್ವಾತ್ಯರನ್ನು 'ನಿಗ್ಗರ್ಸ್' ಎಂದು ಕರೆದು ತಮಗಿಂತಲೂ ಕೀಳೆಂದು ಭಾವಿಸಿರುವುದು ಈ ರೀತಿಯ ಭಾವನೆಗಳೇ ಜಗತ್ತಿನ ಅಶಾಂತಿಗೆ ಕಾರಣವಾಗಿವೆ. ಈ ವಿಷಪೂರಿತವಾಗಿ ನೂರಾರು ಯುದ್ಧಗಳಾದರೂ ಜಗತ್ತು ಸರಿದಾರಿಗೆ ಬಂದಿಲ್ಲ. ಶಾಂತಿಯ ಪೂರ್ವತಃ ಪರಿಚಯ ಮಾಡಿಕೊಂಡಿಲ್ಲ. ಮುಂದೆ ಮೂರನೆಯ ಮಹಾ ಸಂಗ್ರಾಮವು ಕಪ್ಪು ಮತ್ತು ಬಿಳಿಜನರೊಳಗೆ ಆಗುವ ಸಂಭವವಿಲ್ಲದಿಲ್ಲ. ಈ ರೀತಿ ಹಿಂದೂ ದೇಶದಲ್ಲಿ ಮಾತ್ರವಲ್ಲ; ಇಡೀ ಜಗತ್ತಿನ ಸರ್ವದೆಯಲ್ಲೂ ಈ ತತ್ವವು ಹುಟ್ಟಿ ಮಾನವಗಣದ ವಿನಾಶಕ್ಕೆ ಕಾರಣವಾಗಿದೆ.

ಈ ಕೋಮುವಾರು ಭಾವನೆಯು ನಮ್ಮ ಜಾತೀಯ ಮೂಲಬೇಂಬುದನ್ನು ಹಿಂದೀ ಸರಕಾರವು ಮನಗಂಡಿದೆ. ಆದ್ದರಿಂದಲೇ ಪ್ರತ್ಯೇಕ ಸಂತತಿಗಳನ್ನು ನಿರ್ಮೂಲಗೊಳಿಸಿ ಪೂರ್ಣ ಸಮಾಜವನ್ನು ಒಂದೇ ಅಂತಸ್ಥಿನಲ್ಲಿ ನಿಲ್ಲಿಸುವ ಪ್ರಯತ್ನ ಮಾಡುತ್ತಿದೆ. ಆದ್ದರಿಂದಲೇ ನಮ್ಮ ಈಗಿನ ಜನತಾ ಸರಕಾರವು ಹರಿಜನರು, ದಳವರು ಎಂದು ನಮ್ಮ ಸಮಾಜದ ಒಂದು ಭಾಗವನ್ನು ಕೆಳಗೆ ತಳ್ಳುವ ನೀತಿಯನ್ನು ಖಂಡಿಸಿ ಹಾಗೆ ಮಾಡುವವರನ್ನು ಶಿಕ್ಷಿಸುವ ಖಾನೂನು ಮಾಡಿದೆ. ಈ ಪ್ರಯತ್ನ ಜಯಪ್ರದವಾಗಿ ಮುಸ್ಲೀಂ, ಕ್ರೈಸ್ತಿಯನ್, ಹಿಂದೂ, ಬ್ರಾಹ್ಮಣ, ಹೊಲೆಯ, ಕ್ಷತ್ರಿಯ ಎಂಬ ಜಾತೀಯ ಭೂತ ಮಯವಾಗಿ ಈ ಭಿನ್ನ ಭಾವವು ಅವರವರ ಅಂತರಿಕ ಧರ್ಮಶ್ರದ್ಧೆಗಳಿಗೆ ಮಾತ್ರ ಸೀಮಿತವಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಅದರ ಹೆಸರಿಲ್ಲದಂತೆ ಆಗಲೆಂದು ಸರ್ವರೂ ಅಪೇಕ್ಷಿಸಬೇಕಾಗಿದೆ.

ಕೋಮುವಾರು ತತ್ವ ಬೆಳೆಯಲು ಸಂಕುಚಿತ ಮನೋಭಾವದ ರಾಜಕೀಯ ಕೆಲಸಗಾರರು ಕಾರಣವೆಂದು ಹೇಳಬೇಕು. ರಾಜಕೀಯಕ್ಕೆ ತಮ್ಮ ಧರ್ಮದ ಬಣ್ಣ ಬಳೆಯುವದರಿಂದಲೂ ಅನರ್ಥವಾಗುತ್ತದೆ. ಕೊಡಗು ಕೋಮುವಾರು ಭಾವನೆಯಿಂದ ನಿರ್ಲಿಪ್ತವಾಗಿತ್ತು. ಇಲ್ಲಿಯ ಕೊಡವರು, ಮುಸಲ್ಮಾನರು, ಗೌಡರು, ಕೈವ, ಬ್ರಾಹ್ಮಣ, ಕ್ರಿಶ್ಚಿಯನರೆಲ್ಲರೂ ಒಂದೇ ತಾಯಿಯ ಮಕ್ಕಳಂತೆ ಬದುಕಿದ್ದರು. ಈಗಲೂ ಇವರೆಲ್ಲ ನಿರ್ವಿಘ್ನವಾಗಿ ಹಲವಿವೆ. ಹಿಂದೂಸ್ಥಾನಕ್ಕೆ ಪಾಕಿಸ್ತಾನದ ಸಮಸ್ಯೆಯೊಂದು ಕಗ್ಗಂಟಾಗಿ ಭಾರತದ ಸರ್ವ ಪ್ರಗತಿ ಪಥಕ್ಕೂ ಅಡಚಣೆಯೊಗಿ ಪರಿಣಮಿಸಿದ್ದಂತೆ ಕೊಡಗಿಗೆ ಕೊಡಗಿನ ಭವಿಷ್ಯ ಸಮಸ್ಯೆಯು ಸಂಭವಿಸಿದೆ. ಪ್ರತಿಯೊಂದು ಕ್ಷೇತ್ರದಲ್ಲೂ ಈ ಪ್ರಶ್ನೆಯು ಛಾಯೆ ಬೀಳತೊಡಗಿದೆ ಸಹಕಾರ ಸಂಘಗಳ ಮಹಾಸಭೆಗಳಿಗೆ ಅಧ್ಯಕ್ಷರನ್ನು ಆರಿಸುವಾಗ ಜಿಲ್ಲೆಯ ಪ್ರತ್ಯೇಕವಾದಿಗಳೇ ಯೂ ಸಂಯೋಜನವಾದಿಗಳೇ ಎಂದು ನೋಡಲಾಗುತ್ತಿದೆ. ಒಂದೆ ಬಾಷಣ, ಇಲ್ಲವೇ ಜೋರೆ ವಿಷಯಿಂಗಿನ ವಿಮರ್ಶನವಾದರೂ ಈ ಅಳತೆ ಕೋಲೇ ಎಲ್ಲದಕ್ಕೂ ಅನ್ವಯಿಸಲ್ಪಟ್ಟು, ಇದಕ್ಕೆಲ್ಲಾ ಪಕ್ಷಪಾತದ ರಂಗನ್ನು ಹಚ್ಚಲಾಗುತ್ತಿದೆ. ಶಾಂತಿ ಸೌಹಾರ್ದತೆಯು ಸರ್ವೋತ್ತರವಾಗಿದ್ದ ಕೊಡಗಿನಲ್ಲಿ ಈ ವಿಷ ಬೀಜ ನೊಳಕೆ ಗೊಂಡಿದೆ.

ಕೊಡಗಿನ ಭವಿಷ್ಯದ ಸಮಸ್ಯೆಯನ್ನು ದೇಶದ ಆರ್ಥಿಕ, ಸೈನಿಕ, ಸಾಂಸ್ಕೃತಿಕ ದೃಷ್ಟಿಗಳಿಂದ ನೋಡುವದನ್ನು ಬಿಟ್ಟು ಕೇವಲ ಕೋಮುಗಳ ದೃಷ್ಟಿಯಿಂದ ನೋಡಲಾಗುತ್ತಿದೆಯೆನ್ನಬಹುದು. ಭವಿಷ್ಯದ ಸಮಸ್ಯೆಯು ಕೋಮುವಾರು ಭಾವನೆಯಿಂದ ವಿಪರೀತವಾಗಿ ನೂರಾರು ವರ್ಷಗಳ ಸಮೃದ್ಧಿತ ಜೀವನದ ನಾಶಕ್ಕೆ ಕಾರಣವಾಗಿದೆ. ಉದಾಹರಣೆಗೆ ಗೌಡ ಜನಾಂಗವು ಇರುವಲ್ಲಿ ಕೊಡವ ಜನಾಂಗವು ಮಿಶ್ರಿಗುಣಕೆಲಸಕ್ಕೆ ಗೌಡರು ಬಾರದಂತೆಲ್ಲ ಕೊಡವರೂ ಆಸಹಕಾರಕ್ಕೆ ತೊಡಗಿದ್ದಾರೆ ಈ ಭೇದಭಾವದಿಂದ ತುಟ್ಟಿ ಹುಣ್ಣಿಮೆಗಳೂ ಕೂಡ ತಮ್ಮ ಹಿಂದಿನ ಸೌಭಾಗ್ಯವನ್ನು ಕಳೆದುಕೊಳ್ಳುತ್ತಿವೆ. ಕೊಡಗಿನ ಭವಿಷ್ಯದ ಸಮಸ್ಯೆಯು ಕೊಡವ ಮತ್ತಿತರ ಕೋಮಿನೊಳಗಿನ ಸಮಸ್ಯೆಯೆಂಬ ಭಾವನೆಗೆ ಎಡೆಯಾಗದೆ ಕೊಡವರು ಕೊಡಗನ್ನು ಬೇರೆ ಇದಲೆತ್ತಿಸುವದು ತಮ್ಮ ದಬ್ಬಾಳಿಕೆಯನ್ನು ತಡೆಯಲ್ಲಿನೆ ನಡೆಸಲಿಕ್ಕೆ ಎಂದೂ ಪ್ರಚಾರವಾಗುತ್ತಿದೆ. ಈ ದಬ್ಬಾಳಿಕೆಯನ್ನು ಮುರಿಯಲು ದೊಡ್ಡ ಪ್ರಾಂತ ದೊಡನೆ ಸಂಯೋಜನೆಯೇ ಮದ್ದು ಎನ್ನುವವರೂ ಇದ್ದಾರೆ. ಕೊಡಗಿನ ಭವಿಷ್ಯದ ಸಮಸ್ಯೆಗೆ ಈ ಬಣ್ಣ ಬಳೆದು ಪ್ರಚಾರ ಮಾಡುತ್ತಿರುವವರಿಂದ ದೇಶದ್ರೋಹವಾಗುತ್ತಿದೆಯೆನ್ನಬಹುದು. ದೇಶನ್ಯಾಧಿಕಾರಿಯು ಶಕ್ತರೆ ಇಲ್ಲವೆಂದರೆ ಕೊಡಗೇತರರಿಗೆ ಕೊಡವದಿಲ್ಲವೆಂದು ಕೋಮುವಾರು ಬಣ್ಣ ಬಳೆಯಲ್ಪಡುತ್ತಿದೆ! ಅಧಿಕಾರಿಗಳು ಬೇಕೆಂದು ದಬ್ಬಾಳಿಕೆ ನಡೆಸುತ್ತಿರುವರೆನ್ನಲಾಗುತ್ತಿದೆ. ಈ ರೀತಿಯ ದುಷ್ಪ್ರಚಾರದಿಂದ ಕೊಡಗಿನ ವಾತಾವರಣವೇ ಕಲುಷಿತವಾಗಿದೆ. ಕೊಡಗಿನ ಭವಿಷ್ಯದ ಪ್ರಶ್ನೆಯು ಕೋಮುವಾರು ಭಾವನೆಯು ಕೊಳಕು ಚರಂಡಿಗೆ ಎಳೆಯಲ್ಪಟ್ಟಿದೆ.

ಈ ಸಂದರ್ಭದಲ್ಲಿ ಕೊಡಗಿನ ರಾಜಕೀಯ ಮುಂದಾಳುಗಳಿಗೂ, ಸರಕಾರಿ ಅಧಿಕಾರಿಗಳಿಗೂ, ಸರ್ವಜನಿಕರಿಗೂ ಈ ಲೇಖನದ ಮೂಲಕ ಎಚ್ಚರಿಕೆಯ ಮಾತನ್ನು ಹೇಳಬಯಸಿದ್ದೇನೆ. ರಾಜಕೀಯ ಪ್ರಚಾರಕರು ತಮ್ಮ ಜವಾಬ್ದಾರಿಯನ್ನರಿಯದೆ ತಮ್ಮ ಧ್ಯೇಯಸಾಧಿಸಬೇಕೆಂಬ ಒಂದೇ ಗುರಿಯನ್ನಿಟ್ಟು ವರ್ತಿಸಿದರೆ ಮುಂದಿನ ಅನರ್ಥಗಳಿಗೆ ಅವರೇ ಹೊಣೆಗಾರರಾಗಬಹುದು. ಹಿಂದೂ ದೇಶದಲ್ಲಾದ ಘೋರನೆಗಳಿಂದ ನಾವು ಬುದ್ಧಿಕಲಿಯಬೇಕಿದೆ. ಸರಕಾರವು ಮುಂದಿನ ನೋಡಿ ಪಾಕಿಸ್ತಾನದ ತನ್ನ ಪ್ರಜೆಗಳಿಂದ ಎಲ್ಲರಿಗೂ ಸರಿಸಮಾನವಾದ ಜನಾಂಗಲತೆ ಒದಗಿಸಿಕೊಡತೆಕ್ಕು. ಸಾರ್ವಜನಿಕರು ಎಚ್ಚೆತ್ತು ತಮ್ಮ ಸಾವಿರಾರು ವರ್ಷಗಳ ಸೌಹಾರ್ದತೆ, ಪ್ರೇಮಾಭಿಮಾನವನ್ನು ಸ್ವಾರ್ಥೀ ಪ್ರಚಾರಕರಿಂ ಅಪ ಪ್ರಚಾರಗಳಿಗೆ ಬಲಿಕೊಟ್ಟು ನಾಡಿನ ಅಧಃಪತನವನ್ನು ಮಾಡಬಾರದು. ಕೊಡಗಿನ ಭವಿಷ್ಯವ ಪ್ರಶ್ನೆಯನ್ನು ಕೋಮುವಾದ ದೃಷ್ಟಿಕೋನದಿಂದ ಎತ್ತಿ ಕೊಡಗಿನವರೆಲ್ಲರ ಸಾಮೂಹಿಕ ಕ್ಷೇಮವಾದ ದೃಷ್ಟಿಯಿಂದ ಬಗೆಹರಿಸಬೇಕಾಗಿದೆ. ಕೊಡಗಿನ ಜನರೆಲ್ಲರಿಗೆ ಹಿತವಾಗುವಂತಿದ್ದರೆ ಕೊಡಗನ್ನು ಪ್ರತ್ಯೇಕವಾಗಿಡುವದು; ಹಿತವಿಲ್ಲವೆಂದು ತೋರಿದರೆ ಸಂಯೋಜನೆಯಾಗುವದು. ಆದ್ದರಿಂದ ಇಂಥಾ ಒಂದು ನಿರ್ಣಯಕ್ಕೆ ಬರಲು ಸಹಾಯಕವಾಗುವಂತೆ ಸಂಯೋಜನೆಯಾಗುವದರಿಂದ ಆಗುವ ಹಿತಾಹಿತಗಳನ್ನು, ಬೇರೆ ಇರುವದರಿಂದಾಗುವ ಸಾಧಕಬಾಧಕಗಳನ್ನು ಜನತೆಯ ಮುಂದೆ ಸಮಗ್ರದೃಷ್ಟಿಯಿಂದ ಇಡಬೇಕಾದುದು ಮುಂದಾಳುಗಳೆನ್ನಿಸುವವರ ಕರ್ತವ್ಯ. ಹಾಗೆ ಮಾಡಿದರೆ ನಮ್ಮ ಪರಸ್ಪರ ಸೌಹಾರ್ದತೆ ಉಳಿದೀತು. ಒಂದು ವೇಳೆ ಸಂಯೋಜನೆಯಾದರೂ, ಇಲ್ಲವೇ ಪ್ರತ್ಯೇಕವಾದ್ದರೂ ನಾವು ಈ ಹಿಂದಿನಂತೆಯೇ ನಿರಿಕರಯಪರಾಗಿ, ಗ್ರಾಮಸ್ಥರಾಗಿ, ನಾಡಿನವರಾಗಿ ಜೀವಿಸಬೇಕಿರುವದರಿಂದ ಕೋಮುವಾರು ಭಾವನೆಯನ್ನು ಒಮ್ಮೆ ಬೆಳೆಯಗೊಟ್ಟರೆ ನಮ್ಮ ಜೀವನ ಅಸಹ್ಯವಾಗುವದು. ಮುಂದಿನ ಪೀಳಿಗೆಯನ್ನೂ ಕೂಡ ಅಧೋಗತಿಗಿಳಿಸಿದಂತಾಗುವದು. ಆದ್ದರಿಂದ ಈ ವಿಚಾರದಲ್ಲಿ ಸರ್ವಜನಿಕರೂ, ಮುಂದಾಳುಗಳೂ, ಸರಕಾರವೂ ಎಚ್ಚರ ಗೊಂಡು ವರ್ತಿಸಬೇಕಾಗಿದೆ.

'ಓರಿಯಂಟಲ್'

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಗವರ್ನರ್ಮೆಂಟ್ ಪ್ರೈವೇಟ್ ಇಂಡಿಯಾದಲ್ಲಿ ಸ್ಥಾಪಿತವಾದ್ದು (ಸದಸ್ಯರ ಹೊಸ ವಿಮೆ ವಿಮಿತವಾಗಿದೆ.)

ವರ್ತಮಾನದ ಬಾಗಿಲಿಗೆ 'ಓರಿಯಂಟಲ್' ಮುಂದೆ, ಇತರೆಯವು ಹಿಂಬಾಲಿಸುತ್ತವೆ. ಮಲಯ, ಮತ್ತು ಬರ್ಮಾಗಳ ಪಾಲಿಸಿದಾರರಿಗೆ ಜನನ ಕಾಲದಲ್ಲಿ ರಜತ ಸಿಲ್ವರ್ ಪಾಲಿಸಿಗಳನ್ನು ಪುನರುಜ್ಜೀವನಗೊಳಿಸಿದ ಜೀವ ವಿಮಾ ಕಂಪನಿಗಳಲ್ಲಿ ಓರಿಯಂಟಲೇ ಮೊಟ್ಟ ಮೊದಲನೇಯದು. ಅದು ಬಾಯಿಮಾದ ಕಂತುಗಳ ಮೇಲೆ ಬಣ್ಣ ತೆಗೆದುಕೊಳ್ಳಲ್ಲ. ಆಫಾವಾ ಬಳ್ಳೇ ಆಯೋಗ್ಯದ ಸರ್ಟಿಫಿಕೇಟ್ ಕೋರಲಿಲ್ಲ.

ಧಾರಾಳತನವೇ ವೃದ್ಧಿಯಾಗುತ್ತಿರುವ
ನಮ್ಮ ಜನಪ್ರಿಯತೆಯ ರಹಸ್ಯವಾಗಿದೆ.

ಗಳಿಕೆಯ ಹೊಸ ವ್ಯವಹಾರ .... ಸುಮಾರು ರೂ. ೨೮,೬೦,೦೦,೦೦೦
ನಿಧಿ ತಾ. 31—12—1946ರಲ್ಲಿ .... ಹೆಚ್ಚಾಗಿ ರೂ. ೪೪,೫೫,೦೦,೦೦೦

ನಿಮ್ಮ ಜೀವ ವಿಮೆಯ ಪ್ರತಿಯೊಂದು ಬೇಡಿಕೆಯ ಅಕಾಲಿಕ ಯೋಜನೆಯು ನಮ್ಮಲ್ಲಿದೆ.

ಮುಖ್ಯ ಬಜೇರಿ—ಓರಿಯಂಟಲ್ ಬಿಲ್ಡಿಂಗ್ಸ್, ಫ್ಲೋರ್ಟ್, ಬೊಂಬಾಯಿ,
ಇನ್ಸ್‌ಪೆಕ್ಟರರ ಆಫೀಸು—ಕೆ. ಪದ್ಮಾಶಿವರೋಡು, ಮಂಗಳೂರು.

ಕೊ ಡ ಗು

ತಾ. ೨೮-೧೧-೧೯೪೭ ನೇ ಶುಕ್ರವಾರ

ಹು ತ್ತ ರಿ.

ಕೊಡಗಿನ ಜನರ ಪ್ರಾಮುಖ್ಯ ಹಬ್ಬ ಗಳೆಲ್ಲಾಂದಾದ. ಹುತ್ತರಿ ಸನ್ನಿಹಿತವಾಗಿ ದೆ. ವರ್ಷದ ಪರಿಶ್ರಮದ ಫಲವಾಗಿ ಭೂಮಿಯಲ್ಲಿ ಬೆಳೆದ ಹೊಸ ಬೆಳೆಯನ್ನು ಮನೆಗೆ ತರುವ ಸಂಭ್ರಮದ ಉತ್ಸವ ಹು ತ್ತರಿ. ಇದು ಪ್ರಾಮುಖ್ಯವಾಗಿ ರೈತರ ಹಬ್ಬವೆನ್ನಬಹುದು. ಆದರೆ ಈ ವರ್ಷ ರೈತನು ಸಂತೋಷದಿಂದ ಹುತ್ತರಿ ಆಚರಿ ಸುವದು ಕಠಿಣವಾಗಿದೆ. ಕಂಟ್ರೋಲು, ಜೀವನಾವಶ್ಯಕ ಪದಾರ್ಥಗಳ ಅಭಾವ- ಇವು ಇಂಥಾ ಹಬ್ಬಹುಣ್ಣಿಮೆಗಳ ಮೆರುಗ ನ್ನು ಕಡಿಮೆ ಮಾಡಿವೆ. ಹೀಗಿದ್ದರೂ ಇಷ್ಟು ವರ್ಷಗಳ ಪರಿಗೆ ಭೂದೇವಿಯು ತನ್ನ ಪರಿ ಶ್ರಮಕ್ಕೆ ಪರಿಯಾಗಿಪ್ರಸನ್ನಳಾಗಿದ್ದಾಳೆ. ಬ ರುವ ಒಂದು ವರ್ಷದ ಜೀವನದ ವ್ಯವಸ್ಥೆ ಯಾಯಿತು ಎಂಬಸಂತೋಷ ರೈತನಿಗಿರುತ್ತಿತ್ತು. ಆದರೆ ಈ ವರ್ಷ ರೈತನ ಸ್ಥಿತಿ ಶೋಚನೀಯವಾಗಿದೆ ಗದ್ದೆಯಲ್ಲಿ ಬೆಳೆ ಬೆಳೆದಿದೆ. ಕದಿರು ದಾಟಿದೆ. ಆದರೆ ಕಳೆದ ಒಂದು ತಿಂಗಳಿಂದ ಮಳೆಹೊಡೆಯು ದರ ಕಾರಣ ದಾಟಿದ ಕದಿರು ಬಾಗದೆ ಒ ಣಗುತ್ತಿದೆ. ಕೊಡಗಿನ ಕಣಜವೆನಿಸಿದ ಹತ್ತುಗುಟ್ಟುನಾಡಿನಲ್ಲಿ ಲಕ್ಷ್ಮಣತೀರ್ಥ ಹೊಳೆಯು ಎರಡುಬದಿಯ ಭೂಮಿಯಲ್ಲದೆ, ನಡುನಡುವಿನ ಭೂಮಿಗಳೂ ಒಣಗಿ ಹೋ ಗಿವೆ. 'ಕೈಗೆ ಬಂದದ್ದು ಬಾಯಿಗೆ ಬರ ಲಿಲ್ಲ'ನೆಂಬಂತೆ ಬೆಳೆ ಆಗಿತ್ತು. ಬತ್ತ ಅಗುಪ ಪರಿಸ್ಥಿತಿಯಲ್ಲಿ ಹೀಗಾಗಿ ಸಹ ಸ್ರಾರು ಬಟ್ಟೆ ಭೂಮಿಯಲ್ಲಿ ಕೇವಲ ಹುಲ್ಲು ಮಾತ್ರ ದೊರೆಯು ಬಹುದು. ಇಂಥಾ ದುಃಖಮಯ ಸನ್ನಿವೇಶದಲ್ಲಿ ಹು ತ್ತರಿಯು ರೈತನಿಗೆ ಸಂತೋಷ ಪ್ರದವಾಗಿ ಲ್ಲ. ರೈತನ ಈ ದಾರುಣ ಪರಿಸ್ಥಿತಿಯಿ ನ್ನಾದರೂ ಸರಕಾರವು ಬೆಳೆದ ಆತನ ಅಲ್ಪ ಸ್ವಲ್ಪ ಬತ್ತಕ್ಕೆ ಹೆಚ್ಚಿನ ಕ್ರಯ ದೊರೆಯು ವಂತೆ ಮಾಡದಿದ್ದರೆ ಆತನ ಜೀವನವು ಅ ಪರಿಮಿತ ದುಃಖದ ಆಗರವಾಗುವದು.

ದಿವಂಗತ ಬಲ್ಯಂಡ ಪೂವಯ್ಯ.

ತಾರೀಕು ೨೫-೧೧-೪೭ರಲ್ಲಿ ಶಿವಾ ಧೀನರಾದ ಶ್ರೀ ಪೂವಯ್ಯನವರು ತಮ್ಮ ಜೀವನದ ೭೬ ವರ್ಷಗಳಷ್ಟು ಕೊಡಗು ಪ್ರಾಂತೀಕ ಬ್ಯಾಂಕಿನ ಸೇವೆಯಲ್ಲಿ ಕಳೆದಿ ರುವರು. ೧೯೩೧ ರಲ್ಲಿ ಬ್ಯಾಂಕು ಪ್ರಾರಂಭ ವಾದ ನಂತರ ಅವರ ಕಡೆ ದಿನದ ವರೆಗೂ ಬ್ಯಾಂಕಿನ ಮೇನೇಜರಾಗಿ ಅವಿಶ್ರಾಂತ ದುಡಿದರು. ದೊಡ್ಡ ಮೇಧಾವಿಗಳಲ್ಲದಿ ದ್ದರೂ ತಮ್ಮ ಅವಿರಾಂತ ದುಡಿಮೆಯ, ಪ್ರ ಮಾಣಿಕತನದ ನೆರವಿನ ಸಹಾಯದಿಂದ ಜನರ ಪ್ರೀತಿಗೆ ಪಾತ್ರರಾಗಿದ್ದರು. ಇವರ ಮರಣ ದಿಂದ ಪ್ರಾ. ಬ್ಯಾಂಕು ಒಬ್ಬ ಉತ್ತಮ ಕೆ ಲಸಗಾರರನ್ನು ಕಳಕೊಂಡಿದೆ. ಮೊದ ಲೊಮ್ಮೆ ಅವರು ಈ ಪತ್ರಿಕೆಯ ಅಧೀನಕಿ ರಿ ತಮ್ಮ ಸೇವೆ ಸಲ್ಲಿಸಿದ್ದರು. ತಮ್ಮ ಆಚಾರ, ಪ್ರಾಮಿಕತೆಗಳಲ್ಲಿ ಜನರಿಗೆ ಬೇ ಷಾದನರಾಗಿದ್ದರು. ಅವರ ಕವಸಂಸ್ಕಾ ರಕ್ಕೆ ಸೇರಿದ ಜನಸ್ತೋಮವೇ ಅವರ ಜನ ಪ್ರೀತಿಗೆ ದ್ಯೋತಕವಾಗಿತ್ತು. ಪೂ ವಯ್ಯನವರ ನಿಧನದಿಂದ ಅನಾಥರಂತಾ ದ ಅವರ ಕುಟುಂಬಕ್ಕೆ ದುಃಖ ಸೈರಣೆ ಶ ಕ್ತಿಯನ್ನು ಭಗವಂತನು ಕೊಡಲಿ. ಕಡೆ ಉಸಿರಿನ ತನಕ ಸಹಕಾರಿ ಬ್ಯಾಂಕಿಗಾಗಿ ದುಡಿದ ಅವರ ಆತ್ಮಕ್ಕೆ ಚಿರಶಾಂತಿಯು ದೊರೆಯಲಿ.

ವಿ ನಂ ತಿ.

ಹುತ್ತರಿ ರಜೆಯ ವಿಷಿತ್ತ ತಾ. ೫-೧೨-೪೭ ರಲ್ಲಿ ಪತ್ರಿಕೆಯು ಹೊರ ಡಲಾರದು.

ಮೇನೇಜರು,
'ಕೊಡಗು' ಮಡಿಕೇರಿ.

ವ ರ್ತ ಮಾ ನ.

ಉತ್ತರ ಕೊಡಗು ಹೆಬ್ಬಾಲೆಯಲ್ಲಿ ತಾ. ೧೯-೧೧-೪೭ರಲ್ಲಿ 'ಜೈ ಹಿಂದ್' ಯುವ ಜನ ಸಂಘ' ಒಂದು ಸ್ಥಾಪಿಸಲ್ಪ ಟ್ಟಿತು. ಆ ದಿನದ ಮೀಟಿಂಗಿಗೆ ಶ್ರೀ ಸಿ. ಎಂ. ಉಲ್ಲಾಸರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಗಳಾದ ಬಿಗ್ಗಪ್ಪನ ವರು, ನಂಬಿಆರ್‌ರವರು, ಕೆ. ಕೆ. ಐ ಯ್ಯಮ್ಮನವರು, ಹೊನ್ನಪ್ಪನವರು, ಹು ಚ್ಚಪ್ಪನವರು ಮತ್ತು ಪುಟ್ಟುಸ್ವಾಮಿಯ ವರು 'ಸಂಘ ಶಕ್ತಿ, ಸಂಘದ ಉದ್ದೇಶ, ಸಂಘದ ಪ್ರಯೋಜನ ಮುಂತಾದ ವಿಷ ಯಗಳಲ್ಲಿ ಮಾತಾಡಿದರು

ಕನ್ನಡ ಭಾಷಾ ಪ್ರೇಮದಿಂದ ಶ್ರೀ ಕೆ ಎಂ. ಅಪ್ಪಣ್ಣನವರು ಸೊನ್ನೆಪೇಟೆ ಮೂಮ್ಮಡಿಕ ಶಾಲೆಯಲ್ಲಿ ಕಳೆದ ವರ್ಷ ಪರೀಕ್ಷೆಯಲ್ಲಿ ಕನ್ನಡದಲ್ಲಿ ಪ್ರಥಮ ಶ್ರೇ ಣಿಯಲ್ಲಿ ಬಂದಲಸೇ ತರಗತಿಯ ಶ್ರೀಮ ತಿ ಇಂದ್ರಾಣಿ ಇವರಿಗೆ ರೂ. ೨೦/-, ಒ ನೇ ದರ್ಜೆಯ ಶ್ರೀ ಕಂಬೆಯಂಡ ಎ. ಐಯ್ಯಪ್ಪನವರಿಗೆ ರೂ ೧೦/-, ಒನೇ ದ ರ್ಜೆಯ ಶ್ರೀ ಟಿ ಕುಮಾರಸ್ವಾಮಿಯವರಿ ಗೆ ರೂ. ೧೦/- ಬಹುಮಾನ ಕೊಟ್ಟರಂದ ರಿಂತೆ.

ತಾ. ೫-೧೧-೪೭ರಿಂದ ೪-೧೨-೪೭ ರ ವರೆಗೆ ಫ್ರೇಜರ್‌ಪೇಟೆಯಲ್ಲಿ ಶ್ರೀ ಸಿದ್ದ ಗಣೇಶ ಸ್ವಾಮಿಯ ರಥೋತ್ಸವವು ನಡೆ ಯುವದು. ಈ ಸಂದರ್ಭದಲ್ಲಿ ಅಂದ ರೆ ತಾ. ೨-೧೨-೪೭ರಲ್ಲಿ ಗೋ ಪ್ರದರ್ಶ ನ ನಡೆಯುವದು. ತಾ. ೪-೧೨-೪೭ರ ಲ್ಲಿ ಉತ್ಸವ ರಾತ್ರುಗಳಿಗೆ ಬಹುಮಾನ ವಿತ ರಣೆಯಾಗುವುದು.

ಮೇಜರ್ ಜನರಲ್‌ರಾಗಿದ್ದ ಶ್ರೀ. ಕೊಡಂದೆರ ಕಾರ್ಯಪ್ಪನವರನ್ನು ಲೆಫ್ಟೆ ನೆಂಟ್ ಜನರಲರಾಗಿ ನೇಮಿಸಿ ಪೂರ್ವ 'ಕಮಾಂಡಿನ ಜನರಲ್ ಆಫೀಸರ್ ಕ ಮಾಂಡಿಂಗ್-ಇನ್ ಚೀಫ್'ರಾಗಿ ನೇಮ ಕ ಮಾಡಿರುವರು.

ಕೆಗ್ಗಟ್ಟುನಾಡಿನ ಜಾನುವಾರುಗಳ ಜಾತ್ರೆಯು ತಾ. ೧೩-೧೨-೪೭ ರಲ್ಲಿ ಪೊ ನ್ನಂಪೇಟೆಯಲ್ಲಿ ಕೊಡಗು ಬ್ರಾಂಚ್ ಕಮಿ ಷನರವರ ಅಧ್ಯಕ್ಷತೆಯಲ್ಲಿ ನಡೆಯುವದು.

ಕೊಡಗು ಪ್ರಾಂತೀಕ ಸಹಕಾರ ಬ್ಯಾಂಕಿನ ಮೇನೇಜರಾಗಿದ್ದ ಶ್ರೀ. ಬ ಲ್ಯಂಡ ಪೂವಯ್ಯನವರು ತಮ್ಮ ೭೩ ನೇ ವಯಸಿನಲ್ಲಿ ತಾರೀಕು ೨೫-೧೧-೪೭ ರ ಲ್ಲಿ ಸ್ವರ್ಗಸ್ಥರಾದರು.

ಅಮ್ಮತ್ತಿ ಕೇಂದ್ರ ವಿದ್ಯಾಶಮ್ಮೇಳನವು ಇವೇ ದಿನೆಂಬರು ತಾರೀಕು ೧೫ ಮತ್ತು ೧೬ ರಲ್ಲಿ ಅಮ್ಮತ್ತಿ ಶಾಲಾ ಆವರಣದಲ್ಲಿ ನೊಬಲನೆ ದಿನೆ ಅಮಿಲಾ ಭಾರತ ಮಹಿಳಾ ಸಮ್ಮೇಳನದ ಕಾರ್ಯಕಾರಿ ಸದಸ್ಯೆ ಯೂ, ಆಂಧ್ರ ವಿಶ್ವವಿದ್ಯಾಲಯ ಸೆನೇ ಟ್ ಸದಸ್ಯೆಯೂ ಆದ ಶ್ರೀಮತಿ ಬಿ. ಕಾಮೇಶ್ವರಮ್ಮ ಕಂಪ್ಲಿ ಸ್ವಾಮಿ ಎಂ. ಎ ಅವರ ಅಧ್ಯಕ್ಷತೆಯಲ್ಲೂ, ಎರಡನೆ ದಿನ ಶ್ರೀಮಾನ್ ಐ. ಸಿ ಸುಬ್ಬಯ್ಯ ಎಂ. ಎ. ಬಿ. ಎಲ್. ಅವರ ಅಧ್ಯಕ್ಷತೆಯಲ್ಲೂ ನಡೆ ಯುವುದು. ವಿದ್ಯಾ ವಿಷಯಕ ಭಾಷಣ ಗಳೂ, ಹಣ್ಣು ಹಂಪಲು, ಕೈಗಾರಿಕೆ ವ ಸ್ತುಗಳು ಮತ್ತು ಹೊಲಿಗೆ ಕೆಲಸಗಳ ಪ್ರ ದರ್ಶನವೂ, ಸಾರ್ವಜನಿಕರಿಗೆ ಬಾಲ ಬಾಲಕಿಯರಿಗೆ ಆಟೋಟಗಳೂ ನಡೆ ಯುವುದು. ಚೀಫ್ ಕಮಿಷನರ್ ದಿ. ಬ. ಕೆ. ಚಂಗಪ್ಪನವರು ಸಮ್ಮೇಳನದ ಉದ್ಘಾಟನೆ ಮಾಡುವರು.

ಇಂಗ್ಲೆಂಡಿನಲ್ಲಿ ವೈದ್ಯಕೀಯ ವ್ಯಾಸಂ ಗವನ್ನಾಭ್ಯಸಿಸುತ್ತಿರುವ ನಿಸ್ಸಾ. ಕೊಂಗಂಡ ಸೀ ತಾ ಅಚ್ಚಯ್ಯನವರು ಎಫ್. ಆರ್. ಸಿ. ಎಸ್. ಪರೀಕ್ಷೆಯಲ್ಲಿ ತೇರ್ಗಡೆಯಾಗಿರು ವರು. ಕೊಡಗಿನವರಲ್ಲಿ ಈ ಪರೀಕ್ಷೆ ಯಲ್ಲಿ ಉತ್ತೀರ್ಣರಾದವರು ಇವರೊಬ್ಬ ರೆ. ಇವರು ಇಂಗ್ಲೆಂಡಿನಲ್ಲಿ ಇನ್ನೊಂದು ವರ್ಷ ಬಿದ್ದು 'ಪ್ಲಾಸ್ಟಿಕ್ ಸರ್ಜರಿ' ಅಧ್ಯಾ ಸ ಮಾಡಲಿರುವರು.

ಕೆಪ್ಟನ್ ವಾಲೇರಂಡ ಎಂ. ಮಂದ ಣ್ಣನವರು ತಾ. ೨೧-೧೧-೪೭ರಲ್ಲೂ, ಶ್ರೀ ಮೂಪೆರ ಪೊನ್ನಪ್ಪನವರು ಶಿವಾ ಧೀನರಾದರು.

ಶ್ರೀ ಚೆಪ್ಪುಡಿರ ಮುದ್ದಪ್ಪ ಸ್ಮಾರಕ ಹಾಕಿ ಕಪ್ಪಿನ ಸಂದ್ಯಾಟವಲ್ಲಿ ಫೈನಲ್ಸ್ ಪಂ ಟೀಮನ್ನು ತಾ. ೩೦-೧೧-೪೭ರಲ್ಲೂ, ಮಡಿಕೇರಿ ಕಾಟೇಜ್ ಕಪ್ಪಿನ ಆಟದಲ್ಲಿ ಫೈನಲ್ಸ್‌ಗೆ ಬಂದ ಎರಡು ಟೀಮುಗಳನ್ನು ತಾರೀಕು ೨೩-೧೧-೪೭ರಲ್ಲೂ ಮಡಿಕೇರಿ ಹೌಂಡರ್ಸ್ ಟೀಮಿನವರು ಸೋಲಿಸಿ ಕಪ್ಪುಗಳ ನ್ನು ಗೆದ್ದರು.

ಆರಾಯಿರ (ಎಡೆನಾಲ್ಕು) ನಾಡಿನ ವರು ೩೬ನೇ ಬುಧವಾರ ಪ್ರಾರ್ಥನಾಕಾಲ ೫ ಗಂಟೆಗೆ ವೀರಾಜಪೇಟೆಯಿಂದ ಕುಕ್ಕೂರಿ ಗೆ ಹೋಗುವ ರಸ್ತೆಬದಿ ಹರಿಜನರ ಹಳೆ ಶಾಲೆಯ ಪಕ್ಕದಲ್ಲಿ 'ಪ್ರಾಮೂಲೆ' ಎಂಬ ಹೊಸ ಮಂದಿನ್ನು ಹೆಗ್ಗಳ ಐಯ್ಯಪ್ಪ ದೇ ವರಿಂದ ಸ್ಥಾಪಿಸಿರುವರೆಂದು ತಿಳಿಯು ತ್ತೇವೆ.

ಕಳೆದ ಆಗಸ್ಟಿನಲ್ಲಿ ಮಡಿಕೇರಿ ಕೇಂ ದ್ರದಲ್ಲಿ ನಡೆದ ರಾಷ್ಟ್ರಭಾಷಾ ಪರೀಕ್ಷೆ ಯಲ್ಲಿ ಶ್ರೀಮತಿದುರಾದ ಉದಯಾಂಡ ಎ. ಗಂಗಮ್ಮ, ಬಿ. ಆರ್. ಮಂದಾಕಿನಿ, (ಪ್ರಥಮ ಶ್ರೇಣಿ) ಪಾಂಡಂಡ ಟಿ. ಸೀತ ಮ್ಮ, ಉದಿಯಂಡ ಎ. ಚಿನ್ನಮ್ಮ, ಕೋ ದಂಡ ಸಿ. ಮುದ್ದಮ್ಮ, ಟಿ ಎಸ್. ಶ್ರೀಪ ತಿ ಆಚಾರ್, ಎಸ್. ಎಸ್. ಸುಬ್ಬಮ್ಮ, ಎಂ. ಎಂ. ಮುತ್ತಮ್ಮ, ಬಿ. ಹೇಸಬಾ ಯಿ, ಬಿ. ಡಿ. ಪಾರ್ವತಿ, ಗೈಸಿಮೇರಿ ಡಿಸೋಜ ಇವರುಗಳು ತೇರ್ಗಡೆಯಾಗಿ ರುವರು.

ಸಾರ್ವಜನಿಕ ಮೀಟಿಂಗುಗಳು.

ತಾ. ೨೧-೧೧-೪೭ರಲ್ಲಿ ಮಂಗಳ ಗ್ರಾಮಸ್ಥರು ಶ್ರೀ ವಾಟೇರಿರ ಅಪ್ಪಯ್ಯನ ವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ತಮ್ಮ ಕೆಳಗಿ ನ ಠರಾವುಗಳನ್ನು ಅಂಗೀಕರಿಸಿದರು.

(೧) ತಾಲೂಕು ಸ್ಥಾನದಲ್ಲಿ ವಿಜಾ ರದಲ್ಲಿ ಕಳೆದ ಲೆಫ್ಟಿನೆಂಟ್ ಜನರಲ್ ದೇವೇಯರ ಅಭಿಪ್ರಾಯದಂತೆಲ್ಲಾ. ಆ ದ್ದರಿಂದ ಸರಕಾರವೇ ಕಾಲೇಜು ಸ್ಥಾಪಿ ಸಿ ನಡೆಸಬೇಕು.

(೨) ಸರಕಾರವೇ ಕಾಲೇಜು ಸ್ಥಾಪಿಸಿ ನಡೆಸಬೇಕೆಂಬ ಠರಾವಿಗೆ ವಿರುದ್ಧ ಓಟು ಮಾಡಿದ ಕೌನ್ಸಿಲ್ಲರ್‌ಗಳ ಮೇಲೆ ಈ ಸಭೆಯವರಿಗೆ ವಿಶ್ವಾಸವಿಲ್ಲ. ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು.

ರುದ್ರಗುಪ್ಪೆ.

ತಾ ೨೩ರಲ್ಲಿ ಶ್ರೀ ಮೂರ್ನಾಡ ಗಣಪ ತಿಯವರ ಅಧ್ಯಕ್ಷತೆಯಲ್ಲೂ ಒಂದು ಸಾ ರ್ವಜನಿಕ ಮೀಟಿಂಗು ನಡೆದು ಮೇಲಿನಂ ತೆ ಠರಾವು ಮಾಡಲಾಯಿತು.

ಬೆಳ್ಳುಮಾಡು.

ತಾ. ೨೩ರಲ್ಲಿ ಬೆಳ್ಳುಮಾಡಿನಲ್ಲಿ ಶ್ರೀ ಮೊತ್ತಂಡ ಚಿಂಗಪ್ಪನವರ ಅಧ್ಯಕ್ಷತೆಯ ಲ್ಲೂ, ಕೋಳೇರಿಯಲ್ಲಿ ಶ್ರೀ ಚೇನಂಡ ಕ ರುಂಬಯ್ಯನವರ ಅಧ್ಯಕ್ಷತೆಯಲ್ಲೂ, ಕೊಡಕೇರಿಯಲ್ಲಿ ಶ್ರೀ ಚೇರಂಡ ಬೆಳ್ಳಪ್ಪ ನವರ ಅಧ್ಯಕ್ಷತೆಯಲ್ಲೂ ಸಾರ್ವಜನಿಕ ಮೀಟಿಂಗು ನಡೆದು ಮೇಲಿನ ಅರ್ಧದ ಠ ರಾವುಗಳನ್ನು ಮಾಡಿದರು.

ಸೋಣೆಕೊಪ್ಪ.

ತಾ. ೨೩ರಲ್ಲಿ ಸೋಣೆಕೊಪ್ಪಲಿನಲ್ಲಿ ಶ್ರೀ ಪಂಗ್ಯಂಡ ಚಂಗಪ್ಪನವರ ಅಧ್ಯಕ್ಷ ತೆಯಲ್ಲಿ ಸಾರ್ವಜನಿಕ ಸಭೆಯೊಂದು ನಡೆ ಯಿತು. ಮೇಲಿನ ಅರ್ಧದ ಠರಾವುಗಳು ಸಭೆಯಲ್ಲಿ ಮಂಡಿಸಲ್ಪಟ್ಟವು. ಅಧ್ಯಕ್ಷ ಪ ರವಾಗಿ ಶ್ರೀ ಗಳಾದ ಜೆ. ಎ ಮಾದಪ್ಪ, ಕೆ. ಪಿ. ಕರುಂಬಯ್ಯ, ಜೆ. ಕೆ. ಉಸ್ಸಪ್ಪ, ಕೆ. ಎ ಚಿಣ್ಣಪ್ಪ ಕೋದಂಡ ನಂಜಪ್ಪ ಮೊದಲಾದವರು ಮಾತಾಡಿದರು. ವಿರೋಧವಾಗಿ ಶ್ರೀ ಗಳಾದ ಕೊಂಗಂಡ ಗಣಪತಿ, ಅಜ್ಜಿಕುಟ್ಟಿರ ಚಿಣ್ಣಪ್ಪ, ಅಜ್ಜಿ ಕುಟ್ಟಿರ ಕಮ್ಮಯ್ಯ, ಮಾಚಿಮಂಡ ನೆಂಜುಂದ, ಕೂಡಂದೆರ ಚಂಗಪ್ಪ ಮೊದಲಾದವರು ಮಾತಾಡಿದರು. ಬಟ್ಟೆ ಗೆ ಪಾಕಲಾಗಿ ಕೇವಲ ೫೦ ಜನರು ವಿ ರೋಧವಾಗಿ ಎದ್ದಿ ರೋಗಲಾಗಿ ಸುಮಾರು ೧೫೦ ಜನರು ಪರ ವಾಗಿ ಓಟು ಮಾಡಿದರಿಂದ ಮೇಲಿನ ಠರಾವು ಗಳು ಪಾಸಾದವು.

ಸೂ ಯೆ ರ್ ಕಾ ಂ ತಿ.

ವಿದ್ವಾನ್ ಐ. ಮಾ. ವೆಂಕ್ಟಣ್ಣನವ ರಿಂದ ರಚಿತವಾದ ಕನ್ನಡ ಕವನ ಸಂಗ್ರ ಹವು ಶೀಘ್ರದಲ್ಲಿ ಪ್ರಕಟವಾಗಲಿದೆ. ಉ ತ್ತಮ ಶೈಲಿಯ ಉದಾತ್ತ ಭಾವನೆಯು ಈ ಕವನಗಳು ಮನೋರಂಜವಾಗಿವೆ. ಕಾ ಗದದ ಅಭಾವದ ಕಾರಣ ಸ್ವಲ್ಪವೇ ಪ್ರ ತಿಗಳು ಅಚ್ಚಾಗಿರುವದರಿಂದ ಖಾಯಿಷ್ ದಾರರು ಶೀಘ್ರ ಕೊಡಗು ಸ್ವಗತಪರ ಸಂಘ, ಮಡಿಕೇರಿ ಈ ವಿಳಾಸಕ್ಕೆ ಒರೆದು ಕೊಳ್ಳುವದು.

ಸುಸಮಯ ಕಳೆದುಕೊಳ್ಳ ಬೇ ಡಿ.

ವೀರಾಜಪೇಟೆ ಜೇವೇಂಗ ಬೀದಿಯ ಲ್ಲಿ ವಾಸಕ್ಕೆ ಸರ್ವಾನುಕೂಲವಳ್ಳ ಕಚೆ ನ ಮನೆ, ಕೊಟ್ಟಿಗೆ ಸದಾ ನೀರು ಇರುವ ಬಾವಿ ಹಿತ್ತಲು ವಗೈರೆ ಮೂರಾಬ್ಕೆ ಸಿದ್ಧ ವಾಗಿದೆ. ಆದಾಜು ಬೆಲೆ ರೂ 12,000 ಖಾಯಿಷ್‌ದಾರರು ಖುದ್ದಾಗಿಯಂಗಲಿ ಪತ್ರ ಮುಖೇನವಾಗಿ ಈ ಕೆಳಗಿನ ವಿಳಾ ಸಕ್ಕೆ ಒರೆದು ಮಾಹಿತಿಯನ್ನು ಪಡೆಯಿ ರ್ಬೇಕು.

ಎ. ಎಂ. ಗಣಪತಿ,
ವೀರಾಜಪೇಟೆ.
1-1

॥ ಕೊಡಗಿನ ಭವಿಷ್ಯ ॥

ಲೇ:—'ಸುನೀತಾ ಸುತ' ವೀರರಾಜಪೇಟೆ

ಕೊಡಗು ನಿಜವಾದ ಚಿಕ್ಕದೇಶ. ಅದರ ನೈಲುಗಳ ವಿಸ್ತಾರವಿದ್ದು ೧೫೮,೦೦೦ ಜನರನ್ನೊಳಗೊಂಡ ಚಿಕ್ಕದೇಶ. ಈ ದೇಶದಲ್ಲಿ ಆನಾದಿಯಿಂದಲೂ ಬ್ರಾಹ್ಮಣರು, ಕೊಡವರು, ಒಕ್ಕಲಿಗ, ಮಹಮ್ಮದೀಯ, ಕ್ರೈಸ್ತ, ಕ್ರೈಸ್ತ ಮೊದಲಾದ ಕೋಮಿನ ಜನರು ಜೀವಿಸುತ್ತಿದ್ದಾರೆ. ಕೊಡಗಿನಲ್ಲಿ ಈ ವಿವಿಧ ಕೋಮಿನವರೊಳಗೆ ಬೆಳೆದು ಬಂದ ಐಕ್ಯತೆ, ಭ್ರಾತೃಭಾವ ಯಾವ ದೇಶಕ್ಕೂ ಯಾವ ಕಾಲಲ್ಲೂ ಆದರ್ಶ ಸ್ವರೂಪವಲ್ಲವೆನೆ. ದೇಶೀಯ ಹಬ್ಬ ಹುಣ್ಣಿಮೆಗಳಲ್ಲಿ ಪರಸ್ಪರರು ಇಂದಿಗೂ ಸಹೋದರರಂತೆ ಮಿಳಿತವಾಗುತ್ತಾರೆ. ಬ್ರಾಹ್ಮಣರು, ಒಕ್ಕಲಿಗರು ಮೊದಲು ಕುಪ್ಪಸ ದಟ್ಟಗಳನ್ನೂ ಹಾಕುತ್ತಿದ್ದರಂತೆ! ಸೌಹಾರ್ದತೆಯು ಸಾರ್ವತ್ರಿಕ ಹಬ್ಬಿತ್ತು.

ಕೊಡಗಿನ ರಾಜರನ್ನು ಕ ಶಿಕೆ ಕಳುಹಿಸಲು ಕಾರಣ, ದೇಶೀಯ ಮಂದಿಳುಗಳೊಳಗೆ ಅಧಿಕಾರಮೈಪೋಟುಮುಲ್ಲಿ ಬಂದ ದ್ವೇಷಾಸೂಯೆಯೇ ಆಗಿದ. ಬ್ರಿಟಿಷರು ಕೊಡಗಿನಲ್ಲಿ ಗಟ್ಟಿಗೆ ರಲ್ಲಿ ತಮ್ಮ ಅಧಿಕಾರ ಸ್ಥಾಪಿಸಲೂ ಕೊಡ ದಿಕ್ಕಿನ ಮಂದಿಳುಗಳಲ್ಲಿಯ ಬೇಧಭಾವವೇ ಕಾರಣ. ನಾವು ಗಾಢ ವರ್ಷಗಳ ಪರಾಧೀನತೆಯಿಂದ ಬೆಂಡಾಗಿ, ಅನೇಕ ಮಹಾತ್ಮರ ಆತ್ಮತ್ಯಾಗದ ಫಲವಾಗಿ ಇಂದು ಸ್ವತಂತ್ರರಾಗಿರುವೆವು. ಈ ಸಂದರ್ಭದಲ್ಲಿ 'ಕೊಡಗಿನ ಭವಿಷ್ಯ'ದ ಪ್ರಶ್ನೆಯೊಂದನ್ನು ಮುಂದೆ ಮಾಡಿ ಹಿಂದಿನಂತೆಯೇ ದೇಶೀಯರಲ್ಲಿ ಇಬ್ಬಾಗವ ಗಿದೆ. ಈ ಇಬ್ಬಾಗವಾದುದಾದರೂ ಕೂಡ ಹಿಂದಿನಷ್ಟದಂತೆಯೇ ಅಧಿಕಾರದ ಆಸಲೆಯಿಂದಲೇ ಎಂದರೆ ಅತ್ಯುಕ್ತಿಯಾಗಲಾರದು.

ಇಂದಿನದು ಸ್ವಾತಂತ್ರ್ಯ ಸಂಗ್ರಿಯ ಕಾಲ. ಪ್ರತಿಯೊಬ್ಬನೂ ಸ್ವತಂತ್ರನಾಗಿ ಸ್ವಾವಲಂಬಿಯಾಗಬೇಕೆನ್ನುವದೇ ಕೂಗು. ಈ ದೃಷ್ಟಿಯಿಂದಲೇ ಔದ್ಯೋಗಿಕ ವಿಕೇಂದ್ರೀಕರಣವಾಗಬೇಕೆನ್ನುತ್ತಿದ್ದಾರೆ. ಈ ದೃಷ್ಟಿಯಿಂದಲೇ ವಿವಿಧ ಪ್ರಾಂತಗಳ ನಿರ್ಮಾಣವೂ ಆಗುತ್ತಿದೆ. ಆಂಧ್ರ, ತಮಿಳು, ಕೇರಳ, ಕರ್ನಾಟಕ, ಮಹಾರಾಷ್ಟ್ರ ಈ ಪ್ರಾಂತರಚನೆಯ ಕೂಗಾವರೂ ಸ್ಥೂಲವಾಗಿ ಈ ವಿಕೇಂದ್ರೀಕರಣ ತತ್ವದ ಮೇಲೆ. ಏಕೆಂದರೆ ಕೇಂದ್ರೀಕೃತ ಆಡಳಿತದ ಅವಲಕ್ಷಣವನ್ನು ಈ ವರೆಗೆ ನಾವು ಅನುಭವಿಸಿದ್ದೇವೆ ಚಿಕ್ಕ ಆಸ್ಥಿಯಿರುವವನು ಅದನ್ನು ಜೊಕ್ಕವಾಗಿ ನಡೆಸಿಕೊಂಡು, ಗದ್ದೆಯ ತಿಳ್ಳಲೇ ತೋಟದ ಪ್ರತಿಸಸಿಯ ಹಿತಾಹಿತವನ್ನು ಲೆಕ್ಕಿಸುವಂತೆ ಚಿಕ್ಕದೇಶದ ಆಡಳಿತದಲ್ಲಿ ಪ್ರತಿ ಪ್ರಜೆಯ ಹಿತಸಾಧಿಸುವದು ಸಾಧ್ಯವಾಗ ವದು. ದೊಡ್ಡ ಆಸ್ತಿ ಇರುವವರ ಭೂಮಿ ಪಾಳುಬೀಳುವದು. ಇಲ್ಲವೇ ವಾರಗಾರರ ಪಾಲಾಗಿ ಯೋಗ್ಯ ವ್ಯವಸಾಯವಾಗದು. ಇಲ್ಲವೇ ವ್ಯವಸಾಯ ನಡೆಸಲು ರೈತರು ಗಳಷ್ಟು ಅಶಕ್ತರು ಇರಬೇಕಾಗುವುದು. ಅದೇ ರೀತಿ ವಿಶಾಲ ಪ್ರದೇಶದಲ್ಲಿ ಕೊಡಗು ಸಮಾವೇಶಗೊಂಡರೆ ಕೊಡಗು ಒಬ್ಬ ಸುಭೇದಾರನಿಂದ (ಯಾವದೇ ಸೆಸರಲಿ) ನಡೆಸಲ್ಪಡಬಹುದು. ಈ ಪರಿಸ್ಥಿತಿಯಲ್ಲಿ ಕೊಡಗಿನವರು ಕಲವರ ಕೈಗೊಂಬೆಗಳಾಗಬೇಕಾಗುವದು. ಕೊಡಗು ವಾರಭೂಮಿಯಂತೆ ಯಾವದೇ ಪ್ರಗತಿಯಿಲ್ಲದೆ ಪಾಳುಬೀಳುವ ಪ್ರಸಂಗ ಬರಬಹುದು. ವಾರಗಾರನು ಒಂದು ವೇಳೆ ಒಳ್ಳೆ ವ್ಯವಸಾಯಮಾಡಿದರೂ ಯಾವ ರೀತಿ ಭೂಮಿಯು ಏರುತಗ್ಗುಗಳಗೂ, ತೆವರಿ ಕೆರೆಗಳಿಗೂ ಗಮನವೀಯದೆ ಫಸಲಿಗಾಗಿ ಕಾಯುವ ನೋ ಅದೇ ರೀತಿ ದೇಶದ ಪ್ರಗತಿಯ ಬಗ್ಗೆ ಪೂರದೃಷ್ಟಿಯಿಡದ ಪೋಷಕರ ರಂಗ ಳಾಗಿ ಕೊಡಗು ಪರಿಣಮಿಸಬಹುದು.

ನಮ್ಮ ಭೂಮಿಯನ್ನು ನಾವೇ ಮಾಡಿ ಜಾರಲ್ಲಿ ಉತ್ಪತ್ತಿ ಎಷ್ಟು ಬಂದೀತೆಂದು ನೋಡದೆ ಲಾಭವಿಲ್ಲವೆನ್ನುವದು ಯೋಗ್ಯವಲ್ಲ. ಕೊಡಗಿನವರಾದ ನಾವು ಕೊಡಗಿನ ಆಡಳಿತವನ್ನು ಸ್ವಲ್ಪ ಕಾಲಗಳ ವರೆಗೆ ನಡೆಸಿ ನೋಡುವಾ. ನಮ್ಮ ಪ್ರಾಕೃತಿಕ ಸಂಪತ್ತನ್ನು ಯೋಗ್ಯ ರೀತಿ ಉಪಯೋಗಿಸಿ ಔದ್ಯೋಗಿಕ ಪ್ರಗತಿ ಮಾಡುವ. ಈ ಅನುಭವದ ಮೇಲೆ ಪ್ರತ್ಯೇಕ ಪರುವನು ಸಾಧ್ಯವಿಲ್ಲವೆನ್ನುವದಾದರೆ ಸಂಯೋಜನೆಗೆ ವಿರೋಧಿಸುವವರಾರು? ಸ್ವಾತಂತ್ರ್ಯವೆ ಮಂಗಳ ಮಹೂರ್ತದಲ್ಲಿ ಪ್ರತಿ ಜೀವಿಯೂ ಸ್ವತಂತ್ರನಾಗಿರಲು ಪ್ರಯತ್ನಿಸುವದು ಸ್ವಾಭಾವಿಕ. ಸರಕಾರದ ಆಡಳಿತವೇ ವಿಕೇಂದ್ರೀಕೃತವಾಗಿ ಆಡಳಿತ ಪ್ರತಿ ಗ್ರಾಮಗಳಲ್ಲಿ ನಡೆಯಬೇಕಾಗಿದೆ. ಜನರಿಂದ, ಜನತೆಗಾಗಿ ಸರಕಾರ ನಡೆಯಬೇಕಾಗಿದೆ. ಈ ದೃಷ್ಟಿಯಿಂದ ಆಡಳಿತಕ್ಕೆ ದೇಶವು ಚಿಕ್ಕದು ಎನ್ನುವದರಲ್ಲಿ ಅರ್ಥವಿಲ್ಲ. ಸ್ವಿಟ್ಜರ್ಲೆಂಡು ೪೦ ಲಕ್ಷ ಜನಸಂಖ್ಯೆಯಿಂದ ಕೂಡಿದರೂ ಆದನ್ನು ೨೫ (ಕೇಂಟನ್) ಸ್ವಾಧೀಕೃತ ಘಟಕಗಳಾಗಿ ವಿಂಗಡಿಸಿ ಪ್ರತಿ ಘಟಕವು ಸ್ವತಂತ್ರವಾಗಿ ಆಂತರಿಕ ಆಡಳಿತ ನಡೆಸುತ್ತಿದೆ. ಈ ಘಟಕಗಳಲ್ಲಿ ಬಹು ದೊಡ್ಡದಾದ ಬರ್ನ್‌ನಲ್ಲಿ ೬,೮೨,೦೦೦ ಜನರೂ ಅತೀ ಚಿಕ್ಕದಾದ ರಲ್ಲಿ ೩೫,೦೦೦ ಜನರೂ ಇರುವರು. ಪ್ರತಿ ಘಟಕಗಳೂ ಸ್ವತಂತ್ರ, ಸ್ವಸಂಪನ್ನವಾಗಿದ್ದು, ಇಡೀ ಜಗತ್ತಿಗೆ ಶ್ರೇಷವಾದ ಪ್ರಜಾಸ್ವಭುತ್ವದ ಆದರ್ಶವನ್ನು ಹಾಕಿಕೊಟ್ಟಿವೆ. ರೈತಾಪಿಗಳಿಕೆ, ಉನ್ನತಮಟ್ಟದ ಪ್ರಗತಿದಾಯಕವಾಗಿ ನಡೆದು ಸ್ವಿಟ್ಜರ್ಲೆಂಡು ಜಗತ್ತಿಗೆ ಮಾದರಿದೇಶವಾಗಿದೆ.

ದೇಶದ ಪ್ರಗತಿ, ಗೌರವ, ಪ್ರತಿಷ್ಠೆಗಳು ಅದರ ವಿಸ್ತಾರದ ಮೇಲೆ ಹೊಂದಿಕೊಂಡಿಲ್ಲ. ಕಹಕ್ಕಾರು ಮೈಲುಗಳ ವಿಸ್ತೀರ್ಣದ ಮರುಭೂಮಿಯಂಥಾ ದೇಶವಿದ್ದೀನು? ಚೇತನ ಹೀನರಾದ ಕೋಟ್ಯಾಂತರ ಜನರಿದ್ದರೇನು? ಇಂಗ್ಲೆಂಡು ಚಿಕ್ಕ ದೇಶವಾದರೂ, ಜಗತ್ತಿಗೆ ಸ್ವಾಮಿ ಯಾಗಿ ಮೆರೆಯಿತು. ಇದು ಅದರ ವಿಸ್ತಾರದ ಬಲದಿಂದಲ್ಲಿ; ಬದಲು ಅದರಲ್ಲಿ ಹುಟ್ಟಿದ ಜನರ ಪ್ರತಿಭೆಯ ಫಲದಿಂದ. ಕೊಡಗಿಗಿಂಥಾ ನೂರ್ಮಡಿ ವಿಸ್ತಾರದ ರಾಜ್ಯವಿದ್ದರೂ ಜನರು ಸ್ವಾವಲಂಬಿಗಳಾಗಿ, ವೀರ್ಯವಂತರಾಗಿ, ದೇಶಭಕ್ತರಾಗಿ, ಕಾರ್ಯಕರ್ತರಾಗದಿದ್ದರೆ ಯಾವ ಪ್ರಯೋಜನವೂ ಇಲ್ಲ. ಆದ್ದರಿಂದ ಕೊಡಗಿನ ಫಸತೆ, ಹಿರಿಮೆ ಕೊಡಗಿನ ಜನರನ್ನು ಹೊಂದಿಕೊಂಡಿದೆಯೇ ವಿನಹ ಕೊಡಗಿನ ವಿಸ್ತಾರವನ್ನಲ್ಲ ಸ್ವಾರ್ಥಕ್ಕೆ ಬಂದಿದ್ದರೂ ಸಮಗೆ ನಮ್ಮ ಆಡಳಿತ ನಡೆಸಲಾಗುವದಿಲ್ಲ. ಬೇರೆಯವರೊಡನೆ ನೇರಿ ಅವರ ಸಹಾಯದಿಂದ ಬದುಕುವಾ ಎಂಬ ದಾಸ್ಯಬುದ್ಧಿ ಇರುವವರಿಂದ ಎಂದೂ ಕೊಡಗು ಪ್ರಗತಿ ವಿಖರಕ್ಕೆ ಏರಲು.

ರಾಜ್ಯಪುನರ್ನಾ ಸಮಿತಿಗೆ ಸದಸ್ಯರನ್ನು ಆರಿಸುವಾಗ ಹತ್ತು ಮಿಲಿಯ ಜನರಿಗೆ ಒಬ್ಬ ಪ್ರತಿನಿಧಿಯನ್ನು ಕೊಡಲಾಯಿತು. ಕೊಡಗಿನಲ್ಲಿ ಕೇವಲ ೧೫ ಲಕ್ಷ ಜನರಾದರೂ ಇವರಿಗೂ ಒಂದು ಪ್ರತಿನಿಧ್ಯ ದೊರೆತ್ತಿದೆಯಲ್ಲವೇ? ಯಾವ ಕಾರಣದಿಂದ? ಕೊಡಗು ಸಂಯೋಜನವಾದಿಗಳ ಆಶಯದಂತೆ ಯಾವದೇ ಒಂದು ದೇಶದ ಒಂದು ಜಿಲ್ಲೆಯಂತಾಗಿದ್ದರೆ ಕೊಡಗಿನ ಪುತ್ರನೊಬ್ಬನಿಗೆ ಹಿಂದೂದೇಶದ ಇಂಜಿನರಲ್ಲಿ ಒಬ್ಬನಾಗಿ ರಾಜ್ಯಪುನರ್ನಾ ಸಮಿತಿಯಲ್ಲಿ ಕೂರುವ ಅವಕಾಶವೆಲ್ಲಿತ್ತು?

ರವ್ಯಾದ ರಾಜ್ಯಪುನರ್ನಯನ್ನೊಮ್ಮೆ ಸಂಯೋಜನವಾದಿಗಳು ಆವಲೋಕಿಸಬೇಕು. ದೇಶವನ್ನು ೧೬ ಸ್ವತಂತ್ರ ವ್ಯಾಂತಗಳಾಗಿ ವಿಂಗಡಿಸಿರುವರು. ಪ್ರತಿ ಘಟಕವೂ ಕೇಂದ್ರದಿಂದ ಸ್ವತಂತ್ರವಾಗಿರಲು ಹಕ್ಕುಳ್ಳದು. ಈ ಘಟಕಗಳಲ್ಲಿ ೧೦ ಕೋಟಿಗಿಂಥಾ ಹೆಚ್ಚು ಜನಸಂಖ್ಯೆಯಿರುವ ಭಾಗವಿದ್ದರೂ ೧೦ ಲಕ್ಷಕ್ಕಿಂಥಾ ಕಡಿಮೆ ಜನರಿರುವ ಅರ್ಮೇನಿಯೂ, ತಿರ್ಗಿಯಗಳಂಥಾ ಭಾಗಗಳೂ ಇವೆ. ಈ ಪರಿಸ್ಥಿತಿಗಳು ದೊಡ್ಡ ಪ್ರಾಂತಗಳೊಳಗೆ ಅಂತರ್ಗತವಾದ ಅನೇಕ ಘಟಕಗಳು ಸ್ವಾಯತ್ತಾಧಿಕಾರದ ಅನೇಕ ಪ್ರಾಂತಗಳೂ ಇವೆ. ಈ ವಿಭಾಗೀಕರಣವು ರಷ್ಯಾದಲ್ಲಿರುವ ೬೬ ಜಾತಿಯ ಜನರ ಸಂಸ್ಕೃತಿ, ಆಚಾರ ವಿಚಾರಗಳನ್ನು ಕಾಯ್ದುಕೊಡುವ ದೃಷ್ಟಿಯಿಂದ ಆಗಿವೆ. ಹಾಗಿರುವಾಗ ಕೊಡಗಿನವರಲ್ಲಿರುವ ಸಂಸ್ಕೃತಿ, ನಡೆನುಡಿಗಳನ್ನು ವ್ಯಹದ್ಭಾರತದ ಹಿತಕ್ಕಾಗಿ ಉಳಿಸಬೇಕು. ಇಂಥಾ ವಿಚಾರಕ್ಕೆ ಹಿಂದೀ ಸರಕಾರವೂ ಒಪ್ಪದಿರದು. ಕೊಡಗಿನಲ್ಲಿ ಕನ್ನಡ ಮಾತನ್ನು ಆಡುವವರು ಹೆಚ್ಚಿದ್ದರೂ, ಕೊಡಗಿನ ಸಂಸ್ಕೃತಿಯೇ ಬೇರೆ ಅವರ ಆಚಾರ ವಿಚಾರಗಳೇ ಬೇರೆ. ಕನ್ನಡಿಗರಿಗೂ ಕೊಡಗಿನವರಿಗೂ ದೊಡ್ಡ ವ್ಯತ್ಯಾಸವಿದೆ. ಆದ್ದರಿಂದ ಇದನ್ನು ಉಳಿಸಿ, ವಿಸ್ತರಿಸಿ, ಸ್ವತಂತ್ರ ಭಾರತದ ಸ್ವತಂತ್ರ ಘಟಕವಾಗಿ ಕೊಡಗು ಚಿರಕಾಲ ಬಾಳಲಿ.

ಬೆಳ್ಳೂರು

ಹಸನ್ ಸಾಹೇಬರ ಹಸನ್ ಉಂಡೆ ನಶ್ಯ.

ಸಹೋದರರೇ,

ಸುಮಾರು 100 ವರ್ಷಗಳಿಂದ ಪ್ರಖ್ಯಾತಿ ಹೊಂದಿ ಅನೇಕ ಯೋಗ್ಯತಾ ಪತ್ರಿಗಳನ್ನು ಪಡೆದು ಮೈಸೂರು, ಕೊಡಗು ಮತ್ತು ಇಂಡಿಯದ ಬಹು ಭಾಗಗಳಲ್ಲಿ ನೂರಾರುವಾಗುತ್ತಿರುವ ನಮ್ಮ ನಶ್ಯವು ಒಂದು ತಿಂಗಳಿಟ್ಟರೂ ಹುಳಿಯಾಗದೆ ಡಬ್ಬಿಕಾ ಮತ್ತು ಸುವಾಸನೆಗಳಿಂದೊಡಗೂಡಿ ಮನಸ್ಸಿಗೆ ಆಹ್ಲಾದ ಪಡಿಸುವುದು ಮೂಗಿಗೆ ಸಂಬಂಧ ಪಟ್ಟ ಪೀನಸೆಯೇ ಮೊದಲಾದ ವ್ಯಾಧಿಗಳನ್ನು ಹೋಗಲಾಡಿಸುತ್ತೆ.

ಬೆಲೆ ಸೇರು 1ಕ್ಕೆ (24ತೋಲಾ) 2-8-0

ಹಾಸಲು ಮತ್ತು ಪ್ಯಾಕಿಂಗ್ ಚಾರ್ಜ್ ಬೇರೆ. ಧಡಿಯೂ ಪೂರ್ಣ ತರಿಸಿ ಕೊಡರೆ ಹಾಸಲು ಕಡಿಮೆ ಬೀಳುತ್ತದೆ.

ವಿಳಾಸ,

ಹಸನ್ ಸಾಹೇಬ್ ಅಂಡ್ ಸನ್ಸ್,
ನಶ್ಯದ ವ್ಯಾಪಾರಿಗಳು,
4-2 ಬೆಳ್ಳೂರು ಪೋಷ್ಟು,
ಮಂಡ್ಯ ಡಿ.

INSURE YOUR VEHICLES
WITH
THE PREMIER LIFE AND GENERAL INSURANCE CO., LTD.

Head Office:—Premier Insurance Buildings, Madras.
The Largest Motor Insurance Company of S. India.

SPECIAL FEATURE.

1. Lowest Premiums.
2. Instalment Payments.
3. Special Fleet Rebates
4. Free Accident Insurance Benefit of Rs. 10,000.

ANNUAL PREMIUM INCOME RS. 10,00,000.

WANTED.

Agents in all unrepresented areas on most Liberal terms. For particulars apply to:

INSPECTOR.
C/o. Post Master,
NAPOKLU, S. COORG.

OR

T. V. RAMAMURTI.
B. A., B. L., A. I. A.
MANAGER & ACTUARY.

ಕೊಡಗಿಗೊಂದು ಕಾಲೇಜು.

ಲೇ:—ಶ್ರೀ ಬಿ. ಎಂ. ಬೆಳ್ಯಪ್ಪ ಇವರು.

ಕಳೆದ ಕೌನ್ಸಿಲು ವಿಟಿಂಗಿನಲ್ಲಿ ಕೊಡಗಿನಲ್ಲೊಂದು ವೈದ್ಯಕೀಯ ಕಾಲೇಜು ಸ್ಥಾಪನೆಯಾಗುವುದೆಂದು ತೀರ್ಮಾನವಾಯಿದು ಬಹು ಶ್ಲಾಘನೀಯವಾದುದು. ಆದರೆ ಆದರ ಜವಾಬುದಾರಿಯನ್ನು ಒಂದು ವಾಶ್ಚಾತ್ಯ ಕೋಮುವಾರು ಸಂಸ್ಥೆಗೆ ಕೊಡಲಾಗುವುದು ಎಂಬ ತೀರ್ಮಾನವು ಕೊಡಗಿನ ಪ್ರತಿಯೊಬ್ಬ ರೈತನ ಮತ್ತು ಸುಧ್ಧಜೀವಿ ಪ್ರಜೆಯು ಮನಸ್ಸಿನಲ್ಲಿ ಬೇಸರ ಮತ್ತು ಇಂಥಹ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಇಷ್ಟದ ಅಡಚಣೆಗಳನ್ನು ಮುಂದಿಟ್ಟುಕೊಂಡು ಹೆದರುತ್ತಿರುವ ಸರಕಾರವಬಗ್ಗೆ ಅತೃಪ್ತಿಯನ್ನುಂಟುಮಾಡಿದೆ. ಕಾಲೇಜಿನ ಧಾರವನ್ನು 'ಸೈಂಟ್ ಫಿಲೋಮಿನ' ಸಂಸ್ಥೆಯವರಿಗೆ ಕೊಡುವಂತೆ ಸಮರ್ಥಿಸಿದವರು ಜುನಾಯಿತ ಮೆಂಬರುಗಳಲ್ಲಿ ಹಲವರೆಂದರೆ ಅದು ನಮ್ಮ ದುರಾದೃಷ್ಟ. ನಮ್ಮ ಮುಂದಾಳುಗಳೆನಿಸಿಕೊಳ್ಳುವವರು ತಮ್ಮಲ್ಲಿ ಹರಿಪ್ಪರ ಬೆಳೆದು ಹೋಗಿರುವ ಅಸೂಯೆಯನ್ನು ಇಂಥಹ ಸಂಧರ್ಭಗಳಲ್ಲಿ ತೀರಿಸಿಕೊಳ್ಳುತ್ತಿರುವರು. ಪರಸ್ಪರ ತ್ಯಾಗಗಳಲ್ಲಿ ಕಾಂಗ್ರೆಸಿಗರೊಳಗೆ ವೈಯಕ್ತಿಕವಾದ ಯಾವ ಭಿನ್ನಾಭಿಪ್ರಾಯಗಳಿದ್ದರೂ ದೇಶಹಿತ ದೃಷ್ಟಿಯಲ್ಲಿ ಅವರು ಒಂದು ಗೂಡುವರು. ನಮ್ಮ ಕಾಂಗ್ರೆಸ್ಸು ಸದಸ್ಯರುಗಳ ವರ್ತನೆಯಿಂದ ಜಿಲ್ಲಾ ಕಾಂಗ್ರೆಸ್ಸು ಮಂಡಳದಲ್ಲಿ ನಾಶವಷ್ಟು ಶಿಸ್ತಿಲ್ಲವೆಂದು ತೋರುತ್ತೆ. ಜಿಲ್ಲಾ ಕಾಂಗ್ರೆಸು ಪ್ರೆಸಿಡೆಂಟರು ಮಂಡಳೆಯನ್ನು ಒಂದು ಹಿಡಿತದಲ್ಲಿ ತರುವುದು ಅವರ ಕರ್ತವ್ಯವಾಗಿದೆ. ಕೌನ್ಸಿಲಿನ ಈ ತೀರ್ಮಾನವು ದೇಶೀಯರಿಗೆ ಆಶ್ಚರ್ಯವನ್ನು ತಂದಿಲ್ಲ. ಏಕೆಂದರೆ ಈ ಪ್ರಶ್ನೆಯು ಪ್ರಜಾಪಕ್ಷ ಮತ್ತು ಸರಕಾರದ ಮಧ್ಯೆ ಬಹು ತಿಂಗಳುಗಳಿಂದಲೂ ಚರ್ಚಾಸ್ಪದವಾಗಿ ಪ್ರಜಾಪಕ್ಷವು ಸಾಹಸದಿಂದ ಕೇಂದ್ರ ಸರಕಾರವೂ, ಮದ್ರಾಸು ವಿಶ್ವ ವಿದ್ಯಾಲಯದ ಆಡಳಿತ ಮಂಡಳಿಯೂ ಪ್ರಜೆಗಳ ಬಹುಮತಕ್ಕೆ ಒಲಿಯುವ ಸಂದರ್ಭ ಬಂದಾಗ ಸ್ಥಳೀಯ ಸರಕಾರವು ತನ್ನ ಕೊಳಕು ಹಸ್ತವನ್ನು ಮಧ್ಯೆ ಹಾಕಿ ಪ್ರಜಾ ಪಕ್ಷದ ಸಾಧಕ ಕಾರ್ಯವನ್ನು ನುಣ್ಣಾಗಿಸಲು ಮಾಡಿದ ಚಿಂತಾಜನಕ ಕಥೆಯನ್ನು ಯಾವ ಪ್ರಜೆಯೂ ಮರೆತಿರಲಿಕ್ಕಿಲ್ಲ. ಈಗ ಪ್ರಾಂತ್ಯಾಧಿಕಾರಿಗಳ ಕೈಗೊಂಬೆಯಂತಿರುವ ಕೌನ್ಸಿಲು ಸರಕಾರದ ಪರವಾಗಿಯೇ ತೀರ್ಪು ಕೊಟ್ಟಿತು. ಆದರೆ ಆ ತೀರ್ಮಾನ ಕಡೆಯದಾಯಿತೆ?

ಸರಕಾರವು ಬರೇ ಆರ್ಥಿಕ ದೃಷ್ಟಿಯಿಂದ ಈ ಜವಾಬುದಾರಿಯನ್ನು ವಹಿಸಿಕೊಳ್ಳಲು ಹಿಂಜರಿಯುತ್ತಿದೆ. ಈ ಸಮಸ್ಯೆಯನ್ನು ಪರಿಹಾರಮಾಡಲಿಗದೇ ಎಂದು ಪರಿಶೀಲಿಸುವ. ಕಾಲೇಜಿನ ವ್ಯವಸ್ಥಾಪನೆಗಾಗಿ ಸರಕಾರವು ಹೇಗೂ ನಾಲ್ಕು ಲಕ್ಷ ರೂಪಾಯಿಗಳನ್ನು ವಿಗಡಿಸಲಾಗಿಟ್ಟಿದೆ. ಆ ಮೊಂಧರಕ್ಕೆಯಿಯಿಂದ ಬರಲು ಸೂಕ್ಷ್ಮರೀತಿಯಿಂದಾದರೆ ಈ ಹಣವೇ ಕಾಲೇಜಿನ ಪ್ರಾಥಮಿಕ ವ್ಯವಸ್ಥೆಗೆ ಸಾಕಾಗುವುದು. ಕಾಲ ಹೋದಂತೆ ವ್ಯವಸ್ಥಾಪನೆಯು ಬಡಾವಣೆಯುಸಾಧ್ಯವಿದೆ. ಇಷ್ಟಲ್ಲದೆ ಸರಕಾರವು 'ಫಿಲೋಮಿನಾ' ದವರಿಗೆ ವರ್ಷಕ್ಕೆ ೩೩ ಸಾವಿರ (ತೇಕಡ ಐರವತ್ತು) ಖರ್ಚಿಗಾಗಿ ಕೊಡಲೊಪ್ಪಿದೆ. ಇದರಿಂದ ಪ್ರತಿ ವರ್ಷ ಖರ್ಚಿಗೆ ಒಟ್ಟು ೪೬ ಸಾವಿರ ರೂಪಾಯಿಗಳ ಅಂದಾಜೆಂದಾಯಿತು. ಕೊಡಗಿನಿಂದ ಈಗ ಹೊರಗೆ ವ್ಯಾಸಂಗಕ್ಕೆ ಹೋಗುತ್ತಿರುವ ವಿದ್ಯಾರ್ಥಿಗಳ ಬೇರೆ ಖರ್ಚಿಲ್ಲದೆ ಕಾಲೇಜಿಗಾಗಿ ಆಗುವ ಒಟ್ಟು ಖರ್ಚು ನಮಗೆ ಗೊತ್ತಿದೆ. ನಮ್ಮಲ್ಲಿರುವ ಯೇ ಒಂದು ಕಾಲೇಜಾದರೆ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುವುದು. ತತ್ಕಾಲದಲ್ಲಿಯೇ ೩೩ ಸಾವಿರ ರೂಪಾಯಿಗಳು ಫೀಜಿನ ರೂಪದಲ್ಲಿ ಏಳಬಿದ್ದರೂ ಬರೇ ಏಳೆಂಟು ವರ್ಷದ ಕಾಲದಲ್ಲಿ ಖರ್ಚು ಕಳೆದು ಎಷ್ಟೋ ಉಳಿತಾಯವಾಗುವುದು. ಬಹಳ ಉತ್ಪತ್ತಿಯು ಈ ಅವಧಿಯಲ್ಲಿ ಖರ್ಚಿನಪ್ಪಾಗದ ಪಕ್ಷ ಫೀಜಿನ ದರವನ್ನು ಸ್ವಲ್ಪ ಏರಿಸಬಹುದು. ಯಾ ಕೆಲವು ಕಾಲದ ಮಟ್ಟಿಗೆ ಇತರ ಖರ್ಚಿಗಾಗಿ ಹೊಸ ತೆರಿಗೆಯನ್ನು ಜಾರಿಗೆ ತರಬಹುದು. ಇನ್ನೆಂದನ್ನು ಯಾವ ರೈತರೂ ವಿರೋಧಿಸಲಾರರು. ಕೊಡಗಿನಂತೆಯೇ ಕೇಂದ್ರ ಸರಕಾರವೂ ಆಳಲ್ಪಡುತ್ತಿ ನಿಜ ಡಿಫೆನ್ಸು ನುತ್ತು ಅಚ್ಚೀರ್-ವಿೂರ್‌ವಾರ್ ಪ್ರಾಂತ್ಯೆಗಳಿಗೆ ವಿಶೆೈಗಾಗಿ ಕೇಂದ್ರ ಸರಕಾರವು ಪಂತಿಗೆ ಕೊಡುತ್ತಿರುವಲ್ಲಿ ಕೊಡಗಿಗೆ ಈ ವಂತಿಗೆಯು ಅಪಶ್ಯ ಬಿದ್ದಲ್ಲಿ ಸಿಗಲಾರದೆ? ಉತ್ಪತ್ತಿಯು ಮಾರ್ಗವು ಹೀಗೆ ಅನೇಕವಿದ್ದರೂ ನಮ್ಮ ಸರಕಾರವು ಬೊಳ್ಳು ನೆಪ ಪ್ರಾಕೆಕೊಂಡು ಜವಾಬುದಾರಿಯನ್ನು ತಪ್ಪಿಸಿಕೊಳ್ಳಲು ನೋಡುವುದು ಉಚಿತವಲ್ಲ. ಆಲ್ಲದೆ ಈ ಯಾವ ಮಾರ್ಗದಲ್ಲೂ ಸಾಕಷ್ಟು ಹಣ ಆಗದ ಪಕ್ಷ ಉಳಿತಾಯ ಮಾಡಿ ಇಟ್ಟಿರುವ ಒಳ ಲಕ್ಷ ರೂಪಾಯಿಗಳು ಯತಕ್ಕಾಗಿ ಇಡಲ್ಪಟ್ಟಿದೆ? ಜನತೋಪಯೋಗದ ಯಾವ ಯೋಜನೆ ಸರಕಾರವ ನಿಗದಲ್ಲದೆ? ಅಸ್ಟೇಕೆ ಒಂದು ಕೋಮಿನಿಂದ ನಡೆಸಲ್ಪಡುವ ಒಂದು ಖಾಸಗಿ ಸಂಸ್ಥೆಯು ಈ ಜೊರೆಯನ್ನು ಹೊತ್ತುಕೊಳ್ಳಲು ಮುಂಬರುತ್ತಿರುವಾಗ ಒಂದು ಸರಕಾರವು ಒಲ್ಲೆನೆಂದು ಹಿಂಜರಿಯುತ್ತಿರುವುದು ನಾಚಿಕೆಗೇಡಲ್ಲವೆ ಮತ್ತೇನು?

ಒಂದು ಪ್ರಾಂತೀಕ ಸರಕಾರವು ನಷ್ಟವೆಂದೆನ್ನುವ ಒಂದು ವ್ಯವಹಾರದಲ್ಲಿ ಕ್ರೈಸ್ತಿಯನ್ ಸಂಸ್ಥೆಯೊಂದು ಕೈಹಾಕುವುದೆಂದರೆ ಅನುಮಾನ ಮರ್ಮವಿದೆ. ಲಾಭವಿಲ್ಲವೆಂದಾದರೆ ಯಾರೂ ಹೀಗೆ ಮುಂಬರುವರಾರು. ನಷ್ಟಕ್ಕೆ ಹಿಂಜರಿಯದೆ ವಿದ್ಯಾಸ್ಪಾರ ದೃಷ್ಟಿಯಿಂದ,ಜನಸೇವೆಯ ಕಾಂಕ್ಷೆಯಿಂದ'ಸೈಂಟ್ ಫಿಲೋಮಿನ'ದವರು ಈ ಕಾರ್ಯಕ್ಕಾಗಿ ಬರುತ್ತಿರುವರೆಂದರೆ ಅರು ನಮ್ಮುತಿಳಿಗೇಡಿತನ. 'ಮಡಿಕೇರಿಯಲ್ಲಿ 'ಕಾನ್ವೆಂಟ್' ಇದ್ದು ಮತಾಂತರವಾಗಿದೆಯೇ? ಕ್ರಿಶ್ಚಿಯನರೆಂದ ನಡೆಸಲ್ಪಡುವ ಹಲವು ಶಾಲೆಗಳೆದ್ದು ಯಾವ ಹಾನಿಯೂಗಿದೆ' ಎಂದು ಕೆಲವರು ಕೇಳುತ್ತಾರೆ. ಕೊಡಗಿನ ವಿದ್ಯಾವಂತ, ವಿದ್ಯಾವಂತೆಯರು ವಾಶ್ಚಾತ್ಯರಂತೆ ಬಣ್ಣ ಬದಲಾಯಿಸಿಲ್ಲ ಸಹಜ. ಇವರಲ್ಲಿ ಬಹು ಮತ ಗಂಡಸರು ಆಚಾರವಿಚಾರ ಉಡಿಗೆ ತೊಡಿಗೆಗಳಲ್ಲಿ 'ಕಂಡೊರೆಗಳಾಗಿಲ್ಲವೇ? ಅನೇಕ ಹೆಂಗಸರು ಉಡಿಗೆಯಲ್ಲಿ ನೂರ್ಪಾಡಾಗದಿದ್ದರೂ 'ಮೇಮ್ ಸಾಹೇಬ' ರಾಗಿಲ್ಲವೇ? ಕೊಡಗಿನಲ್ಲಿ ಇಂದಿರುವ ನಾಲ್ಕು ಸಾವಿರಕ್ಕೂ ಹೆಚ್ಚಿರುವ ಕ್ರೈಸ್ತಿಯರು ಮತಾಂತರವಾದವರಲ್ಲದೆ ಪಾಶ್ಚಿಮಾತ್ಯ ದೇಶಗಳಿಂದ ಬಂದವರೇನು? ಭಾರತವು ಸ್ವತಂತ್ರವಾಗಿದೆ. ಕ್ವೀಣಿಸಿ ಹೋಗಿರುವ ನಮ್ಮ ಸಂಸ್ಕೃತಿ ನಮ್ಮ ಕಲೆಯನ್ನು ಊರ್ಜಿತ ಸ್ಥಿತಿಗೆ ತರಬೇಕಿದೆ. ನಮ್ಮಲ್ಲಿ ನೆಲೆಯಾಗಿರುವ ಈ ತರದ ಸಂಸ್ಥೆಗಳಲ್ಲಿ ನಡೆಯುವುದೇನು? ಪರ ಮಂದಿ ವಿದ್ಯಾರ್ಥಿಗಳಿಂದ ಹೆಚ್ಚಿನ ಫೀಸು. ಕ್ರೈಸ್ತ ಮತದ ವಿದ್ಯಾರ್ಥಿಗಳಿಗೆ ಕಡಿಮೆ ದರ ಆದರಲ್ಲದ ಜೀವನ ಕ್ರಮದಲ್ಲೂ ವೈತ್ಯಾಸ. ಹೀಗೆ ಇನ್ನುದಿನವೂ ನಾವು ನೋಡುತ್ತಿದ್ದರೂ ಪುನಃ ಅಂಥಾದ್ದೇ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು ಯಾವ ನ್ಯಾಯ? ಈ ಕ್ರಿಶ್ಚಿಯನ್ ಸಂಸ್ಥೆಗಳು ಪ್ರಾರಂಭದಲ್ಲಿ ನಷ್ಟಪಟ್ಟರೂ ಕೆಲವೇ ವರ್ಷಗಳಲ್ಲಿ ನಷ್ಟವನ್ನು ಭರ್ಜರಿಯಾಗಿ ಕೊಂಡುಬರುತ್ತಿರುವ ಅಧಿಕ ಲಾಭದಿಂದಲೇ ದೊಡ್ಡ ದೊಡ್ಡ ತಮ್ಮ ಜಾಲವನ್ನು ಹೆರಡಲು ಪ್ರಯತ್ನ ಪಡುತ್ತಲಿರುವರು. ಈ ಮರ್ಮವು ನಮ್ಮ ಸರಕಾರಕ್ಕೆ ತಿಳಿಯದಾಯಿತೆ?

ಸಹಕಾರದಲ್ಲಿ ಅರಿಕೆ.

ಆದುದರಿಂದ ಸರಕಾರವು ಕೌನ್ಸಿಲಿನ ತೀರ್ಮಾನವನ್ನೇ ಆಧಾರವಾಗಿಟ್ಟುಕೊಂಡು ಈ ಕೆಲಸಕ್ಕೆಳೆಯದ ಜನಮತವು ಯಾವ ಕಡೆಗಿದೆಯೆಂದು ನೋಡಿ ಆ ಕಡೆ ಸರಿಯುವುದು ಲೇಸು. ಮುಂದುಲೋಚನೆಯಿಲ್ಲದ ಜನವಿರೋಧ ಕಾರ್ಯಕ್ಕೆ ಇಳಿದರೆ ಮುಂದೆ ವಿಪರೀತ ಅನಾಹುತಗಳು ಸಂಭವಿಸಬಹುದು. ದೇಶದ ಉದ್ದಗಲಕ್ಕೂ ಈ ವಿಷಯದಲ್ಲಿ ಗೊಂದಲವೆದ್ದಿದೆ. ತಾವು ಹಿಂದೀಯರೆಂದುಕೊಳ್ಳುವದು ಹೀನವೆಂದು ಅಳಿದುಕೊಂಡು ಪಾಶ್ಚಾತ್ಯ ಸಂಸ್ಕೃತಿಯು ಮೆರುಗಿನಲ್ಲಿ ಮೈಮರೆತ್ತಿರುವ ಬರೇ ಅಲ್ಪ ಸಂಖ್ಯೆಯ ಸಮ್ಮತವು ಕೊಡಗಿನ ರೈತನ ಮತ್ತು ಪುಧ್ಧಜೀವಿ ಪ್ರಜೆಯು ಮತವಲ್ಲವೆಂದು ಸರಕಾರವು ತಿಳಿದುಕೊಳ್ಳಬೇಕಿದೆ. ನಿರಂಕುಶ ರಾಜ್ಯಭಾರದ ಕಾಲವು ಇದಲ್ಲ. ಪ್ರಜಾಶಕ್ತಿಯನ್ನು ಯಾವ ಆಸ್ಪೋಧಕ್ಕಿಯು ಎದುರಿಸಲಾರದು. ನಮ್ಮ ನೆರ ಊರಾದ ಮೈಸೂರಿನಲ್ಲಿ ಮೊನ್ನೆ ಮೊನ್ನೆಯಾಗಿ ನಡೆದುದಾರೂ ಏನು? ಇದನ್ನು ಸರಕಾರವೂ ಆದರ ಶ್ರೀಮಂತ ವರ್ಗದ ಅನಾಯೊಯಿಗಳೂ ಗಮನಿಸದಲ್ಲಿಡಬೇಕಿದೆ. ಸರಕಾರವು ಇನ್ನಾದರೂ 'ಸೈಂಟ್ ಫಿಲೋಮಿನ'ಸಂಸ್ಥೆಯವರಿಗೆ ಕಾಲೇಜು ನಡೆಸುವ ಭಾರವನ್ನು ವಹಿಸಿಕೊಡುವ ಅಭಿಪ್ರಾಯವನ್ನು ಬದಲಾಯಿಸಿ ಕಾಲೇಜನ್ನು ಪೀಪ್ಸುಪಲ್ಲಿಯೇ ಸ್ಥಾಪಿಸಿ ಸರಕಾರವೇ ಅದನ್ನು ನಡೆಸಬೇಕು. ಆಗಬಹುದಾದ ಲಾಭ ನಷ್ಟಕ್ಕೆ ಸರಕಾರವು ಪ್ರಜೆಯೂ ಹೊಣೆಯಾಗಬಹುದು.

ಸಾರ್ವಜನಿಕರಲ್ಲಿ ವಿನಂತಿ.

ತನ್ನ ಕೋಮನ್ನು ಉದ್ಧರಿಸಿಕೊಳ್ಳುವ ಧ್ಯೇಯದ ಒಂದು ಪಾಶ್ಚಾತ್ಯ ಕೋಮುವಾರು ಸಂಸ್ಥೆಗೆ ನಮ್ಮಲ್ಲಿ ಆಗಲಿರುವ ಕಾಲೇಜನ್ನು ಧಾರೆಯೆರೆದು ಆ ಮೂಲಕ ನಮ್ಮ ಶೋಷಣೆಗೂ, ನಮ್ಮ ಸಂಸ್ಕೃತಿಯು ವಿನಾಶಕ್ಕೂ ನಮ್ಮ ಸರಕಾರ ಎಡೆ ಮಾಡುತ್ತಿದೆ. ಇದನ್ನು ಪ್ರತಿಯೊಬ್ಬ ದೇಶೀಯನೂ ಎದುರಿಸಬೇಕಾಗಿದೆ. ನಮ್ಮೊಳಗೆ ಕಲಹಗಳೂ, ಭಿನ್ನಾಭಿಪ್ರಾಯಗಳೂ ಸಹಸ್ರಾರು ಇರಬಹುದು. ಆದರೆ ಈ ಸಂದರ್ಭದಲ್ಲಿ ಅದಕ್ಕೆ ಎಡೆ ಇಲ್ಲ. ಈಗ ನಮ್ಮ ಮುಂದಿರುವುದು ನಮ್ಮ ಸಂಸ್ಕೃತಿಯ ಪ್ರಶ್ನೆ. ನಮ್ಮ ಮುಂದಿನ ಜನಾಂಗದ ಹಾಗೂ ಭಾರತದ ಉತ್ಕರ್ಷದ ಪ್ರಶ್ನೆ. ಕೊಡಗಿನ ಬಡ ರೈತನು ತನ್ನ ರಕ್ತವನ್ನು ಹಿಂಡಿ ಆದರಿಂದಾದ ಹಣವನ್ನು ಪಾಶ್ಚಾತ್ಯ ಒಂದು ವ್ಯಾಪಾರೀ ಗಂಸ್ಥೆಗೆ ಧಾರೆಯೆರೆಯುವುದು ಯಾವ ನ್ಯಾಯ? ತನ್ನ ದ್ರವ್ಯ ನಷ್ಟವಲ್ಲದೆ ತನ್ನ ಸಂಸ್ಕೃತಿಯು ಅಧಃಪತನ. ಈ ವಿಷಯದಲ್ಲಿ ಹಲವಾರು ಸಾರ್ವಜನಿಕ ವಿಟಿಂಗುಗಳು ಕೊಡಗಿನ ಉದ್ದಗಲಕ್ಕೂ ಆಗಿ ನಾವೆಲ್ಲರೂ ನಮ್ಮ ಅಭಿಪ್ರಾಯವನ್ನು ಸರಕಾರಕ್ಕೆ ಅರಿವಿಕೆ ಮಾಡಿಕೊಂಡಿದ್ದರೂ ಸರಕಾರವು ಪ್ರಜಾಮತಕ್ಕೆ ಬಗ್ಗರುವುದಲ್ಲ. ಊಳುವ ರೈತನಿಗೆ ರಾಜಕೀಯವೇತಕ್ಕೆ? ಸರಕಾರವಿದೆ, ಚುನಾಯಿತ ಮೆಂಬರುಗಳಿದ್ದಾರೆ. ಅವರು ನೋಡಿಕೊಳ್ಳುತ್ತಾರೆ; ಎಂಬ ಕಾಲವು ಕಳೆದುಹೋಯಿತು. ನಮ್ಮಿಷ್ಟವನ್ನು ಅರಿತೂ ನಮ್ಮ ಚುನಾಯಿತ ಮೆಂಬರುಗಳಲ್ಲಿ ಹಲವರು ನಮ್ಮ ಅಭಿಪ್ರಾಯಕ್ಕೆ ವಿರೋಧವಾಗಿದ್ದಾರೆ. ಇದಾವರಲ್ಲಿ ನಮಗೇನು ಭರವಸೆ. ಇದು ಕೆಂದಾಯಕೊಡವ ರೈತನೇ ಸರಕಾರ. ಆನಂದರಿಂದ ದೇಶದ ಆಡಳಿತದಲ್ಲಿ ನಮ್ಮ ಹಕ್ಕಿದೆ. ಸರಕಾರವನ್ನು ನಡೆಸುವವರು ನಮ್ಮ ಸೇವಕರು. ಆಡಳಿತವು ಯಜಮಾನರಿಂದ ರೈತಾಪಿ ವರ್ಗದ ಹಿಕ್ಕಲ್ಲದೆ ಸೇವಕನ ಇಷ್ಟಕ್ಕಲ್ಲ. ಇಂದು ನಡೆಯುತ್ತಿರುವುದು ಯಜಮಾನನ ಇಷ್ಟದ ವರ್ತನೆ. ಇದನ್ನು ಜನತೆಯು ತಡೆಯಬೇಕು. ಈ ವರೆಗೆ ನಡೆದ ಸಾರ್ವಜನಿಕ ಮೀಟಿಂಗುಗಳು ಸಾಕು ಸಾರ್ವಜನಿಕ ವಿಟಿಂಗುಗಳೂ, ಪರಾವುಗಳೂ ನಮ್ಮ ಸಮಸ್ಯೆಗಳನ್ನೂ ಪರಿಹರಿಸಲಿಲ್ಲ. ನಾಲಗೆ ಪ್ರಯೋಗವು ಸಾಕು. ಇನ್ನು ಸೊಂಟಕಟ್ಟಿ ಶಿಸ್ತಿನಿಂದ ಮತ್ತು ರಾಷ್ಟ್ರೀಯ ರೀತಿಯಲ್ಲಿ ಸಂಘಟನೆಯಾಗಬೇಕಿದೆ. ಬೆಣ್ಣೆಯನ್ನು ಹಂಚಿಕೊಳ್ಳಲಾರದ ಬೆಕ್ಕುಗಳು ಬೆಣ್ಣೆಯನ್ನು ಪಾಲಿಡಲು ಕೋತಿಗೆ ಕೊಟ್ಟು ಎಲ್ಲವನ್ನೂ ಕಳಕೊಂಡಂತೆ ನಮ್ಮ ನಮ್ಮೊಳಗಿರುವ ಪರಸ್ಪರ ವೈಮನ್ಯವೆಂಬ ಕಡಿಗೆ ಎಲ್ಲವನ್ನೂ ಕಳಕೊಂಡೇವು ಸರಕಾರವು ಪ್ರಜೆಗಳ ಇಷ್ಟಕ್ಕೆ ವಿರೋಧವಾಗಿ 'ಸೈಂಟ್ ಫಿಲೋಮಿನ'ದವರಿಗೆ ಕಾಲೇಜನ್ನು ಕೊಡಲಿ. ಅವರು ಬಂದು ಕಾಲೇಜನ್ನು ತೆಗೆದು ಹಾಕಲಿ. ನಮ್ಮಲ್ಲಿ ಛಲವಿದ್ದರೆ, ಆರ್ಯ ಸಂಸ್ಕೃತಿಯ ಬಲವಿದ್ದರೆ ನಮ್ಮ ಬೆವರಿನ ಫಲವಾಗಿ ಸರಕಾರವು ಬೊಕ್ಕಸದಲ್ಲಿರುವ ಒಂದು ಪೈಯೂ ಜನ ಹಿತದ ವಿರುದ್ಧ ಖರ್ಚಾಗಲು ಬಿಡೆವು. ಸರಕಾರವು ನಮ್ಮ ಮೇಲೆ ಕೋವಿ ಉಪಯೋಗಿಸಲಿ. ನಾವು ಪವಿತ್ರ ಆಹಿಂಸೆ ಮತ್ತು ಅಸಹಕಾರ ಆಯುಧವನ್ನು ಉಪಯೋಗಿಸುವ. ಪವಿತ್ರ ಅಹಿಂಸಾ ಆಸ್ತ್ರಕ್ಕೆ ಸೋಲಿಲ್ಲ! ಜಯವು ನಮ್ಮದಾಗುವುದು. ನಮ್ಮ ಹಣ ನಮ್ಮಲ್ಲಿ ಉಳಿಯುವುದು. ನಮ್ಮ ಸಂಸ್ಕೃತಿಯು ಏಳಿಗೆಯಾಗುವುದು.

ಪಾಕಿಸ್ತಾನ್ ಸರ್ಕಾರ ವಾಣಿಜ್ಯ ಒಪ್ಪಂದವನ್ನು ಮುರಿದಿದೆ.

ಪೂರ್ವ ಬಂಗಾಳದಿಂದ ಇಂಡಿಯೂ ಕ್ಕೆ ರಫ್ತಾಗುವ ಕಚ್ಚಾ ನೆಣಬಿನ ಮೇಲೆ ರಫ್ತು ತೆರಿಗೆಯನ್ನು ಪಾಕಿಸ್ತಾನ ಸರಕಾರ ವಿಧಿಸಿರುವುದರಿಂದ ಈ ಬಗ್ಗೆ ಯಾವ ರೀತಿಯ ಪ್ರತೀಕಾರ ಕಾರ್ಯನ್ನಾವುದನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಇಂಡಿಯೂ ಸರಕಾರ ಯೋಚಿಸುತ್ತಿದೆ. ಎಂದು ತಾ. ೨೪ರಲ್ಲಿ ಹೊರಬಿದ್ದ ಇಂಡಿಯೂ ಸರ್ಕಾರದ ಪ್ರಕಟಣೆಯೊಂದು ತಿಳಿಸುತ್ತಿದೆ. ಈ ಹಿಂದೆ ಪಾಕಿಸ್ತಾನ್ ಮತ್ತು ಇಂಡಿಯೂ ಸರ್ಕಾರಗಳಿಗೆ ಆಗಿದ್ದ ಒಪ್ಪಂದಕ್ಕೆ ಇದು ವಿರುದ್ಧವಾಗಿದೆ ಈ ಒಪ್ಪಂದ ಪ್ರಕಾರ ಉಭಯ ಗಡಿ ಪ್ರದೇಶಗಳಲ್ಲೂ ಒಂದು ಸ್ಥಿರವಿನಿಮಯ ಇನ್ನೊಂದು ಪ್ರದೇಶಕ್ಕೆ ಪದಾರ್ಥಗಳ ಚಲನವಲನಕ್ಕೆ ಯಾವ ಅಡ್ಡಿ ಆತಂಕಗಳೂ ಇರಬಾರದೆಂದೂ, ೧೯೪೬ ಆಗಸ್ಟ್ ೧೫ರಿಂದ ೧೯೪೭ರ ಮಾರ್ಚ್ ೩೧ರ ಒಳಗೆ ಯಾವ ರಫ್ತು ತೆರಿಗೆಯನ್ನೂ ವಿಧಿಸಲಾಗದೆಂದೂ ಒಪ್ಪಂದವಾಗಿತ್ತು. ಪಾಕಿಸ್ತಾನ್ ಸರ್ಕಾರ ಈಗ ಈ ಒಪ್ಪಂದವನ್ನೆ ಮುರಿದಂತಾಗಿದೆ. ಈ ಘೋರಕೃತ್ಯವನ್ನು ಕಂಡು ಇಂಡಿಯೂ ಸರ್ಕಾರ ಜಂಟಿಆಯೋಜಿತ ಮತ್ತು ಈ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ನಿರ್ಧರಿಸಿದೆ—ಎಂದು ಆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪಂಡಿತ್ ನೆಹರೂರವರಿಗೆ ಆಹ್ವಾನ.

ಬ್ರಿಟನ್ನಿನ ಪ್ರಧಾನಿ ಶ್ರೀವಿಟ್ ಅಟ್ಲಿಯವರು ಇಂಡಿಯೂದ ಪ್ರಧಾನಿ ಪಂಡಿತ್ ನೆಹರೂರವರಿಗೆ ಡಿಸೆಂಬರ್ ತಿಂಗಳಲ್ಲಿ ಲಂಡನ್ನಿಗೆ ಬರುವಂತೆ ಆಹ್ವಾನವಿತ್ತಿರುವುದಾಗಿಯೂ ಈ ಆಹ್ವಾನವನ್ನು ಪ್ರಧಾನ ನೆಹರೂರವರು ಅಂಗೀಕರಿಸಿರುವುದಾಗಿಯೂ ಗೊತ್ತಾಗಿದೆ.

ಲಾರ್ಡ್ ವೆವೆಲ್ ಬ್ಯಾಟನ್‌ರವರು ಪ್ರಧಾನಿ ಅಟ್ಲಿ, ವಿದೇಶಾಂಗ ಮಂತ್ರಿ ಬೆವಿನ್, ಸರ್ ಸ್ಟ್ಯಾಫರ್ಡ್‌ಕ್ರಿಪ್ಸ್, ನಾಯಿಲ್‌ಬೇಕರ್-ಇವರುಗಳೊಡನೆ ಮಾತುಕತೆ ನಡೆಸಿರುವುದರ ಪರಿಣಾಮವೇ ಈ ಆಹ್ವಾನಕ್ಕೆ ಒಸ್ಕೆಲೆಯಾಗಿದೆ ಎಂದು ಆಭಿಪ್ರಾಯ ಪಡಲಾಗಿದೆ.

ಕೊನೆಯು ಳಿಗೆಯಲ್ಲಿ ಯಾವ ಉದ್ದಿಆತಂಕಗಳೂ ಬರದೆ ಹೋದಲ್ಲಿ ಪಂಡಿತ್ ನೆಹರೂರವರು ದಿನೇಬರನಲ್ಲಿ ಲಂಡನ್ ಪ್ರವಾಸ ಕೈಗೊಳ್ಳವರೆಂದು ಗೊತ್ತಾಗಿದೆ.

ಕಚ್ ಸಂಸ್ಥಾನಕ್ಕೆ ವಿಪತ್ತು

ಕಾಶ್ಮೀರದ ಆಕ್ರಮಣ ಮಾತ್ರದಿಂದ ಪಾಕಿಸ್ತಾನದ ಆಶಯ ಪೂರೈಸಿಲ್ಲ. ಕಾಥೇವಾರ್ ಮತ್ತು ಸಿಂಧ್ ಮನ್ಯೆ ಇರುವ ಕಚ್ ಸಂಸ್ಥಾನವನ್ನೂ ಪಾಕಿಸ್ತಾನ ಆಕ್ರಮಿಸುವ ಭಯವಿದೆ.

ತೀಗಾಗಲೇ ಕರಾಚಿಯಲ್ಲಿ ಕೆಲವು ಜನ ಮುಸಲ್ಮಾನರ ನೇತೃತ್ವದಲ್ಲಿ "ಸ್ವತಂತ್ರ ಕಚ್ ಸರ್ಕಾರ"ವೊಂದು ಏರ್ಪಟ್ಟಿದೆ. ಎಂದು ಸುದ್ದಿಗಾರರೊಬ್ಬರು ವರದಿ ಮಾಡಿರುವುದಲ್ಲದೆ ಈ ವಿಷಯ ದೇಹಲಿಯ ಗಮನಕ್ಕೆ ಬರದೆ ಇಲ್ಲವೆಂದೂ, ಕಾಥೇವಾಡದಲ್ಲಿ ಇತ್ತೀಚೆಗೆ ಸರ್ದಾರ್ ಪಟೇಲರ ನರು ಭಾಷಣ ಮಾಡಿದಾಗ ಕಚ್ ಸಂಸ್ಥಾನದ ವಿಷಯವನ್ನು ಸ್ಪಷ್ಟಪಡಿಸಿದರೆಂದೂ ವರದಿ ಮಾಡಿದ್ದಾರೆ. ಕಚ್ ಸಂಸ್ಥಾನದ ಗಡಿಗೆ ೫೦ ಮೈಲಿ ದೂರದಲ್ಲಿ ವಿಮಾನಗಳಿಂದ ಬಾಂಬ್ ಹಾಕಿದ ಸುದ್ದಿಯೂ ಬಂದಿದೆ. ಇಂಡಿಯೂ ಸರ್ಕಾರ ಸಕಾಲದಲ್ಲಿ ಸಾಧ್ಯವಾದ ಸಹಾಯ ಕಳುಹಿಸಿದ್ದಿರೆ ಕಾಶ್ಮೀರದ ಗತಿಯೇ ಕಚ್ ಸಂಸ್ಥಾನಕ್ಕೂ ಒದಗಬಹುದೆಂದು ಪ್ರತಿಯೊಬ್ಬ ಕಚ್ ಸಂಸ್ಥಾನಿಗೂ ಗೊತ್ತಿದೆ ಎಂದೂ ಆವರದಿಗಾರರು ತಿಳಿಸಿರುವುದಲ್ಲದೆ ಇಂಡಿಯೂ ಸರ್ಕಾರ ಈಗ ಗಲೇ ತಲ್ಲಿಗೆ ಸೈನ್ಯ ಕಳುಹಿಸಲು ನಿರ್ಧರಿಸಿರುವುದಾಗಿಯೂ ತಿಳಿಸಿದ್ದಾರೆ ಕಚ್ ಸಂಸ್ಥಾನದ ವಿಸ್ತಾರ ೭,೦೦೦ ಚದರ ಮೈಲಿ. ಪ್ರಜಾ ಸಂಖ್ಯೆ ಸುಮಾರು ೫ ಲಕ್ಷ. ಶೇಕಡ ೭೦ ಜನ ಹಿಂದುಗಳಿದ್ದಾರೆ. ಈ ಸಂಸ್ಥಾನ ಆಗಸ್ಟ್ ತಿಂಗಳಲ್ಲಿ ಹಿಂದಿ ಒಕ್ಕೂಟಕ್ಕೆ ಸೇರಿತು ಆ ಸಮಯದಲ್ಲಿ ಅಲ್ಲಿಯ ಮುಸಲ್ಮಾನರ ನೇತೃರು ಮಹಾರಾಜರ ನಿರ್ಧಾರವನ್ನು ವಿರೋಧಿಸಿದ್ದರು. ಪಾಕಿಸ್ತಾನ ಸರ್ಕಾರದ ಪಾಲಿನವರೆಲ್ಲರೂ ಸಂಸ್ಥಾನದ ಹಲವೆಡೆಗಳಲ್ಲಿಯೂ ತಮ್ಮ ಪ್ರಾಬಲ್ಯ ಕಾರ್ಯವನ್ನು ತೀವ್ರಗೊಳಿಸುತ್ತಿದ್ದಾರೆ ಎಂಬ ವದಂತಿಯೂ ಇದೆ.

ಆಹಾರ ಪದಾರ್ಥಗಳ ಮೇಲೆ ಹೆತೋಟೆ ಹೋಗಬಹುದು.

ಆಹಾರ ಪದಾರ್ಥಗಳ ಮೇಲೆ ಇದುವರೆಗೆ ಹೆತೋಟೆಯಿಲ್ಲದ್ದನ್ನು ಇಂಡಿಯೂ ಸರ್ಕಾರ ಇನ್ನು ಒಂದೂವರೆ ದಿನಗಳಲ್ಲಿಯೇ ರದ್ದುಗೊಳಿಸಬಹುದೆಂಬ ಸುದ್ದಿ ಇದೆ.

ಈ ನಿರ್ಧಾರದ ಸ್ವೀಕಾರ ಸಭ್ಯರ ಪೇಕ್ಷೆಯಾದರೆ ಹೆತೋಟೆ ಹೋಗಬಹುದಾಗಿದೆ. ಆಹಾರ ಪದಾರ್ಥಗಳ ಬೆಲೆ ಮತ್ತು ರವನ್ನೆ ಮೇಲೆ ಇರುವ ಹೆತೋಟೆಯನ್ನೂ ಏಗೆಯಲು ಇಂಡಿಯೂ ಸರ್ಕಾರ ನಿರ್ಧರಿಸಿಯೆಂದು ಹೇಳಲಾಗುತ್ತಿದೆ. ದ್ವಿದಳ ಧಾನ್ಯಗಳ ಮೇಲೆ ಇದ್ದ ಹೆತೋಟೆಯನ್ನು ಈಗಾಗಲೇ ತೆಗೆದು ಹಾಕಲಾಗಿದೆ.

"ದೇಶದಲ್ಲಿ ಸಾಕಷ್ಟು ಧಾನ್ಯವಿದೆ. ಆದರೆ ಜನರು ಅವನ್ನು ಒಟ್ಟಿಟ್ಟಿದ್ದಾರೆ ಸರ್ಕಾರ ತನ್ನ ಹೆತೋಟೆಯನ್ನು ತೆಗೆದರೆ ಬಚ್ಚಿಟ್ಟಿರುವ ಧವಸ ಧಾನ್ಯಗಳೆಲ್ಲಾ ಹೊರಗೆ ಬರುವುವು. ಸ್ವಾಭಾವಿಕವಾದ ರೀತಿಯಲ್ಲಿ ವ್ಯಾಪಾರ ನಡೆಯುವುದು," ಎಂಬ ವಾದ ಇಂಡಿಯೂ ಸರ್ಕಾರದ ಧೋರಣಕ್ಕೆ ಹಿನ್ನೆಲೆಯಾಗಿದೆಯೆಂದು ಹೇಳಬಹುದು. ಆದರೆ ಹೆತೋಟೆ ತೆಗೆಯುವುದರಿಂದ ಉಂಟಾಗಬಹುದಾದ ಪರಿಸ್ಥಿತಿಯನ್ನು ಎದುರಿಸುವ ಬಗೆ ಕುರಿತು ಇಂಡಿಯೂ ಸರ್ಕಾರ ಇನ್ನೂ ಯೋಚಿಸುತ್ತಿದೆ.

ಹರಿಜನರ ಸಭೆ.

ತಾ. ೨೪-೧೧-೪೭ನೇ ಭಾನುವಾರ ಕೊಡಗು ಆಸ್ಪೃಶ್ಯತೆ ಕಮಿತಿನರಾವ್ ರಾ. ಬ ಕೆ. ಟಿ ಉತ್ಸವ, ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಶನಿವಾರಸಂತೆಯಲ್ಲಿ ನಡೆದ ಶನಿವಾರಸಂತೆ ಹೋಬಳಿ ಹರಿಜನ ದ್ಧಾರ ಸಂಘದ ಸಭೆಯಲ್ಲಿ ಸರ್ವ ಸಮ್ಮತದಿಂದ ಮಂಜೂರಾದ ನಿರ್ಣಯಗಳು:

೧. ಕೊಡಗಿನ ಹರಿಜನ ಬಾಲಕ ಬಾಲಕಿಯರಿಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಖಡ್ಡಾಯವಾಗಿ ಕೊಡಿಸುವಂತೆಯೂ ಇದಕ್ಕೆ ತಕ್ಕ ಅನುಕೂಲತೆಗಳನ್ನು ಅಂದರೆ ಹರಿಜನ ವಿದ್ಯಾರ್ಥಿಗಳಿಗೆ ಬಟ್ಟೆ, ಪುಸ್ತಕ, ಬಳಪ, ಲೇಖನಿ ಇತ್ಯಾದಿಗಳನ್ನು ಒದಗಿಸಿಕೊಡಬೇಕೆಂದೂ ಈ ಸಭೆಯು ಸರಕಾರವನ್ನು ಪ್ರಾರ್ಥಿಸುತ್ತದೆ.

೨. ಹರಿಜನ ವಿದ್ಯಾರ್ಥಿಗಳಿಗೆ ಸರಕಾರದವರು ಕೊಡುತ್ತಿರುವ ಈಗಿನ ವಿದ್ಯಾರ್ಥಿ ವೇತನಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಸರಕಾರವನ್ನು ಪ್ರಾರ್ಥಿಸುತ್ತದೆ.

೩. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಹೊಂದಿದ ಹರಿಜನ ಯುವಕ ಯುವತಿಯರಿಗೆ ಸರಕಾರಿ ನೌಕರಿಯನ್ನು ಒದಗಿಸಿಕೊಡಬೇಕೆಂದು ಈ ಸಭೆಯು ಪ್ರಾರ್ಥಿಸುತ್ತದೆ.

೪. ಮುಂದೆ ಬರುವ ಕೌನ್ಸಿಲ್ ಮತ್ತು ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಹರಿಜನರಿಗೂ ಕೆಲವು ಸ್ಥಳಗಳನ್ನು ಕೊಡಬೇಕೆಂದು ಸಭೆಯು ಕೇಳಿಕೊಳ್ಳುತ್ತದೆ.

೫. ಹರಿಜನರಿಗೆ ಬಟ್ಟೆ ಕಂಗಡಿಗಳಲ್ಲಿ ಸರಿಯಾದ ವ್ಯವಸ್ಥೆ ಮಾಡಿ ಬಟ್ಟೆ ಒದಗಿಸಿಕೊಡಬೇಕೆಂದು ಈ ಸಭೆಯು ಪ್ರಾರ್ಥನೆ

೬. ನೆರೆ ಪ್ರಾಂತವಾದ ಮೈಸೂರು ಸಿಮೆಯಲ್ಲಿ ಹರಿಜನರಿಗೆ ವಾಸದ ಸೌಕರ್ಯಕ್ಕಾಗಿ ಮುಪ್ಪತ್ತಾಗಿ ಹೊಲ, ಮನೆ, ಬಿದಿರು ಇವುಗಳನ್ನು ಕೊಟ್ಟಿರುವಂತೆ ಕೊಡಗಿನಲ್ಲಿಯೂ ಕೊಡಬೇಕೆಂದು ಈ ಸಭೆಯು ಪ್ರಾರ್ಥಿಸುತ್ತದೆ.

೭. ಕೊಡಗಿನ ಎಲ್ಲಾ ಹರಿಜನರಿಗೆ ಸ್ವಂತಾರಿಯಲ್ಲಿ ತರಿ ಯೂ ಕಪ್ಪಿ ಸ್ವವಸಾಯ ಮಾಡಲು ಪ್ರತಿಯೊಬ್ಬನಿಗೆ ಕಡಿಮೆ ಪಕ್ಷ ಮೂರು ಏಕರು ಜಾಗವನ್ನು ಮುಪ್ಪತ್ತಾಗಿ ಕೊಡಬೇಕೆಂದು ಈ ಸಭೆಯು ಸರಕಾರವನ್ನು ಕೇಳಿಕೊಳ್ಳುತ್ತದೆ.

೮. ಕೆತ್ತೂರು ಖಾಸಗಿ ರಾತ್ರಿ ಶಾಲೆಯನ್ನು ಸರಕಾರವು ನಡೆಸಿಕೊಡಬೇಕೆಂದೂ, ಅವಶ್ಯವಿರುವ ಕಡೆಗಳಲ್ಲೆಲ್ಲಾ ರಾತ್ರಿ ಶಾಲೆಗಳನ್ನು ತೆರೆಯಬೇಕೆಂದೂ ಈ ಸಭೆಯು ಸರಕಾರವನ್ನು ಕೇಳಿಕೊಳ್ಳುತ್ತದೆ.

ಮೂರಾಟಿ.

(I) ವೀರಾಜಪೇಟೆನಾಡು ಅಂಬಟ್ಟಿ ಗ್ರಾಮದಲ್ಲಿ ಎಂದರೆ ವೀರಾಜಪೇಟೆಯಿಂದ ಬನೇ ಎರಡು ಮೈಲು ನೂರದಲ್ಲಿ ಏಳು ನೂರು ಬಟ್ಟಿ ಒಳ್ಳೆಯ ನೀರಾವರಿ ಭೂಮಿ ಮತ್ತು ಇವಕ್ಕೆ ಸೇರಿದ ಹನ್ನೆರಡು ಏಕರು ಬಾಣೆ. ಕ್ರಯ ಹನ್ನೆರಡು ಸಾವಿರ ರೂ ಪಾಯಿ ಯೂ ಇದರ ಸಮೀಪ

(2) ನೀರಾಜಪೇಟೆ ಮುನ್ಸಿಪಾಲಿಟಿ ಯೊಳಗೆ ಮಾರ್ಕೆಟ್ಟಿನ ಒಕ್ಕಿನಲ್ಲಿ ಅಂದಾಜು 10,500 ರೂ. ಕ್ರಯ ಬಾಳುವ ಎಂಟು ಕುಟುಂಬಗಳು ವಾಸಕ್ಕೆ ಅನುಕೂಲವಾಗಿ ನ್ಯಾಯವಾಗಿ ಬಾಡಿಗೆ ಬರುತ್ತಿರುವ ಕಟ್ಟಡವೂ ಇದರ ಹಿಲ್ಲಿನಲ್ಲಿ ಒಂದು ನಿಕರು ೩೦ಬಸ್ಸಾ ಕಾಫಿ ತೋಟವೂ ಮಾರಾಟಕ್ಕಿದೆ.

ಕೊಡುಕೊಳ್ಳುವ ಪಾರ್ಟಿ ಸಾದಾರರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳತಕ್ಕದ್ದು

ಮಿಸೆಸ್ ಚೆಪ್ಪುಡಿರ ಅಕ್ಕಮ್ಮ
3–2 ಪೊನ್ನಪ್ಪ,
C/o. ಕೆ. ಪಿ. ಕರುಂಬಯ್ಯನವರು,
ಎಂ. ಎ, ಎಲ್‌ಎಲ್. ಬಿ., ವಕೀಲರು
ತಾ. 20–11–47. ವೀರಾಜಪೇಟೆ.

A BEAUTY AID FOR THE MODERN GIRL !

ಕರತರನಾದ ನಜ್ಜಿಗಳಲ್ಲಿ

ಕುಂಕುಮ ಹುಟ್ಟುವ ಹೊಸ ಸೌಂದರ್ಯ ಸಾಧನ

"ಕುಂಕುಮ"

ಬೆಲೆ ರೂ. ೩-೧೨-೦.





ವಿವರಗಳಿಗೆ:—
ನೆಜ್ಜೂರ ಆಂಡ್ ಕಂಪೆನ್ಸಿ,
ಪೋಸ್ಟ್ ಬಾಕ್ಸ್ ನಂ. ೧೧,
— ಸುಬ್ಬಳ್ಳಿ —
ಫ್ಯಾಕ್ಟರೀ:—ಮಿ. ಮಂಡಾಲಿಕ್ಕಿ ಬ್ರಿಡ್ಜ್, ಬೊಂಬಾಯಿ ೧೧.

ಮಾರಾಟಕ್ಕಿರುವ ಸ್ಥಳಗಳು —

(೧) ಉಪಾಧ್ಯಾಯರ ಸಹಕಾರ ಸಂಘದ ಸ್ಟೋರ್ಸ್, ಚೌಕಿ,
(೨) ಶ್ರೀ ರಾಮಕೃಷ್ಣ ಸ್ಟೋರ್ಸ್, ಬಸ್ ಸ್ಟ್ಯಾಂಡ್,
(೩) ನ್ಯೂ ಲಿನ್ ಸ್ಟೋರ್ಸ್, ಬಸ್ ಸ್ಟ್ಯಾಂಡ್,
(೪) ಕೊಡಗು ಪಬ್ಲಿಕ್ ಸರ್ವೆಂಟ್ಸ್ ಸಹಕಾರ ಸಂಘದ ಸ್ಟೋರ್ಸ್,
(೫) ಕಾರ್ಪೋರೇಶನ್ ಸ್ಟೋರ್ಸ್, ಜಿಕ್ಕಪೇಟೆ,
(೬) ಜಯಲಕ್ಷ್ಮಿ ಸ್ಟೋರ್ಸ್, ಟೋಲ್‌ಗೇಟ್.

ಬೋರೇ ಗೌಡನ ವರದಿ.

ಬೋರಯ್ಯನ ಮೇಲೆ ಕೆಲವರಿಗೆ ಸಿಟ್ಟು. ಯಾರ ಮನಸ್ಸನ್ನೂ ನೋಯಿಸಬೇಕೆಂದು ಬೋರಯ್ಯನ ಆಶಯವಲ್ಲ. ನಾಗರೀಕರೆನ್ನುವವರು ಬೋರಯ್ಯನ ಮೂತಿಗೆ ಎಸ್ಟು ಗವನವಿತ್ತಾರೆಂಬುದರ ಅರಿವೂ ಬೋರಯ್ಯನಿಗಿದೆ. ಬೋರಯ್ಯನನ್ನು ನಿಂದಿಸುವ ಕೆಲವು ಪತ್ರಗಳು ಬಂದಿವೆಯೆಂದು ಸಂಪಾದಕರು ತಿಳಿಸಿದರು. ನುಳಿಯಿಲ್ಲದೆ ನೆಟ್ಟ ಬೆಳೆ ಒಣಗಿರುವ ವ್ಯಸನದಲ್ಲಿ ಬೋರಯ್ಯನಿಗೆ ಹೃದಯ ಭಾರವಾಗಿದೆ. ಎಂದಿನಂಧಾ ಹುಮ್ಮಸ್ಸು ಇಲ್ಲ. ಸಂಪಾದಕರು ಕೃಪೆಯಿಂದ ಕೊಡುವ ತನ್ನ ಪತ್ರಿಕೆಯ ಸ್ವಲ್ಪ ಸ್ಥಳದಲ್ಲಿ ಬೋರಯ್ಯನು ತನ್ನ ಸಹೋದರರಾದ ಇತರ ಬೋರಯ್ಯರಿಗೆ ಜಗತ್ತಿನಲ್ಲಿ ತೋರಿದ ವಿಚಾರಗಳು ನಿವೇದಿಸುವದಾಗಿದೆ. ಅದು ಕೆಲವರಿಗೆ ಮುಳ್ಳಾಗಿ ಕಂಡರೆ, ಇನ್ನು ಕೆಲವರಿಗೆ ಕಸ್ಟ ಬಳೆಯುವ ಕಂಚುಕವೆನಿಸಿದರೆ ಬೋರಯ್ಯನ ತಪ್ಪಲ್ಲ. ಬೋರಯ್ಯನು ಸತ್ಯವೆಂದು ತೋರಿದುದನ್ನು ಮಾತ್ರ ಬರೆಯುತ್ತಾನೆ. 'ಕಂಡದ್ದು ಹೇಳಿದರೆ ಕೆಂಡದಂಧಾ ಕೋಪ' ಹೌದು. ಆದರೆ ಸತ್ಯವನ್ನು ಮರೆಸುವ ನೀತಿ (Diplomacy)ಹಳ್ಳಿಯ ಬೋರಯ್ಯನಿಗೆಲ್ಲಿ?

* * *

ಶುಕ್ರವಾರ. ಹುತ್ತರಿ ಸಂತೆಯೊದ್ದಿಂದ ಹೋಗಲೇ ಬೇಕಾಯಿತು. ಕಾರ್ಯಬಾಹುಳ್ಯದಿಂದ ಮನೆಗೆ ಬರಲಾಗಲಿಲ್ಲಿ. ಆ ದಿನ ನಾನು ಕಂಡುದೇನು? ಪೇಟೆಯ ಬೀದಿಯೆಲ್ಲಾ ಸಾರಾಯಿ ವಾಸನೆ. ಬಹುಶಃ ಪ್ರತಿಯೊಬ್ಬನೂ ಕಳ್ಳು ಕುಡಿದಿರಬೇಕು! ರಸ್ತೆಯ ಚಿರಂಡಿಯಲ್ಲಿ ಕೆಲವರಾದರೆ; ಬಸ್ಸು ಕಾರುಗಳಿಗೂ ದಾರಿಬಿಡದೆ ಎಸ್ಟೆಯಲ್ಲಿ ನರ್ತನಕ್ಕಿಳಿದವರು ಕೆಲವರು. ಪೊಲೀಸರಿಗೆ ಹೊಸದೊಂದು ಕೆಲಸ! ಸ್ಟೇಶನಿಗೆ ಅನೇಕರು ಹೋದರು. ಸ್ಮೃತಿಬಂದ ಮೇಲೆ ಹಿಂದಕ್ಕೆ ಬಂದರು!

* * *

ಮುತ್ತಣ್ಣ ನಮ್ಮ ಗ್ರಾಮಸ್ಥ. ೪೫ ವಯಸ್ಸಿರಬಹುದು ಆ ದಿನ ಪೇಟೆಗೆ ಬಂದಿದ್ದ. ಹುತ್ತರಿ ಸಂತೆಯೆಂದು ಕಸ್ಟದಿಂದ ಉಳಿಸಿದ ೧೫೦ ರೂಪಾಯಿಗಳು ಆತನ ಹತ್ತಿರವಿದ್ದವು. ಅದರಲ್ಲಿ ಮನೆಯ ಮಕ್ಕಳಿಗೆ ಬಟ್ಟೆ ಆಗಬೇಕಿತ್ತು. ಸಂತೆಯ ಇತರ ಸಾಮಾನುಗಳು ಬೇಕಿತ್ತು. ಬೆಳಿಗ್ಗೆ ಪೇಟೆಗೆ ಬಂದೊಡನೆಯೇ ಪಟ್ಟಾಗಿ ಸಾರಾಯಿ ಕಡಿದಿದ್ದ. ಬಿಸಿಲೇರಿದಂತೆ ಆಮಲೇರಿ ಪ್ರಜ್ಞೆತಪ್ಪಿ ಅಂಗಡಿಯ ಜಗುಲಿಯೊಂದರಲ್ಲಿ ಮಲಗಿದ್ದ. ಸಾಯಂಕಾಲವಾಯಿತು. ಜನರೆಲ್ಲಾ ಮನೆಗೆ ತೆರಳುತ್ತಿದ್ದರು. ಸಂಜೆಯ ಗಾಳಿ ತಂಪಾಗಿ ಬೀಸುತಿತ್ತು. ಮುತ್ತಣ್ಣನಿಗೆ ಪ್ರಜ್ಞೆ ಬಂತು. ಮನೆ, ಮಕ್ಕಳ ಯೋಚನೆಯಾಯಿತು. ತೀಳ್ಸು ಅಂಗಡಿಯ ಕಡೆಗೆ ಓಡಿದ. ಜೇಬಿನಲ್ಲಿ ದುಡ್ಡಿರಲಿಲ್ಲ! ಯಾರೋ ಲುಟಾಯಿಸಿದ್ದರೋ, ಸಾರಾಯಿ ನೊಣ್ಕಿನಲ್ಲಿ ಎಲ್ಲಿ ಹಾಕಿದ್ದನೋ ಬಲ್ಲವರಾರು? ಮುಖವನ್ನು ಅಂಗೈಯಲ್ಲಿ ಮಚ್ಚಿ ಬಿಕ್ಕಿ ಬಿಕ್ಕಿ ಅಳುತ್ತಿದ್ದ! ಕೊಂದೆ ಸಂತೆಯಿಂದ ಬರುವನೆಂದು ಕಾತುರದಿಂದ ಕಾಯುತ್ತಿರಬಹುದಾದ ಮಕ್ಕಳ ನೆನಪಾಯಿತು.

* * *

ಬಾಗು ೬೦ ಪಯಸ್ಸಿನ ಮುದುಕಿ. ತನ್ನ ಮಗ ಮತ್ತವನ ಹೆಂಡತಿ ಇಬ್ಬರೂ ಮೃತರಾಗಿದ್ದರೆ. ಅವರ ೪ ವರ್ಷದ ಮಗು ಬಿಜ್ಜನ್ನನ್ನು ಸಾಸುವ ಬಾರ ಆಕೆಯ ತಲೆಯ ಮೇಲಿತ್ತು. ಹಣ್ಣು ಮುದುಕಿಯೊಡನೂ ಬಿಜ್ಜು ವಿಗಾಗಿ ನೆರೆಮನೆಯವರ ಕೆಲಸ ಮಾಡುತ್ತಿದ್ದಳು. ಈ ಪರಿಶ್ರಮದಿಂದ ಹೇಗೋ ಹಾಗೆ ಮಗುವನ್ನು ಸಾಕುತ್ತಿದ್ದಳು. ಹುತ್ತರಿ ಬಂದಿತ್ತು. ವರ್ಷವಿಡೀ ಬಂದಿ ಬಟ್ಟೆಯಿಂದ ಬದುಕುತ್ತಿರುವ ಮಗುವಿಗೆ ಹೊಸ ಜುಬ್ಬ ಒಂದನ್ನಾದರೂ ಉಡಿಸಬೇಕೆಂದು ಮುದುಕಿಯ ಆಸೆ. ಕಸ್ಟದಿಂದ ಎರಡು ರೂಪಾಯಿ ಸಂಗ್ರಹಿಸಿದ್ದಳು. ಪೇಟೆಗೆ ಬಂದಳು. ಅಂಗಡಿಯಲ್ಲಿ ನುಗ್ಗಾಟ ನಡೆದಿದೆ. ಬೆಳಿಗ್ಗೆ ಬಂದ ಮುದುಕಿ ಅಂಗಡಿಯ ಎದುರು ಮಗುವನ್ನು ಹತ್ತಿರ ನಿಲ್ಲಿಸಿಕೊಂಡು ನಿಂತಿರುವಳು. ಕಣ್ಣಿನಲ್ಲಿ ನೀರು ತುಂಬಿದೆ. ಬಡವರ ಹೃದಯ ವೇದನೆಯನ್ನರಿವರಾರು?

* * *

ಆದಿತ್ಯವಾರ ಮಡಿಕೇರಿಗೆ ಹೋಗಬೇಕಾಯಿತು. ಆ ದಿನ ಅಲ್ಲಿಯೇ ಉಳಿದಿದ್ದೆ. ರಾತ್ರಿ ಸುಮಾರು ೮.೩೦ ಗಂಟೆಗೆ 'ಪ್ಲೆನರ್ಸ್' ಎದುರುಗಡೆಯಿಂದ ದಾಟುವಾಗ್ಗೆ ಕೋಣೆಯೊಂದರಲ್ಲಿ ಗಲಭೆಯೋ ಗಲಭೆ. ಕೆಲವರು ಬೊಬ್ಬೆ ಹಾಕುತ್ತಿದ್ದರು. ಕೆಲವರು ವಿಕಾರ ಸ್ವರದಿಂದ ಹಾಡುತ್ತಿದ್ದರು. ಕೆಲವರು ನರ್ತನ (?) ಪ್ರಾರಂಭಿಸಿದ್ದರು. ಇಣಿಕಿ ನೋಡಲೆಂದು ಹತ್ತಿರ ಹೋದೆ. ಬಾಗಿಲ ಬಳಿಯಲ್ಲಿ ಪ್ರಜ್ಞೆ ತಪ್ಪಿದವರಂತೆ ಒಬ್ಬರು ನೆಲದಲ್ಲಿ ಗೋಡೆಗೊರಗಿ ಕೂತಿದ್ದರು. ಮತ್ತೊಬ್ಬರು ಶಿಕ್ಷಾನೆ ಮಾಡುತ್ತಿದ್ದರು. ಕೋಣೆಯೊಳಗಿಂದ ಮದ್ಯದ ವಾಸನೆ ಹೊರಚೆಲ್ಲುತ್ತು. ಯಾವದೋ ಕಾರ್ಯಕ್ಕಿರುವ ಕೋಣೆಯಲ್ಲಿ ಬೇತಾಳ ನುಗ್ಗಿದಂತೆ ಇದೇನು ಗಲಭೆಯೆಂದು ವಿಚಾರಿಸಲಾಗಿ ಹಾಕಿ ಸಂದ್ಯಾಟದಲ್ಲಿ ಆದಿನ ಗೆದ್ದವರ ಪಾರ್ಟಿ ನಡೆದಿದೆಯೆಂದು ತಿಳಿಯಿತು. ಇವರೆಲ್ಲ ನಾಗರೀಕರಂತೆ. ವಿದ್ಯಾವಂತರಂತೆ. "ಸ್ಪೋರ್ಟ್ಸ್‌ಮೆನ್" ಅಂತೆ. ಹಳ್ಳಿಯ ರೈತನಾದ ನನಗೆ ಹೇಸಿಕೆಯಾಗಿ ಕಂಡಿತು.

* * *

ಕೊಡಗಿನಲ್ಲಿ ೧೯೪೬-೪೭ ರಲ್ಲಿ ೨೭,೬೭೬ ಗೆಲನು ಸಾರಾಯಿ ಖರ್ಚಾಯಿತಂತೆ. ೧೯೪೫-೪೬ರಲ್ಲಿ ೪೧,೧೦೧ ಕ್ಕೆ ಏರಿತು. ೧೯೪೪-೪೫ರಲ್ಲಿ ೫೫,೧೪೬ ಗೆಲನು. ೧೯೪೩-೪೪ ರಲ್ಲಿ ೬೩,೮೯೫ ಗೆಲನು. ೧೯೪೨-೪೩ರಲ್ಲಿ ೭೪,೧೩೫ ಗೆಲನುಗಳು! ಕೊಡಗಿನಲ್ಲಿರುವ ಒಟ್ಟು ಜನಸಂಖ್ಯೆ ೧,೫೮,೦೦೦. ಇವರಲ್ಲಿ ಮಕ್ಕಳು ಸುಮಾರು ೪೦,೦೦೦ ಕಳೆದರೆ ಉಳಿದ ೧,೩೮,೦೦೦ದಲ್ಲಿ ಸುಮಾರು ೬೦,೦೦೦ ಹೆಂಗಸರನ್ನು ಕಳೆದರೆ ಉಳಿಯುವ ೭೮,೦೦೦ ಜನರು ಗಂಡಸರು. ಇವರಲ್ಲಿ ಸಾರಾಯಿ ಸೇವಿಸದ ಬ್ರಾಹ್ಮಣ, ಶೈವ, ಮಾಧ್ವ ದೇವಸ್ಥಾನದ ಮತ್ತಿತರರನ್ನು ತೆಗೆದರೆ ಕೊಡಗಿನಲ್ಲಿ ೨೦ ವರ್ಷ ಮೇಲ್ಪಟ್ಟ ಬಹುಮಾದವರ ಸಂಖ್ಯೆ ೨೦,೦೦೦ ವಿರಬಹುದು. ಈ ಜನರು ವರ್ಷಕ್ಕೆ ಹತ್ತು ಲಕ್ಷದ ಪರೆಗೆ ಸರಕಾರಕ್ಕೆ ಕರ ಕೊಡುತ್ತಾರೆ! ಹಾಗೆಂದರೆ ಪ್ರತಿ ಒಬ್ಬನು ವರ್ಷಕ್ಕೆ ರೂ. ೫೦ ತೆತ್ತ ಪ್ರಾಯವಿತು. ಹಿಂದೂ ದೇಶೀಯನ ಸರಾಸರಿ ವಾರ್ಷಿಕ ಉತ್ಪತ್ತಿಯಿದು! ಈ ಅಂಕಿ ಸಂಕಿಗಳನ್ನಾದರೂ ನೋಡಿ ಕುಡುಕ ತನವನ್ನು ನಿಲ್ಲಿಸಬಾರದೇ?

ಬಾತ್ಮಿ.

ಸೋನುವಾರಪೇಟೆ ಸೈಯರ್ ಎಲಿಮೆಂಟರಿ ಶಾಲೆ.

ಈ ಶಾಲೆಯ ಅಡಳಿತೆಯು ಒಂದು ಸುವ್ಯವಸ್ಥಿತ ರೀತಿಯಲ್ಲಿಲ್ಲವೆಂದು ಈಗ್ಗೆ ಸಾಧಾರಣ ಎರಡು ವರ್ಷಗಳಿಂದಲೂ ಇಲ್ಲಿಯ ಸಾರ್ವಜನಿಕರು ಸರಕಾರಕ್ಕೆ ಮೊರೆಯಿಟ್ಟುಗ್ಯೂ ಕೂಡ ಸರಕಾರವು ಕಿವಿಕೊಡದಿರುವುದು ತುಂಬಾ ವಿಷಾದಕರ. ಸಾಲದಕ್ಕೆ ಈ ನಾಡಿನ ಕೌನ್ಸಿಲ್ ಮೆಂಬರರು ಇದೇ ಶಾಲಾ ಆಡಳಿತೆಯ ವಿಚಾರ ಕಳೆದ ಕೌನ್ಸಿಲ್ ಅಧಿವೇಶನದಲ್ಲಿ ಪ್ರಸ್ಥಾಪಿಸಿ ಸುರಿಮಳೆ ಸುರಿಸಿದ್ದಾರೆ. ಸರಕಾರವು ಆ ಬಗ್ಗೆ ಸಾರ್ವಜನಿಕರ ಕೂಗಿಗೆ ಬೆಲೆ ಕೊಡದಿದ್ದಲ್ಲು ತೀರಾ ಹಿಂದುಳಿದ ಇಲ್ಲಿನ ಜನತೆಯ ಅಭಿವೃದ್ಧಿಗೆ ಎಷ್ಟರ ಮಟ್ಟಿನ ಆಸ್ಥೆವಹಿಸಿದೆಯೆಂಬುದು ಚೆನ್ನಾಗಿ ವಿಷದವಾಗುತ್ತದೆ. ಆ ಕಾರಣ ಇನ್ನಾದರೂ ಸರಕಾರವು ಆ ಕಡೆಗೆ ತನ್ನ ಗಮನವನ್ನು ಹರಿಸಿ ತಕ್ಕ ವ್ಯವಸ್ಥೆಮಾಡಬೇಕಾಗಿ ವಿನಂತಿ.

ನಾಡಿನವ.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2.

ಬೋಂಬೆ ಲೈಫ್ ಬಿಲ್ಡಿಂಗ್, ಪೊ. ಬಾ. ನಂ. 1, ಉಡುಪಿ.

(ಟೆಲಿಫೋನ್ ನಂ. 2398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡರಂ, ಕಲ್ಲಿಕೋಟೆ, ನುಂಗಳೂರು, ಮಧುರೆ, ಮತ್ತು ಬೊಂಬಾಯಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರು ಮೊಬಲಗು ರೂ. 1,33,740, ಜಮಾ ಬಂದ ರೇವನಾತಿ 3,30,268-1-8, ವಸೂಲಾದ ಕ್ವೇನುನಿಧಿ 2,36,454-0-3, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ತೇವಣಾತಿಯನ್ನು ತಾ. 1-12-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0-8-0 ದರದ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ರಿಜಿಸ್ಟಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮ್ಯಾನೇಜ್ಮರ್.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ರೂಪಾಯಿ
	ಚಾಲ್ತಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
	ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು	8,83,62,000	,,

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ: ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಜೋಂಬೇ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಜುನಾಘಡ ಸಂಸ್ಥಾನದಲ್ಲಿ ಅಶಾಂತಿ.

ಶೇಕಡ ೮೫ ರಷ್ಟು ಹಿಂದೂಗಳಿರುವ ಜುನಾಘಡ ಸಂಸ್ಥಾನವು ಪಾಕಿಸ್ತಾನ ಸೇರಿದೆ. ಅಲ್ಲಿಯ ಹಿಂದೂಗಳು ಇದನ್ನು ನಿವೇದಿಸಿರುವರು. ಜುನಾಘಡ ಸಂಸ್ಥಾನಾಧೀಶರು ಮುಸ್ಲಿಮರು.

ನವಾನಗರವು ಇಂಡಿಯನ್ ಡೊಮಿನಿಯನ್ ಸೇರಿದೆ; ನವಾನಗರದ ಜಾಮ್ ಸಾಹೇಬರು ದಿಲ್ಲಿಗೆ ಧಾವಿಸಿ, 'ಜುನಾಘಡವು ಪಾಕಿಸ್ತಾನ ಸೇರಿ, ಅಶಾಂತಿಗೆ ಕಾರಣವಾಗುತ್ತಿದೆ. ಇಲ್ಲೇ ಯುದ್ಧದ ಕೇಂದ್ರಪ್ರಾಯವಾಗಿ ಆಗಬಹುದು. ಜೆನ್ನಾ ಸಾಹೇಬರು ಆದನ್ನು ಇಂಡಿಯನ್ ಡೊಮಿನಿಯನ್ ಡೊಮಿನಿಯನಿನ ನೇರ ಹೇರಿಸುತ್ತಿದ್ದಾರೆಂದು ತೋರುವುದು.' ಎಂದು ಎಚ್ಚರಿಸಿರುವರು.

ಭೋಪಾಲ ನವಾಬರು ಸಿಂಧನಿಂದ ಮಧ್ಯ ಹಿಂದೂಸ್ಥಾನದ ಪರೆಗೆ ಪಾಕಿಸ್ತಾನವನ್ನು ಅಖಂಡವಾಗಿ ಮೂಡುವ ಯತ್ನದಲ್ಲಿ ತೋರುವು. ಅದರ ಬದಲಾಗಿ ಈಗ, ಹೈದರಾಬಾದನ್ನೂ ಜುನಾಘಡವನ್ನೂ ಇಂಡಿಯದ ನೇರ ಅಭಿಯೋಗ ಮೂಡಲು ಎರಡು ದೊಡ್ಡ ತೊಡಕುಗಳಾಗಿ ರಚಿಸಿದಂತಿದೆ.

ಜುನಾಘಡದಲ್ಲಿರುವ ಎಲ್ಲ ಪೋಲೀಸರೂ ಮುಸ್ಲಿಮರೇ! ಹಾಗೆಯೇ ಸೈನಿಕ ಅರಣ್ಯ ಕಾವಲುಗಳೂ ಮುಸ್ಲಿಮರೇ! ಸಂಜಾಬದಿಂದಲೂ, ಸಿಂಧ್, ಬಲೂಚಿಸ್ತಾನಗಳಿಂದಲೂ ಮುಸ್ಲಿಮರನ್ನು ಕರೆಸಿದ್ದಾರೆ. ಸಂಸ್ಥಾನದ ಪ್ರಜೆಗಳಲ್ಲಿ ಶೇಕಡ ೮೫ ರಷ್ಟು ಹಿಂದೂಗಳ ಮೇಲೆ ಅತ್ಯಾಚಾರಗಳು ನಡೆದಿವೆ, ಹಿಂದೂ ಸ್ತ್ರೀಯರ ಮಾನಾಪಹರಣವಾಗಿದೆ; ದೇವಾಲಯಗಳ ಮೇಲೆ ಕೈಯೂಡಿಯಾಗಿದೆ. ಅಶಾಂತಿ ಹಬ್ಬುತ್ತಿದೆ. ಇದರಿಂದ ಕಾಥಿಯಾವಾಡವಲ್ಲಿರುವ ಏಮ ಲಕ್ಷ ಮುಸ್ಲಿಮರೂ ಸಂಕಷ್ಟಾನುಭವಮಾಡಬೇಕಾಗಿ ಬರಬಹುದು.

ಜುನಾಘಡ ಪೋಲೀಸರು ಗಡಿದಾಟಿ, ಬಾಬಾರಿಯಾವಾಡ್‌ನ ಸಂಸ್ಥಾನದೊಳಗೆ ಪ್ರವೇಶಿಸಿರುವರು. ಈ ಬಾಬಾರಿಯಾವಾಡವು ಜುನಾಘಡದಿಂದ ಸ್ವಧಕ್ಕೆರಿಸಲ್ಪಟ್ಟದನ್ನು ಇಂಡಿಯನ್ ಡೊಮಿನಿಯನ್ ಅಂಗೀಕರಿಸಿದೆ.

ಮಂಗ್ರೋಲ್ ಎಂಬುದು, ಜುನಾಘಡದ ಸಳಿಯ ಮತ್ತೊಂದು ಸಂಸ್ಥಾನ. ಇದು ಕೂಡ ಇಂಡಿಯನ್ ಡೊಮಿನಿಯನ್ ಸೇರಿದೆ. ಇಲ್ಲಿಗೂ ಜುನಾಘಡ ಫೌಜು ಮುಂಬಂದರೆ, ಜುನಾಘಡದ ಕಡೆಯಿಂದ ಎರಡು ತಪ್ಪುಗಳಾಗುವುವು. ಇಂತಹ ಉಲ್ಲಂಘನೆ ನಡೆದರೂ, ಇಂಡಿಯನ್ ಡೊಮಿನಿಯನ್ ಸರಕಾರವು ತಣ್ಣಗೆ ಕುಳಿತಿದೆ. ಈ ಆಕ್ರಮಣಗಳು ಹೆಚ್ಚಬಹುದು. ಇವುಗಳಿಗೆ ಅಂತ್ಯವೂ ಇರಲಾರದು.

ಇಂಡಿಯನ್ ಡೊಮಿನಿಯನ್ ಸೇರಿದ ಸಂಸ್ಥಾನಗಳಿಗೆ ಸರ್ವತೋದರ ರಕ್ಷಣೆಯನ್ನೂ ಕೊಡಲಾಗುವುದಾಗಿ ಡೊಮಿನಿಯನ್ ಸರಕಾರವು ಆತ್ಮಸನ್ನಿಯಿತ್ತು ಆ ಆತ್ಮಾಸನೆಯನ್ನು ನಡೆಸಿಕೊಡಬೇಕಾಗಿದೆ.

'ಇಂಡಿಯನ್ ಡೊಮಿನಿಯನ್ ಸರಕಾರವು ಪಾಕಿಸ್ತಾನದ ಯಾವ ಪ್ರದೇಶವನ್ನಾದರೂ ಕಿತ್ತುಕೊಳ್ಳಬೇಕೆಂದು ನಾನು ಹೇಳುವುದಲ್ಲ; ಪಾಕಿಸ್ತಾನವ ಒಳಸಂಚುಗಳನ್ನು ಮುರಿದು, ಇಂಡಿಯನ್ ಡೊಮಿನಿಯನ್ ಸಾರ್ವಭೌಮತ್ವವನ್ನು ಕಾಪಾಡಬೇಕು'—ಹೀಗೆಂದು ನವಾನಗರದ ಜಾಮ್ ಸಾಹೇಬರು ಹೇಳುವರು.

ಜುನಾಘಡದ ಪ್ರಧಾನ ಸಚಿವ ಮಿ. ಅಬ್ದುಲ್ ಖಾದರ ಮತ್ತು ಅವರ ರಾಜಕೀಯ ಮಂತ್ರಾಲೋಚಕರೂ, ಜುನಾಘಡ ಅರಸರಿಗೆ, ಇಂಡಿಯನ್ ಡೊಮಿನಿಯನ್ ಸೇರುವಂತೆ ಬೋಧಿಸಿದ್ದರೆಂದು ತಿಳಿಯಲಾಗಿದೆ ಆರೋಗ್ಯದ ಕಾರಣಕ್ಕಾಗಿ ಅನೇರಿಕದಲ್ಲಿರುವ ಪ್ರಧಾನ ಸಚಿವರನ್ನು, ಜುನಾಘಡ ನರೇಂದ್ರರು ಹುದ್ದೆಯಿಂದ ನಿವೃತ್ತಪಡಿಸಿದರು; ಮತ್ತು ಅವರ ಮನೆಯ ರಕ್ಷಣೆ ನಡೆಸಿ, ಸೊತ್ತುಗಳನ್ನು ಮುಟ್ಟುಗೋಲು ಹಾಕಿದರು. ಪಾಕಿಸ್ತಾನ ನೇರುನ ನಿರ್ಧಾರವು, ಆಕ್ಟೋಬರ್ ಪ್ರಥಮಾನ ಸರ್ ಶಹಾನವಾಜ್ ಇವರ ಸಮಾಲೋಚನೆಯೆಂದಾಯಿತು.

ಸಂಸ್ಥಾನದ ಜನಸಂಖ್ಯೆಯಲ್ಲಿ ಸೇಕಡ ೮೫ ರಷ್ಟರಿನ ಹಿಂದೂಗಳು ಮಾತ್ರವಲ್ಲ, ಮುಸ್ಲಿಮರಲ್ಲಿಯೂ ಹಲವರು ಪಾಕಿಸ್ತಾನ ಸೇರುವ ಮನಸ್ಸಿಲ್ಲವರಾಗಿಲ್ಲ.

ಇಂಡಿಯನ್ ಡೊಮಿನಿಯನ್ ಪ್ರತಿನಿಧಿಯು ಜುನಾಘಡ ಅರಸರನ್ನು ಕಾಣ ಹೋದಾಗ, ಅವರಿಗೆ 'ಅಸ್ವಸ್ಥ'ವೆನ್ನಲಾಯಿತು; ಭೇಟಿ ದೊರೆಯಲಿಲ್ಲ.

ನವಾನಗರದ ಜಾಮ್ ಸಾಹೇಬರು, ಹಲವು ವರ್ಷಗಳ ತಮ್ಮ ಮೈತ್ರಿಯಿದ್ದು, ಜುನಾಘಡ ಅರಸರನ್ನು ಕಾಣುವ ಯತ್ನ ಮಾಡಿದರೂ, ಯಶಸ್ವಿಯಾಗಲಿಲ್ಲ.

ಜುನಾಘಡದಿಂದ ಹಿಂದೂ ಸಾಹುಕಾರರು, ತಮ್ಮ ಹಣವನ್ನು ಬ್ಯಾಂಕುಗಳಿಂದ ಹಿಂದೆಗೆದು. ಸಂಸ್ಥಾನ ಬಿಟ್ಟು ಭಾವನಗರ, ಪೋರಬಂದರು, ರಾಜಕೋಟೆ, ಗೋಂಡಾಲ, ಬಡೋದಾ ಮೊದಲಾದ ಕಡೆಗಳಿಗೆ ಹೋಗುತ್ತಿದ್ದಾರೆ ಜುನಾಘಡವನ್ನು ಪ್ರವೇಶಿಸುವವರನ್ನೂ ಹೊರಡುವವರನ್ನೂ ಜಪ್ತಿಮಾಡಲಾಗುತ್ತದೆ.

ಆಯುಧಗಳನ್ನು, ಪಾಕಿಸ್ತಾನ ಕಡೆಯಿಂದ ಮಂಜಿ (ಪೋಣಿ) ಗಳಲ್ಲಿ ತುಂಬಿರುತ್ತಿದ್ದಾರಂತೆ.

'ಕಾಥಿಯಾವಾಡವಲ್ಲಿ ಜಾತೀಯ ದಂಗೆಗಳೆದ್ದರೆ, ಏಮ ಲಕ್ಷ ಮುಸ್ಲಿಮರು ನಾವೂವೇಷವಾಗಿಬಹುದು.' ಎನ್ನುತ್ತಾರೆ, ಜಾಮ್ ಸಾಹೇಬರು.

ಭೌಗೋಲಿಕ ಕಾರಣಗಳಿಂದ ಜುನಾಘಡವು ಪಾಕಿಸ್ತಾನ ಸೇರಲು ಸಾಧ್ಯವೇ ಇಲ್ಲ; ಆದರೆ, ಪಾಕಿಸ್ತಾನ ರಚಯಿತರ ಮಹೋತ್ಸಹದಿಂದ ಅದು ಸೇರಿಬಿಟ್ಟಿದೆ ಜನಮತವನ್ನು ಕೇಗೆದು, ಈ ವಿಷಯವು ನಿರ್ಧರಿಸಲ್ಪಡಬೇಕು. ಡೊಮಿನಿಯನ್ ಸರಕಾರವು ಜೋತರಿಸಬೇಕು.

'ಪ್ರ'

ಲಂಡನಿನಲ್ಲಿ ಗಾಂಧೀ ಜೀವನ ವಿಧಾನ.

'ಗಾಂಧೀಜಿಯ ಸರಳ ಜೀವನ ಅವರ ಸನ್ಯಾಸಿ ಮನೋಭಾವದ ಪರಿಣಾಮವೆಂದೆನ್ನುವವರಿದ್ದಾರೆ ಆದರೆ ಸರಿಯಾಗಿ ವಿವೇಚಿಸಿದರೆ ಸರಳತೆಯು ವಾಸ್ತವವಾದ ಆರ್ಥಿಕ ಯೋಜನೆಯ ತಳಹದಿಯಾಗಿದೆ.' ಹೀಗೆಂದು ಜೆ ಸಿ. ಕುಮಾರಪ್ಪನವರು ಗಾಂಧೀ ವಿಧಾನಗಳನ್ನು ಇಂಗ್ಲೆಂಡ್ ಏರೋಸ್ಯ ದೇಶಗಳಲ್ಲಿ ಹೇಗೆ ಅನುಸರಿಸುತ್ತಿರುವರೆಂಬುದನ್ನು ವಿವರಿಸಿದುದರ ಸಾರಾಂಶ ಹೀಗಿದೆ:—

ತನ್ನ ಇತ್ತೀಚೆಗಿನ ಯುರೋಪ್ ಸಂಚಾರದಲ್ಲಿ ಅಲ್ಲಿನ ಶ್ರೀಮಂತ ವರ್ಗದವರು ಕೂಡ ಸಂದರ್ಭಗಳ ಒತ್ತಾಯದಿಂದ ಹೇಗೆ ಸರಳ ಜೀವನವನ್ನು ಸಮರಿಸುತ್ತಿರುವರೆಂಬ ಸಂಗತಿಯು ಕಾತುಕವನ್ನುಂಟು ಮಾಡಿತು. ಬ್ರಿಟನು ತನ್ನ ಆಹಾರಕ್ಕಾಗಿ ಪರರಾಷ್ಟ್ರಗಳ ಮೇಲೆ ಹೊಂದಿಂಬೇಕಾಗಿದೆ. ಆಹಾರ ಪದಿಸಲು ಇಂಗ್ಲಿಷ್ ಜನರು ಅನೇಕ ವಿಲಾಸೀ ವಸ್ತುಗಳ ಆಮದುಗಳನ್ನು ನಿಲ್ಲಿಸಿರುವರು. ಸೂತ್ರವೆಲ್ಲ ತಮಗೇ ಕಮ್ಮಿ ಬೀಳುವ ಒಬ್ಬೆಗಳನ್ನು ಆಹಾರ ತರಿಸುವ ದೇಶಗಳಿಗೆ ಕೊಟ್ಟು ಬಿಡಬೇಕಾದ ಪ್ರಸಂಗ ಆ ಜನರಿಗೆ ಬಂದಿರುತ್ತದೆ

ಇದರ ಪರಿಣಾಮವಾಗಿ ಬ್ರಿಟಿಷ್ ಜನತೆ ತಮ್ಮ ಉಡುಪು ಕೊಡುಪುಗಳನ್ನು ಅತ್ಯಂತ ಸರಳಮಟ್ಟಕ್ಕೆ ನಿಲ್ಲಿಸಿದೆ. ಉದಾ: ಅಲ್ಲಿನ ಮಹಿಳೆಯರು ಹೆಚ್ಚಾಗಿ ಕಾಲು ಚೀಲಗಳನ್ನೇಗ ಉಪಯೋಗಿಸುವುದಿಲ್ಲ. ಪುರುಷರು ಸ್ನಾನದ ಉಡುಪುಗಳಲ್ಲಿ ಸೈಕಲ್ಲುಗಳಲ್ಲಿ ಸಂಚರಿಸುತ್ತಾರೆ. ಅನೇಕರು ಒಂದು ಚಡ್ಡಿಯಲ್ಲೇ ದಿನವನ್ನು ಕಳೆಯಲು ಪ್ರಯತ್ನಿಸುತ್ತಾರೆ ಈ ಜನರೇನು ಗಾಂಧಿ ಅನುಯಾಯಿಗಳಲ್ಲ. ಆದರೆ ಇಂದವರು ನಮ್ಮ ಮಹಾತ್ಮನಿಗಿಂತ ಕಮ್ಮಿ ವಸ್ತ್ರಗಳನ್ನುಡುವಂತಾಗಿದೆ. ಹಿಂದಿನ ಕಾಲದ ಇಂಗ್ಲೆಂಡಿನಲ್ಲಿ ಜನರು ಈಗಿನಂತೆ ಈ ಆತ್ಯಲ್ಪ ಪೋಷಾಕುಗಳಲ್ಲಿ ಸಂಚರಿಸುತಿದ್ದರೆ ಕೈದುಮಾಡಲ್ಪಡುತಿದ್ದರು.

ಆಳುಗಳ ಮಜೂರಿ ಅತೀ ಹೆಚ್ಚಾಗಿರುವುದರಿಂದ ಶ್ರೀಮಂತ ಬ್ರಿಟಿಷ್ ಮಹಿಳೆಯರು ಕೂಡ, ಸ್ವಂತ ಅಡಿಗೆ, ಒಗೆಯುವಿಕೆ, ಪಾತ್ರೆ ತಿಕ್ಕುವಿಕೆಗಳನ್ನು ಮಾಡುತ್ತಿರುವರು. ನಮ್ಮ ದೇಶದಲ್ಲಿ 'ಆಹಾರ ಹಬ್ಬು ಬೆಳೆಸಿ' ಚಳವಳಿಯು ಗೋಡೆಗಳಲ್ಲಿ ಮಾತ್ರ ಸಾಗುತ್ತಿರುವಾಗ ಇಂಗ್ಲೆಂಡಿನ ಸಂಸಾರಸ್ಥರು ಒಂದು ಕಾಲದಲ್ಲಿ ಕಸ ಕೊಳೆಯಿಂದ ತುಂಬಿರುತಿದ್ದ ತಮ್ಮ ಸಣ್ಣ ಪುಟ್ಟ ಹಿತ್ತಲು, ತೋಟಗಳಲ್ಲಿಂದು ತರಕಾರಿಗಳನ್ನು ಬೆಳೆಸುತಿದ್ದಾರೆ. ಪ್ರತಿಯೊಬ್ಬರೂ ತಮ್ಮ ವಿರಾಮ ಕಾಲವನ್ನು ಕಾಯಿಪಲ್ಯ ಬೆಳವಣಿಗೆಗಾಗಿ ಉಪಯೋಗಿಸುತ್ತಾರೆ.

ನಾವು ಉದ್ದೇಶಪೂರ್ವಕವಾಗಿ ನಮ್ಮ ಜೀವನಾವಶ್ಯಕತೆಗಳನ್ನು ಅತ್ಯಂತ ಸರಳಮಟ್ಟಕ್ಕಿಳಿಸಿದರೆ 'ಭ್ರಾಂತಿ'ರೆನಿಸಲ್ಪಡಬೇಕಾಗಿಲ್ಲ ಇಂದು ಲಂಡನಿಗರು ಗಾಂಧೀ ರೀತಿ ನೀತಿಗಳನ್ನನುಸರಿಸುವ ಸಂದರ್ಭ ಒತ್ತಾಟಕ್ಕೆ ಸಿಲುಕಿದ್ದಾರೆ. ಆದುದರಿಂದ ಅಂತೆ ಪರಿಸ್ಥಿತಿಗಾಗಿ ಮೊದಲೇ ಸಿದ್ಧಪಡಿಸಿಕೊಳ್ಳುವುದು ಅದೆಷ್ಟು ಉತ್ತಮ ದೂರದೃಷ್ಟಿಯ ವಿಚಾರವಾಗಿದೆ!

'ಪ್ರ. ಮೂ.'

WARDEN MARCHES AHEAD.

ANOTHER YEAR OF RECORD BUSINESS.

Youngest working on Surplus of Funds of Progress of the past three years:

BUSINESS	1944.	1945.	1946.
Introduced:	Rs. 1,20,57,513.	1,56,19,295.	2,04,53,277
Completed:	Rs. 1,04,77,346	1,32,87,520.	1,72,12,480

WARDEN INSURANCE CO., Ltd.

H. O. BOMAY.

ORGANISATION ALL OVER INDIA, CEYLON & EAST AFRICA.

Wide scope for energetic young men a Agents, Special Agents and paid Orgasisers under our new Expansion Scheme

For particulars apply to
P. C. Karambaya,
Brach Secretary.

Branch Office for Mysore State & Coor
142, Gandhinagar
BANGALORE CITY.

ವಾರ್ಡನ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

(ಹೆಡ್ ಆಫೀಸ್:—ಬೊಂಬಾಯಿ)

ಮೈಸೂರು ಮತ್ತು ಕೊಡಗು ಶಾಖೆ

142 ಗಾಂಧಿ ನಗರ, ಬೆಂಗಳೂರು ಸಿಟಿ.

Reg. No. B. 1580.
'KODAGU MERCARA, (Coorg)'

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0

ಸಂಪುಟ ೩೬ | ತಾರೀಕು ೧೭-೧೨-೧೯೬೭ನೇ ಶುಕ್ರವಾರ | ಸಂಚಿಕೆ ೨೭

ಕಂಟ್ರೋಲುಗಳು ಹೋಗುತ್ತಿವೆ.

ಯುದ್ಧವು ಪ್ರಾರಂಭವಾದ ನಂತರ ಕಂಟ್ರೋಲುಗಳು ಇಡೀ ಜಗತ್ತಿನಲ್ಲಿ ಪ್ರಾರಂಭವಾದವು. ಅವು ಇನ್ನೂ ಅಸ್ತಿತ್ವದಲ್ಲಿವೆ ಹಲವೆಲವು ಕಡೆಗೆ ಇಲ್ಲಿಬರುವುದೂ ಉಂಟು. ಇವುಗಳ ಮೂಲಕ ಜನತೆಯು ಬಹಳ ಅನಾನುಕೂಲತೆಗಳನ್ನು ಸಹಿಸಿತು. ಜೀವಧಾರಣೆ ಮಾಡಿಕೊಂಡು ಇದ್ದರೆ ಸಾಕೆಂಬ ಸ್ಥಿತಿಗೆ ಅದು ಗುರಿಯಾಯಿತು. ಹಲವೆಲವು ಕಡೆಗಂತೂ ಜಗರು ಅವಾರದ ಅಭಾವದಿಂದ ಹಾಳಗಳಂತೆ ಪ್ರಾಣಬಿಟ್ಟಿರು.

ಈ ಪರಿಸ್ಥಿತಿಯಲ್ಲಿ ಲಾಭ ಮಾಡಿಕೊಂಡವರಿಗೂ ಕಡಿಮೆ ಇಲ್ಲ. ಅನೇಕರು ಹಾಹು ಅನ್ನುವುದರೊಳಗೆ ಶ್ರೀಮಂತರಾದರು. ಇವರ ಸಂಪತ್ತಿಗೂ ದೊಡ್ಡದಲ್ಲ. ಜನ್ಮಾನ್ನಗಳಕ್ಕಾಗಿ ಕಷ್ಟಪಡುತ್ತಿದ್ದವರೆಲ್ಲಾ ಬಡವರು.

ಪರಿಸ್ಥಿತಿಗೆ ಮನುಷ್ಯನು ಹೇಗಲುತ್ತಿನ್ನರೂ ಇವರ ಕೈಗೆ ಸಿಕ್ಕಿದ್ದಾಗ ಕಷ್ಟನು ಸಾವಾಗಿ ಕಸನ್ನು ಖರೀದಿಸಿಕೊಳ್ಳುವ ಗುಣವೂ ಜನಕ್ಕಿಲ್ಲ. ನಿಯಂತ್ರಣದ ಅವಧಿಯಲ್ಲಿಯೂ ಜನರು ಜೀವಾವನ್ನು ಅಭ್ಯಾಸ ಮಾಡಿದರೆ ಈಮಾತು ಎದ್ದು ಕಾಣುತ್ತಿದೆ. ನುನ ಒಂದಂತೆ ಬಟ್ಟೆಯೂ ಡಾಕ್ಟ್ರಿದ್ದ ಮತ್ತು ಅನೇಕ ಆಭ್ಯಾಸಗಳನ್ನೆ ಬಿಟ್ಟುಕೂಡಿದ್ದ ಜನರು ಸದ್ದಿಲ್ಲದೆ ಅವುಗಳನ್ನು ತ್ಯಜಿಸಿದರು. ಇದ್ದರಲ್ಲಿಯೂ ಎಲ್ಲರೂ ಸಂಗಿಸುವುದನ್ನು ಕಲಿತರು ಹೆಬ್ಬ ಹುಣ್ಣಿಮೆಗಳು ಅನುಕೂಲವಿದ್ದಂತೆ ಸಾಗಿದವು. ಲಗ್ನ, ಮಂಜಿಗೆಳು ತೀರ ಗಣ್ಣ ರೂಪದಲ್ಲಾದವು. ಅನ್ನವೇ ಬೇಕೆನ್ನುವವರು ರೊಟ್ಟಿಗಳನ್ನು ತಿನ್ನಲು ಕಲಿತರು ಚಹಾದ ಚಟವಿದ್ದವರು ನಿರ್ವಾಹವಿಲ್ಲದೆ ಅನನ್ನು ದಮನ ಮಾಡಬೇಕಾಯಿತು ಅರಿವೆಯಲ್ಲಿಯ ಸಂಕರ್ಯವು ಮಾಯವಾಗುತ್ತಲೇ ಇದ್ದದ್ದನ್ನು ಉಟ್ಟುಕೊಳ್ಳ ಹತ್ತಿದರು. ಬೆಲ್ಲವಿದ್ದರೆ ಬೆಲ್ಲ, ಇಲ್ಲದಿದ್ದರೆ ಸಕ್ಕರೆ, ಎರಡೂ ಇಲ್ಲದಿದ್ದರೆ ಹಾಗೆಯೇ ಅಡಿಗೆಯಾಗಹತ್ತಿತು. ಕಲ್ಲೆಣ್ಣೆಯ ದೀಪಗಳು ಕಡಿಮೆಯೊದಪ್ಪ; ಎಣ್ಣೆ ರೂಪವನ್ನು ತಾಳಿದವು. ಹಿಂದಿನ ಬೆಡಲ ಎಣ್ಣೆಯೇ ಮೊದಲಾದ ದೀಪಗಳು ಅಸ್ತಿತ್ವಕ್ಕೆ ಬಂದಿಲ್ಲದೆ ಬಂದವು. ಹಲವೆಲವು ವೇಳೆ ಕತ್ತಲೆಯಲ್ಲಿ ರಾತ್ರಿಗಳನ್ನು ಕಳೆಯಲು ಕೂಡ ಜನರು ಸಿದ್ಧರಾದರು.

ನಿಯಂತ್ರಣಗಳಿಂದ ಜೀವನದ ಮಾದಿಕೆಯು ಅಲ್ಪ ಪ್ರಮಾಣಾಂತರದಿಂದ ಜನತೆಯು ಬೇಸತ್ತು ಕೊಯಿತು. ಬಲೋ ದಿನಗಳನ್ನು ಕಡಿದ್ದೇವೋ ಇಲ್ಲವೋ ಎಂಬುವಷ್ಟರಲ್ಲಿ ಅವಸಿ ಹೋಯಿತು. ರೊಕ್ಕ ತೆಗೆಕೊಂಡು ಹೋದರೆ ಬೇಕಾದ ಪದಾರ್ಥ ಸಾಮಗ್ರಿಯು ದೊರೆಯುವ ಪರಿಸ್ಥಿತಿಯನ್ನು ಕಾಣುವೆನೆಂದು ಎಲ್ಲರೂ ಉದ್ಗರಿಸಿದರು.

ಇದರಿಂದ ಅಧಿಕಸಂಖ್ಯೆಗೆ ಜೀವರ ಸೌಲಭ್ಯವು ಒಬ್ಬರ ಮೇಲೆ ಒಬ್ಬರು ಪರಿಪಾಟ್ಯರು. ಇಂಥ ಬಿಳ್ಪಟ್ಟಿನ ಕಾಲದಲ್ಲಿಯೇ ಕಂಸೆಸ್ ಪಂಡಾಲುಗಳ ಗೃಹಸ್ಥ ದೊರವರ ಸೂತ್ರಗಳು ಬಂದ್ಯಾಗಿ ಅವು ಕಾರ್ಯವನ್ನು ಬಹಳ ಶಿಸ್ತಾಗಿ ಪರಿಣಾಮಕಾರಿಯಾಗಿ ಜನಗಳು ಜನರಿಂದ ರಕ್ಷಕರ ತಿ ಪಡೆದುಕೊಳ್ಳಬೇಕಾಯಿತು. ಬ್ರಿಟಿಷ್ ರಾಜ್ಯವಲ್ಲಿ ಮನಬಂದಂತೆ ನಡೆದ ಪುಂಡರೇ ಅಧಿಕಾರಿಗಳು ಪ್ರಾಮಾಣಿಕ ಹಾಗೂ ಸ್ವಾಮಿ ಭಕ್ತಿಯನ್ನು ಪ್ರಕಟಿಸಿಕೊಳ್ಳುವ ಹೊಂದಿಗಾಲಾಲ್ಲಿ ಪೈಪೋಟಿಗೆ ಬಿದ್ದಿಕೊಳ್ಳಲಿಕ್ಕೆ. ಅವರನ್ನು ತಿಂದಲು ಸ್ವತಂತ್ರ ಭಾರತದ ಸರಕಾರವನ್ನೂ ಆಗಲಿಲ್ಲ. ಇಂಗ ಮೂಲಕ ನಡೆದ ಘೋರ ನೆನಪುಗಳನ್ನು ಕಣ್ಣಾರೆ ಕಂಡಾಲಿದ್ದ ಜನತೆಯು ಸರಕಾರವನ್ನು ಧಾರಾಳವಾಗಿ ಕಪಿಗುತ್ತಿದ್ದದ್ದು ಸ್ವಾಭಾವಿಕವಾದ ಮಾತೇ ಆಗಿತ್ತು.

ಅನೇ ವೇಳೆಗೆ ಸರಕಾರದವರು ಕೂಡ ಜನತೆಯನ್ನು ಹಲವು ರೀತಿಗಳಿಂದ ನಿಯಂತ್ರಿಸಬೇಕಾಯಿತು. ಕಳ್ಳಪೇಟೆ, ಲಂಚಬಡಕತನಗಳು ಹೋಗಬೇಕೆಂಬ ಜನತೆಯಲ್ಲಿಯವರೇ ಆದ ಕೆಲವರು, ಸರಕಾರಿ ಅಧಿಕಾರಿಗಳ ಸಹಾಯದಿಂದ ಆ ಪೂರ್ವಗಳನ್ನು ಅವಲಂಬಿಸಿ ಸಾಮಾನ್ಯರನ್ನು ಸುಲಿದರು. 'ಹೀಗೆ ಜನತೆಯಲ್ಲಿ ಸರ್ವಗುಣಿಗಳೂ ಶಮನಕ್ಕೆ ಸಂಧಿಸಾಧಿಸಿದಾಗ ಹೊಡೆತ ಕೊಟ್ಟದ್ದರಿಂದ ಒಟ್ಟನಲ್ಲಿ ವಾತಾವರಣವು ಬಹಳ ಕೆಟ್ಟು ಹೋಯಿತು.

ಸಹನೆಯು ಮೀರಿ ಮಿರಿದರೂ ಜನರೂ ಉಪಾಯವಿಲ್ಲದೆ ಮತ್ತು ಒದರಾಡುತ್ತಾ ಬಂದ ಪರಿಸ್ಥಿತಿಗೆ ಎದೆಗೊಟ್ಟು ಸಾಗಿದರು. ಕಠಿಣ ಕಾಲವು ಕೂಡ ತೊನೆತನಕ ಇರಲಾರದು. ಈ ಮಾತು ಬಹಳ ಜನರಿಗೆ ತಿಳಿಯುವುದಿಲ್ಲ. ಆದ್ದರಿಂದ ಅವರು ದಿಕ್ಕು ಕಾಣದೆ ಹೋಗುತ್ತಾರೆ. ಗೊತ್ತಿದ್ದವರು ಕೂಡ ತಡೆದುಕೊಳ್ಳಲಾರದೆ ಒದರಾಡುತ್ತಾರೆ.

ಏನೇ ಆಗಲಿ ಒಮ್ಮೆ ಈ ನಿಯಂತ್ರಣಗಳು ನಮಯವಾಗುವಕಾಲ ಬಂದಿದೆ. ಸಕ್ಕರೆ ಮತ್ತು ಬೆಲ್ಲಗಳ ನಿಯಂತ್ರಣವು ಹೋಯಿತೆಂದು ಗೊತ್ತಾಗಿದೆ. ಧಾನ್ಯ ಮತ್ತು ಆಹಾರದ ನಿಯಂತ್ರಣಗಳೂ ಸ್ವಲ್ಪ ದಿವಸಗಳಲ್ಲಿ ಹೋಗಲಿವೆಯೆಂದು ತಿಳಿಯುತ್ತದೆ. ಈ ವಿಷಯದಲ್ಲಿ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳು ಒಳಗೆ ಗಂಭೀರವಾಗಿ ಆಲೋಚಿಸುತ್ತಿವೆ ಮತ್ತು ನಿಯಂತ್ರಣಗಳನ್ನು ಕಿತ್ತೊಗೆಯುವ ಕಡೆಗೆ ಬಲವನ್ನಿಟ್ಟುಕೊಂಡು ಕಾರ್ಯ ಮಾಡುತ್ತಿವೆ

ಹೀಗೆ ಗಲಿಬಿಲಿಗೆ ಸಬಲ ಕಾರಣಾಗಳೂ ಇವೆ ಆನವೆಯು ನಿಯಂತ್ರಣಗಳನ್ನು ತೆಗೆಯಿರಿ ಎಂದು ಕೂಗುತ್ತಿರೆ ವಾಹಾತ್ಮಗಧಿಕಾರಿಗಳು ಕೂಡ ಅದೇ ಮಾತನ್ನು ಒತ್ತಿ ಹೇಳುತ್ತಿದ್ದಾರೆ

ಅವರೆ ಸರಕಾರವು ಎರಡು ಅಭಿಪ್ರಾಯಗಳ ನಡುವೆ ಸಿಕ್ಕಾದ ಸ್ಥಿತಿಗೆ. ನಿಯಂತ್ರಣವನ್ನು ತೆಗೆದರೆ ಪರಿಸ್ಥಿತಿಯು ಸುಧಾರಿಸುವುದು ಎಂಬುದೂ ಎಲ್ಲರಿಗೆ ವಿದಿತವಿದ್ದರೂ ವಿಳಂಬವನ್ನು ಬೇಕೆಂಬುವವರು ಎಂದು ಕೆಲವರು ಎಂದು ಹೇಳುತ್ತಾರೆ ಇನ್ನೂ ಕೆಲವು ಪ್ರಾಂತ್ಯಗಳಲ್ಲಿ ಏನೇನೋ ಕಾರಣಗಳನ್ನು ಕೊಟ್ಟು ಈ ಕಾರ್ಯವನ್ನು ಮುಂದೂಡಲಾಗುತ್ತಿದೆ. ಇವೆಲ್ಲವೂ ಸಿದ್ಧಿಯಾಗಿ ಪರಿಸ್ಥಿತಿಯು ಸ್ವಾಭಾವಿಕ ಸ್ಥಿತಿಗೆ ಬರಲು ಇನ್ನೂ ಎಷ್ಟು ಕಾಲ ಬೇಕಾಗುತ್ತದೆ? ಎಂಬುದಕ್ಕೆ ಖಚಿತವಿಲ್ಲ. ಈ ವಾರ್ತೆಯ ಬೆಳಕಿನಲ್ಲಿ ಒಂದು ಸ್ವಯೋಗ ಪನ್ನೇ ಮಾಡಬಹುದು ಉದ್ಯೋಗದಾತರು ಈ ಕಾಲವನ್ನು ಇಗಲಾಗಿಸಿದ್ದಾರೆ. ಎಂಬುದು ಸ್ಪಷ್ಟವಾಗಿ ಕೆಲವರ್ತಾರೆ.

ಬಹು ದಿವಸಗಳನಂತರ ಈ ನಿಯಂತ್ರಣಗಳು ಹೋಗಲಿರುವುದರಿಂದ ಜನರಿಗೆ ಸ್ವಲ್ಪ ಮೇಳೈದಾರಿ ಎನ್ನುವಂತಾಗುವುದರಲ್ಲಿ ಸಂಶಯವಿಲ್ಲ. ರೊಕ್ಕ ತೆಗೆದುಕೊಂಡು ಹೋದರೆ ಬೇಕಾದ ಪದಾರ್ಥ ಸಾಮಗ್ರಿಯು ಸಿಗುವದು ಎಂಬ ಕಾರಣದಿಂದ ಜನರಾವಾಗದೆ ಇರಲಾರದು ಆದರೆ ನಿಯಂತ್ರಣಗಳು ಹೋದ ಕೂಡಲೆ ಕೆಲವೆ ದಿವಸ ಸಾಮಗ್ರಿಗಳ ಬೆಲೆಗಳು ಏರುವ ಸಂಭವವಿದೆ. ಮುಂದೆ ಸರಿ ಹೋಗುವುದರಲ್ಲಿ ಸಂಶಯವಿಲ್ಲ. ಹೀಗೆ ಬೆಲೆಗಳು ಏರಿದ ಅವಧಿಯಲ್ಲಿ ದೊಂದರೆಯಾಗದಂತೆ ಇರಲಾರದು. ಆಗ ಪುನಃ ರೇಗುವುದು ಸ್ವಾಭಾವಿಕವಾಗಿದೆ. ಸರಕಾರವನ್ನು, ಪರಿಸ್ಥಿತಿಯನ್ನು ಹಿಡಿತದಲ್ಲಿ ತರುವ ಬಗ್ಗೆ ಕೇಳುವರು ಇದ್ದೇ ಇದ್ದರೂ ಬೆಲೆಗಳ ಏರುವಿಕೆಗೆ ಲಾಭಬಡಕರನ್ನು ಮಾತ್ರ ಆಗ ಶಿಸಬೇಕಾಹೀತು.

ಲಾಭಬಡಕರು ಕೂಡ ಈ ಪರಿಸ್ಥಿತಿಯ ಬಗ್ಗೆ ಸ್ವಲ್ಪ ವಿಚಾರ ಮಾಡಲೇಬೇಕಾದೀತು. ಲಾಭಕ್ಕೂ ಮಿತಿ ಇರಬೇಕಗುತ್ತದೆ. ನ್ಯಾಯವಾದ ಲಾಭಕ್ಕೆ ಯಾರೂ ಬೆಂದ ಎನ್ನುವುದಿಲ್ಲ. ಹಾಲಿನ ದರ ರೆಗಾಗಿ ಕಚ್ಚಲಿಲನ್ನೇ ಕೊಯ್ಯುವ ಕಾರ್ಯಕ್ಕೆ ಆದರು ಬೃಹ ಕೆಲರೆ ಪುನರ್ ದೇಶದಲ್ಲಿ ಮತ್ತೆಂದು ಕೋಲಾಹಲವನ್ನು ಎಬ್ಬಿಸಿದಾತೀರಿತು. ಮಲೆಗೆ ಸಿಕ್ಕ ಬಡವರು ಜೀವದ ಮೇಲೆ ಬಂದಾಗ ಬೇಕಾದ ಕಾರ್ಯಗಳಿಗೆ ಕೈಹಾಕಿದ ಉದಾಹರಣೆಗಳು ಬೇಕಷ್ಟಿವೆ. ಪ್ರಾಣದ ಪ್ರಶ್ನೆಯನ್ನೆಗೆ ಲಾಭಬಡಕರೇ ಹೊಣೆಗಾರರಾಗಿದ್ದಾರೆ.

ಒಬ್ಬೆರಡು ದಿನಗಳಿದಂತೆ. ಒಂದೊಂದು ನಿಯಮವನ್ನು ಎತ್ತಿಗೆಯುತ್ತಿದ್ದಂತೆ ಜನತೆಯು ಹೂಂಕರಿಸಿಕೊಂಡು ಇಷ್ಟು ದಿವಸ ನಿಯಂತ್ರಣಗಳಲ್ಲಿ ತೊಂದರೆಯಾಯಿತು ಇನ್ನು ಆವು ಮೇಲೆ ಒಳಕ ವ್ಯವಸ್ಥೆಯಾಗಲಿಲ್ಲ ಕಾಲವನ್ನು ಎಮರಿಸಬೇಕು ಆ ವೇಳೆಗೆ ಪರಿಸ್ಥಿತಿಯು ಪೂರ್ಣ ಹಳಿಗೆ ಬಂದಿವ ಸಂಭವವಿದೆ. ಪ್ರಮಾಣ ಗಂಡಾಂತರವು ಆಗ ಬಂದಿವುದೂ ಯಾರು ಬಲ್ಲರು?

ಧೈರ್ಯ ಬಿಡದೆ ಒ ಪರಿಸ್ಥಿತಿಯನ್ನು ಎಮರಿಸಲು ಬೇಕಾದ ಸಾಮರ್ಥ್ಯವನ್ನು ಸಂಪಾದಿಸಿಕೊಂಡು ಸಾಗುವುದೊಂದೇ ಮಾರ್ಗವು ಈ ವಿಷಯಗಳಲ್ಲಿ ಉಪಯುಕ್ತವಿದ. ಕುದ್ದಿಲ್ಲಿಗೆ ಜೈ ರಮಾರಿಗೆ ಈ ಜಗತ್ತಿನಲ್ಲಿ ನಿಷ್ಕರ್ಷವಿಲ್ಲ

— — — 'ಜೈ ಹಿಂದ್'

INSURE YOUR LIFE
WITH
The Premier Life and General Insurance Co., Ltd.

Head Office:—Premier Insurance Buildings Madras.

DOUBLE & TREBLE INDEMNITY PARMANENT DISABILITY BENEFITS OFFERED WIT OUT ANY EXTRA PREMIUM WITH HOUSE PURCHASE BENEFIT

REVERSIONARY BONUS: 8 PER THOUSAND PER ANNUM.

WANTED.

Agents in all the unrepresented areas on most lucrative terms. For particulars, apply to:

INSPECTOR. C/o. Post Master, Napoklu, S Coorg.

OR

T. V. RAMAMURTI. B A, B L., A. I A., Manager & Actuary

ಕೊಡಗು

ತಾ. ೧೨-೧೨-೧೯೪೭ ನೇ ಶುಕ್ರವಾರ

ಬತ್ತದ ಬೆಲೆ.

ಯುದ್ಧದ ಕಾರಣದಿಂದ ಜಾರಿಗೆ ಬಂದ ನಿಯಂತ್ರಣ ಮತ್ತು ರೇಶನಿಂಗ್ ಪದ್ಧತಿಗಳು ಜನ ಜೀವನವನ್ನು ಕಷ್ಟಮಯವನ್ನಾಗಿ ಮಾಡಿವೆ ಎಂಬುದು ಎಲ್ಲರಿಗೂ ಏಡಿತವಿದ್ದರೂ ಇವನ್ನು ತೆಗೆದು ಹಾಕುವ ವಿಚಾರದಲ್ಲಿ ಮಹಾತ್ಮ ಗಾಂಧೀಜಿಯವರು ಎತ್ತಿದ ಪ್ರಶ್ನೆಯಾನಿಯಿಂದಾಗಿ ಈಗಿಂಗ ಕೇಂದ್ರ ಸರಕಾರದ ನೀತಿಯು ಬದಲಾಗುತ್ತಿದೆ. ನಿಯಂತ್ರಣಗಳು ಒಂದೊಂದಾಗಿ ಹೋಗುತ್ತಿವೆ. ಆಹಾರ ಪದಾರ್ಥಗಳ ನಿಯಂತ್ರಣ ಹೋಗಲಿವೆ. ಮದ್ರಾಸಿನಲ್ಲಿ ಭುಜುವರಿ ಭಾಗಗಳಲ್ಲಿ ರೇಶನಿಂಗ್ ಪದ್ಧತಿಯನ್ನು ತೆಗೆದು ಹಾಕುವ ನಿಶ್ಚಯ ಮಾಡಿದ್ದಾರೆ ಉಳಿದವರಿಯಲ್ಲಿ ನಭ ಗಳಲ್ಲಿ ರೇಶನಿಂಗನ್ನು ತೆಗೆಯಲು ಪಟ್ಟುಗಳಿಗೆ ಪಾತ್ರ ಇನ್ನಯಿಸುವಂತೆ ಏರ್ಪಡಿಸಿದ್ದಾರೆ. ಬತ್ತ, ಗೋಧಿಗಳ ಬೆಲೆ ನಿಯಂತ್ರಣವು ಇನ್ನೂ ೧೦ ವರ್ಷಪರಿಯಂತ ಕಾಂಗ್ರೆಸ್ ಸರಕಾರದಪರು ತೀರ್ಮಾನಿಸಿ ಅವುಗಳ ಬೆಲೆಯನ್ನು ಆಯಾ ಯ ಪ್ರಾಂತಗಳ ಸ್ಥಿತಿಗತಿಗಳನುಸರಿಸಿ ಕ್ಪಲ್ಪ ಮಟ್ಟಿಗೆ ನಿರ್ಬಂಧಕ್ಕೆ ಪ್ರಾಂತೀಯ ಸರಕಾರಗಳಿಗೆ ತಿಳಿಸಿರುವರು

ತ್ರಿಭಾಗದ ಒತ್ತಡದ ಬೆಲೆಯನ್ನು ಗಾಡಿ ಒಂದರ ಗಳಿಂಕ್ಕೆ ಏನಿಸಬಹುದೆಂದು ಕೇಂದ್ರ ಸರಕಾರವು ತಿಳಿಸಿದಯೆಂದೂ ಇದು ನಾಲ್ಕದಾದ ಕಾರಣ ಕಡಿಮೆ ಪಕ್ಷ ರೂ ೧೪-೮-೦ ಗಾದರೂ ನಿಗದಿಪಡಿಸಬೇಕೆಂದು ಸ್ಥಳೀಯ ಸರಕಾರವು ಪುನಪ ಬರೆದಿರುವುದೆಂದೂ ಸುದ್ದಿ ಇದೆ. ಆದರೆ ಮದರಾಸಿನಲ್ಲಿ ಚಿಕ್ಕಮುದ್ದೆಬೆಲೆಯನ್ನು ಮಣಕ್ಕೆ ರೂ ೨ ರಂತೆಯೂ, ಬತ್ತದ ಬೆಲೆಯನ್ನು ಮಣಕ್ಕೆ ೧-೬-೦ ಯಂತೆಯೂ ನಿರ್ಧರಿಸಿರುವರು. ಪೆಟ್ರೋಲಿನಲ್ಲೂ ಮೆಟ್ಟಿ ಕಮ್ಮಿ ಇದೇ ವರದಲ್ಲಿ ಒತ್ತದ ಬೆಲೆ ನಿಗದಿಪಟ್ಟಿದೆ. ಈ ವರದಿಯನ್ನು ಅನುಸರಿಸಿ ಲೆಕ್ಕ ಹಾಕಿದರೆ ಗೂಡಿಗಿನ ಒಂದು ಗಾಡಿ ಬತ್ತಕ್ಕೆ ಗುಮೂರು ೨೦೨ ಮಣ ತೂಕವಾಗುವದು ಅಂದರೆ ೧೦೦ಮೂರು ರೂ ೨೮ ಹೆಚ್ಚು ದರವೆಯುಂಟಾಗುವದು ಆಕ್ಕಿಯ ವರದಂತೆ ಲೆಕ್ಕ ಹಾಕಿದಲ್ಲಿ ಒಂದು ಗಾಡಿಗೆ ಆರು ಬೆಟ್ಟಿರೆ ಪಲ್ಲ ಅಕ್ಕಿ ಆಗುವ ದಾದರೂ ಗಾ ಮಣ ತೂಕವಾಗುವದರಿಂದ ರೂ ೩೦ ಹೆಚ್ಚು ದೊರೆಯುಬೇಳು ಅಂದ ಮೇಲೆ ಉಳಿವರಿ ಪ್ರಾಂತವಾದ ಕೊಡಗಿನ ಬತ್ತಕ್ಕೆ ಇಷ್ಟಿನುವ್ಯನಷ ಯಾದ ಹೆಚ್ಚಿನ ಖರ್ಚನ್ನು ಗಣನೆಗೆ ತೆಗೆದು ಕೊಂಡು ಗ ತಿಗೆ ರೂ ೩೦ ರಷ್ಟಾದರೂ ಹೆಚ್ಚಿಸಬೇಕಿತ್ತು. ಇಷ್ಟಿಲ್ಲವಾದರೂ ಈ ಮೊಲು ನ ವುಳಲಪ್ಪೆ ಬಾರಿ ಬರೆದಂತೆ ಮತ್ತು ಕಾ ಪ್ಪಿಲಿ ಸಕ್ಷಿ ತೀರ್ಮಾನ ಮಾಡಂತೆ ಗಾಡಿಗೆ ಬೆಳೆಯ ಬತ್ತಕ್ಕೆ ರೂ. ೧೫೦ ಆದರೂ ನಿಶ್ಚಯಿಸಬೇಕಾದುದು ಅವಶ್ಯವಾಗಿದೆ. ಈ ವಿಚಾರವನ್ನು ಕೂಡಲೇ ಸ್ಥಳೀಯ ಸರಕಾರದವರು ಇಂಡಿಯಾ ಸರಕಾರಕ್ಕೆ ಬರೆದು ಸಮಯ ಮಿರುವ ಮುಂಚೆಯೇ ಇವನ್ನು ಸಾಧಿಸಬೇಕಾದುದು ಯುಕ್ತವಾಗಿದೆ. ಜನತೆಯೂ ಕೂಡ ಈ ವಿಚಾರದಲ್ಲಿ ಸರಕಾರದ ನೇರ ತನ್ನ ಒತ್ತಾಯವನ್ನು ನೂಡಬೇಕಾದು ಅವಶ್ಯವಾಗಿದೆ. ಏಕೆಂದರೆ ಈ ವರ್ಷ ಬೆಳೆ ಬಹಳ ಕಡಿಮೆಯಾಗಿದೆ ಬೆತೆದದ್ದರಲ್ಲಿ ಬಹುಭಾಗ ಮಳೆಯಿಲ್ಲದೆ ಬಣಗಿ ಹೋಗಿರುವದರಿಂದ ರೈತನಿಗೆ ಗಾಡಿಗೆ ರೂ. ೧೫೦ ದೊರೆಯದಿದ್ದರೆ ಜೀವನ ವಿಪರೀತ ಕಷ್ಟಮಯವಾಗುವದು.

ಮರ್ಕಾನ.

ಶನಿವಾರ ಸಂತೆ ಬಳಿ ಇರುವ ಗುಡುಗಳಲ್ಲಿ ಜಯದೇವ ಬಾಣೆಯಲ್ಲಿ ತಾ ೧೯ ರಿಂದ ೨೬ರ ವರೆಗೆ ಜನುವಾರುಗಳ ಜಾತ್ರೆಯು ನಡೆಯುತ್ತದೆ.

ಅಮ್ಮತ್ತಿ ಶಲಾ ವೈದ್ಯಾನದಲ್ಲಿ ಜಾನುವಾರುಗಳ ಜಾತ್ರೆಯೊಂದು ತಾ ೧೯ರಲ್ಲಿ ನಡೆಯುವುದು.

ಜೋಬಾಯಿ ಕೊಡಗು ಸಂಸ್ಥೆಯ ಸಭಸ್ಯರು ತಾ. ೩೦ ೧೧-೪೭ರಲ್ಲಿ ಹುತ್ತಿ ಹಬ್ಬವನ್ನು ಜೋಸೆಶ್ವರ ಎಂಬಲ್ಲಿ ನಡೆಸಿ ರ

ಮಡಿಕೇರಿ ಆಸ್ಪತ್ರೆಯಲ್ಲಿ ಕಾಯಿಲ ಸ್ಥರನ್ನು ನಾಗಿಸಲು ಎಂಬ್ಯುಲೆನ್ಸ್ ಕಾರೊಂದನ್ನು ಇಡಲ ಗಿದಯೆಂಯೂ ಈ ಯಲ್ಲಪ್ರದನ್ನು ಆಸ್ಪತ್ರೆಗೆ ಇಲ್ಲವೇ ಆಸ್ಪತ್ರೆಯಿಂದ ಮನೆಗೆ ನಾಗಿಸಲು ರ ಪ್ರೈಹೂಲೆಸ್ಟೆಟ್ ಎಲ್ಲಾ ಸಮಯದಲ್ಲೂ ಪೈಲಿಗೆ ಆದ ಆಜೀವರು ಬಾಡಿಗೆಯಲ್ಲಿ ದೊರೆಯುವದೆಂದೂ ತಿಳಿಸಿರುವರು.

ಪೊನ್ನಂಪೇಟೆ ಕಿಸಾನ್ ಆಕ್ಕಿ ನಿರಣಿಯ ಸಂಸ್ಥಾಪಕರಾದ ಪಿ ಎ ಎಸ್. ವಸ್ತ್ಯಯ್ಯನವರು ಬಾರತ ಸ್ವಾತಂತ್ರ್ಯವನ್ನು ಪ್ರಸ್ತಾಪಿಸಿ ಪಕಾರ್ಧವಾಗಿ "ಸ್ವರಾಜ್ಯ" ಎಂಬ ಬೆಳೆಯ ಕಳ್ಳನ್ನು ಪಾಕಿ ಪುಣ್ಯಾಹಕ್ಕಾಗಿ ಪೊನ್ನಂಪೇಟೆ ಸ್ಪೋರ್ಟ್ಸ್ ಕ್ಲಬಿನವರಿಗೆ ಕೊಟ್ಟಿರುವರು. ಈ ಕಪ್ಪನ್ನು ಪಂದ್ಯಟ ಪುತಂ ೩೦ರಿಂದ ಪ್ರಾರಂಭವಾಗುವದರಿಂದ ಪ್ರಸ್ಪರ್ಧಿಸುವವರು ತಾ ೧೨ ರೊಳಗೆ ಸ್ಪಬಿಗ ಕಾರ್ಯದರ್ಶಿಯವರಿಗೆ ತಿಳಿಸಬೇಕಾಗಿದ

ಜಿಲ್ಲಾ ಜೋರ್ಡ್ ಸರ್ವಿಸಿನ ನಿಸ್ಪೃತ್ಯ ಉದ್ಯೋಗಿಗಳಿಗೆ ತಾ ೧೫-೪-೪೭ರಿಂದ ಈ ರೀತಿಯ ಬಡ್ತಿಯನ್ನು ಸರಕಾರವು ಕೊಟ್ಟಿದೆ ಮಾಸಿಕ ರೂ. ೨೦ ರೊಳಗೆ ನಿವೃತ್ತಿ ವೇತನ ಇರುವವರಿಗೆ ರೂ. ೪, ರೂ ೨೦೨ ನೇಲೆ ೬೦ ಒಳಗಿರುವವರಿಗೆ ರೂ. ೬, ರೂ ೬೦೨ ಮೇಲೆ ೧೦೦ ಒಳಗಿರುವವರಿಗೆ ರೂ. ೮ ರಂತೆ.

ಕೊಡಗಿನ ಕಾಲೇಜಿನ ಸಂಬಂಧ ಕಾರೀಕ ಗಳಲ್ಲಾ ಪೊನ್ನಂಪೇಟೆಯಲ್ಲಿ ನಡೆಸಬೇಕೆಂದಿಗ್ಗ ಸಾರ್ವಜನಿಕ ವಿಚಾರಿಗಿನ ಎಚ್ಚರ ಕೆಚ್ಚಿನ ಪ್ರಚಾರವಾಗದ್ದರಿಂದ ಸದರಿ ವಿಚಾರಗಳನ್ನು ತಾ. ೧೬ನೇ ಮಂಗಳವಾರ ಪೊನ್ನಂಪೇಟೆಯಲ್ಲೇ ನಡೆಸುವಂತೆ ಆ ದಿನ ಸೇರಿದವರು ತೀರ್ಮಾನಿಸಿರುವರೆಂದು ತಿಳಿಯ ಬರುತ್ತದೆ.

ತಾ. ೩-೧೨-೪೭ರಲ್ಲಾ ಕನ್ನಡ ಸಾಹಿತ್ಯ ಪರಷತ್ತಿನ ಆಶ್ರಯದಲ್ಲಿ ಮಡಿಕೇರಿ ಕೇಂದ್ರದಲ್ಲಿ ಜರುಗಿನ ಗಮಕ ಪರೀಕ್ಷೆಯಲ್ಲಿ ಪ್ರೌಢಳಾದ ಕೆ. ಎಂ. ಕುಟ್ಟಯ್ಯ ಮತ್ತು ಕೆ. ಎಂ. ಭೀಮಯ್ಯ ಅವರು ಮೊದಲನೆ ತರಗತಿಯಲ್ಲಾ, ಎಂ. ಎಸ್. ವಿಠಲ್ ಅವರು ಎರಡನೆ ತರಗತಿಯಲ್ಲಾ ವತ್ತು ಸಿ ಆರ್. ಗೋಪಾಲ ಕೃಷ್ಣ ಮತ್ತು ಶ್ರೀಮತಿ ಕೆ. ಎಂ. ಸುಮಿತ್ರ ಅವರು ಮೂರನೆ ತರಗತಿಯಲ್ಲಾ ತೇರ್ಗಡೆಯಾಗಿರುವರು.

ಕೊಡಗಿನಲ್ಲಿಯೇ ವಾಸವಾಗಿರುವ ಕನ್ನಡ ಜಿಲ್ಲೆಯ ಜನರ ಅಭಿವೃದ್ಧಿಯನ್ನು ಆರ್ಧಿಕ, ಸಾಮಾಜಿಕ ದೃಷ್ಟಿಯಿಂದ ಕಾಪಾಡಲು ಕರ್ಗ ಕನಾರಾ ಸಂಸ್ಥೆಯೊಂದು ಮಡಿಕೇರಿಯಲ್ಲಿನ್ಸ್ಥಾಪಿಸವಾಗಿ ಎತ್ತಿದ ತಾ. ೬--೧೨-೪೭ರಲ್ಲಾ ಶ್ರೀ. ಪಿ ಆರ್. ತಿಮ್ಮಪ್ಪಗೌಂಡ ಇವರ ಅಧ್ಯಕ್ಷತೆಯಲ್ಲಿ ಇವರ ಸಭೆ ಸೇರಿ ಕಾರ್ಯಕಾರಿ ಸಮಿತಿಯನ್ನು ಸ್ಥಾಪಿಸಲಾಗಿದೆ.

ಇದೇ ತಾರೀಕು ಏನೇ ಆದಿತ್ಯವಾರ ಮೂರ್ನಾಡು ಬಾಡಗ ಗ್ರಾಮದ ದೇವಸ್ಥಾನದಲ್ಲಿ ಶ್ರೀಮಾನ್ ಪಳಂಗಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಾ, ೭ಭೆ ಕೇರಿ ಶ್ರೀ ಪುನ್ಚೇರ ಕರುಂಬಯ್ಯ ವತ್ತು ಕುಯಿಮಂದ ಕಾಳಯ್ಯ ಇವರುಗಳು ನೇದಾಂತೀಕ ವಿಷಯ ಮಾತಾಡಿದರು.

ತಾ ೯-೧೨-೪೭ ರಲ್ಲಿ ಕಾಲೂರು ಗ್ರಾಮದ ಪಿಸಿಯಂಡ ಸಂಜಪ್ಪ ಎಂಬನ ರನ್ನು ತುಳಸಿ ಡಂಡ ಕುಂಜಿದ್ದನವರ ಕತ್ತಿಯು ಗುಂಡಿಕ್ಕಿ ಕೊಂದಿರುವುದಾಗಿ ಯೂಪೋಲೀ ಪ ತಿಸಿಸ ನಡೆಯುತ್ತಿರುವ ದಾಗಿಯೂ ವಾರ್ತೆ.

ಸಾರ್ವಜನಿಕ ಸಭೆ.

ಒಂದು ವಿವರಣೆ.

ತಾ ೩-೧೨-೪೭ರಲ್ಲಾ ಗೋಣಿಕೊಪ್ಪಲು ಹೊಸಬಸ್ ನಿಲ್ದಾಣದಲ್ಲಿ ಸಾರ್ವಜನಿಕ ಸಭೆಯೊಂದು ಸೇರಿತ್ತು. ಶ್ರೀ ಕೊಂಗಂಡ ಗಣಪತಿಯವರು ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನ ರು ಈ ರೀತಿಯ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

೧ ತಾ. ೩೫-೧೧-೪೭ರಲ್ಲಿ ಗೋಣಿಕೊಪ್ಪಲಿನಲ್ಲಿ ಸಾರ್ವಜನಿಕರಿಗೆ ಯಾವ ವಿಚಾರವನ್ನೂ ತಿಳಿಸದ ಮೀಟಿಂಗು ಮಾಡಿರುವ ಬಗ್ಗೆ ಜನರು ಮಂಡಿಸಿರುವ ಅಸಮಾಧಾನವನ್ನು ಈ ಸಭೆಯು ಖಂಡಿಸುತ್ತದೆ.

೨. ಕೊಡಗು ಕೌನ್ಸಿಲಿನಲ್ಲಿ ಕಾಲೇಜನ್ನು ಕೂಡಲೇ ಸ್ಥಾಪಿಸಬೇಕೆಂದು ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪಿಸಿರುವ ಶ್ರೀಯುತ ಪಿ ಸಿ ಪೊನ್ನಣ್ಣ ಮತ್ತು ಇತರ ಪ್ರತಿನಿಧಿಗಳಿಗೆ ಈ ಸಭೆಯು ಅಭಿನಂದನೆಯನ್ನು ಸಲ್ಲಿಸುತ್ತದೆ.

೩. ಕೊಡಗಿನ ಕಾಲೇಜಿನ ಸಂಬಂಧ ಕಾರೀಕ ಗಳಲ್ಲಾ ಪೊನ್ನಂಪೇಟೆಯಲ್ಲಿ ನಡೆಸಬೇಕೆಂದಿಗ್ಗ ಸಾರ್ವಜನಿಕ ವಿಚಾರಿಗಿನ ಎಚ್ಚರ ಕೆಚ್ಚಿನ ಪ್ರಚಾರವಾಗದ್ದರಿಂದ ಸದರಿ ವಿಚಾರಗಳನ್ನು ತಾ. ೧೬ನೇ ಮಂಗಳವಾರ ಪೊನ್ನಂಪೇಟೆಯಲ್ಲೇ ನಡೆಸುವಂತೆ ಆ ದಿನ ಸೇರಿದವರು ತೀರ್ಮಾನಿಸಿರುವರೆಂದು ತಿಳಿಯ ಬರುತ್ತದೆ.

ತಾ. ೩-೧೨-೪೭ರಲ್ಲಾ ಕನ್ನಡ ಸಾಹಿತ್ಯ ಪರಷತ್ತಿನ ಆಶ್ರಯದಲ್ಲಿ ಮಡಿಕೇರಿ ಕೇಂದ್ರದಲ್ಲಿ ಜರುಗಿನ ಗಮಕ ಪರೀಕ್ಷೆಯಲ್ಲಿ ಪ್ರೌಢಳಾದ ಕೆ. ಎಂ. ಕುಟ್ಟಯ್ಯ ಮತ್ತು ಕೆ. ಎಂ. ಭೀಮಯ್ಯ ಅವರು ಮೊದಲನೆ ತರಗತಿಯಲ್ಲಾ, ಎಂ. ಎಸ್. ವಿಠಲ್ ಅವರು ಎರಡನೆ ತರಗತಿಯಲ್ಲಾ ವತ್ತು ಸಿ ಆರ್. ಗೋಪಾಲ ಕೃಷ್ಣ ಮತ್ತು ಶ್ರೀಮತಿ ಕೆ. ಎಂ. ಸುಮಿತ್ರ ಅವರು ಮೂರನೆ ತರಗತಿಯಲ್ಲಾ ತೇರ್ಗಡೆಯಾಗಿರುವರು.

ದ ವಿಟಿಂಗಿಗೆ ಬಂದಿದ್ದ ಮೇಲಿನ ಸಂಖ್ಯೆಯ ಜನರು ಇತರ ಕಾರುಬಾರುಗಳ ದಿನೆಯಿಂದ ಕಮ್ಮಿಯಾಗಿದ್ದರು. ನಂತರ ಅಧ್ಯಕ್ಷರಿಗೆ ವಂದನೆಯಿಂದ ಮೀಟಿಂಗನ್ನು ಮುಕ್ತಾಯವಾಗಲಾಯಿತು.

ಕೆ ಗಣಪತಿ, ಅಧ್ಯಕ್ಷರು.

ಮೇಲ್ಕಂಡ ಸಾರ್ವಜನಿಕ ವರದಿಯನ್ನು ಶ್ರೀ ಕೆ ಚಿಣ್ಣಪ್ಪನವರು ವಿವರ ಕನಿಸಿರುವರು ಮೇಲಿನ ಪ್ರಕಟನೆಯಾದ ಬಾಗವನ್ನು ಇಲ್ಲಿ ಕೊಡಲಾಗಿದೆ. ಸಂ)

ಮತ್ತೊಂದು ವಿವರಣೆ.

'ಕೌನ್ಸಿಲಿನಲ್ಲಿ ಕಾಲೇಜಿನ ಸಂಬಂಧ ಪಾಸಾದ ರಣಾಮಿಗೆ ಈ ಸಭೆಯು ಹರ್ಷ ಧ್ವನಿ ಇದೆ' ಎಂಬ ವಿಚಾರ ಭಾ ಷಣಗಳಾಗಿ ಮಧ್ಯಾನ್ಹ ಒಂದುವರೆ ಗಣ್ಟೆಗೆ ಸ್ವಾರಂಭವಾಗಿ ಮಿಟ್ಟಿಂಗು ಸಂಜೆ ೫ ೩೦ ಗಂಟೆ ವರೆಗೆ ನಡೆಸಿ ಕಾರಣ ತಿನ ಜನರೆಲ್ಲರೂ ತೆರಳಿದ್ದರು. ಇದ್ದ ಸುಮಾರು ೧೦೦ ಜನರಲ್ಲಿ ಹೆಚ್ಚು ಪೇಟೆಯವರೇ ಇದ್ದು ಆ ವರನ್ನು ಸಂಯೋಜನಾ ಪಕ್ಷವರು ಒಟ್ಟಿಗೆ ತಡೆದಿದ್ದರು. ನಂತರ ರಾ ವನ್ನು ಒಟಿಗೆ ಹಾಕಿಬೇಳಿ ಎಂಬ ಗಲಭೆಯಾದ ಕಾರಣ ಪಲವರು ಸಭೆ ತ್ಯಾಗ ಮಾಡಿದರು ಉಳಿದವರು ಬಹುವ ಕದಿಂದ ರಾವನ್ನು ಪಾಸುಮಾಡಿದರು.

ಕೆ ಚಿಣ್ಣಪ್ಪ

ಹುದಿಕೇರಿ.

ತಾಲ್ಲೂಕ ಲ ಗಿ ಳ ರಲ್ಲಿ ಸ್ಪೆಷಿಂದು ಸಾರ್ವಜನಿಕ ಮೀಟಿಂಗ ನಡೆಯಿತು ಶ್ರೀಯುಗ್ದಾದಕೆ ಕರುಂಬಯ್ಯ ಸಿ ಬಿ ಮೋಟಯ್ಯ, ಇ ಯ್ಯ, ಸಿ ಪಿ. ಪೂವಯ್ಯ ವ್ಯಾ ಪಾರದ ೧೦-೧೧ ಪ್ರಸ್ಥಾವಿಟ್ಟಿ, ಕೋಣಿ ಕೂಪ್ಪಲವರು ಬಂದಿರಲು ಸಭೆಗೆ ಶ್ರೀ ಸಿ ಬಿ. ಪೊನ್ನಯ್ಯನವರನ್ನು ಅಧ್ಯಕ್ಷರಾಗಿ ಒಂಗು ಕಡೆಯವರು ಸೂಚಿಸಿದರು. ಮತ್ತೊಂದು ಕಡೆಯವರು ಶ್ರೀ ಕೋಳೆರ ಚಂಗಪ್ಪನವರನ್ನು ಸೂಚಿಸಿದರು. ಇವರಲ್ಲಿ ಸ್ವಲ್ಪ ಗಲಭೆಯಾಗಿ ಚಂಗಪ್ಪನವರನ್ನು ಅಧಿಕಾರಿಯಾಯಿತು. ಕಾಲೇಜಿನ ವಿಚಾರ ಪ್ರಸ್ತಾಪಿಸಿ ಸಂಖ್ಯೆಗೆ ಕೊಡಕೂಡದೆಂದೂ ಸರಕಾರವೇ ನಡೆಸಬೇಕೆಂದೂ, ಬಿಟ್ಟರಗೆ ಕೂಡುವ ಬಗ್ಗೆ ಒಂದು ಮಾಸಿವ ನ ಗ ವಿಧಾಯಕ ಸಭೆಯ ನೆಂಬರುಗಳ ಸಂಖ್ಯೆ ಆಸಾಶ್ವತವಿದೆಯೆಂದೂ ವ್ಯಕ್ತವಾಡಿ ರಾವು ತಂದರು ಮೊದಲೇ ಯುದಕೇರಿಯಲ್ಲಿ ಎರಡು ಪಾರಾರ್ಸ್ ಮಾಡಿರುವದರಿಂದ ಇಲ್ಲಿ ವಿಚಾರ ಇಲ್ಲ ಮೀಟಿಂಗು ಇವೈಲ್ಲವೆಂದೂ ಒಂದೆ ರಾಜಕೀಯ ವಿಚಾರ ಮಾತಾಡಬಹುದಾದರೆ ಮಾತ್ರ ಆಪ್ಪದವಿದೆಯೆಂದೂ ಜನರು ತಿಳಿಸಿದ ಮೇಲೆ ಶ್ರೀ ಪೋಟಯ್ಯ, ಪೂಣಪ್ಪಯ್ಯ, ಕರುಂಬಯ್ಯ ಇವರುಗಳು ಕೊಡಗು ಕರ್ನಾಟಕಕ್ಕೆ ಸೇರಬೇಕೆಂದೂ, ಶ್ರೀ ಕೆ. ಕೆ. ಗಣಪತಿ, ಕೆ. ಕೆ. ಅಪ್ಪಯ್ಯ, ಎಸ್. ಮಾದಪ್ಪ, ಎಚ್. ಬಿ ರಂಜಪ್ಪ ಇವರು ಪ್ರತ್ಯೇಕವಿರಬೇಕೆಂದೂ ಭಿಪ್ರಾಯ ಮಾತಾಡಿದರು. ಬಹುಸಮಯದ ಪರಿಚರು ಪ್ರತ್ಯೇಕವಿರಬೇಕೆಂಬ ಭಿಪ್ರಾಯದ ವರಾದ ಕಾರಣ ಯಾವ ರಂತಾವುಗಳನ್ನೂ ತರಲಿಲ್ಲ. ನಂತರ ೧೧-೪೭ನೇ ಸಾಲಿಗೆ ಹುದಿಕೇರಿಯ ಸಾರಾಯಿ ಮತ್ತು ಸೇಂದಿ ಅಂಗಡಿ ಮೂರಾಟಕ್ಕೆಡಬಾರದು ಎಂಬ ರಾವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. 'ಹಾಜರಿದ್ದವ'

ನ್ನೇ ಎಲ್ಲ ಕಾರ್ಯಗಳಲ್ಲೂ ಅನುಸರಿಸು ತ್ತಿರುವುದರಿಂದ ಇವರಲ್ಲಿ ನಮ್ಮ ಭಯ ಮತ್ತು ಜೀವಾಳವಿಲ್ಲ. ಜಾರಿ ಉಳಿತಾಯ ಮಾಡಿ ಟಕ್ಕಾಗಿ ನಮ್ಮಲ್ಲಿಗೆ ಒರಬೇಕು ನಮ್ಮ ಉಳಕೆಯು ಆವಲ್ಲಿಗೆ ಹೋಗಬೇಕು ಆದುದರಿಂದ ಈ ವಾದ ವ್ಯರ್ಥವಾಗಿದೆ.

(೧೦) ನಮ್ಮ ಅಧಿಕಾರಿಗಳೂ ಮುಂದಿನ ಪೀಳಿಗೆಯವರೆಂದಾದರೆ ಇಲ್ಲಿಯ ಜನಪ್ರತಿನಿಧಿಗಳು ಇವರು ಮಂದಿ ಬಂಡಾರಕ್ಕಾಗಿ ಸಡಿಲಿಸಿದ ದೇಶೋದ್ಧಾರಪಗಲಿ ನಮಗಲ್ಲಾಗಿಯೂ ಸಂತೋಷ ಹಾಗಲ್ಲದೆ ಇವರಿಗೆ ಪಾಲಿಸುವುದು ಕೊಡಗನ್ನು ಪರಪ್ರಾಂತ್ಯಕ್ಕೆ ಸೇರಿಸುವುದು ತಪ್ಪಿಸಿ ಪುರುಷತ್ವವನ್ನು ಪರಪ್ರಾಂತ್ಯದವರಲ್ಲರೂ ಗಾಂಧಿ, ಒಳಾಹಿರುಗಳಲ್ಲ.

(೧೧) ಕೊಡಗಿನ ವರ್ತಮಾನ ಪತ್ರಿಕೆಗಳ ಆರಂಭ ಪ್ರಕಟಣೆಯಲ್ಲಿ ಸ್ವಲ್ಪ ಜೀವನ ಅರ್ಥಸಾಕಷ್ಟು ಬಲವಾದ ಹಕ್ಕಿನ ಮಮ್ಮಲ ಬಿರಿ ವಿಸಾಗಿ ಕೊಡಗಿನ ಈ ಅರುಣ ಬಾಲಕ್ಕಿಗೆ ಇನ್ನಿ ಅನುಭವಿಸು ತ್ತಿಲ್ಲ. ಆ ದರಿಂದ ಅವನಾ ನಾಲಿಗೆ ಎಲ್ಲಿಗೂ ಹೋಗಿ ಯಥೇಚ್ಛವಾಗಿ ಜೀವನಕ್ಕೆ ಬೇಕಾದ ಸಾಮಗ್ರಿಗಳನ್ನು ಪಡೆದುಕೊಳ್ಳಲು ಅವಕಾಶವಿದೆ. ಆದರೆ ಕೊಡಗಿನ ಪತ್ರಿಕೆಗಳಿಗೆ ಜೀವನಕ್ಕೆ ಬೇಕಾದ ಸಾಮಗ್ರಿಗಳು ಎಲ್ಲಿಂದ ಬರಬೇಕು? ಅವು ಕೊಡಗಿನಲ್ಲಿ ಇಲ್ಲದಿರುವುದರಿಂದ ಅವುಗಳಿಗಾಗಿ ಪರಪ್ರಾಂತ್ಯಗಳನ್ನು ಅವಲಂಬಿಸಬೇಕಾಗಿದೆ. ಆದರೆ ಪರಪ್ರಾಂತ್ಯಗಳಿಂದ ಬರುವ ಸಾಮಗ್ರಿಗಳಿಗೆ ಕೊಡಗಿನ ಪತ್ರಿಕೆಗಳು ಕೊಡಬೇಕಾದ ಬೆಲೆಯು ಅಲ್ಲಿಯವರಿಗೆ ಕೊಡಬೇಕಾದ ಬೆಲೆಗಿಂತ ಹೆಚ್ಚಾಗಿರುವುದರಿಂದ ಕೊಡಗಿನ ಪತ್ರಿಕೆಗಳು ಪರಪ್ರಾಂತ್ಯದವರಿಗಿಂತ ಹೆಚ್ಚು ಬೆಲೆಯನ್ನು ಕೊಟ್ಟು ಸಾಮಗ್ರಿಗಳನ್ನು ಕೊಳ್ಳಬೇಕಾಗಿದೆ. ಇದನ್ನು ಅವರು ಕಳೆದ ಕೂಲುಪಡೆ? ಕಳೆ ನಮಗಾಗಲಿಸಿದ ಸಂದರ್ಭ ಒಂದೂ ಆದ ನ್ನು ಪುನಃ ಪಡೆದುಕೊಳ್ಳದಿರಲು!

ಕೊಡಗು ನಮ್ಮ ನಾಡು ಆದರಲ್ಲಿ ಳಿಗಯೂಗಬೇಕು ಪ್ರತಿ ಭರತದ ಲ್ಲಿ ನಾವು ಸಬಿಗಬಾಕಿ ಕೊಡಗಿನ ಯೂ ಆಗಲಿ ಅವರು ಕೊಡಗನ್ನು ಪರ ರಾಂತ್ಯಕ್ಕೆ ಸೇರಿಸುವ ದಾಡಿಕೆಯನ್ನು ಬಿಟ್ಟು ದೂರಾಗಿದ್ದರಕ್ಕಾಗಿ ರಮ್ಮ ಪೇರಿ ಮನಃಫಲಗಳನ್ನೆಲ್ಲಿಸುವುದು ದೃಷ್ಟವಾಗಿ ದ ಕೊಡಗು, ಕೊಡವ, ಅಪ್ಪ ಕೊಡ ವ ಹಗ್ಗ, ಕೋಲ್ಯ, ರಾಲ್ ಗೌಡ, ಬಲ್ಲಾ ಜಾತಿಯ, ಬಳಮಂಡಿವಪ, ಹೊ ಲಿಮ್ಮಿ ಯರವ, ಕರುಬ ಕಾಡ್ಯ ಒಹು ಕಾಲದ ಬಲಿ ಇಲ್ಲಿ ಬಾಸಿಸಿಲಿ ಕೂಡ ದವರ್ಗ ತನ್ನದಿಂದ ಗುರುತಿಸಿಕೊಂಡು ಬ್ರಾಹ್ಮಣ, ಮುಲ್ಕಾನ, ಕ್ರಿಶ್ಚಿಯನ್, ಪಾರ್ಸಿ, ಜಿಕ್ಕಲಿಗ ಮೊದಲಾದ ದೊಡ್ಡಲ್ಲಿ ರಾಗದ ಜಿಲ್ಲೆಯಾಗಿ ಬಾಸಿಸುವ ಎಲ್ಲರಿಗೂ ಸಮಾನವಾಗಿ ನಮ್ಮ ಸಮಿ ರಕ್ಷಣೆಯನ್ನು ಒದಗಿಸಿಕೊಡುವ ಸ್ಥಳೀಯ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬೇಕಾಗಿದೆ. ಇದನ್ನು ಮಾಡಿದಲ್ಲಿ ಕೊಡಗಿನ ಪ್ರತಿಯೊಬ್ಬ ಪ್ರಜೆಯೂ ಸಂತೋಷದಿಂದ ಇರಬಹುದು. ಇಲ್ಲವಾದಲ್ಲಿ ಕೊಡಗಿನ ಪ್ರತಿಯೊಬ್ಬ ಪ್ರಜೆಯೂ ಅಸಂತೋಷದಿಂದ ಇರಬೇಕಾಗುವುದು. ಇದನ್ನು ಮಾಡಿಸಿಕೊಳ್ಳುವ ಜವಾಬ್ದಾರಿಕೆ ಕೊಡಗಿನ ಪ್ರತಿಯೊಬ್ಬ ಪ್ರಜೆಯ ಮೇಲಿದೆ. ಆದರೆ

'ಓರಿಯಂಟಲ್'

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದ್ದು (ಸದಸ್ಯರ ಹೊಣೆ ನಿಯಮಿತವಾಗಿದೆ.)

ಮತ್ತೊಂದು ಬಾರಿ 'ಓರಿಯಂಟಲ್' ಮುಂದೆ, ಇತರೆಯವು ಹಿಂಬಾಲಿಸುತ್ತವೆ. ಮಲಯ, ಮತ್ತು ಬರ್ಮಾಗಳ ಪಾಲಿಸಿದಾರರಿಗೆ ಜಪಾನ್ ಆಕ್ರಮಣ ಕಾಲದಲ್ಲಿ ರದ್ದಾಗಿದ್ದ ಪಾಲಿಸಿಗಳನ್ನು ಪುನರುಜ್ಜೀವನಗೊಳಿಸಿದ ಜೀವ ವಿಮಾ ಕಂಪೆನಿಗಳಲ್ಲಿ ಓರಿಯಂಟಲ್ಲೇ ಮೊಟ್ಟ ಮೊದಲನೆಯದು. ಅದು ಬಾತಿಯಾದ ಕಂತುಗಳ ಮೇಲೆ ಬಡ್ಡಿ ತೆಗೆದುಕೊಳ್ಳಲಿಲ್ಲ. ಆರೋಗ್ಯದ ಸರ್ಟಿಫಿಕೇಟು ಕೋರಲಿಲ್ಲ

ಧಾರಾಳತನವೇ ವೃದ್ಧಿಯಾಗುತ್ತಿರುವ ಸಮ್ಮ ಜನಪ್ರಿಯತೆಯ ರಹಸ್ಯವಾಗಿದೆ.

೧೯೪೬ ಜೂನ ವ್ಯವಹಾರ .... ಸುಮಾರು ರೂ. ೨೮,೫೦,೦೦,೦೦೦
ನಿಧಿ ತಾ. 31—12—1946ರಲ್ಲಿ .... ಹೆಚ್ಚಾಗಿ ರೂ. ೪೪,೫೦,೦೦,೦೦೦

ನಮ್ಮ ಜೀವ ವಿಮೆಯ ಪ್ರತಿಯೊಂದು ಬೇಡಿಕೆಯ ಅಕರ್ಷಿತ ಯೋಜನೆಯು ನಮ್ಮಲ್ಲಿದೆ.

ಮುಖ್ಯ ಖಜೇರಿ—**ಓರಿಯಂಟಲ್ ಬಿಲ್ಡಿಂಗ್ಸ್**, ಪೋರ್ಟ್, ಬೊಂಬಾಯಿ,
ಇನ್ಸ್‌ಪೆಕ್ಟರ ಆಫೀಸು—ಕೆ. ಸದಾಶಿವ ರೋಡು, ಮಂಗಳೂರು.

ನಿಮಗೆ ಮೂಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸಕ್ರೆಟರಿಗಳು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2.
(ಟೆಲಿಫೋನ್ ನಂ 8498)

ಬೋಂಬೆ ಲೈಫ್ ಬಿಲ್ಡಿಂಗ್, ಪೊ. ಬಾ. ನಂ. 1, ಉಡುಪಿ.

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಜರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮಚಲಿ ಪಟ್ಟಂ ಬೊಂಬಾಯಿ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ

ವಸೂಲಾದ ಶೇರು ಮೊಬಲಗು ರೂ. 1,33,740, ಮೀಸಲು ಒಂದು ರೇವಣಾತಿ 1,30,268-1-8, ವಸೂಲಾದ ಕ್ಷೇಮನಿಧಿ 2,36,454-0-3, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಮಿ ಶೇವಣಾತಿಯನ್ನು ತಾ. 1-1-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ತೀರದ 0-8-0 ದರದ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮ್ಯಾನೇಜ್ಮರ್.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ವಷ್ಟ ಸಂಗತಿಗಳು.

ಒಟ್ಟು ಆದಾಯ	....	1,07,09,000 ಮೀರಿದೆ
ಚಾಲ್ತಿಯಿರುವ ವಿಮೆ	....	17,74,62,000 ,,
ಆಸ್ತಿ	....	6,67,60,000 ,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು	....	8,83,62,000 ,,

ಆಂಗ್ಲ ಕಛೇರಿ: ಎಜೆನ್ಸಿ ಪ್ರಧಾನ ಕಛೇರಿ:

ಶಿಷ್ಟಿಕ್ಟ್ ಬೋರ್ಡ್ ಬಿಲ್ಡಿಂಗ್, ಕಂಪೆಂಗೊಡರಸ್ಟ್ರೀ, ಬೆಂಗಳೂರು. — ಅರ್ಜಿಗಳನ್ನು ಸ್ವಾಗತಿಸಿದೆ. — ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಮೋಂಬೇ.

Edited, Printed and Published by P. I. Bellappa at 'Kodagu' Press, Mercara, for 'Kodagu' Ltd.

ಶ್ರೀ ರಾಮಕೃಷ್ಣ ಧರ್ಮದ ಔಷಧಾಲಯ

ಪೊನ್ನಂಪೇಟೆ, ದ ಕೊಡಗು.

ಮಹಾಜನರ ಔದಾರ್ಯ ಮತ್ತು ಸರ್ಕಾರದ ಬೆಂಬಲದಿಂದ ಈ ಔಷಧಾಲಯವು ಈಗ ಕೆಲವು ವರ್ಷಗಳಿಂದ ಇಲ್ಲಿಯ ಜನರ ಸೇವೆ ಸಲ್ಲಿಸುತ್ತಾ ಬಂದಿದೆ. ಆರೂವರೆ ತಿಂಗಳುಗಳ ಹಿಂದೆ ಈ ಔಷಧಾಲಯಕ್ಕಾಗಿ ಒಂದು ನೂತನ ಕಟ್ಟಡ ನಿರ್ಮಾಣವಾಗಿ, ದಕ್ಷಿಣಕನ್ನಡ ಜಿಲ್ಲೆಯ ಡಾಕ್ಟರ್ ಎಂ. ಎನ್. ಪೈ, ಎಲ್. ಎಂ. ಸಿ., ಆಕ. ಎಂ. ಒ, (ಮಿಲಿಟರಿ) ಇವರ ನೇಮಕವಾದ ಮೇಲೆ ಸುತ್ತ ಮುತ್ತಲಿನ ಗ್ರಾಮಾಂತರಗಳಿಂದ ರೋಗಿಗಳು ಬಂದು ಪ್ರಯೋಜನ ಪಡೆಯುವುದು ಹೆಚ್ಚಾಗಿದೆ. ಈ ಆರೂವರೆ ತಿಂಗಳುಗಳಲ್ಲಿ ೧೬,೪೦೯ ಮಂದಿ ರೋಗಿಗಳು ಚಿಕಿತ್ಸೆ ಹೊಂದಿ ಪ್ರಯೋಜನ ಪಡೆದಿದ್ದಾರೆ. ದಿನಂಪ್ರತಿ ಸರಾಸರಿ ಬಂದ ರೋಗಿಗಳ ಸಂಖ್ಯೆ—೮೫. ಔಷಧಾಲಯದಲ್ಲಿಟ್ಟರುವ ಹಾಜರಿ ರಿಜಿಸ್ಟರ್ ನೋಡಿದರೆ ಸುತ್ತಿನ ಜನರು ಮಾತ್ರವಲ್ಲದೆ, ತಿತಿಮತಿ, ದೇವನೂರು, ಬಾಳಲೆ, ಕೋಣಾರು, ಚಾಮರಾವು, ಕುಟ್ಟ, ಬಿರುನಾಣಿ, ತಿರುನೆಲ್ಲಿ, ಬಾಡಗರಕೇರಿ, ಪಾಲೂರು ಇತ್ಯಾದಿ ದೂರದ ಗ್ರಾಮಾಂತರಗಳಿಂದಲೂ ರೋಗಿಗಳು ಬಂದು ಚಿಕಿತ್ಸೆ ಪಡೆಯುತ್ತಿದ್ದಾರೆಂದು ತಿಳಿದು ಬರುತ್ತದೆ. ಆದ್ದರಿಂದ ಈ ಅಪ್ಪ ತ್ರೆಯ ಸ್ಥಾಪನೆಯಿಂದ ಸಾರ್ವಜನಿಕರಿಗೆ ವಿಶೇಷ ಪ್ರಯೋಜನ ಉಂಟಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ಚಿಕಿತ್ಸೆಗಾಗಿ ಬರುತ್ತಿರುವವರ ಸಂಖ್ಯೆಯು ದಿನೇ ದಿನೇ ಹೆಚ್ಚಾದಂತೆ ಸಿಬ್ಬಂದಿ, ಔಷಧಿ, ಸಲಕರಣೆಗಳ ವಿಚ್ಚವೂ ಹೆಚ್ಚುತ್ತಿದೆ. ಈ ಆರೂವರೆ ತಿಂಗಳಲ್ಲಿ ರೂ ೪೫೫೮-೧೧-೧೧ ಕೆಲಸಿವಾಗಿ ರೂ. ೪೫೪೮-೦-೧೦ ವೆಚ್ಚವಾಗಿದೆ. ಇಂದಿನ ಸಂಚಿಯು ಅಂತ್ಯದಲೆಗೆ ಇನ್ನೂ ಮೂರುನಾವಿರ ರೂಪಾಯಿಗಳ ವೆಚ್ಚವಿದೆ. ಆಸ್ಪತ್ರೆಯಲ್ಲಿ ನೊಂದವರಿಗೆ ಸೂಕ್ತ ಪ್ರಯೋಜನಗಳನ್ನೊದಗಿಸಲು ಒಂದು ವರ್ಷಕ್ಕೆ ಆರುನಾವಿರ ರೂಪಾಯಿ ವೆಚ್ಚವಾಗಿದೆ. ಇದಲ್ಲದೆ ಅವಶ್ಯಕವಾದ ಸಲಕರಣೆಗಳು, ಮಂದ ಮುಟ್ಟುಗಳನ್ನೊದಗಿಸಲು ಎರಡುನಾವಿರ ರೂಪಾಯಿಗಳಾದರೂ ಬೇಕು. ಡಾಕ್ಟರ್ ಅವರ ವಾಸಕ್ಕಾಗಿ ಒಂದು ಕಟ್ಟಡ ನಿರ್ಮಾಣಕ್ಕೆ ಹತ್ತುನಾವಿರ ರೂಪಾಯಿಗಳ ಅವಶ್ಯಕತೆಯಿದೆ. ಹೀಗಾಗಿ ಮುಂದಿನ ವರ್ಷ ಆಸ್ಪತ್ರೆ ಸುಗಮವಾಗಿ ನಡೆಯಲು ಸದ್ಯದಲ್ಲಿ ಯೇ ನಾವು ೨೧,೦೦೦ ರೂಪಾಯಿಗಳನ್ನು ಸಂಗ್ರಹಿಸ ಬೇಕಾಗಿದೆ.

ದೀನಜನರ ಸೇವೆಗಾಗಿ ವಿಸಲಾಗಿರುವ ಈ ಆಸ್ಪತ್ರೆಯು ನಡೆಯಲು ಸಾರ್ವಜನಿಕರ ಮತ್ತು ಸರ್ಕಾರದ ನೆರವು ಅತ್ಯವಶ್ಯಕವೆಂದು ಮತ್ತೊಮ್ಮೆ ಸೂಚಿಸ ಬೇಕಾಗಿದೆ. ಮಹಾಜನರು ಉದಾರವಾಗಿ ಸಹಾಯವಡಿ ಈ ಸೇವೆ ಸತತ ನಡೆಯುವಂತೆ ಮಾಡಬೇಕೆಂದು ಪ್ರಾರ್ಥನೆ.

ತಮ್ಮ ಆತ್ಮೀಯರಾಗಿದ್ದು ತೀರ್ಪರಾದ ಬಂಧು ಜಳಗದವರ ಸವಿನೆನಪು ಚಿರಸ್ಥಾಯಿಯಾಗಿರುವಂತೆ ಮಾಡಲು ಬಯಸುವವರು ಗಣನೀಯವಾದ ಧನ ಸಹಾಯ ಮಾಡಿದರೆ ಆತ್ಯಾದರದಿಂದ ಸ್ವೀಕರಿಸಿ ಅವರ ಹೆಸರುಗಳನ್ನು ಔಷಧಾಲಯದಲ್ಲಿ ಕೆತ್ತಿಸಲು ವಿರ್ಪಡಿಸಲಾಗುತ್ತದೆ.

ಸ್ವಾಮಿ ವಿಶ್ವಂಧರಾನಂದ.
ಅಧ್ಯಕ್ಷ

ನೂರಾಟ.

(I) ವೀರಾಜಪೇಟೆಯಾದು ಅಂಬಟ್ಟಿ ಗ್ರಾಮದಲ್ಲಿ ಎಂದರೆ ವೀರಾಜಪೇಟೆಯಿಂದ ಬರೀ ಎರಡು ವೈಲು ನೂರದಲ್ಲಿ ಏಳು ನೂರು ಬಟ್ಟೆ ಒಳ್ಳೆಯ ಹಿರಾನರಿ ಭೂಮಿ ಮತ್ತು ಇದಕ್ಕೆ ನೀರಿದೆ ಕನ್ನೆರಡು ಏಕರು ಬಾಣೆ. ಕ್ರಯ ಹನ್ನೆರಡು ಸಾವಿರ ರೂಪಾಯಿ ಯೂ ಇದರ ಸಮೀಪ.

(2) ವೀರಾಜಪೇಟೆ ಮುನ್ಸಿಪಾಲಿಟಿಯೊಳಗೆ ಮೂರ್ಕೆಟ್ಟಿನ ಒತ್ತಿನಲ್ಲಿ ಅಂದಾಜು 10,500 ರೂ. ಕ್ರಯ ಬಾಳುವ ಎಂಟು ಕುಟುಂಬಗಳ ವಾಸ್ತವ್ಯ ಜನುಕೂಲವಿರುವ ನಿರ್ಮಾಯವಾಗಿ ಬಾಡಿಗೆ ಬರುತ್ತಿರುವ ಕಟ್ಟಡವೂ ಇದರ ಹಿಸ್ಸಿನಲ್ಲಿ ಒಂದು ಏಕರು ರೊಬಸ್ಟಾ ಕಾಫಿ ತೋಟವೂ ಮಾರಾಟಕ್ಕಿದೆ.

ಕೂಡಕೊಳ್ಳುವ ಪಾರ್ಟಿಯವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದಾಗಿದೆ.

ಮಿಸೆಸ್ ಚಿಪ್ಪುಡಿರ ಅಪ್ಪಮ್ಮ
3-3 ಪೊನ್ನಪ್ಪ
C/o. ಕೆ. ಪಿ. ಕಾರ್ಯಂಬಯ್ಯನವರು,
ಎಂ. ಎ, ಎಲ್‌ಎಲ್ ಬಿ, ವಕೀಲರು,
ತಾ. 20-11-47. ವೀರಾಜಪೇಟೆ

ಬೆಳ್ಳೂರು

ಹೆಸರಾಂತ ಸದೇಬರ ಹಣ್ಣಿನ ಉಂಡೆ ನರ್ಸರಿ.

ಸಹೋದರರೇ,

ಸುಮಾರು 100 ವರ್ಷಗಳಿಂದ ಪ್ರಯತ್ನಿಸಿ ಜೊಂದ ಅನೇಕ ಯೋಗ್ಯತಾ ಪತ್ರಗಳನ್ನು ಪಡೆದು ನೈಜೂರು, ಕೊಡಗು ಮತ್ತು ಇಂಡಿಯದ ಬಹು ಭಾಗಗಳಲ್ಲಿ ಪೂರಾವೆಗಳಿಗೂ ನನ್ನ ನರ್ಸರಿಯು ಒಂದು ತಿಂಗಳಿಟ್ಟರೂ ಹುಳಿಯೂಗದೆ ಚುರುಕು ಮತ್ತು ಸುವಾಸನೆಗಳಿಂದೊಡಗೂಡಿ ಮನಸ್ಸಿಗೆ ಆಹ್ಲಾದ ಪಡಿಸುವುದು ಮೂಗಿಗೆ ಸಂಬಂಧ ಪಟ್ಟ ಪೀನಸೆಯೇ ಮೊದಲಾದ ವ್ಯಾಧಿಗಳನ್ನು ಹೋಗಲಾಡಿಸುತ್ತೆ.

ಬೆಲೆ ಸೇರು 1ಕ್ಕೆ (24ತೋಲಾ) 2 8-0

ಹಾಸಲು ಮತ್ತು ಪ್ಯಾಕಿಂಗ್ ಚಾರ್ಜು ಬೇರೆ. ಧಡಿಯೂ ಮಣ ತರಿಸಿಕೊಂಡರೆ ಹಾಸಲು ಕಡಿಮೆ ಬೀಳುತ್ತದೆ.

ವಿಳಾಸ,
ಹಸನ್ ಸಾಹೇಬ್ ಅಂಡ್ ಸನ್ಸ್
ನರ್ಸರಿ ವ್ಯಾಪಾರಿಗಳು,
4-3 ಬೆಳ್ಳೂರು ಪೋಸ್ಟು.
ಮಂಡ್ಯ ಡಿ.

Reg. No. M. 1550.
'KODAGU' MERCARA. (Coorg).

ಕೊಡಗು

ಸಂಪಾದಕರು—ಪಿ. ವಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೩೬ | ಕಾರೀಕಳು ೧೯-೧೨-೧೯೪೬ನೇ ಶುಕ್ರವಾರ | ಸಂಚಿಕೆ ೫೮

ಕಾಂಗ್ರೆಸ್ಸು, ಸಮತಾವಾದಿಗಳು ಮತ್ತು ಕಮ್ಯುನಿಷ್ಟರು.

ಲೇ:—'ಗುಪ್ತ', ಮಡಿಕೇರಿ.

ಹಿಂಬೂಮೇಶದ ರಾಜಕೀಯ ರಂಗವನ್ನು ಪರಿಶೀಲಿಸಿದರೆ ಕೋಮುವಾರು ತತ್ವಕ್ಕೆ ಬಲಿಬೀಳದೆ ಕೆಲಸ ಮಾಡುತ್ತಿರುವ ಶಕ್ತಿಗಳೆಂದರೆ ಇವು ಮೂರು. ದೇಶದಲ್ಲಿ ಜಾತೀಯ ಇರ ಜನೀಕ ಸಂಸ್ಥೆಗಳು ಇದ್ದರೂ ಸಮಗ್ರ ಹಿಂದೂದೇಶದ ಸಂಸ್ಥೆಗಳನ್ನು ಬೇಕಾದರೆ ಇವು ಮೂರು ಮಾತ್ರ. ಹಿಂದೂದೇಶದ ಸರ್ವ ಪ್ರಜೆಗಳ ಹಿತದೃಷ್ಟಿಯಿಂದ, ಹಿಂದೂದೇಶದ ಸಾರ್ವತ್ರಿಕ ಉನ್ನತಿಯ ದೃಷ್ಟಿಯಿಂದ ದುಡಿಯುವ ಈ ಸಂಸ್ಥೆಗಳ ಧ್ಯೇಯ ಒಂದೆ. ಇವುಗಳ ಕಾರ್ಯಪೂರ್ಣಗಳು ಭಿನ್ನವಾಗಿದ್ದರೂ ಉದ್ದೇಶವೊಂದೆ. ಜನತಾ ರಾಜ್ಯ ಸ್ಥಾಪನೆ, ಜನಹಿತಸಾಧನೆ, ಭಾರತದ ಉತ್ಕರ್ಷವೇ ಇವುಗಳ ಧ್ಯೇಯ.

ಇವುಗಳಲ್ಲಿ ಎಲ್ಲದಕ್ಕಿಂತಲೂ ಸಂಘಟಿತವಾಗಿರುವ, ಪಸ್ತಾರವಾಗಿ ಹಬ್ಬಿರುವ, ಜನತೆಯ ಅನುರಾಗಕ್ಕೆ ಪಾತ್ರವಾಗಿರುವ ಸಂಸ್ಥೆ ಕಾಂಗ್ರೆಸ್ಸು. ಜಾತಿ, ಮತ, ಪಕ್ಷಾತೀತವಾದ ಈ ಸಂಸ್ಥೆಯು ಕಳೆದಿರುವ ವರ್ಷಗಳಲ್ಲಿ ದೇಶದ ಉನ್ನತಿಗಾಗಿ, ಬಡ ಜನರ ಉದ್ಧಾರಕ್ಕಾಗಿ, ಕಷ್ಟದುಃಖಕ್ಕೆ ಒಳಗಾದ ಸ್ವಾತಂತ್ರ್ಯ ಸಂಪ ಜನನಿಗಾಗಿ ದುಡಿದಿದೆ. ಈ ದುಡಿಮೆಯ ಫಲವಾಗಿ ಭರತಖಂಡಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟಿದೆ. ಇಂದು ದೇಶವ ಆಡಳಿತವನ್ನು ವಹಿಸಿ ಜನತೆಯ ಕಷ್ಟಸುಖಗಳಲ್ಲಿ ಭಾಗಿಯಾಗಿ ಕಾರ್ಯಮಾಡುತ್ತಿದೆ. ಕಾಂಗ್ರೆಸ್ಸು ಅಧಿಕಾರಕ್ಕೆ ಬಂದ ನಂತರ ಜನೀಕ ಹೊಸ ಖಾಯಿದೆಗಳನ್ನು ಮಾಡಬೇಕಾಯಿತು. ಮಜೂರರ ಮತ್ತು ರೈತಾಪಿಜನರ ಹಿತಕ್ಕಾಗಿ ಅನೇಕ ಕಾರ್ಯಮಾಡುತ್ತಿದೆ. ಕಾಂಗ್ರೆಸ್ಸು ಅಧಿಕಾರ ವಹಿಸಿದ ಸಮಯವು ಶಾಂತಿಯ ಕಾಲವಲ್ಲ. ದೇಶವು ಇಬ್ಭಾಗವಾಗಿ ಜನಜೀವನದಲ್ಲಿ ಅಭದ್ರತೆಯು ಭೀಕರ ಛಾಯೆಯು ಬಿಸ್ತು ವಿಷಸಂಚಿತ್ತಿ, ಭಯ, ಅತ್ಯಾಚಾರಗಳು ತಾಂಡವ ಆಡುತ್ತಿದ್ದಾಗ ಅಧಿಕಾರ ವಹಿಸಿತು. ಅಧಿಕಾರ ಸೂತ್ರಗಳನ್ನು ಹಿಡಿದ ಪರಿಸ್ಥಿತಿಯನ್ನು ತಿಳಿದುಕೊಳ್ಳುವದರಲ್ಲಿ ಮಹಾಮೇರುವಿನಂಥಾ ನಿರಾಶ್ರಿತರ ಸಮಸ್ಯೆಯು ಮುಂದೆ ನಿಂತಿತು. ಸುಮಾರು ಇಪ್ಪತ್ತು ಲಕ್ಷ ಜನರನ್ನು ಸುಧಾರಿಸಿ ಅವರ ಪೋಷಣೆ, ಹಿತಚಿಂತನೆ ಮಾಡುವದು ಜನಪ್ರೀತಿಯನ್ನು ಪಡೆದೆ ನೆಹರೂ ಸರಕಾರಕ್ಕೆ ಸಾಧ್ಯವಾಯಿತೇ ವಿನಹ ಜಗತ್ತಿನ ಯಾವದೇ ಸುಪ್ರಜ್ಞತ ಸರಕಾರದಿಂದಲೂ ಸಾಧ್ಯವಾಗುತ್ತಿರಲಿಲ್ಲ. ಈ ಕಾರಣದಿಂದ ಸರಕಾರವು ಮಾಡಲಿಕ್ಕಿದ್ದ ಅನೇಕ ರಾಷ್ಟ್ರರಚನಾ ಯೋಜನೆಗಳು ಹಿಂದೆ ಬೀಳಬೇಕಾಯಿತು. ಇಷ್ಟರಲ್ಲಿ ಕಾಂಗ್ರೆಸಿನ ಮೇಲೆ ಕೋಪಾತೋಪಹಗೆಗಳು ಹಾಕಲ್ಪಟ್ಟವೆ. ಕಾಂಗ್ರೆಸು ಬಂಡವಳಗಾರರ ಕೈಗೊಂಬೆ ಆಗಿದೆ. ಅದು ಧನವಂತರ ಸೂತ್ರದಂತೆ ಕುಣಿಯುತ್ತಿದೆ. ಶತ್ರುಬಲವಾಗಿ ಬಹುವ ರ ಬವಣೆಯ ಬೆಳೆಯುತ್ತಿದೆ ಎಂಬ ದೂರು ಬಂದಿದೆ. ಈ ದೂರು ಹೆಚ್ಚಾಗಿ ಸಮತಾವಾದಿ ಮತ್ತು ಕಮ್ಯುನಿಷ್ಟ್ ಪಕ್ಷದವರಿಂದ ಬಂದಿದೆ

ಸಮತಾವಾದಿ ಪಕ್ಷದವರು ಕಾಂಗ್ರೆಸಿಗರು. ಇಂದಿಗೂ ಕಾಂಗ್ರೆಸ್ಸಿನೊಳಗೇ ಕೆಲಸ ಮಾಡುತ್ತಿದ್ದಾರೆ. ಧನವಂತರ ಮುಷ್ಠಿಯೊಳಗಾಗಿರುವ ಜಗತ್ತಿನ ಅಧಿಕಾರವನ್ನು ಬಿಡಿಸಿ ಒಡವರೆ ಕೈಗೆ ತೊಡುವದೇ ಇವರ ಧ್ಯೇಯ. ಕೂಲಿತುರರು, ರೈತರು ಉದ್ಯೋಗ ವಂಚಿತರ ಒಡಯರಾಗಬೇಕು. ಸುಖವು ಜನರನ್ನು ತನ್ನ ಬಂಡವಾಳಕ್ಕೆ ಬಲವಂತ ದುಡಿಸುವಂಥ ಅನುರ ಪ್ರಭುತ್ವ ಧಲವನ್ನು ಭೋಗಿಸುವ ಸಮೂಜನ ಸುಲಗೆ ರರನ್ನು ನಿರ್ನಾಮ ಮಾಡಬೇಕು ಎಂಬುದು ಇವರ ಆಶಯ. ದೇಶದಲ್ಲಿ ಯಜ್ಞದವನ್ನು ದೂರೀ ಲಗರಿ, ಯಾವ ಜಾತಿ, ಮತಗಳಿಗೆ ಸೇರಿದವನೇ ಆಗಿರಲಿ, ಪ್ರತಿಯೊಬ್ಬನಿಗೂ ಸಮಾನ ರೀತಿಯಿಂದ ಬದುಕಿ ಬಾಳುವ ಹಕ್ಕನ್ನು ಖಚಿತಗೊಳಿಸಿಕೊಡುವದೇ ಇವರ ಧ್ಯೇಯವಾಗಿದೆ. ಆವರಿ ಸತ್ಯದ ಕಾಂಗ್ರೆಸ್ಸಿನ ನೀತಿಯಿಂದ ಇವರು ಅತ್ಯಪ್ತರಾಗಿರುವಂತೆ ಕಂಡುಬರುತ್ತದೆ. ಮೊನ್ನೆಯಾಗಿ ಈ ಪಕ್ಷದ ಪ್ರಮುಖಾಳಾದ ಶ್ರೀ. ಜಯಪ್ರಕಾಶ ನಾರಾಯಣರವರು ಪುನಾದಲ್ಲಿ ಭಾಷಣ ಮಾಡುತ್ತ 'ನಮ್ಮನ್ನು ಸಂಗಡ ಕರಕೊಂಡು ಹೋಗುವದೇ ಕಾಂಗ್ರೆಸ್ಸಿಗೆ ಸಾಧ್ಯವಾಗದಿದ್ದರೆ ಆ ಸಂಸ್ಥೆಯನ್ನು ಬಿಟ್ಟು ನಾವು ಹೊರಬೀಳಬೇಕಾಗುವುದು' ಎಂದಿದ್ದಾರೆ.

ಮೂರನೆಯದು ಕಮ್ಯೂನಿಸ್ಟ್ ಪಕ್ಷ. ಹಿಂದೂದೇಶದ ಕಮ್ಯೂನಿಸ್ಟರು ಸ್ವತಂತ್ರ ಘೋರಣೆಯಿಂದಿರುವರೇ ಎಂಬುದು ಸಂದೆಯವಾಗಿ ಕಂಡುಬರುತ್ತಿದೆ. ರಷ್ಯಾಕ್ಕೂ ಹಿಂದೂದೇಶಕ್ಕೂ ಇರುವ ಸಂಬಂಧದಂತೆ ಇವರ ನೀತಿಯೂ ಬದಲಾಗುತ್ತಿದೆ. ಈವೆದ ಮಹಾಯುದ್ಧದ ಪ್ರಥಮ ವರ್ಷಗಳಲ್ಲಿ ಯುದ್ಧಕ್ಕೆ ವಿರೋಧಿಸಿ ಜೈಲಿಗೂ ಹೋದ ಇವರು ರಷ್ಯಾ ರ ನಂತರ ರಷ್ಯಾವು ಯುದ್ಧ ರಂಗಕ್ಕೆ ಇಳಿದ ಮೇಲೆ ಇದು 'ಜನತೆಯ ಯುದ್ಧ'ವೆಂದು ತಮ್ಮ ನೀತಿಯನ್ನು ಬದಲಾಯಿಸಿ ಯುದ್ಧ ಯತ್ನಕ್ಕೆ ಸಹಾಯಮಾಡಿದರು. ಕಾಂಗ್ರೆಸ್ಸನ್ನು ನದೆಬಡೆದು ಮೂಲೆ ಸೇರಿಸಲು ಯತ್ನಿಸುತ್ತಿದ್ದ ಸರಕಾರದೊಡನೆ ಸಹಕರಿಸಿ ಯುದ್ಧ ಪ್ರಚಾರ ಮಾಡಿದರು. ಕಾಂಗ್ರೆಸ್ಸಿನ ಮುಂದಾಳುಗಳ ದಸ್ತಗಿರಿಯ ನಂತರ ನಡೆದ ದಂಗೆ ಕೋಲಾಹಲಗಳು 'ನಿಷೇಧಿಸಿದರು. ನಂತರ ಕಾಂಗ್ರೆಸು ಅಧಿಕಾರ ಸ್ವೀಕರಿಸಿ ಇನ್ನೂ ಸರಿಯಾಗಿ ಕೂರಲಿಕ್ಕೆ ಮೊದಲು ಇಲ್ಲದ ಮುಖ್ಯರಗಳನ್ನು ಪಡೆಸಿ ಕಾಂಗ್ರೆಸ್ಸಿನ ಮುಖಕ್ಕೆ ಕಪ್ಪಿಡಲು ಯತ್ನಿಸಿದರು. ಇಂದು ಸ್ವತಂತ್ರ ಹಿಂದೂದೇಶದ ಬಾಂಧವ್ಯ ರಷ್ಯಾಕ್ಕೆ ಬೇಕಾಗಿದೆ. ಭಾರತವೂ ಸ್ನೇಹ ಕಾಂಕ್ಷೆಯಿಂದಿದೆ. ವಿಜಯಲಕ್ಷ್ಮಿಯು ಭಾರತದ ರಾಯಭಾರಿಯಾಗಿದ್ದಾರೆ. ನಮ್ಮ ಕಮ್ಯೂನಿಷ್ಟ್ ಪಕ್ಷದವರು ಈಗ ನೆಹರೂ ಸರಕಾರಕ್ಕೆ ತಮ್ಮ ಸರ್ವಸಹಕಾರವನ್ನೀಡುವಲು ಮುಂಚೆ ಬಂದಿದ್ದಾರೆ. ಕಾಂಗ್ರೆಸ್ಸು ಜೈಲಿನಲ್ಲಿದ್ದ ಕಾಲಕ್ಕೆ ಅದನ್ನು ಸಾಮಿಸಿ ತಮ್ಮ ಹಪ್ಪದವನ್ನು ಕಟ್ಟಲು ಯತ್ನಿಸಿದ ಅವರ ಬಾಯಿಯಲ್ಲಿ ಇಂದು 'ಮಹಾತ್ಮಗಾಂಧೀಕೀ ಜೈ' ಈ ವಿಚಾರಗಳನ್ನು ಕೂಲಂಕುಶ ನೋಡಿದರೆ ಬಾರತದ ಕಮ್ಯೂನಿಷ್ಟರು ಎಷ್ಟಾದ ಸೂಕ್ಷ್ಮಜಾಲನೆಯಂತೆ ಕಜಿಯುತ್ತಿದ್ದಾರೆಂಬುದೇ ಗೊತ್ತಾಗುತ್ತದೆ. ಭಾರತ ಕಮ್ಯೂನಿಷ್ಟರು ಬರ್ಮಾದಲ್ಲಿ ತಮ್ಮ ಕೈವಾಡ ಪ್ರಾರಂಭಿಸಿದಾರು ಈ ಸೂಕ್ಷ್ಮ ಜಾಲನೆಯಿಂದೆಯೇ ಎನ್ನಬೇಕಾಗುತ್ತದೆ. ಬರ್ಮದಲ್ಲಿರುವ ಕಮ್ಯೂನಿಷ್ಟರು ಇಲ್ಲಿಯ ವಿಜಾರಗಳನ್ನು ರಹಸ್ಯವಾಗಿ ಸೃಷ್ಟಿಯಿಂದ ನೋದುತ್ತಾರೆ.

ಕಮ್ಯೂನಿಸ್ಟರಿಗೂ, ಸಮತಾವಾದಿಗಳಿಗೂ ಧ್ಯೇಯದಲ್ಲಿ ವ್ಯತ್ಯಾಸವಿಲ್ಲ. ಅವರು ಅನುಸರಿಸುವ ಮಾರ್ಗ ಬೇರೆ. ಬಾರತದ ಸಮಸ್ತ ವಾದಿಗಳು ಅಹಿಂಸಾ ಮಾರ್ಗದಿಂದ ತಮ್ಮ ಧ್ಯೇಯವನ್ನು ಸಾಧಿಸುವ ಯತ್ನ ಮಾಡುತ್ತಿದ್ದಾರೆ. ಆದರೆ ಕಮ್ಯೂನಿಷ್ಟರಿಗೆ ಹಿಂಸೆ, ಅಹಿಂಸೆಗಳಲ್ಲಿ ಭೇದವಿಲ್ಲ. ಹಿಂದೂಸ್ತಾನದಲ್ಲಿ ಹಿಂಸೆಗೆ ಕೈ ಹಾಕಲು ಅವರಿಗೆ ಅವಕಾಶ ಜೊರೆತಿಲ್ಲವಾದರೂ ಅವರ ವೃತ್ತಿಯ ಗುರಿಯ ಕಡೆಗೆ ಮಾತ್ರ. ಸಾಧಿಸುವ ಮಾರ್ಗ ಯಾವದೂ ಆಗಬಹುದು. ಇವರು ಇಂದು ನೆಪೂರ ಸರಕಾರಕ್ಕೆ ಜಯಜಯಸುತ್ತಿದ್ದರೂ ಸರಕಾರದ ಕಾರ್ಯಕಲಾಪಗಳು ಸಾಕಷ್ಟು ದ್ರುತಗತಿಯಿಂದ ನಡೆಯುತ್ತಿಲ್ಲವೆಂದು ಅಸಮಾಧಾನಗೊಂಡಿದ್ದಾರೆ. ಸಮತಾವಾದಿಗಳಂತೆಯೇ ಸರಕಾರದ ನೀತಿಯು ವಿಚಾರ ದೂರು ಹೋಗಲು ಇನ್ನೂ ಅನೇಕ ಕಾರಣಗಳಿವೆ.

ಈ ಎರಡು ಪಕ್ಷಗಳ ಆಶಯವನ್ನು ಕಾಂಗ್ರೆಸು ವಿರೋಧಿಸುವಂತಿಲ್ಲ. ಶ್ರೀಮಂತ, ಬಡವ ಎಂದು ನಿರ್ಮಿತವಾಗಿರುವ ಇಂದಿನ ವರ್ಗ ಭೇದವನ್ನು ಕಿತ್ತೊಗೆಯಲು ಕಾಂಗ್ರೆಸು ಕಂಕಣ ಬದ್ಧವಾಗಿದೆ. ಅನೇಕ ಶತಮಾನಗಳಿಂದ ಬೇರು ಬಿಟ್ಟು ಬಂದಿರುವ ಸಮಾಜದ ಎರು ತಗ್ಗುಗಳನ್ನು ಇಂದೇ ಕಿತ್ತೊಗೆಯುವದು ಸುಲಭದ ಕೆಲಸವಲ್ಲ. ಇಂದೇ ಮಾಡಬೇಕಾದರೆ ಕ್ರಾಂತಿಯ ಪಥದಲ್ಲಿ ನಡೆಯಬೇಕಾಗುತ್ತದೆ. ಸಹಸ್ರಾರು ಜನರ ನಿರ್ನಾಮವಾಗಬೇಕಾಗುತ್ತದೆ. ಜನರ ಕೊಂಳು ಕತ್ತರಿಸಿ ಅವರ ಆಸ್ತಿ ಪಾಸ್ತಿಗಳನ್ನು ಹರಿದು ಕುಂಜುವ ಚಾರಕ್ಕೆ ಆಹಿಂಸಾ ಬದ್ಧವಾದ ಕಾಂಗ್ರೆಸ್ಸು ತಯಾರಾಗಲಾರದು. ಮಹಾತ್ಮಗಾಂಧೀ, ಜವಾಹರ್‌ಲಾಲ್ ಇವರಿಂಥಾ ದೊಡ್ಡ ಸಮತಾವಾದಿಗಳು ಯಾರಿದ್ದಾರೆ? ಇಂಥಾವರು ಪ್ರತಿಯೊಬ್ಬ ವ್ಯಕ್ತಿಗೂ ಆತನಿಗೆ ಸಲ್ಲಬೇಕಾದ ಹಕ್ಕುಬಾಧ್ಯತೆಗಳನ್ನು ಒದಗಿಸಿ ಕೊಡಲು ಪ್ರಯತ್ನಿಸುತ್ತಿದ್ದಾರೆ. ಆದರೆ ಕಮ್ಯೂನಿಷ್ಟರ ಮಾರ್ಗ ಮೆಳೆಯಲು ಅವರು ರಯಾರಿಲ್ಲ. ಈ ಕಾರಣಕ್ಕಾಗಿಯೇ ಹಿಂದೂ ದೇಶದ ಕಮ್ಯೂನಿಷ್ಟರು ಜನಾನುರಾಗಿಗಳಾಗಿಲ್ಲ. ಅವರ ಪ್ರಯತ್ನವು ಸಾಕಷ್ಟು ಬೆಕಿಕೆಗೆ ಬಂದಿಲ್ಲ. ರವ್ಯಾಪಕ ಕಡೆಗೆ ನೋಡುವದನ್ನು ಬಿಟ್ಟು ಪಿ-ಯ ಮಾರ್ಗವನ್ನು ತ್ಯಜಿಸಿದರೆ ಅವರು ಜನಾನುರಾಗಿಗಳಾಗಬಹುದು. ಸಮತಾವಾದಿಗಳಿಗೂ ಕಮ್ಯೂನಿಷ್ಟರಿಗೂ ಭೇದ ಉಳಿಯದು. ಕಾಂಗ್ರೆಸ್ ಸಂಸ್ಥೆಯಿಂದಿಯಲ್ಲಿಯೇ ನೀತಿ ಕೆಲಸ ಮಾಡಬಹುದೂ ಅವರಿಗೆ ಸಾಧ್ಯವಾಗಬಹುದು.

ಈ ಪ್ರಬಲವಾದ ಪಕ್ಷಗಳು ಹೇಳುವ ಮಾತಿನಲ್ಲಿ ಸತ್ಯಕ್ಕೆಯಆಂಶವೂ ಸ್ವಲ್ಪವಿದೆ. ಕಾಂಗ್ರೆಸ್ಸಿನಲ್ಲಿ ಕೆಲವರು ಅಧಿಕಾರವಹಿಸಿದ ನಂತರ ತಮ್ಮ ಸೇವಾಬೇಕ್ಷೆಯನ್ನು ತೊರೆದಂತೆ ಕಂಡುಬರುತ್ತಿದೆ. ಕಾಂಗ್ರೆಸ್ಸಿನಮೂಲಕ ಬಂದ ಅಧಿಕಾರವನ್ನು ತಮ್ಮ ಅರ್ಥಿಕ ಲಾಭಕ್ಕೆಸ್ಕರ್ಥಕ್ಕೋ ಉಪಯೋಗಿಸಿಕೊಳ್ಳುತ್ತಿರುವವರೂ ಇದ್ದಾರೆ. ಅಧಿಕಾರಕ್ಕಾಗಿ ಪೈಪೋಟಿಗಳಿದು ಕಾಂಗ್ರೆಸ್ಸಿನ ತತ್ವನಷ್ಟವನ್ನು ಕಡೆಗಣಿಸುವವರೂ ಇದ್ದಾರೆ. ಸೇವೆಗೆಂದು ಪ್ರತಿಜ್ಞೆಬೆಗೆದ ಕಾಂಗ್ರೆಸಿಗರೆಲ್ಲಿ ಕೆಲವರು ಅಧಿಕಾರ ಮೂಜೆಯಲ್ಲಿ ಬೆನ್ನು ಹತ್ತಿ ಜನಾನುರಾಗವನ್ನು ಕಳಕೊಳ್ಳುತ್ತಿದ್ದಾರೆ. ಉಪಪ್ರಚಾರ, ಮೋಸ, ಕೌಟಿಲ್ಯ ಇವೇ ಅವರ ಆಯುಧಗಳಾಗಿವೆ. ಇಂಥವರಿಂದ ಕಾಂಗ್ರೆಸ್ಸನ್ನು ರಕ್ಷಿಸಿದ್ದರೆ ಭವಿಷ್ಯವು ನೆಟ್ಟಗಾಗದು. ಇದಕ್ಕಾಗಿ ಕಾಂಗ್ರೆಸ್ಸಿನ ಘಟನೆಯನ್ನು ಮಾರ್ಪಡಿಸಲು ಸಮಿತಿಯೊಂದು ನೇಮಕವಾಗಿದೆ. ಅವರು ಯೋಗ್ಯ ರೀತಿ ತಿದ್ದುಪಡಿಗಳನ್ನು ಮಾಡಿ ಕಾಂಗ್ರೆಸು ಶುದ್ಧವಾಗಿ ಸಮತಾವಾದಿಗಳೂ, ಕಮ್ಯೂನಿಷ್ಟರೂ ಅದರ ಆಶ್ರಯದಲ್ಲಿ ಕೆಲಸ ಮಾಡುವಂತಾಗಲಿ.

ವೀರಾಜಪೇಟೆಗೆ 'ಕೊಡಗು'
ಏಜೆಂಟರು:
ಶ್ರೀ ಕೆ. ಎಂ. ಸುಬ್ರಾಯಸೆಟ್ಟರು.

ಕೊಡಗು

ತಾ. ೧೯-೧೨-೧೯೪೭ನೇ ಶುಕ್ರವಾರ

ಹೈದರಬಾದು.

ಹೈದರಾಬಾದಿನಲ್ಲಿ ನಡೆಯುತ್ತಿರುವ ಚಳವಳಿಯನ್ನು ನಿಲ್ಲಿಸಲು ಕೇಂದ್ರದೊಡನೆ ಮಾತುಕತೆಗಳೂ, ಸ್ಟೇಟ್ ಕಾಂಗ್ರೆಸ್ಸಿನೊಡನೆ ಸಂಧಾನ ಪ್ರಯತ್ನಗಳೂ ಆದವು. ಇದೆಲ್ಲ ತೋರಿಕೆಯ ಮಾತುಕಥೆಯಾಗಿ ಹೈದರಾಬಾದ್ ಕಾಂಗ್ರೆಸ್ಸಿನ ಪ್ರೆಸಿಡೆಂಟರಾದ ಸ್ವಾಮಿ ರಮಾನಂದ ತೀರ್ಥರು ಚಳವಳವು ಇನ್ನೂ ಪ್ರಬಲ ರೀತಿಯಿಂದ ಮುಂದರಿಯಬೇಕೆಂದು ಸಾರಿದ್ದಾರೆ. ಚಳವಳವು ಮುನ್ನಡೆಯುತ್ತಿದೆ. ೬೦೦೦ಕ್ಕೂ ಮಿಕ್ಕಿ ದೇಶಭಕ್ತರು ಸೆರೆಮನೆಯಲ್ಲಿದ್ದಾರೆ.

ಈ ಮಧ್ಯೆ ನೈಜಾಮರು ಹೊಸ ಮಂತ್ರಿ ಮಂಡಳವೊಂದನ್ನು ರಚಿಸಿ ಜನತೆಯ ಕಣ್ಣು ಕಟ್ಟುವ ಯತ್ನ ನಡೆಸಿದ್ದಾರೆ. ಈ ಮಂತ್ರಿ ಮಂಡಳದಲ್ಲಿ ೧೪ ಜನರಿದ್ದು ಇವರಲ್ಲಿ ೮ ಜನರು ಮುಸ್ಲಿಮರಿದ್ದಾರೆ. ಈ ಮಂತ್ರಿ ಮಂಡಳದಲ್ಲಿ ಸ್ಟೇಟ್ ಕಾಂಗ್ರೆಸ್ಸಿನವರಾಗಲೀ, ಹೈದರಾಬಾದ್ ಹಿಂದುಗಳ ಮಹಾ ರಂಪೆಯೂ ವ್ಯರ್ಥವಾಗಿ ಪ್ರಗತಿಶೀಲ ಪಕ್ಷವೂ, ಕೆಸ-ನ್-ಮರು ಪೂರ್ ಪ್ರಜಾಪಕ್ಷವೂ ಸಹಕರಿಸಿಲ್ಲ. ಅಧಿಕಾರದ ಆಸೆಯಿಂದ ಬಾಯ್ತೆರೆದಿದ್ದ ಕೆಲವು ಹಿಂದುಗಳನ್ನು ಕೂಡಿಕೊಂಡು ಈ ಮಂತ್ರಿ ಮಂಡಳವನ್ನು ರಚಿಸಿದ್ದಾರೆ. ಹೈದರಾಬಾದಿನ ೧೬೬೩೫೨೨ ಜನಸಂಖ್ಯೆಯಲ್ಲಿ ೫೦,೬೮,೪೬೦ ಜನರು ಮುಸ್ಲಿಮರು. ೧೪೪೧೫೯೫ ಜನರು ಹಿಂದುಗಳು, ೨, ೨೦,೪೬೬ ಜನರು ಕ್ರಿಶ್ಚಿಯನರು, ೫೩೩೨೦ ಸಿಕ್ಖರು, ೧೪೯೬೯ ಜನರು ಪಾರ್ಸಿಗಳು ಹೀಗಿದ್ದರೂ ಶೇಕಡ ೧೩ ರಷ್ಟಿರುವ ಮುಸ್ಲಿಮರು ರಾಜ್ಯಭಾರ ಮಾಡುತ್ತಿದ್ದಾರೆ. ಹದಿನಾಲ್ಕು ಜನರಿರುವ ಮಂತ್ರಿಮಂಡಳದಲ್ಲಿ ೮ ಜನರು ಮುಸ್ಲಿಮರು!

ಹೈದರಾಬಾದಿನ ಜನಸಂಖ್ಯೆಯಲ್ಲಿ ನೂರಕ್ಕೆ ೪೬ ಜನರು ಕೆಲಸಗಳಲ್ಲಿ ತಿ, ೧೩ ಉರುದು, ೧೧ ಕನ್ನಡ, ಮಾತಾಡುವವರಾಗಿದ್ದಾರೆ. ಆದರೂ ಉರುದನ್ನು ಸಂಸ್ಥಾನದ ಆಡಳಿತ ಭಾಷೆಯಾಗಿ ಮಾಡಿಸಿದ್ದಾರೆ. ಈ ರೀತಿ ಜನತೆಯ ಮೇಲೆ ದಬ್ಬಾಳಿಕೆ ನಡೆಸಿದೆ.

ಹೈದರಾಬಾದ್ ಸರಕಾರವು ಬಾಯಿಯಲ್ಲಿ ಪ್ರಜಾಜನಾಬ್ದಾರಿ ಸರಕಾರವನ್ನು ಸ್ಥಾಪಿಸಿದೆ ಜನತೆಯ ತೀರ್ಮಾನವೇ ಸರಕಾರದ ಆಶಯವೆನ್ನುತ್ತಿದೆ. ಆದರೆ ಕಾರ್ಯರಂಗದಲ್ಲಿ ನಡೆಯುತ್ತಿರುವ ಅನರ್ಥಗಳು ಇವೆ. ಈ ಕಾರಣಕ್ಕಾಗಿಯೇ ಸ್ಟೇಟ್ ಕಾಂಗ್ರೆಸ್ಸು ಅಸಹಾಯೋಧನೆ ಗೊಂಡು ತನ್ನ ಚಳವಳವನ್ನು ಮುಂದರಿಸಿದೆ. ಆದ್ದರಿಂದ ಈ ಸಂದರ್ಭದಲ್ಲಿ ಸ್ಟೇಟ್ ಕಾಂಗ್ರೆಸ್ಸಿಗೆ ಅಖಿಲಭಾರತ ಕಾಂಗ್ರೆಸ್ಸು ಸಹಾಯನೂಡಬೇಕು. ಹೈದರಾಬಾದ್ ಸಮಸ್ಯೆಯ ಬಗ್ಗೆ ಇಂಡಿಯಾ ಸರಕಾರವು ಗಮನವಿಡಬೇಕು. ಜನತೆಯ ಅಭಿಪ್ರಾಯಕ್ಕೆ ವಿರುದ್ಧ ವರ್ತಿಸಿದ ಸರಕಾರಗಳು ನಾಮಾವಶೇಷವಾಗಿವೆ. ರಾಜ ಮಹಾರಾಜರುಗಳು ಹೇಳ ಹೆಸರಿಲ್ಲದಂತಾಗಿದ್ದಾರೆ. ಹೈದರಾಬಾದ್ ನೈಜಾಮರ ದಬ್ಬಾಳಿಕೆಗೂ ಅಂತ್ಯವಿದೆ. ಈ ಅಂತಿಮ ಪುನ್ನು ಅರಿದು ವಿವೇಕ ರೀತಿಯಿಂದ ವರ್ತಿಸಿದರೆ ನೈಜಾಮರ ಹೆಸರು ಕೆಲಕಾಲ ಬಾಳೀತು. ಇಲ್ಲದಿದ್ದರೆ ಜಾಗೃತಿಗೊಂಡ ಜನತೆಯ ಮುನ್ನಡೆಯ ಭರದಲ್ಲಿ ನೈಜಾಮರ ಕಿರೀಟವು ಮಣ್ಣು ಮುಕ್ಕಬೇಕಾಗುವದಲ್ಲದೆ ಅವರ ಅಸ್ತಿತ್ವವು ಹೇಳ ಹಸರಿಲ್ಲದೆ ನಿರ್ನಾಮವಾದೀತು.

ಮುಸ್ಲಿಂ ಲೀಗ್.

ಅಖಿಲ ಭಾರತ ಮುಸ್ಲಿಂಲೀಗು ಪಾಕಿಸ್ತಾನಕ್ಕಾಗಿ ಹೋರಾಡಿ ಆ ಹೋರಾಟದಲ್ಲಿ ಜಯಪಡೆಯಿತು. ಲೀಗಿನ ರಾಜಕೀಯ ಆಶಯವು ನೆರವೇರಿನ ಕಾರಣ ಆದರ ಅಸ್ತಿತ್ವದ ಅವಶ್ಯಕತೆಯಿಲ್ಲವೆಂದು ಭಾವಿಸಲಾಗಿತ್ತು. ಇದ್ದರೂ ಕೂಡ ಪಾಕಿಸ್ತಾನದಲ್ಲಿ ಅದು ಇಬಹುದೇ ವಿನಹ ಹಿಂದೀ ಒಕ್ಕೂಟದಲ್ಲಿ ಅದಕ್ಕೆ ಅಸ್ತಿತ್ವವಿಲ್ಲವೆಂದೂ ಇಲ್ಲಿ ಅದನ್ನು ವಿಸರ್ಜಿಸಿ ಮೌಲಾನಾ ಅಬುಲ್ ಕಲಂ ಆಜಾದರ ನುಂದಾಳ್ತನದಲ್ಲಿ ಅವರ ಹೊಸ ಸಂಘಟನೆಯೊಗುವದೆಂದೂ ಅಭಿಪ್ರಾಯವಿತ್ತು. ಆದರೆ ಮೊನ್ನೆಯಾಗಿ ಕರಾಚಿಯಲ್ಲಿ ಸೇರಿದ ಅಖಿಲ ಭಾರತ ಮುಸ್ಲಿಂ ಲೀಗ್ ಕಾರ್ಯಕಾರಿ ಮಂಡಳಿಯು ಒಂದು ನಿರ್ಣಯವನ್ನು ಮಾಡಿ ಹಿಂದೀ ಒಕ್ಕೂಟದಲ್ಲಿ ಮುಸ್ಲಿಂ ಲೀಗ್ ಇರಬೇಕೆಂದೂ, ಆದರ ಕೇಂದ್ರ ಪದಾಧಿಕಾರಿಗಳ ಸಮೂಹ ದೆಹಲಿಗೂ, ಇವರ ಸಂಘಟನೆಯನ್ನು ಪುನರ್ಜೀವಿತಗೊಳಿಸಲು ಇನ್ನೈವರು ಮಾಡಬೇಕೆಂದೂ ತೀರ್ಮಾನಿಸಿರುವರು. ಈ ತೀರ್ಮಾನವು ಸಮಂಜಸವಾದುದಲ್ಲವೆನ್ನಬೇಕಿದೆ.

ಕಾಂಗ್ರೆಸ್ಸು ಅದಿಯಂತಲೂ ಹಿಂದೂ ದೇಶದ ಅಖಂಡತೆಗಾಗಿ ಹೋರಾಡಿದ ಮತ್ತು ಹೋರಾಡುತ್ತಿರುವ ಸಂಸ್ಥೆ. ಅಖಂಡ ಹಿಂದೂಸ್ಥಾನ ತಪ್ಪಬಿದ್ದಾಗಲಾ ಕಾಂಗ್ರೆಸ್ಸು ಪಾಕಿಸ್ತಾನದಲ್ಲೂ ತನ್ನ ಕೆಲಸವನ್ನು ನಡೆಸಿ ವಿಕೇಂದ್ರತ ಭರತಖಂಡಕ್ಕಾಗಿ ಯತ್ನಿಸುವವರಲ್ಲಿ ಅಧ್ವರ್ಯವಿದೆ. ಆದರೆ ಹಿಂದೊಡೆರವನ್ನು ಎಡಾಗಿ ವಿಂಗಡಿಸಬೇಕೆಂದು ಪ್ರಯತ್ನಿಸಿ ಸಫಲತೆಯನ್ನು ಪಡೆದ ಲೀಗು ತನ್ನ ರಾಜ್ಯದಲ್ಲಿರಬೇಕಲ್ಲದೆ ಹಿಂದೀ ಒಕ್ಕೂಟಗಲ್ಲೂ ಅಸ್ತಿತ್ವವಿರಲೆಂಬ ಕೆಂಬುದು ಸಮಂಜಸವಲ್ಲ. ಇವರು ರಾಜಕೀಯಕ್ಕೆ ವೈದಾರಿಯವನ್ನಲ್ಲ ನೆಂದು ಎಷ್ಟೇ ಹೇಳಿದರೂ ಇದರಿಂದ ಮುಂದೆ ತೊಂದರೆ ಬಾರದಿರದು.

ಹಿಂದೀ ಸರಕಾರವು ಕೋಮುವಾರು ರಾಜಕೀಯಕ್ಕೆ ಎಂದೂ ಎಡೆಕೊಡಲಾರದು. ಯಾವದೇ ಕೋಮಿನಲಿ, ತಮ್ಮ ಧರ್ಮ, ಜಾತಿ, ಮತಗಳ ಗ್ಟಸ್ಥಿಯಿಂದ ಸಂಘಸಂಸ್ಥೆಗಳನ್ನು ಕಟ್ಟಬಹುದಲ್ಲದೆ ರಾಜಕೀಯರಂಗದಲ್ಲಿ ಯಾವದೇ ಕೋಮುವಾರು ಸಂಸ್ಥೆಗಳಿಗೆ ಸ್ಥಳವಿರಲಾರದು. ಮುಂದೆ ನಡೆಯುವ ಚುನಾವಣೆಗಳೂ ಕೂಡ ಸಮ್ಮಿಶ್ರ ಮತದಾನ ಪದ್ಧತಿಯಿಂದ ನಡೆಯುವದಾದ ಕಾರಣ ಸರ್ವ ಕೋಮುಗಳೂ ಹತ್ತಿರ ಸರಿದು ಸೌಹಾರ್ದತೆಯನ್ನು ಬೆಳೆಸಿಕೊಳ್ಳಬೇಕಿದೆ. ಹೀಗಿರುವದರಿಂದ ಹಿಂದೀ ಒಕ್ಕೂಟದಲ್ಲಿ ಲೀಗಿನ ಅಸ್ತಿತ್ವವು ಅನಿಷ್ಟವ್ಯಾಯವಾದುದು.

ನರ್ತನ.

ದಕ್ಷಿಣ ಕೊಡಗು ಕರ್ನಾಟಕ ಸಾಹಿತ್ಯ ಸಂಘದ ಉತ್ಸವವು ತಾ. ೧೪ ರಲ್ಲಿ ಶ್ರೀ. ವಿ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಕೆ. ವಿ. ರಾಘವಾಚಾರ್, ರಂಗನಾಥ ಮತ್ತು ನರಸಿಂಹಸ್ವಾಮಿ ಇವರುಗಳು ಭಾಷಣ ವಾಚನಗಳನ್ನು ಮಾಡಿದರು ಈ ಸಂಘದ ವಾರ್ಷಿಕ ಸಭೆಯು ಅದೇ ದಿನ ನಡೆದು ಸಂಘವು ಒಂದು ಪುಸ್ತಕ ಭಂಡಾರವನ್ನು ತೆರೆಯಬೇಕೆಂದು ತೀರ್ಮಾನವಾಗಿದೆ.

ವೈಕೂರು ಇಂಟರ್ ಯೂನಿವರ್ಸಿಟಿ ಹಾಕಿ ಟೀಮಿಗೆ ಸೆಂಟ್ ಫಿಲೋಮಿನಾ ಕಾಲೇಜಿನಲ್ಲಿ ಓದುತ್ತಿರುವ ಶ್ರೀಗಳಾದ ಎ. ಬಿ. ದೇವಯ್ಯ, ಎಂ. ಬಿ ಚಂಗಪ್ಪ, ಎನ್. ಸಿ. ಅಪ್ಪಣ್ಣ ಮತ್ತು ಬಿ. ಎ. ಕಾರ್ಯಪ್ಪ ಇವರುಗಳನ್ನು ಆಯ್ಕೆಮಾಡಿರುವರು.

ಅಖಿಲ ಕೊಡಗು ಉಪಾಧ್ಯಾಯರ ಪರಿನೇಳನೇ ಸಮ್ಮೇಳನವು ತಾರೀಖು ೨೧-೧೨-೪೭ ರಲ್ಲಿ ವೀರಾಜಪೇಟೆ ಹೈ ಸ್ಕೂಲಿನಲ್ಲಿ ವೈಸೂರು ಪ್ರೌಢ ವಿದ್ಯಾನಿಮಿತಿಯ ಎಜ್ಯುಕ್ಯೂಟಿವ್ ಆಫೀಸರಾದ ಶ್ರೀ ಗೇವೇಗೌಡರ ಅಧ್ಯಕ್ಷತೆಯಲ್ಲಿ ನಡೆಯುವದು.

ಹಾಲೇರಿ ಗ್ರಾಮದ ಮುದ್ದುರ ಮಂದಣ್ಣ ಎಂಬವರು ತಾ. ೧೫-೧೨-೪೭ರಲ್ಲಿ ಗುಂಡುಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡರೆಂದು ವರ್ತಮಾನ.

ತಾರೀಕು ೧೪-೧೨-೪೭ ರಲ್ಲಿ ಕಾಲೂರು ಗ್ರಾಮದ ಕಾರೆರ ಪಿಂಚಿಗೆ ಅಕಸ್ಮಾತ್ ಬೆಂಕಿಬಿದ್ದು ಸಮೂಲ ಬೆಂದು ಹೋಗಿದೆಯೆಂದು ವಾರ್ತೆ.

ವೈಕೂರಿನ ಕೊಪ್ಪ ಮತ್ತು ಕಡೂರಿನಲ್ಲಿರುವ ಕೊಡವರು ತಾ. ೨೦ರಲ್ಲಿ ಶ್ರೀ ಬಿದ್ದಂಡ ಬೋಪಣ್ಣನವರ ಮನೆಯಲ್ಲಿ ಹುತ್ತರಿ ಹಬ್ಬವನ್ನು ಆಚರಿಸಿದರು.

ಮಡಿಕೇರಿಗೆ ತಾ. ೧೪ ರಲ್ಲಿ ೧೧ ಇಂಚು ಎರಡು ಸೆಂಟು ವಳೆಬಿದ್ದು ಕೊಡಗಿನ ಎಲ್ಲಾ ಕಡೆಯಲ್ಲೂ ಮಳೆಬಿದ್ದು ಕುಯಿಲು ಕೆಲಸಕ್ಕೆ ವಿಪರೀತ ತೊಂದರೆಯಾಗಿದೆ.

ಕೊಡಗಿನಲ್ಲಿ ಬತ್ತದ ಬೆಲೆಯನ್ನು ಗಾಡಿಗೆ ರೂ. ೧೫೦ರಂತೆ ಹೆಚ್ಚಿಸಿರುವರು. ತಾ. ೧೫-೧೨-೪೭ರಂದ ರೇಶನ್ ಪದ್ಧತಿಯು ತೆಗೆದು ಹಾಕಲ್ಪಡುವುದು.

ಚೀಫ್ ಕಮಿಷನರ ಜೇಳಿಕೆ.

ಆಹಾರ ಧಾನ್ಯ ನೀತಿ ಸಮಿತಿಯ ಶಿಫಾರಸ್ಸಿನ ಪ್ರಕಾರ ಆಹಾರ ಧಾನ್ಯಗಳ ನಿಯಂತ್ರಣವನ್ನು ಕ್ರಮಶಃ ತೆಗೆದು ಹಾಕುವ ಕೇಂದ್ರ ಸರಕಾರದ ನೀತಿಗನುಗುಣವಾಗಿ ಆ ಸರಕಾರದ ಆಜ್ಞೆಯಂತೆ ಕೊಡಗು ಸರಕಾರವು ಆಹಾರ ಧಾನ್ಯಗಳ ನಿಯಂತ್ರಣವನ್ನು ಕ್ರಮಶಃ ತೆಗೆದು ಹಾಕುವ ಬಗ್ಗೆ ಈ ಕೆಳಗಿನ ತೀರ್ಮಾನ ಮಾಡಿ ಸಾರ್ವಜನಿಕರು ಸರಕಾರದ ಈ ನೀತಿಯಲ್ಲಿ ಸಹಕರಿಸುವರೆಂದು ಆತಿಸಿದೆ. ಆಹಾರ ಧಾನ್ಯಗಳ ಸರಬರಾಯಿಯು, ಲಾಭ ಬಡಕತನ, ಕೇಳಕಸಿಯುವ ನೀತಿಯಿಂದ ಕಟ್ಟಾದರೆ ಹಿಂದಿಗಿಂತಾ ಕಠಿಣ ರೀತಿಯಿಂದ ನಿಯಂತ್ರಣವನ್ನು ಜಾರಿಗೆ ತರಲು ಸರಕಾರವು ಹಿಂಜರಿಯದು.

ಬತ್ತ, ಅಕ್ಕಿ, ಗೋಧಿ ಮತ್ತು ರಾಗಿ ಇವುಗಳ ಮೇಲೆ ತಾ. ೧೫-೧೨-೪೭ ರಿಂದ ಹಾಕಿದ ರೇಶನಿಂಗ್ ಪದ್ಧತಿಯು ತಾ. ೧೫-೧೨-೪೮ ರಿಂದ ತೆಗೆದು ಹಾಕಲ್ಪಡುವದು.

ಅಲ್ಪ ಸ್ವಲ್ಪ ಬೆಳೆಸುವವರ ಮತ್ತು ಬೆಳೆಸದವರ ಉಪಯೋಗಕ್ಕಾಗಿ ೨೦೦೦ ಟನ್ನುಗಳಷ್ಟು ಬತ್ತದ ವ್ಯಾಪಕ ನಿಕ್ಷೇಪವನ್ನಿಡಲಾಗುವದು.

ಬೆಳೆಸುವವರೂ, ಕೊಂಡು ಉಪಯೋಗಿಸುವವರೂ ಈಗಿರುವ ರೇಶನಿಂಗ್ ದರದಂತೆ ಒಂದು ವರ್ಷಕ್ಕೆರುವ ಬತ್ತವನ್ನು ಕೇಳಿಸಿಟ್ಟುಕೊಳ್ಳಬಹುದು.

ದೇಶದ ಒಳಗೆ ಆಹಾರ ಧಾನ್ಯಗಳ ವಹಿವಾಟಿಗಿದ್ದ ನಿರ್ಬಂಧವನ್ನು ತೆಗೆದು ಹಾಕಲಾಗುವದು.

ಹೊರಪ್ರಾಂತಗಳಿಗೆ ಅಕ್ಕಿ, ಬತ್ತ, ರಾಗಿ, ಗೋಧಿ ಮೊದಲಾದುವನ್ನು ಸಾಗಿಸುವ ಬಗ್ಗೆ ಇರುವ ನಿರ್ಬಂಧವನ್ನು ಇಡಲಾಗುವದು.

೧೯೪೭ನೇ ಆಹಾರ ಪದಾರ್ಥಗಳ ನಿಯಂತ್ರಣಾಜ್ಞೆಯು ಮೇರೆ ಧಾನ್ಯ ನಿಕ್ಷೇಪ ಇಟ್ಟಿರುವ ಮತ್ತು ನಿಶ್ಚಿತ ಮಿತಿಗಿಂತಾ ಹೆಚ್ಚಿನ ವ್ಯಾಪಾರ ಮಾಡುವವರು ಲೈಸೆನ್ಸು ಪಡೆದು ತಮ್ಮಲ್ಲಿರುವ ಸ್ಟಾಕಿನ ವರದಿ ಒಪ್ಪಿಸಬೇಕು ಎಂಬುದು, ೧೯೪೭ನೇ ಆಹಾರ ಧಾನ್ಯ ಸಂಗ್ರಹ ಪ್ರಾಂತದ ಮತ್ತು ೧೯೪೭ರ ಕೊಡಗು ಆವಶ್ಯಕ ವಸ್ತು ಸರಬರಾಯಿ ಆಜ್ಞೆ ಜಾರಿಯಲ್ಲಿರುವವು.

ಈಗಿರುವ ಎಲ್ಲಾ ಬತ್ತಗಳ ಬೆಲೆಯನ್ನು ಗಾಡಿಗೆ ರೂ. ೧೫೦ ರಂತೆ ಏರಿಸಲಾಗುವದು. ಬೆಳೆಯ, ಕೆಂಬಟ್ಟಿ, ಮುಳ್ಳು ಮೊಗಲಾದುಗಳ ಅಕ್ಕಿ ರೂ ೩೫ಕ್ಕೆ ಸೇರಿಸಲಾಗಿದೆ ಎಂದರಿಯಬಹುದು.

ಮಡಿಕೇರಿ ಕೆ. ಚಂಗಪ್ಪ.
೧೭-೧೨-೪೭. ಚೀಫ್ ಕಮಿಷನರ್.

ಬೆಳ್ಳೂರು

ಹಸನ್ ಸಾಹೇಬರ ಹಸನ್

ಉಂಡೆ ಸಕ್ಕ.

ಸಜ್ಜನರೇ,

ಸುಮಾರು 100 ವರ್ಷಗಳಿಂದ ಪ್ರಖ್ಯಾತಿ ಹೊಂದಿ ಅನೇಕ ಯೋಗ್ಯತಾ ಪತ್ರಗಳನ್ನು ಪಡೆದು ವೈಕೂರು, ಕೊಡಗು ಮತ್ತು ಇಂಡಿಯದ ಬಹು ಭಾಗಗಳಲ್ಲಿ ಮಾರಾಟವಾಗುತ್ತಿರುವ ನಮ್ಮ ಸತ್ಯವು ಒಂದು ತಿಂಗಳಷ್ಟಾದರೂ ಹುಳಿಯೂಗದೆ ಚೀರುಳು ಮತ್ತು ಸುವಾಸನೆಗಳಿಂದೊಡಗೂಡಿ ಮನಸ್ಸಿಗೆ ಆಹ್ಲಾದ ಪಡಿಸುವುದು ಮಾಗಿಗೆ ಸಂಬಂಧ ಪಟ್ಟ ಸೀನಸೆಯೇ ಮೊದಲಾದ ವ್ಯಾಧಿಗಳನ್ನು ಹೋಗಲಾಡಿಸುತ್ತೆ.

ಬೆಲೆ ಸೇರು 1ಕ್ಕೆ (24 ತೋಲೆ) 2-8-0

ಹಾಸಲು ಮತ್ತು ಪ್ಯಾಕಿಂಗ್ ಚಾರ್ಜು ಬೇರೆ. ಧಡಿಯೂ ಮಣ ತರಿಸಿಕೊಂಡರೆ ಹಾಸಲು ಕಡಿಮೆ ಬೀಳುತ್ತದೆ.

ವಿಳಾಸ,

ಹಸನ್ ಸಾಹೇಬ್ ಅಂಡ್ ಸನ್ಸ್,

ನಿಕ್ಕೆದ ವ್ಯಾಪಾರಿಗಳು,

4-4 ಬೆಳ್ಳೂರು ಪೋಷ್ಟು,

ಮಂಡ್ಯ ಡಿ.

ಸಾಯಂಕಾಲ ಸ್ಥಳೀಯ ಕೆಲವು ಉದ್ಯೋಗಸ್ಥರಿಗೆ ಇನ್ಸ್‌ಪೆಕ್ಷನ್ ಬಂಗ್ಲೆಯಲ್ಲಿ ಜುಮ್ ಜುಮ್ ಎನಿಸುವ ಪಾನೀಯದೊಂದಿಗೆ ಗಮಗಮಿಸುವ ಔತಣವಿತ್ತಂತೆ. ಈ ಔತಣವು ಯಾರಿಂದ, ಏತಕ್ಕಾಗಿ ಏರ್ಪಡಿಸಲ್ಪಟ್ಟಿತ್ತೆಂದು ಸಮ್ಮಂದಪಟ್ಟವರು ಪತ್ರಿಕೆಯ ಮೂಲಕ ಜನತೆಗೆ ತಿಳಿಸುವದು ಸೂಕ್ತವಿದೆ. ಬಹುಶಃ ಶಾಲಾ ಉತ್ಸವದ ಖರ್ಚಿನಿಂದ ಮಾಡಿದ್ದರೆ ಬೇಲಿಯೇ ಹೊಲವೇಯಿತು ಎಂಬಂತೆ ಅಧಿಕಾರಿಗಳೇ ಗರೀಬ ರೈತರ ಮಕ್ಕಳಿಂದ ವಸೂಲು ಮಾಡಿದ ಹಣವನ್ನು ತಮ್ಮ ಹಿತಕ್ಕಾಗಿ ಖರ್ಚು ಮಾಡುವದು ಯಾವ ನ್ಯಾಯವೋ ತಿಳಿಯದು. ಇನ್ನೊಂದು ವಿಚಾರ ಸದರಿ ಔತಣಕ್ಕೆ ಕೆಲವು ಉಪಾಧ್ಯಾಯರುಗಳನ್ನು ಸೇರಿಸಿಕೊಂಡಿಲ್ಲವಂತೆ. ಹೈಸ್ಕೂಲು ಉಪಾಧ್ಯಾಯರುಗಳಲ್ಲಿ, ಆಶಾಲೆಯ ಎಲ್ಲಾ ಉಪಾಧ್ಯಾಯರುಗಳಿಗನ್ವಾದರೂ ಸೇರಿಸಿಕೊಳ್ಳದಿರಲು ಕಾರಣವೇನು? ಬಹುಶಃ ಪಾರ್ಟಿಯ ತತ್ವದ ಮೇಲೆ ನಡೆದಿರಬಹುದೇ? ಹಾಗಿದ್ದರೆ ಪಾರ್ಟಿಪಂಗಡಗಳನ್ನು ಕಟ್ಟಿಕೊಂಡಿರುವ ಉಪಾಧ್ಯಾಯರುಗಳಿಂದ ಶಿಕ್ಷಣ ಪಡೆದ ಮಕ್ಕಳು ಮುಂದಿನ ಪಾಡೇನಾದೀತೆಂಬ ಯೋಚನೆಯೇ ಊಹಿಸಲಿ.

ಸದರಿ ದಿನ ಅಧ್ಯಕ್ಷರಾಗಿದ್ದ ವಿದ್ಯಾಧಿಕಾರಿಯವರು ಭಾಷಣ ಮಾಡುವಾಗ 'ಈಗ ಜನರ ಕೈಯ್ಯಲ್ಲಿ ದುಡ್ಡಿರುವದರಿಂದ ಹುಡುಗರನ್ನು ಹೆಚ್ಚಾಗಿ ಕಳುಹಿಸುತ್ತಿರುವರು. ಇನ್ನು ಕೆಲವು ವರ್ಷಗಳಲ್ಲಿ ದುಡ್ಡಿನ ಅಡಚಣೆ ಬಂದಾಗ ಹುಡುಗರು ಕಡಿಮೆಯಾಗುವ ಸಂಭವವಿರುವದರಿಂದ ಶಾಲಾ ಬಡಾವಣೆಯು ಅವಶ್ಯವಿಲ್ಲ'ವೆಂದು ಹೇಳಿದರಂತೆ. ಇದು ನಿಜವಿದ್ದರೆ ಇಂಥ ಭವಿಷ್ಯ ನುಡಿಯಲು ಯಾವ ಕಾಲೇಜಿನಲ್ಲಿ ಜ್ಯೋತಿಷ್ಯದಲ್ಲಿ ಪಾಸಾದರೋ ತಿಳಿಯದು. ಒಂದೆರಡು ವರ್ಷಗಳಲ್ಲಿ ಇವರ ಅಭಿಪ್ರಾಯವನ್ನು ಬುಡಮೇಲು ಮಾಡಲು ಇಲ್ಲಿಯ ಜನತೆಯು ಮರೆಯಲಾರದು. ಇಂಥ ಅಧಿಕಾರಿಯವರೇ ಹಿಂದೊಮ್ಮೆ ಸೋಮವಾರಪೇಟೆ ನಾಡಿನವರಿಗೆ ವಿದ್ಯೆಯು ಮೇಲೆ ಅಭಿರುಚಿ ಇಲ್ಲ. ಪ್ರೈಮರಿ ಶಾಲೆಯನ್ನು ಹೈಯರ್ ಎಲಿಮೆಂಟರಿ ಶಾಲೆಯಾಗಿ ಮೂರ್ಪಡಿಸುವದು ಅವಶ್ಯವಿಲ್ಲವೆಂದು ಹೇಳಿದ್ದರು. ಈಗ ಈ ಶಾಲೆಯಲ್ಲಿರುವ ೬೦೦ ಹುಡುಗರನ್ನು ಕೂರಲು ಸ್ಥಳ ಮತ್ತು ಬೇಂಚುಗಳನ್ನು ಒದಗಿಸಿಕೊಡಲು ಸರಕಾರಕ್ಕೆ ಸಾಧ್ಯವಾಗಿಲ್ಲವೆಂದು ತಿಳಿದರೆ ಅಧಿಕಾರಿಗಳು ಹೇಳುವ ಅಭಿಪ್ರಾಯಕ್ಕೆ ಎಷ್ಟರ ಮಟ್ಟಿನ ಬೆಲೆ ಇದೆ ಎಂದು ವೇದ್ಯವಾಗುವದು. ಜಾತಿ ಭೇದ, ಪಂಗಡಭೇದವಿಲ್ಲದೆ ಸಕಲರೂ ತನ್ನವರೆಂದು ತಿಳಿದ ಇಲ್ಲಿಯ ಹೈಸ್ಕೂಲ್ ಹೆಡ್‌ಮಾಸ್ಟರವರ ಅವಿಶ್ರಾಂತ ಶ್ರಮದ ಫಲದಿಂದ ಹಾಲಿ ವರ್ಷ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಇಡೀ ಮದ್ರಾಸು ಅಧಿಪತ್ಯದಲ್ಲಿ ಪ್ರಥಮ ಸ್ಥಾನಪಡೆದಿರುವದೇ ಅಧಿಕಾರಿಗಳಿಗೆ ತಕ್ಕ ಜವಾಬಾಗಿರುವದು.

ಈಗ ಕೆಲವು ದಿನಸಗಳ ಹಿಂದೆ ಈ ಶಾಲೆಯ ಒಬ್ಬ ಉಪಾಧ್ಯಾಯರು ಹೆಡ್ಡ್ ಮಾಸ್ಟರು ಮತ್ತು ಇತರ ಮಾಸ್ಟರುಗಳ ಎದುರಿನಲ್ಲಿ ಸ್ಥಳೀಯ ಒಬ್ಬ ಉಪಾಧ್ಯಾಯಿನಿಯರನ್ನು ಹೀಯಾಳಿಸಿ ಮನಸ್ಸೋ ಇಚ್ಛೆ ಅಲ್ಲಗಳೆದರಂತೆ. ಹೆಡ್‌ಮಾಸ್ಟರು ಖುದ್ದಾ ಇದ್ದುಕೊಂಡು ಇದಕ್ಕೆ ಹೇಗೆ ಅವಕಾಶ ಕೊಟ್ಟರೋ ತಿಳಿಯದು. ಇದು ನೋಡಲಾಗಿ ಕೋಪುವಾರು ಭಿನ್ನಭೇದವನ್ನುಟ್ಟುಕೊಂಡಿಲ್ಲವೆಂದು ಯಾರು ತಾನೇ ಹೇಳುವರು. ಇಂಥ ಅನಾಹುತಗಳು ನಡೆಯುತ್ತಿದ್ದರೂ ಸಹ ಸರಕಾರದವರು ಜನರ ಕೂಗಿಗೆ ಬೆಲೆ ಕೊಡದಿರುವದು ನೋಡಿದರೆ ಜನತೆಯು ಎಷ್ಟು ಕಾಲ ಸಹಿಸಿಕೊಂಡಿರಬಹುದೆಂದು ಸರಕಾರದವರೇ ಊಹಿಸಲಿ. ಹಾಗೂ ಜನರಲ್ಲಿ ಉಂಟಾಗಿರುವ ಅಸಮಧಾನವನ್ನು ಮುಂದಕ್ಕೆ ಬೆಳೆಯಗೊಡದಂತೆ ದಯಾಳು ಚೇರ್‌ಮ್ಯಾನ್ ಕಮಿಷನರವರು ಜನರ ಕೇಳಿಕೆಯನ್ನು ಕೂಡ್ಲಿ ನಿವಾರಿಸಲು ಮರಿಯಬಾರದಾಗಿ ನನ್ನ ಅಪ್ಪಿಲು.

ಪಟ್ಟಣಿಗ.

ಕುಣಿತಕ್ಕೆ ತಕ್ಕ ತಾಳವೇ?

ಒಂದು ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ನಡೆದ ವಿದ್ಯಾರ್ಥಿಗಳ ಮುಸ್ಕರದ ಸಂಬಂಧವಾಗಿ ತಾ. ೨೪-೧೧-೪೭ರ 'ಕೊಡಗು' ಪತ್ರಿಕೆಯಲ್ಲಿದ್ದ ಟೋಲೇಗೌಡನ ಚರದಿಗೆ ಉತ್ತರವಾಗಿ ತಾರೀಕು ೧೯-೧೧-೪೭ರ 'ಜನ್ಮಭೂಮಿ' ಪತ್ರಿಕೆಯಲ್ಲಿರುವ ಲೇಖನವನ್ನು ಓದಿ ಚಕಿತನಾದೆನು. ನಾನು ಒಬ್ಬ ಪೋಷಕನಾಗಿರುವುದರಿಂದ ನಿಜಾಂಶಗಳೆಲ್ಲ ನನಗೆ ಗೊತ್ತಿದ್ದಾಗ್ಯೂ, ನಿಮ್ಮ ಆ ಲೇಖನಕ್ಕೆ ಕಾರಣವಾದರೂ, ಏನಿರಬಹುದೆಂದು ಕೆಲವರಲ್ಲಿ ವಿಚಾರಿಸಿದೆನು. 'ಕಂಡದ್ದು ಹೇಳಿದರೆ ಕೆಂಡದಂತ ಕೋಪ' ಎಂಬ ನಾಣ್ನುಡಿಗೆ ತಕ್ಕಂತೆ ಉಪಾಧ್ಯಾಯರ ತಾಪವು ವಿರುವುದು ಸಹಜ. ಆದರೆ ಸಂಬಂಧ ಪಟ್ಟವರು ನಿನ್ನನ್ನು ಮರೆಹೊಕ್ಕಿದ ಪಾತ್ರಕ್ಕೆ ಆವರು ಬರೆದ ಒಂದು ಲೇಖನಕ್ಕೆ ಪುರದ ಹಿಸವನ್ನು ಬಯಸುವಂಥ ನೀವು ಸಹಿರುವುದು ಘರ್ಮವೆ-? ಅಷ್ಟೇಕೆ ಪಾಪ ಸಹಿ ಹಾಕಿದರೂ ನಿಮ್ಮ ಪೇರಿನ ಸಂಶಯದಿಂದಲೋ ಏನೋ ಆವರೇ ಖುದ್ದು ಲೇಖನವನ್ನು ರಚಿಸಿಕೊಂಡು ಹೋದರೆಂದು ಕೇಜಾಂನ ತಿಳಿಯುತ್ತೇನೆ. ಮುಸ್ಕರದ ದಿವಸ ನೀವೇ ಹುಡುಗರ ಪರವಾಗಿ ಉಧ್ಯಾಪಕರ ವರ್ತನೆ ಸರಿಯಿಲ್ಲವೆಂದು ಊಾನಲ್ಲೆಲ್ಲಾ ಹೇಳಿದವರು. ಈಗ ಆವರು ನಿಮ್ಮ ಆಶ್ರಯ ಬಯಸಿದರೆಂದು ಆವರ ಕುಣಿತಕ್ಕೆ ತಾಳ ಹಾಕಲು ಹೊರಟಿರುವುದು ಶೋಚನೀಯವಾದರೂ ವಿಶೇಷವಾದದ್ದಲ್ಲ. ಏಕೆಂದರೆ ಗ್ರಾಮದ ಪ್ರಭಿ ಒಂದು ಕಾರ್ಯಗಳಲ್ಲೂ ನಿಮ್ಮ ಪಾತ್ರವು ಇತರ ಪ್ರತಿಬಿಂಬವಾಗಿರುತ್ತೆ. 'ಆಪ ಪ್ರಜಾಕರರು ಬೋರೇಗೌಡನ ಸ್ನೇಹಿತರು. ವರದಿಯನ್ನು ಕೊಟ್ಟವರು ತಿಳಿಗೇ ತಿಗಳು' ಎಂದು ನಿಮ್ಮಂಧಾವರು ತೀಕಿಸಿದ ಮಾತ್ರಕ್ಕೆ ಜನರು ಏನೇಕ ಶೂನ್ಯರಾಗುವುದಿಲ್ಲ. ಲೇಖನವನ್ನು ಬರೆದವರ್ಯಾರು, ಬರೆಯಲು ಕಾರಣವೇನು ಎಂಬೀ ವಿಷಯಗಳನ್ನು ಗಣಕಿಗೆ ತೆಗೆದುಕೊಂಡು, ಇತ್ತೀಚೆಗೆ ನಿಮ್ಮ ಕೀರ್ತಿಯು ಇಮ್ಮಡಿಯಾಗುತ್ತಿರುವ ಕಾರಣಗಳನ್ನೂ ದೃಷ್ಟಿಯಲ್ಲಿಟ್ಟು ವಿಮರ್ಶಾಪರರಾಗುತ್ತಾರೆ. 'ಅಂಗೈಯಲ್ಲಿರುವ ಹುಣ್ಣಿಗೆ ಕನ್ನಡಿ ಬೇಕೆ' ಎನ್ನುವ ಹಾಗೇ ಲೇಖನಗಳ ನಿಜಾಂಶವನ್ನೂ ಪುನಃ ಜರ್ಜಿಸಬೇಕಾದ ಅವಶ್ಯಕತೆ ನನಗೆ ಕಾಣುವುದಿಲ್ಲ.

ಮುಸ್ಕರ ನಡೆದಂದೀಜೆಗೆ ಒಂದು ವಿದ್ಯಾರ್ಥಿನಿಯು ಶಾಲೆಗೆ ಬರುವುದನ್ನೇ ನಿಲ್ಲಿಸಿರುವುದು ಉಪಾಧ್ಯಾಯರ ಪಾಶವೀ ನೀತಿಯನ್ನು ಎತ್ತಿ ತೋರಿಸುತ್ತದೆ. ಸಂಬಂಧ ಪಟ್ಟ ಅಧಿಕಾರಿಗಳು ವಿಚಾರಣೆ ನಡೆಸಿ, ಇಂಥಾ ದುರ್ಘಟನೆಗಳಿಗೆ ಪುನಃ ಅವಕಾಶವಿಲ್ಲದಂತೆ ಮಾಡುವರಾಗಿ ಆಶಿಸುತ್ತೇನೆ. 'ಪೋಷಕ'

ಕೊಡಗು ಪ್ರಗತಿಪರ ಸಾಹಿತ್ಯ ಸಂಘ.

ಕೊಡಗು ಪ್ರಗತಿಪರ ಸಾಹಿತ್ಯ ಸಂಘದ ಉದ್ಘಾಟನಾ ಸಮಾರಂಭವು ಇದೇ ತಾ ೬-೧೨-೪೭ನೇ ಶನಿವಾರ ಮಡಿಕೇರಿ ಸಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ವಿ. ಬ. ಕೆ. ಚಂಗಪ್ಪ ಸಿ. ಐ. ಡಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದನಂತರ ಸಂಘದ ಪೋಷಕರಾದ ರಾ. ಬ. ಕೆ. ಬಿ. ಉಕ್ಕಪ್ಪನವರು ಸ್ವಾಗತ ಭಾಷಣವನ್ನು ಮಾಡುತ್ತಾ ಹೀಗೆ ಹೇಳಿದರು.

ಸ್ವಾಗತ ಭಾಷಣ:—ವಿಪುಲ ಭಾರತ ಪ್ರಗತಿಪರ ಸಾಹಿತ್ಯ ಸಂಘದ ಮೇಲ್ಪಂಕ್ತಿಯನ್ನು ಅನುಸರಿಸಿ ಕೊಡಗಿನಲ್ಲೂ ಕನ್ನಡ, ಹಿಂದಿ, ಉರ್ದೂ, ಇಂಗ್ಲಿಷ್ ಮೊದಲಾದ ಭಾಷೆಗಳ ಸೇವೆಯನ್ನು ಮಾಡುವ ಸಲುವಾಗಿ ಈ ಸಂಘವನ್ನು ಸ್ಥಾಪಿಸಲಾಯಿತು. ಎಲ್ಲ ಸಾಹಿತ್ಯಗಳಲ್ಲಿರುವ ಸಾರವನ್ನು ಜನಸಾಮಾನ್ಯರಿಗೆ ತಿಳಿಯಪಡಿಸಿ ಆ ಮೂಲಕ ಭಾಷಾ ಸೇವೆಯನ್ನು ಮಾಡಿಸುವ ಧ್ಯೇಯವು ಈ ಸಂಘದಲ್ಲಿದೆ. ಪದ್ಯವೆಲ್ಲಿಯೇ ಲೇಖನ, ಜೀವನ, ಕಥೆ ಇತ್ಯಾದಿಗಳನ್ನು ಬರೆಯುವ ಅಭಿರುಚಿ ಇರುವವರನ್ನು ಪ್ರೋತ್ಸಾಹಿಸಲು ಒಂದು ಮಾಸ ಪತ್ರಿಕೆಯನ್ನು ಹೊರಡಿಸುವೆವು. ಇಲ್ಲದ ನಾಟಕ, ಸಂಗೀತ ಮೊದಲಾದ ಕಲೆಯನ್ನು ಜೀರ್ಜಿತ ಸ್ಥಿತಿಗೆ ತರುವ, ಆಗಿಂದಾಗ್ಗೆ ಭಾಷಣ ಇತ್ಯಾದಿಗಳನ್ನು ವಿಚಾರಿಸುವ, ಪುಸ್ತಕಗಳನ್ನು ಪ್ರಕಾಶಿಸುವ ಕೆಲಸವನ್ನೂ ಕೈಗೊಂಡಿದ್ದೇವೆ. ನೂರು ರೂಪಾಯಿಗಳಿಗೆ ಮೇಲ್ಪಟ್ಟು ಕೊಡುವವರು ಜೀವಾವಧಿ ಸದಸ್ಯರಾಗುವರು. ಈಗಾಗಲೇ ನಮಗೆ ತಕ್ಕಷ್ಟು ಪ್ರೋತ್ಸಾಹವು ಸಾರ್ವಜನಿಕರಿಂದ ದೊರಕಿದೆ. ಈ ಸಂಘದಲ್ಲಿ ಭಾಷಾ ಭೇದವಾಗಲೀ ಮತ ಭೇದವಾಗಲೀ ಇಲ್ಲ. ಇಂಗ್ಲಿಷ್ ಸಾಹಿತ್ಯದ ರಸವನ್ನು ಸವಿಯುವ ಉದ್ದೇಶದಿಂದ ಇಂಗ್ಲಿಷನ್ನೂ ಸೇರಿಸಿದೆವು. ಅದು ನನ್ನ ಅಧಿಕಾರವಾಣಿಯಾಗಿರುವುದು ಸೂತ್ರ ಬೇಡ".

ಅನಂತರ ಸಂಘದ ಪ್ರೆಸಿಡೆಂಟರಾದ ವಿದ್ವಾನ್ ಜಿ. ಪಾ. ಮುಕ್ತಣ್ಣನವರು ಆ ದಿನದ ಸಭೆಗೆ ಕಳುಹಿಸಿದ ಸಂದೇಶ ಪತ್ರಗಳನ್ನು ಓದಿದರು. ಶ್ರೀಗಳಾದ ದಿ. ಬ. ಕೆ. ಚಂಗಪ್ಪ, ಸಿ. ಎಂ. ರಾಮರಾವ್, ರಾ. ಸಾ. ಎಸ್. ಸಿ. ಸುಬ್ಬಯ್ಯ, ರಾ. ಬ. ಕೆ ಜಿ. ಬೆಳ್ಳಪ್ಪ, ಬಿ. ಎಸ್. ಕುಶಾಲಪ್ಪ, ಶಿವರಾಮಕಾರಂತ, ಆ. ನ. ಕೃಷ್ಣರಾವ್, ಪಿ. ಅಪ್ಪಯ್ಯ ಮತ್ತು ಸರ್. ಆರ್. ಕೆ. ಷಣ್ಮುಖಂ ಚೆಟ್ಟಿಯವರು ಸಂಘವನ್ನು ಅಭಿನಂದಿಸಿ ಪತ್ರಗಳನ್ನು ಕಳುಹಿಸಿದ್ದರು. ಅನಂತರ ಅಧ್ಯಕ್ಷರು ತಮ್ಮ ಭಾಷಣವನ್ನು ಮಾಡಿದರು.

ಅಧ್ಯಕ್ಷರ ಭಾಷಣ:—ನಾನು ಇಂಗ್ಲಿಷ್‌ನಲ್ಲಿಯೇ ಮಾತಾಡುತ್ತೇನೆ. ದಯವಿಟ್ಟು ಕ್ಷಮಿಸಿ. ಸಾರ್ವಜನಿಕ ಜೀವನ ಸ್ಥಿತಿಯು ಬಹು ಮಟ್ಟಿಗೆ ಕೆಟ್ಟು ಹೋಗಿದೆ ಸಂಕೀರ್ಣ ಅಭಿಪ್ರಾಯಗಳು ಬಹು ಮುಖವಾಗಿ ವೈಪರೀತ್ಯವನ್ನು ಹೆಚ್ಚಿಸುತ್ತಿವೆ. ನಾನು ಅನೇಕ ವಿಧದ ಆರೋಪಣೆಗಳಿಗೂ ಗುರಿಯಾಗಿರುವೆನು.

ಕೆಲವು ವರ್ಷಗಳಿಂದ ನಾವು ಕನ್ನಡವನ್ನು ಅಲಕ್ಷಿಸುತಿದ್ದೆವು. ನಾನು ವಿಶ್ವವಿದ್ಯಾಲಯದಲ್ಲಿ ಕನ್ನಡ ವ್ಯಾಸಂಗವನ್ನು ಮಾಡಿದವನು. ಆದರೂ ಈಗ ನನಗೆ ಕನ್ನಡವನ್ನು ಓದಲು ತೊಡಕುಂಟಾಗಿದೆ. ಇಲ್ಲಿ ಒಂದು ಕರ್ನಾಟಕ ಸಂಘ ಇದೆಯೆಂಬುದಾಗಿ ನನಗೆ ತಿಳಿಯಪಡಿಸಿದ್ದಾರೆ. ಹಲವು ಭಾಷೆಗಳ ಪ್ರಗತಿಗಾಗಿ ದುಡಿಯುವ ಈ ಸಂಸ್ಥೆ ಬಾಗೂ ಇಲ್ಲಿ ಇರುವ ಇನ್ನಿತರ ಸಂಘಗಳನ್ನು ಒಂದುಮಾಡಿ ಆ ರೀತಿಯಲ್ಲಿ ಕೆಲಸ ಮಾಡುವಂತೆ ಸಾಧಿಸುವುದಕ್ಕಾಗಿ ಒಂದು ಚಿಕ್ಕ ಸಮಿತಿಯನ್ನು ನಿರ್ಮಿಸುವುದು ಹಿತವೆಂದು ನಾನು ಅಭಿಪ್ರಾಯ ಪಡುತ್ತೇನೆ. ಈ ಸಂಘವು ಒಂದು ಮಾಸಪತ್ರಿಕೆಯನ್ನು ಹೊರಡಿಸುವುದೆಂದು ತಿಳಿದೆನು. ಅದು ಯೋಗ್ಯವಾದ ಸಲಹೆಯೇ ಆಗಿದೆ. ಯಾವ ಕೆಲಸವೇ ಆಗಲಿ, ರಾಜಕೀಯವನ್ನು ಬಹುದೂರದಲ್ಲಿಡಬೇಕು. ಇಲ್ಲದಿದ್ದರೆ ಅಭಿಪ್ರಾಯ ಭೇದಗಳು ಬಂದೇ ಬರುತ್ತವೆ. ಆ ಸಂದರ್ಭದಲ್ಲಿ ಸಂಸ್ಥೆಯ ಅಭಿವೃದ್ಧಿಗೆ ಭಂಗ ಬರುವುದು ಖಂಡಿತವಾಗಿದೆ. ಕೊಡಗು ಅನೇಕ ಸಂಘಗಳನ್ನು ಸ್ಥಾಪಿಸುವುದರಲ್ಲಿ ಮಾತ್ರ ಕೀರ್ತಿಯನ್ನು ಪಡೆದಿದೆ. ಒಂದು ಸ್ವಿರ್ವಾದ ಕ್ರಮದಲ್ಲಿ ಕೆಲಸಮಾಡಿ ಧ್ಯೇಯವನ್ನು ಸಾಧಿಸಿದ್ದು ಮಾತ್ರ ಕಡಿಮೆಯಾಗಿದೆ. ಕಡೇದಾಗಿ ಈ ಸಾಹಿತ್ಯ ಸಂಸ್ಥೆಗೆ ನನ್ನ ಪೂರ್ಣ ಸಹಕಾರವೂ ಸಹಾನುಭೂತಿಯೂ ಇದೆ. ಈ ಯೋಗ್ಯವಾದ ಯೋಜನೆಯು ತಣ್ಣಗಾಗದೆ ನಿರಂತರ ಶ್ರಮವಿಸಿ ಫಲಕಾರಿಯಾಗಲಿ' ಎಂದು ಹೇಳಿ ಭಾಷಣವನ್ನು ಕೊನೆಗಾಣಿಸಿದರು.

ಅನಂತರ ಶ್ರೀ ಕೋಟೆರ ಮೇದಪ್ಪನವರು ಸಂಗೀತ ಹಾಡಿದರು. ಶ್ರೀ ಬಿ. ಎಸ್. ಕುಶಾಲಪ್ಪನವರು ಇಂಗ್ಲಿಷ್ ಭಾಷೆಯ ಮಹತ್ವದ ವಿಚಾರವಾಗಿಯೂ, ಮಂಗಳೂರಿನ ಶ್ರೀ ಎಂ. ವಿ. ಪ್ರಭು ಇವರು ಹಿಂದೀ ಭಾಷೆಯ ಲೋಕ ಪ್ರೀಯತೆಯ ವಿಷಯವೂ, ವಿದ್ವಾನ್ ಬಿ. ಶಂಕರ ಭಟ್ಟರು ಕನ್ನಡ ಭಾಷೆಯ ಏಳಿಗೆಯನ್ನು ಕುರಿತೂ, ಖಾನ್ ಬಹದ್ದೂರ್ ಅಬ್ದುಲ್ ರಹಮಾನ್

ಪತ್ರವ್ಯವಹಾರಗಳು

ಕೊಡ್ಲೂರು ಹೊಸ ಶಾಲಾ ಕಟ್ಟಡ ತೆರೆದ ಸಮಾರಂಭ.

ತಾ. ೩-೧೨-೪೭ರಲ್ಲು ಬೇಳ್ಳಿ ಕಮಿಷನರ್‌ರವರು ನೇಲಿನ ಹೊಸ ಶಾಲಾ ಕಟ್ಟಡವನ್ನು ತೆರೆದರು. ಆ ಸಮಯದಲ್ಲಿ ಸದ್ರಿ ಕಟ್ಟಡದ ನಿಧಿ ಪ್ರೆಸಿಡೆಂಟರು ಶ್ರೀ ಕೋರನ ಯಂ. ದೇವಯ್ಯ, ಯಂ. ಎಲ್. ಸಿ. ಇವರು ಒಂದು ರಿಪೋರ್ಟನ್ನು ತಯಾರುಮಾಡಿ ಶ್ರೀ ಚೌರಿರ ಎ. ಮಂದಂಣನವರಿಂದ (ಲಾಯರ್) ಓದಿಸಿದರು.

ಆ ರಿಪೋರ್ಟಿನಲ್ಲಿ ನವಮಾದಿಸಿರುವ ಅನೇಕ ಸಂಗತಿಗಳು ಪೂರಾ ಸುಳ್ಳಾಗಿವೆ. ಸದ್ರಿ ರಿಪೋರ್ಟನ್ನು ತಯಾರುಮಾಡಿ ಓದುವುದಕ್ಕೆ ನೆಂದಲು ಆ ಹೊಸ ಶಾಲಾ ಕಟ್ಟಡದ ನಿಧಿಯ ಇತರ ಕಮಿಟಿಗಳಾದ ಯಾ ಮಹಾಸೀಯರಿಗೆ ಓದಿ ಹೇಳಿ ಅವರ ಒಪ್ಪಿಗೆ ತೆಗೆಬರುವುದಿಲ್ಲ. ಇದರಿಂದ ಏನು ತಿಳಿಯುತ್ತೆ ಎಂದರೆ ಪ್ರೆಸಿಡೆಂಟ್ ದೇವಯ್ಯನವರು ತನ್ನ ಮನಬಂದಂತೆ ಸುಳ್ಳು ರಿಪೋರ್ಟನ್ನು ತಯಾರುಮಾಡಿ ಅಧ್ಯಕ್ಷರಿಗೂ ಮತ್ತು ಅಲ್ಲಿ ನೆರೆದಿದ್ದ ಇತರ ಮಹಾನೀಯರುಗಳಿಗೂ ಎಂದರೆ ಹೊರಗಿನಿಂದ ಬಂದವರಿಗೆ ಮಂದಟ್ಟು ಮಾಡಿದ್ದು ತುಂಬಾ ಶೋಚನೀಯವೆ ಸರಿ.

ಸುಳ್ಳು ರಿಪೋರ್ಟು ಈ ಕೆಳಗಿನಂತಿದೆ.

(೧) ಹೊಸ ಶಾಲಾ ಕಟ್ಟಡಕ್ಕೆ ಶ್ರೀ ತೆಕ್ಕಡ ಆನಂದಯ್ಯನವರು ರೂ. ೧೦೦೦ ಕೊಟ್ಟರೆಂದು ಓದಿರುವರು ಆದರೆ ನಿಜಕ್ಕು ಶ್ರೀ ಆನಂದಯ್ಯನವರು ಉಚಿತಾರ್ಥವಾಗಿ ಕೊಟ್ಟದ್ದು ರೂ. ೩೦೦ ಮಾತ್ರ. ಉಳಿದ ರೂ. ೭೦೦ ಹಳೇ ಶಾಲಾ ಕಟ್ಟಡವನ್ನು ಶುದ್ಧಿಕ್ರಯಕ್ಕೆ ಪಹಿಸಿ ಕೊಂಡದ್ದಾಗಿದೆ.

(೨) ಶ್ರೀ ಆನಂದಯ್ಯನವರು ಆ ದಿನ ನೆರೆದ ಮಹಿಳೆ ಮಹನೀಯರಿಗೆ ಊಟದ ವಿಷಾರಿಡು ಮಾಡಿರುವರೆಂದು ಓದಿದರು. ಇದರ ಸತ್ಯಾಂಶವೇನೆಂದರೆ, ಗ್ರಾಮಜ್ಜಲ್ಲಿ ೫ ವಯಸ್ಸಿನ ಮೇಲ್ಪಟ್ಟವರಿಗೆ ೩ ಸೇರು ಅಕ್ಕಿ ಮತ್ತು ೮ ಆಣೆ ದುಡ್ಡು ತಲೆ ಒಂದರ ಮಹೂಲು ಮಾಡಿರುವರು. ಸುಮಾರು ರೂ. ೧೫೦ ಮತ್ತು ೧೫೦ ಸೇರಿ ಅಕ್ಕಿ ಜಮೆಯಾಗಿದೆ. ಈ ವಿಷಯ ರಿಪೋರ್ಟಿನಲ್ಲಿ ಓದಿರುವುದಿಲ್ಲ.

(೩) ಶಾಲಾ ಕಟ್ಟಡದ ನಿಧಿ ಕಮಿಟಿ ೯ ಜನ ಪೈಕಿ ೮ ಜನರು ಹಗಲು, ರಾತ್ರಿ, ಚೆನ್ನಾಗಿ ದುಡಿದಿರುವರು. ಆದರೆ ರಿಪೋರ್ಟಿನಲ್ಲಿ ಶ್ರೀ ದೇವಯ್ಯನವರು ಮತ್ತು ಕಮಿಟಿ ಮೆಂಬರಾದ ಶ್ರೀ ಮುಂಡೋಟರ ಬೆಳ್ಯಪ್ಪನವರು ಮಾತ್ರ ಶ್ರದ್ಧೆ ವಹಿಸಿದೆಂದು ಓದಿದರು. ಇದು ತುಂಬಾ ವ್ಯಸನಕರ.

(೪) ಹೊಸ ಶಾಲಾಕಟ್ಟಡಕ್ಕೆ ಸುಮಾರು ರೂ. ೫೦೦೦ ಖರ್ಚಾಗಿದೆಯೆಂದು ಓದಿದರು. ಶ್ರೀ ಆನಂದಯ್ಯನವರ ಕಂತ ಉಚಿತಾರ್ಥ ರೂ. ೩೦೦ ಗಳು ಮತ್ತು ಹಳೇ ಶಾಲಾ ಕಟ್ಟಡದ ಸಾಲ್ಯ ರೂ. ೭೦೦ ಗಳು ಸೇರಿ ರೂ. ೧೦೦೦ ಆದರೆ ಉಳಿದ ರೂ. ೪೦೦೦ ಯಾರ್ಯಾರಿಂದ ಎಂದು ಓದಿರುವುದಿಲ್ಲ. ಇದು ಪೂರಾ ಅನ್ಯಾಯ.

ಇಬೆಲ್ಲ ನೋಡುವಾಗ ಪ್ರೆಸಿಡೆಂಟ್ ದೇವಯ್ಯನವರು ತನಗೂ ಮತ್ತು ತನ್ನ ಸೋದರ ಮಾವನಾದ ಶ್ರೀ ಆನಂದಯ್ಯನವರಿಗೂ ಮಾತ್ರ ಹೆಸರು ಬರಬೇಕೆಂಬ ಮಾಡಿದ ಕುಯುಕ್ತಿ ಅಲ್ಲದೆ ಬೇರೆ ಏನೂ ಅಲ್ಲ. ಈಗ ದೇವಯ್ಯನವರಿಗೆ ದೊಡ್ಡ ಬೋರೆ ಗೌಡನೆಂಬ ಬಿರುದು ಮತ್ತು ಆವರ ಸೋದರ ಮಾವನಾದ ಆನಂದಯ್ಯನವರಿಗೆ ದಾನಶೂರ ಕರ್ಣನೆಂಬ ಕೀರ್ತಿಯೂ ಬಂದಾಂತಾಯಿತು. ಪಾಪ ಹ್ಯಾಗೂ ಇರಲಿ

ಈಗ ನಾವು ಗ್ರಾಮಸ್ಥರು ಇನ್ನು ಮುಂದಕ್ಕೆ ಮಾಡ ಬೇಕಾದ ಕೆಲಸವೇನೆಂದರೆ, ಶ್ರೀ ಆನಂದಯ್ಯನವರು ನಿಜವಾಗಿ ಹೊಸ ಶಾಲಾ ಕಟ್ಟಡಕ್ಕೆ ರೂ. ೧೦೦೦ ಉಚಿತಾರ್ಥ ಕೊಟ್ಟದ್ದು ಪೌದಾದರೆ, ಬಿಹಳೇ ಶಾಲಾ ಕಟ್ಟಡವನ್ನು ಇನ್ಯಾರಿಗಾದರೂ ಬೇಗನೆ ಪೂರಾಟ ಮಾಡುವ ವಿಚಾರಾಡು ಮಾಡುವುದು ಉಚಿತವಾಗಿದೆ.

ಶ್ರೀ ದೇವಯ್ಯನವರು ಡಿ. ಬೋ. ಮೆಂಬರು ಸಹ ಆಗಿದ್ದಾರೆ ಇಂಥವರು ಗ್ರಾಮದಲ್ಲಿ ಒಡಕು ತರಬಾರದು ಆದ್ದರಿಂದ ಇನ್ನು ಮುಂದಕ್ಕೆ ಈ ದೇವಯ್ಯನವರ ವಿಷಯದಲ್ಲಿ ಎಲ್ಲರು ಎಲ್ಲಾ ಕಾಲದಲ್ಲಿ ಬಹಳ ಎಚ್ಚರಿಕೆಯಿಂದ ವರ್ತಿಸಬೇಕಾಗಿ ನನ್ನ ವಿನಂತಿ. ಸದ್ಯಕ್ಕೆ ಈ ಬಾತ್ಮಿಯನ್ನು ಇಲ್ಲಿಗೆ ಅಂತ್ಯ ಗೊಳಿಸುವೆನು. ಇದಕ್ಕೆ ಎಲ್ಲಿಯಾದರು ದೇವಯ್ಯನವರ ಜವಾಬು ಪತ್ರಿಕೆ ಮೂಲಕ ಬಂದರೆ ಆದಕ್ಕೆ ಸರಿಯಾದ ಜವಾಬು ಕೊಡಲು ತಯಾರಾಗಿರುವೆನು.

"ಗ್ರಾಮಸ್ಥ"

ಸೋಮವಾರಪೇಟೆ ಸ್ಕೂಲ್ ಡೇ

ಕಳೆದ ಕೌನ್ಸಿಲಿನಲ್ಲಿ ಕೇಳಿದ ಪ್ರಶ್ನೆಗಳ ಫಲದಿಂದಲೋ ಏನೋ ಕಳೆದ ಮೂರು ವರ್ಷಗಳಿಂದ ನಡೆಯದ ಸೋಮವಾರಪೇಟೆ ಹೈಯರ್ ಎಲಿಮೆಂಟರಿ ಶಾಲೆಯ ಉತ್ಸವವು ತಾರೀಕು ೧೬-೧೧-೪೭ ರಲ್ಲು ಆತುರದಿಂದ ನಡೆಸಲ್ಪಟ್ಟಿತು. ಸದರಿ ದಿನ ಮಧ್ಯಾಹ್ನ ೩ ಗಂಟೆಗೆ ವಿದ್ಯಾಧಿಕಾರಿಯವರನ್ನು ವಾದ್ಯ ಮತ್ತು ದುಡಿಕೊಟ್ಟು ಸನೇತ ಶಾಲೆಯ ಬಾಲ, ಬಾಲಕಿಯರು ಕೊಡಗೊಂಡು ಮಾರ್ಕೆಟ್ ಬಳಿಯಿಂದ ಪೇಟೆಬೀದಿಗಾಗಿ ಮೆರವಣಿಗೆಯಿಂದ ಶಾಲೆಗೆ ಕರೆದೊಯ್ಯಲಾಯಿತು. ಆದರೆ ವಿದ್ಯಾಧಿಕಾರಿಯವರು ಬರುವ ವರೆಗೆ ಒಂದುಗಂಟೆಗಿಂತ ಜಾಸ್ತಿ ಎಳೆ ಬಾಲಬಾಲಕಿಯರನ್ನು ಮಾರ್ಗದಲ್ಲಿ ಉರಿಬಿಸಿಲಿನಲ್ಲಿ ಸಾಲಾಗಿ ನಿಲ್ಲಿಸಿ ಒಣಗಿಸಿದ್ದು ಮಕ್ಕಳ ತಂದೆ ತಾಯಿಗಳ ಹೃದಯವನ್ನು ಭೇದಿಸದೆ ಬಿಡಲಿಲ್ಲ.

ಈ ಶಾಲೆಯ ನಿಹವಳಿಕೆಯು ಸರಿಯಿಲ್ಲದ್ದರಿಂದ ತಕ್ಕ ವ್ಯವಸ್ಥೆ ಮಾಡಿಕೊಡಬೇಕಾಗಿ ಸಾರ್ವಜನಿಕರು ಎರಡು ವರ್ಷಗಳಿಂದ ಅರ್ಜಿಗಳ ಮುಖಾಂತರವೂ, ಮುದ್ರಾಗಿ ಮತ್ತು ಕೌನ್ಸಿಲ್ ಮುಖಾಂತರವೂ ಸಹ ಸರಕಾರದ ಅವಗಾಹನೆಗೆ ತಂದಾಗ್ಯೂ ಇದು ವರೆಗೆ ಸರಕಾರವು ಜನರ ಕೇಳಿಕೆಗೆ ಕಿವಿಕೊಡದೆ ಅಧಿಕಾರಿಗಳು ತಮ್ಮ ಮಂಗಪಸ್ತಿಯನ್ನು ಬಿಡದ ಕಾರಣ ಅತ್ಯಪ್ತಿಯನ್ನು ಸೂಚಿಸಲು ಶಾಲಾ ಉತ್ಸವದಲ್ಲಿ ಸಾರ್ವಜನಿಕರು ಸಹಕರಿಸಬಾರದೆಂದು ನಿರ್ಧಾರ ಮಾಡಿದ್ದರಿಂದ ನಾಡಿಗಾಗಿ ಬರೇ ೧೫ ಜನರು ಉತ್ಸವದಲ್ಲಿ ಭಾಗವಹಿಸಿದ್ದರೆಂದರೆ ಸಾರ್ವಜನಿಕರಿಗೆ ಶಾಲೆಯ ಆಡಳಿತದ ಮೇಲೆ ಎಷ್ಟರ ಮಟ್ಟಿನ ವಿಶ್ವಾಸವಿದೆ ಎಂದು ಸ್ಪಷ್ಟವಾಗುವುದು. ನಾಡಿನ ಮತ್ತು ನೇಟೆಯ ಮುಂದಾಳುಗಳು ಸಹಕರಿಸುವದಿಲ್ಲವೆಂದು ತಿಳಿದು ಅದಕ್ಕಾಗಿಯೇ ಸೂರ್ಲಭಿಗ್ರಾಮಸ್ಥರನ್ನು ಕರತಂದು ಉದ್ಯೋಗಸ್ಥರನ್ನು ಮತ್ತೆ ಕೆಲವು ತೋಟದವರನ್ನು ಸೇರಿಸಿಕೊಂಡು ಉತ್ಸವವನ್ನು ನಡೆಸಿದ್ದು ನೋಡಿದರೆ ಇದು ಶಾಲೆಯ ಉತ್ಸವವಲ್ಲ, ಒಂದು ಪಂಗಡದವರ ಉತ್ಸವವೆಂದರೆ ತಪ್ಪಾಗಲಾರದು.

ವಿದ್ಯಾಧಿಕಾರಿಯವರು ಜನರ ಅತ್ಯಪ್ತಿ ಮತ್ತು ಕೌನ್ಸಿಲಿನಲ್ಲಿ ಕೇಳಿದ ಪ್ರಶ್ನೆಗಳ ವಿಷಯ ಖಂಡ್ರಾಗಿ ತಾ. ೧೫-೧೧-೪೭ ರಲ್ಲು ಸೋಮವಾರಪೇಟೆಯಲ್ಲಿ ವಿಚಾರಿಸುವದಾಗಿ ಕೌನ್ಸಿಲ್ ಮೆಂಬರರ ಸಂಗಡ ಹೇಳಿದ ರೀತಿ ಆವರು ೧೫ ರಲ್ಲು ಬಾರದ್ದರಿಂದ ತ ರೀಕು ೧೫ ರಲ್ಲು ಎರಡು ಜನರು ಹೋಗಿ ಕೇಳಿದಲ್ಲು ತಾರೀಕು ೧೫ನೇ ಸಾಯಂಕಾಲ ವಿಚಾರಿಸುವದಾಗಿ ಹೇಳಿದ ಮೇರೆ ಕೆಲವರು ಹೋಗಿ ರಾತ್ರಿ ೮ ಗಂಟೆಯ ವರೆಗೆ ಕಾದರೂ ಅಧಿಕಾರಿಯವರು ಕಾಣಲು ಸಿಕ್ಕದ್ದರಿಂದ ನಿರಾಕರಣಾಗಿ ವಾಪಸ್ಸು ಬರಬೇಕಾಯಿತು. ಇದು ನೋಡಿದರೆ ಸಾರ್ವಜನಿಕರನ್ನು ಎಂಬಲು ಹೂಡಿದ ಉಪಾಯವೆಂದು ತೋರುತ್ತೆ. ಶಾಲೆಯ ಹೆಡ್ ಮಾಸ್ಟರವರ ವಿಷಯದಲ್ಲಿ ಅತೃಪ್ತಿಯನ್ನು ಸೂಚಿಸಿ ಆವರನ್ನು ವರ್ಗಮಾಡಿಕೊಡಬೇಕಾಗಿ ಜನರ ಕೇಳಿಕೆ ಇದ್ದರೂ ಮೇಲಾಧಿಕಾರಿಗಳು ಜನರ ಕೋರಿಕೆಯನ್ನು ನಿರಾಕರಿಸಿ ಆವರೇ ಇಲ್ಲಿರಬೇಕೆಂದು ಫಣತೊಟ್ಟು ಮನಸ್ಸಾ ಇಚ್ಛೆ ವರ್ತಿಸಲು ಬಿಟ್ಟರುವದು ನೋಡಿದರೆ ಉತ್ತರ ಕೊಡಗಿನವರನ್ನು ಮೂಲೆಗೊತ್ತಲು ಪ್ರಯತ್ನಪಡುತ್ತಿರುವಂತೆ ತೋರುತ್ತೆ. ಒಬ್ಬ ವ್ಯಕ್ತಿಯ ಹಿತಕ್ಕಾಗಿ ಬೈತರ ಕೂಗನ್ನು ಕೇಳಿದ ಅಧಿಕಾರಿಗಳು ಬದಲಾಗದ ವಿನಹ ದೇಶಕ್ಕೆ ಹಿತವಿಲ್ಲ. ಅಧಿಕಾರಿಗಳ ವರ್ತನೆಯನ್ನು ನೋಡಿದರೆ ಕೋಮುವಾರು ಭಿನ್ನಭೇದವನ್ನಿಟ್ಟರುವರೋ ಎಂದೆನಿಸುತ್ತೆ. ಒಬ್ಬ ಕೊಡಗೇತರನ ಮೇಲೆ ಇಷ್ಟು ಪುಕಾರುಗಳಿದ್ದರೆ ವರ್ಗಮಾಡುವದಿರಲಿ ಮನೆಗೇನೇ ದಾರಿ ತೋರಿಸದೆ ಇರುತ್ತಿರಲಿಲ್ಲ.

ಶಾಲಾ ಭರದಿ ಓದುವಾಗ ತಾಲೆಯಲ್ಲಿ ಸ್ಥಳ ಅಭಾವವಿದ್ದರಿಂದ ಒಂದು ಸೆಡ್ ಕಟ್ಟಿಸಿಕೊಡುವದಾಗಿ ಶ್ರೀ. ಹೆಚ್. ಟಿ. ಮುತ್ತಣ್ಣನವರು ಒಪ್ಪಿದ ರೀತಿ ಕಟ್ಟಿಸಿಕೊಡದ್ದರಿಂದ ಸ್ಥಳದ ಅಭಾವವಿರುವದಾಗಿ ವರದಿಯಲ್ಲಿ ನಮೂದಿಸಿದ್ದರಂತೆ. ನಿಜ 'ಹೆಂದಿ....ತೆಂದು ಎನ್ಮೆಕರುವಿನ ಮೇಲೆ ತಿಕ್ಕಿಕೊಂಬು ಗಾದೆಯಂತೆ ತಾವು ಮಾಡಿದ ತಪ್ಪನ್ನು ಇನ್ನೊಬ್ಬರ ಮೇಲೆ ಹಾಕುವದು ಸ್ವಾರ್ಥಪರತೆ ಇರುವವರ ಸ್ವಭಾವ. ಶೆಡ್ಡನ್ನು ಕಟ್ಟಿಸಿದವರು ಯಾರು, ಯಾವ ರೀತಿಯಲ್ಲಿ ಕಟ್ಟಿಸಿರುವರು ಮತ್ತು ಎಷ್ಟು ರೂಪಾಯಿ ಖರ್ಚಾಗಿರಬಹುದೆಂಬದು ಸಾರ್ವಜನಿಕರಿಗೆ ತಿಳಿಯದ ವಿಷಯವಲ್ಲ. ವರದಿ ಓದಿದವರೇ ಸೆಡ್ಡ್ ಕಟ್ಟಿಸಲು ಒಪ್ಪಿ ಪೂರ್ತಿ ಮೊಬಲಗು ೩೦೦-೦-೦ (ಮುನ್ನೂರು) ರೂಪಾಯಿ ಮತ್ತು ಚಾರ್ಜಿಲ್ಲದೆ ೬೦೦ ಕಂತೆ ಹುಲ್ಲನ್ನು ಹೊಂದಿಕೊಂಡು ರಶೀತಿಕೊಟ್ಟು ನ್ಯಾಯವಾದ ಸೆಡ್ಡ್ ಕಟ್ಟಿಸದೆ ಇರುವದು ಹಣ ಕೊಟ್ಟವರ ತಪ್ಪೊ? ಯಾ ಹಣ ಹೊಂದಿಕೊಂಡು ಇದು ವರೆಗೆ ಕಟ್ಟಿಸದೆ ಇರುವವರ ತಪ್ಪೊ? ಇದರ ವಿಷಯ ಶ್ರೀ. ಹೆಚ್. ಟಿ. ಮುತ್ತಣ್ಣನವರಿಗೆ ಹೆಚ್ಚಿನ ಮಾಹಿತಿ ಇರುವದರಿಂದ ಆವಶ್ಯವಿದ್ದರೆ ಅವರೇ ಜವಾಬುಕೊಡಲಿ.

ಸದರಿ ದಿನ ಒಬ್ಬ ಅಧಿಕಾರಿಯವರು ಪ್ಲಾಟ್‌ಫಾರಂನ ಮೇಲೆ ನಿಂತು 'ಯಾರು ಬರಲಿ, ಯಾ ಬಾರದಿರಲಿ, ನಾವು ಉತ್ಸವವನ್ನು ಮಾಡಿಯೇ ಮಾಡಿದೆವು' ಎಂದು ಆ ಹಂಧಾವದ ಭಾಷಣ ಮಾಡಿದರಂತೆ ಇದು ನಿಜವಿದ್ದರೆ ಇದರಿಂದ ಜನರ ಅಸಮಾಧಾನವು ಹೆಚ್ಚಲು ಇವರ ಕೈವಾಡ ಸಹ ಇತ್ತೋ ಏನಿಸುತ್ತೆ. ಇವರು ಒಂದು ತಾಲೋಕಿನ ಅಧಿಕಾರಿಯಾಗಿದ್ದುಕೊಂಡು ಆ ತಾಲೋಕಿನಲ್ಲಿ ಉದ್ಭವಿಸಬಹುದಾದ ಯಾವುದೇ ತಕರಾರುಗಳಿದ್ದಾಗ್ಯೂ ತೀರ್ಮಾನಮಾಡಲು ಮುಂಬರಬೇಕಲ್ಲದೆ ಒಂದು ಪಂಗಡದವರನ್ನು ಎತ್ತಿ ಹಿಡಿಯಲು ಪ್ರಯತ್ನಪಟ್ಟದ್ದು ಆವರ ಅಧಿಕಾರ ಸ್ಥಾನಕ್ಕೆ ಭೂಷಣವಲ್ಲ. ಅಧಿಕಾರದ ಪ್ರವನ್ನು ತೋರಿಸುವದು ಕಳೆದ ಆಗಸ್ಟ್ ಸ್ವಾತಂತ್ರ್ಯಕ್ಕೆ ಮುತ್ಸಾಯವಾಯಿತೆಂದು ಇವರ ಗಮನಕ್ಕೆ ಬಂದಂತೆ ಕಾಣುವದಿಲ್ಲ. ಅಧಿಕಾರಿಗಳ ಇಂಥ ವರ್ತನೆಯಿಂದ ಕೋಮುವಾರು ಘರ್ಷಣೆಯುಂಟಾಗಿ ಇಡೀ ದೇಶಕ್ಕೇನೇ ಧಕ್ಕೆತಗಲದೆ ಇರಲಾರದು. ಉತ್ತರ ಕೊಡಗಿನವರು ಏನೂ ತಿಳಿಯದ ಹಿಂದುಳಿದವರೆಂದು ಅಧಿಕಾರಿ ವರ್ಗದವರು ತಿಳಿದುಕೊಂಡಿದ್ದರೆ ಅದು ಅವರ ಅಜ್ಞಾನವೇ ಸರಿ. ಇನ್ನು ಕೆಲವೇ ವರ್ಷಗಳಲ್ಲಿ ಹಿಂದುಳಿದವರು ಮುಂದಕ್ಕೆ ಬಂದು ಈಗ ಮುಂದಿರುವವರನ್ನು ಉರುಳಿಸದಿರಲಾರರೆಂದು ದೇಶವ ಮುಂದರಿದ ಜನಾಂಗವು ಈಗಿನಿಂದಲೇ ತಿಳಿದು ವರ್ತಿಸುವದು ಲೇಸು.

ನಮೂಲು ರೀತಿ ಎಲ್ಲಾ ಶಾಲೆಗಳ ಉತ್ಸವವನ್ನು ಮಾರ್ಚ್ ಯಾ ಏಪ್ರಿಲ್ ತಿಂಗಳುಗಳಲ್ಲಿ ಮಾಡುವದು ರೂಢಿ ಇರುತ್ತೆ. ಹೀಗಿರುವಾಗ ಈ ತಾಲೆಯ ಉತ್ಸವವನ್ನು ಸಕಾಲದಲ್ಲಿ ಮಾಡದೆ ಕೌನ್ಸಿಲಿನಲ್ಲಿ ಎತ್ತಿದ ಆಕ್ಷೇಪಣೆಗಾಗಿ ಕ್ರಿಸ್‌ಮಸ್ (ಆಯ್ಕೆಯು) ಪರೀಕ್ಷೆಯ ಸಮಯದಲ್ಲಿ ೧೫ ದಿವಸ ಹುಡುಗರಿಗೆ ಹಾಕವಿಲ್ಲದ ರೀತಿ ಆಟೋಟ ಮತ್ತು ಸಾಟಿಕ ತಯಾರಿಸಲು ಅಧಿಕಾರಿಗಳು ಹೇಗೆ ಬಿಟ್ಟರೋ ತಿಳಿಯದು. ಇದರಿಂದಾಗಿ ಗರೀಬ ಹುಡುಗರ ಮುಂದಿನ ಅಭಿವೃದ್ಧಿಗೆ ತಡೆ ಹಾಕಿರುವರೆಂದರೆ ತಪ್ಪಾಗಲಾರದು. ಸದರಿ ವಿಷ

ಖಾನ್‌ರವರು ಉರ್ದೂ ಭಾಷೆಯ ಪ್ರಗತಿಯನ್ನು ಕುರಿತೂ ಭಾಷಣ ಮಾಡಿದರು. ಸಂಘದ ಸದಸ್ಯರು ಚಿಕ್ಕ ಒಂದು ನಾಟಿಕವನ್ನು ಪ್ರದರ್ಶಿಸಿದರು. ಅಧ್ಯಕ್ಷರಿಗೂ ಭಾಷಣಕಾರರಿಗೂ ವಂದಿಸಿದನಂತರ ಆಂದಿನ ಉತ್ಸವವು ಕೊನೆಗೊಂಡಿತ್.

ತ್ರಿವೇಣಿ.

ಆಗಮ.

ತಲೆನೋವು, ಚಳಿಜ್ವರ ಹೊಟ್ಟೆನೋವು ಇವುಗಳ ಚಿಕಿತ್ಸೆಗೆ ರೋಗಿಗಳಿಂದ ಬಾಂಡು ಎಗ್ರಿಮೆಂಟುಗಳು ಬೇಕಂತೆ. ಇದರ ಪರಿಣಾಮವಾಗಿ ಮುಮ್ಮು ಸ್ಥಿತಿ ಮೂಲೆ ಗೊತ್ತಿ ನೀರು ಹಾಲು ಮೂರು ಸ್ಥಿತಿಗೆ ಇಳಿದಿದ್ದಾರೆ ನೀರು ಹಾಲು ಮೂರೈಸ್ಯರು ಹಣ ಸಂಪಾದಿಸುವುದು ಕಳ್ಳ ಸಂತೆಯ ಸಾಲಿಗೆ ಸೇರುವುದಿಲ್ಲವೇ?

ಹಡಪ.

ವ್ಯಕ್ತಿ ಸೈ-ಸರಕಾರಿ ನೌಕರಿ ಬೇಕಾಗಿದೆ. ಡಿಸ್‌ಮಿಸ್ ಆಯಿತೇ. ರಿಟ್ರೆಂಚ್‌ಮೆಂಟ್ ಆಯಿತೇ, ಇಲ್ಲವೇ ರಾಜೀನಾಮೆ ಕೊಟ್ಟರೇ? ಇವರನ್ನು ಪೂರಿ ನೂರಕ್ಕೆ ನೂರು ಲಭಗಳಿಸುವುದು ಕಳ್ಳ ಸಂತೆಯ ವ್ಯಾಪಾರಿಗಳ ಸಾಲಿಗೆ ಸೇರಿದಂತೆ ಆಗುವುದಿಲ್ಲವೇ? ಇವರು ಸಮಾಜ ಪಿಡಿಕ ರತರ ಸೇವಾನ್ನ ಧರಿಸಿದ್ದಾರೆ. ಸಾರಾಯಿ ಕುಡಿಯುವವನು ಎಷ್ಟಾಕ್ಕೆ ಸೇಂದಿ ಬಾಟಿಯವನಿಗೆ ಅಗತ್ಯವಿದೆ ಎಂದು ಕೇಳಿದರೆ ಹೇಳಬಹುದೇ? ಜೆ ಬ್ಯಾಂಕಿನಲ್ಲಿ ಎಷ್ಟು ಹಣ ಇದೆ

'ಓರಿಯಂಟಲ್'

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

೧೮೭೪ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದ್ದು (ಸರ್ಕಾರ ಹೊಣೆ ನಿಯಮಿತವಾಗಿದೆ.)

ಮುನ್ನೂರು ಬಾರಿ 'ಓರಿಯಂಟಲ್' ಮುಂದೆ, ಇತರಯಾವ ಹಿಂಬಾಲಿಸುತ್ತದೆ. ಸುಲಭ, ಮತ್ತು ಖರ್ಚಾಗಿ ಸಾಲಿಸಿದವರಿಗೆ ಜಪ್ತಾಗಿ ಅಕ್ಕರೆಯಾ ಕಾಲದಲ್ಲಿ ರಕ್ಷಾಗಿದ್ದ ಪಾಲಿಸಿಗಳನ್ನು ಪುನರುಜ್ಜೀವನಗೊಳಿಸಿದ ಜೀವ ವಿಮಾ ಕಂಪೆನಿಗಳಲ್ಲಿ ಓರಿಯಂಟಲೇ ಮೊಟ್ಟ ಮೊದಲನೇಯದು. ಅದು ಬಾಕಿಯಾದ ಕಂಪನಿಗಳ ಮೇಲೆ ಬಿದ್ದ ತೆಗದುಕೊಳ್ಳಲಿಲ್ಲ. ಆಥವಾ ಒಳ್ಳೇ ಆರೋಗ್ಯದ ಸರ್ಟಿಫಿಕೇಟ್ ಕೋರಲಿಲ್ಲ

ಧಾರಾಳತನವೇ ವೃದ್ಧಿಯಾಗುತ್ತಿರುವ
ನಮ್ಮ ಜನಪ್ರಿಯತೆಯ ರಹಸ್ಯವಾಗಿದೆ

೧೯೪೬ರ ಹೊಸ ವ್ಯವಹಾರ .... ಸುಮಾರು ರೂ. ೨೪,೫೦,೦೦,೦೦೦
ನಿಧಿ ತಾ. 31—12—1946ರಲ್ಲಿ .... ಹೆಚ್ಚುಗಿ ರೂ. ೪೪,೨೫,೦೦,೦೦೦

ನಮ್ಮ ಜೀವ ವಿಮೆಯ ಸ್ಕೀಮೊಂದು ಬೇಡಿಕೆಯ ಅಕರ್ಷಿತ ಯೋಜನೆಯು ನಮ್ಮಲ್ಲಿದೆ.

ಮುಖ್ಯ ಖಚೇರಿ—ಓರಿಯಂಟಲ್ ಬಿಲ್ಡಿಂಗ್ಸ್, ಫೋರ್ಟ್, ಬೊಂಬಾಯಿ,
ಇನ್ಸ್‌ಪೆಕ್ಟರರ ಆಫೀಸು—೪. ಸದಾಶಿವ ರೋಡು, ಮಂಗಳೂರು.

ವಿನೆ ಮೂಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮೂರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್,
ಪೊ. ಬಾ. ನಂ. 337,
ಮದ್ರಾಸು 2.

ಬೋಂಬೆ ಲೈಫ್ ಬಿಲ್ಡಿಂಗ್,
ಪೊ. ಬಾ. ನಂ. 1,
ಉಡುಪಿ.

(ಟೆಲಿಫೋನ್ ನಂ 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡರಂ, ಕೆಲ್ಲಿಕೋಟೆ,
ಮಂಗಳೂರು, ಪುಥುರೆ, ಮತ್ತು ಬೊಂಬಾಯಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಣಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರು ಮೊಬಲಗು ರೂ. 1,33,740, ಜಮಾ ಬಂದ ಶೇರ ನಾತಿ 3,30,268-1-8, ವಸೂಲಾದ ಕ್ಷೇಮನಿಧಿ 2,36,454-0-3, ಸೇವಿಂಗ್ಸ್ ಬ್ಯಾಂಕ್ ಡಿವಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ರಿಜಿಸ್ಟಾಗಿ ಸಾಲ ಕೊಡುವುದಲ್ಲದೆ, ಡಿವಾಜಿಟ್ಟುದಾರರಿಗೆ ಅವರ ಡಿವಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಯನ್ನು ತಾ. 1-12-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿವಾಜಿಟ್ಟುಗಳಿಗೆ ಶೇಕಡ 0-8-0 ದರವ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. ' 1-12-46.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಮ್ಯಾನೇಜ್ಜರ್.

ಎಂಪೈರ್ ಆಫ್ ಇಂಡಿಯಾ
ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	....	1,07,09,000 ಮೀರಿದೆ
	ಜಾಲ್ತಿಯಿರುವ ವಿಮೆ	....	17,74,52,000 ,,
	ಆಸ್ತಿ	....	6,67,60,000 ,,
	ಕಂಪನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು	....	8,83,62,000 ,,

ಅಂಗ ಕಛೇರಿ: ತಿಪ್ಪಿಕ್ಟ್ ಟೋರ್ಸ್ ಬಿಲ್ಡಿಂಗ್ಸ್, ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ ಆರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಜೋಂಬೇ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಭಾವೀ ಹಿಂದೂಸ್ಥಾನ.

ಮೊನ್ನೆ ದೆಲ್ಲಿಯಲ್ಲಿ ಕೂಡಿದ ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿಸ್ವೀಕರಿಸಲ್ಪಟ್ಟ 'ಭಾವೀ ಹಿಂದುಸ್ಥಾನದ ರಚನೆಯ ವಿಷಯಗ ನೊಕ್ಕುವಳಿಯು ವಿಷಯದಲ್ಲಿ, ಆ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ್ ದೇವ್ ಇವರು ಒಂದು ನವಿಸ್ತಾರವಾದ ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ. ಆದರ ಆಶಯವು ಕೆಳಗಿನಂತಿದೆ.

'ನೆಲ್ಲಿಯಲ್ಲಿ ಕೂಡಿನ ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯು ಮಾಡಿದ ಭಾವೀ ಹಿಂದೂಸ್ಥಾನದ ರಾಜ್ಯವ್ಯವಸ್ಥೆಯ ವಿಷಯಕವಾದ ಗೊತ್ತುವಳಿಯು. ಹಿಂದೀ ರಾಜಕಾರಣದಲ್ಲಿ ಒಂದು ಸಂಧಿಸ್ಥದ ಸ್ಥಿತ್ಯಂತರವನ್ನು ತೋರಿಸುತ್ತಿದೆ. ೧೯೨೦ನೇ ಇಸ್ವಿಯಲ್ಲಿ ಮಿ. ಗಾಂಧಿಯವರು, ಆಗಿನ ಪರಕೀಯ ರಾಜ್ಯದಾಢಳಿತವನ್ನು ತೆಗೆದು ಹಾಕುವುದಕ್ಕೆ ಬೇಕಾದ ಅಹಿಂಸಾತ್ಮಕ ಸತ್ಯಾಗ್ರಹವನ್ನು ದೇಶದ ಮುಂದಿಟ್ಟರು. ಆದರ ಕಾರ್ಯವು ಫಲಕಾರಿಯಾಯಿತು. ಈಗ ನಾವು ಗಳಿಸಿದ ಸ್ವಾತಂತ್ರ್ಯ ದೃಷ್ಟಿಯಿಂದ ನಮ್ಮ ದೇಶವನ್ನು ಹೇಗೆ ಕಟ್ಟಬೇಕು; ಮತ್ತು ಹೇಗೆ ಆಳಬೇಕು ಎಂಬುದು ನಮ್ಮ ಮುಂದಿನ ಇಂದಿನ ಪ್ರಶ್ನೆಯಾಗಿದೆ.

ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವು ನಮ್ಮ ಕಲ್ಪನೆಗಿಂತ ಬೇಗನೆ ಸಿಕ್ಕಿತು. ಆದರೆ ಸ್ವಯಂ ನಿರ್ಣಯ ತತ್ವವನ್ನು ಒಪ್ಪಿದ ಕಾಂಗ್ರೆಸು ದೇಶದ ವಿಭಜನೆಗೆ ಒಡಂಬಡಬೇಕಾಯಿತು. ಇದರ ಪರಿಣಾಮವು ಜಾತೀಯ ಭೂತವನ್ನು ಎಬ್ಬಿಸಿದಂತಾಯಿತು. ಪರಿಸ್ಥಾನದಲ್ಲಿ ಮುಸಲ್ಮಾನರು ನಡೆಸಿದ ಜಬರ್ದಸ್ತಿಕೆಗಳನ್ನು ಕೆಂದು ಹಿಂದೂ ಮನೋವೃತ್ತಿಯು ಬೆಳೆದು ಬಂದಿತು.

ಕಾಂಗ್ರೆಸು ಈ ಗೊತ್ತುವಳಿಯಲ್ಲಿ ಇಂತಹ ಜಾತೀಯ ಮನೋವೃತ್ತಿಗಳಿಗೆ ಸ್ಪಷ್ಟವಾದ ಉತ್ತರಕೊಟ್ಟಿದೆ. ಹಿಂದೂಸ್ಥಾನದಲ್ಲಿ ಜಾತಿ, ಮತ, ಪಂಥಗಳಿದ್ದರೂ ಅವುಗಳೆಲ್ಲಾ ರಾಜಕೀಯ ದೃಷ್ಟಿಯಿಂದ ತಮ್ಮ ವೈವಿಧ್ಯಗಳನ್ನು ಬಿಟ್ಟು ಕೊಡಬೇಕೆಂದೂ ಆದರಿಂದಂಟಿಕೊಳ್ಳುವ ರಾಜ್ಯ ವ್ಯವಸ್ಥೆಯಲ್ಲಿ ಸರ್ವ ಜಾತಿಯವರಿಗೂ ಸಮಾನ ಅಧಿಕಾರ ಸೌಕರ್ಯಗಳು ಸಿಗಬೇಕೆಂದೂ ಕಾಂಗ್ರೆಸ್ಸಿನ ಧ್ಯೇಯವಿದೆ.

ಪರದೇಶಗಳಿಂದ ಬಂದ ಸರ್ವ ಧರ್ಮಗಳಿಗೆ ಹಿಂದೂಸ್ಥಾನವು ತನ್ನಲ್ಲಿ ಸ್ಥಾನಕೊಟ್ಟಿದೆ. ಪರಧರ್ಮ ಸಹಿಷ್ಣುತೆಯನ್ನು ಳ್ಳ ಈ ದೇಶದಲ್ಲಿ ಇಂದು ಇಂತಹ ಅನಾಹುತವು ನಡೆದದ್ದು ಶೋಚನೀಯವಾಗಿದೆ. ಆದರೆ ಇದರಿಂದ ಕಾಂಗ್ರೆಸು ಧೈರ್ಯಗೆಟ್ಟಿಲ್ಲ, ಮತ್ತು ಸರ್ವ ಜಾತಿಯವರಿಗೆ ಸಮಾನವಾದ ಒಂದು ರಾಜ್ಯ ವ್ಯವಸ್ಥೆ ಬೇಕೆಂಬ ನಿರ್ಧಾರದಿಂದ ಅದು ಕದಲಿರುವುದಿಲ್ಲ.

ಒಮ್ಮೆ ಈ ನಿರ್ಧಾರಕ್ಕೆ ಬಂದ ಬಳಿಕ ದೇಶದಲ್ಲಿ ಜಾತೀಯ ಮನೋವೃತ್ತಿಯ ನಂಸ್ಥೆಗೆ ಎಡೆ ಉಳಿಯುವುದಿಲ್ಲ. ಸರಕಾರೇತರ ಸೈನ್ಯಗಳು ಇರುವುದು ಕೂಡ ಆಡಳಿತದ ದೃಷ್ಟಿಯಿಂದ ಘಾತುಕವಾಗಿದೆ ಆದ್ದರಿಂದ ಮುಸ್ಲಿಂ ನ್ಯಾಶನಲ್ ಗಾರ್ಡ್ಸ್, ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಅಕಾಲಿ ಸ್ವಯಂ ಸೇವಕರು ಇವೇ ಮೊದಲಾದ ಸಂಘಟನೆಗಳು ದೇಶದ ಶಾಂತಿಗೆ ಭಂಗ ತರುವಂಥಾ ಗಿವೆಯೆಂದು ಕಾಂಗ್ರೆಸಿನ ಅಭಿಪ್ರಾಯವಿದೆ.

ದೇಶದಲ್ಲಿಯ ಸರ್ವ ವ್ಯಕ್ತಿಗಳಿಗೆ ಶಾರೀರಿಕ, ಬೌದ್ಧಿಕ ಮತ್ತು ರಾಜಕೀಯ ಜಾಗೃತಿಯನ್ನು ಒದಗಿಸುವ ಕಾರ್ಯವು ಏಕ ತಂತ್ರೀಯವಾದ ಸರಕಾರೀ ಸೈಪಸ್ಥೆಯಿಂದಲೇ ನಡೆಯುವುದು ಅವಶ್ಯವಿದೆ. ಪಾಶ್ಚಾತ್ಯ ದೇಶಗಳಲ್ಲಿ ಪ್ರಜಾ ಪದ್ಧತಿಯು ಬಹು ದಿನಗಳಿಂದ ನಡೆಯುತ್ತಿದ್ದರೂ ಅಲ್ಲಿಯ ಸಾಮಾನ್ಯ ಮನುಷ್ಯನಿಗೆ ಪರಿಸ್ಥಿತಿಯ ನಿಜವಾದ ಜ್ಞಾನವು ಸಾಕಷ್ಟು ಇರುವುದಿಲ್ಲ. ಕೆಲವೇ ತಜ್ಞರು ರಾಜಕೀಯ ಸೂತ್ರಗಳನ್ನು ಅಲ್ಲಾಡಿಸುತ್ತಿರುತ್ತಾರೆ. ಬಲ್ಲಿಯ ಆರ್ಥಿಕ ಸ್ಥಿತಿಯ ಹಿಡಿತವು ಕೂಡ ಕೆಲವೇ ಶ್ರೀಮಂತರ ಕೈಯಲ್ಲಿದೆ. ಉಳಿದವರು ಅವರಿಗೆ ದಾಸರಾಗಿ ಅವರು ಹೇಳಿದಂತೆ ಕುಣಿಯಲು ಬೇಕಾಗುತ್ತದೆ. ಈ ಸರ್ವ ಅಧಿಕಾರವನ್ನು ಸರಕಾರದ ಕೈಯಲ್ಲಿ ಕೊಡುವುದರಲ್ಲಿಯೂ ಅರ್ಥವಿಲ್ಲ. ಕೇವಲ ಕೆಲವು ವ್ಯಕ್ತಿಗಳು ಹೋಗಿ ಜೇರೆಯವರು ಆ ಸ್ಥಾನದಲ್ಲಿ ಒಂದೂ ಆ 'ಕೆಲವೇ ಜನರ ಕೈವಾಡ'ವು ಬದಲಿಂದ ನಿಯಂತ್ರಣೆಯಾಗುವುದಿಲ್ಲ.

ಎಲ್ಲಾ ಉದ್ಯೋಗಗಳು ಎಲ್ಲರಿಗಾಗುವಂತೆ ಮಾಡುವುದೇ ಈ ರೋಗಕ್ಕೆ ರಾಮಬಾಣ ಔಷಧವಾಗಿದೆ. ಉದ್ಯೋಗಗಳಲ್ಲಾ ಭವು ಮೂಲಧನ ಹಾಕಿದವ, ಕಲಸಗಾರ, ಎಲ್ಲರಿಗೂ ಅಂದಕ ಮುಟ್ಟುವಂತೆ ಮಾಡಬೇಕು. ಈ ವ್ಯವಸ್ಥೆಯಿಂದ ದೇಶಕ್ಕೆ ಬೇಕಾದ ಸಾಮಗ್ರಿಗಳು ಸುಲಭವಾಗಿ ಹುಟ್ಟುತ್ತವೆ, ಅನಾವಶ್ಯಕವಾದ ಸಾಮಗ್ರಿಗಳ ಉತ್ಪತ್ತಿಯನ್ನು ತಡೆಯಲಾಗುವುದು. ಎಲ್ಲಾ ಸಾಮಗ್ರಿಗಳು ಎಲ್ಲರಲ್ಲಿ ಸರಿಯಾಗಿ ಹಂಚಿಹೋಗುತ್ತವೆ ಎಂಬ ಬಗ್ಗೆ ಸರಕಾರವು ಜಾಗ್ರತೆ ವಹಿಸಬೇಕು.

ವಿವಿಧ ಭಾಗಗಳ ಆಡಳಿತವು ಆಯಾ ಭಾಗಗಳಲ್ಲಿಯ ಜನನಿಯುಕ್ತ ಪಂಚಾಯತಗಳಿಂದ ನಡೆಯುವಂತಾಗಬೇಕು. ಕಾರ್ಯನಿರ್ವಾಹದ ಬಗ್ಗೆ ಈ ಪಂಚಾಯತಗಳ ಯೋಜನೆಗಳನ್ನು ಪರಿಶೀಲಿಸಿ ಕೊನೆಯ ನಿರ್ಣಯವನ್ನು ಮುಖ್ಯವರ್ತಿ ಸರಕಾರವು ಇಲ್ಲವೆ ಪ್ರಾಂತಿಕ ಸರಕಾರಗಳು ಕೊಡುವವು. ಈ ರೀತಿ ರಾಜ್ಯದಾಢಳಿತವು ಕೂಡ ಜನರ ಕೈಗೇ ಕೊಡಲ್ಪಡಬೇಕು.

ಈ ಪ್ರಕಾರ, ಆಂದಿನ ಧನವಂತರ ರಾಜ್ಯ ಮತ್ತು ಸಮತವಾದ ಇವೆರಡು ರಾಜ್ಯವ್ಯವಸ್ಥೆಗಳ ನಡುವಿನ ಪಾದಿಯು ಇದಾಗಿದೆ. ಇದರಿಂದ ಶ್ರೀಮಂತರ ಕೈಯಲ್ಲಿ ಜಡವರು ಸಿಗುವದು ತಪ್ಪುವದು ಮತ್ತು ಸಮತಾವಾದದಲ್ಲಿ ವೈಯಕ್ತಿಕ ಸ್ವಾತಂತ್ರ್ಯವು ನಾಶವಾಗುವ ಸ್ಥಿತಿಯೂ ನಿವಾರಿಸಲ್ಪಡುವದು. ಜನರು ತಮ್ಮ ಹೊಣೆಗಾರಿಕೆಯ ಮೇಲೆ ಪರಸ್ಪರ ಸಹಕಾರದಿಂದ ತಮ್ಮ ರಾಜ್ಯವನ್ನು ತಾವೇ ನಡೆಸಿಕೊಂಡು ಹೋಗಲು ಈ ಮಾರ್ಗವು ಶ್ರೇಷ್ಠವಾದುದೆಂದು ಎಣಿಸಲಾಗಿದೆ. 'ಜೆ ಹಿಂದ್.'